ಸೋಮವಾರ, ನವೆಂಬರ್ 29, 2021 | ₹ 6.00
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ರೈತರ ಸ್ಮರಣೆ
ಕೇಂದ್ರದ ಕೃಷಿ ಕಾಯ್ದೆ ವಿರೋಧಿ ಪ್ರತಿಭಟನೆಯಲ್ಲಿ ಹುತಾತ್ಮರಾದ ರೈತರ ಸ್ಮರಣೆಗಾಗಿ ಮುಂಬೈನಲ್ಲಿ ಭಾನುವಾರ ನಡೆದ ಕಾರ್ಯಕ್ರಮದಲ್ಲಿ ಭಾರತೀಯ ಕಿಸಾನ್ ಯೂನಿಯನ್ ನಾಯಕ ರಾಕೇಶ್ ಟಿಕಾಯತ್ ತಮ್ಮ ರುಮಾಲನ್ನು ಸರಿಪಡಿಸಿಕೊಂಡರು



ತಿಂಗಳು ಪೂರ್ತಿ ವಿವಿಧ ಕಾರ್ಯಕ್ರಮಗಳ ಆಯೋಜನೆಗೆ ತಯಾರಿ: ಮೂರು ದಿನ ಕಾಶಿಯಲ್ಲಿ ಪ್ರಧಾನಿ ವಾಸ್ತವ್ಯ

ಚುನಾವಣೆ ಹೊಸ್ತಿಲಲ್ಲಿ ಕಾಶಿ ಕಾರಿಡಾರ್ ಉದ್ಘಾಟನೆ

ಪ್ರಜಾವಾಣಿ ವಾರ್ತೆ

ಲಖನೌ: ಕಾಶಿ ವಿಶ್ವನಾಥ ಕಾರಿಡಾರ್ ಉದ್ಘಾಟನಾ ಸಮಾರಂಭವನ್ನು ಅದ್ದೂರಿಯಾಗಿ ನೆರವೇರಿಸಲು ಉತ್ತರ ಪ್ರದೇಶ ಸರ್ಕಾರ ಮುಂದಾಗಿದೆ. ಪ್ರಧಾನಿ ನರೇಂದ್ರ ಮೋದಿ ಅವರು ಡಿ.13ರಂದು ಉದ್ಘಾಟನೆ ಮಾಡಲಿದ್ದಾರೆ.

ಉತ್ತರ ಪ್ರದೇಶ ವಿಧಾನಸಭೆ ಚುನಾವಣೆಗೆ ಇನ್ನೆರಡು ತಿಂಗಳು ಬಾಕಿ ಇರುವಾಗ ಈ ಕಾರ್ಯಕ್ರಮ ಆಯೋಜನೆ ಆಗುತ್ತಿರುವುದು ಮಹತ್ವ ಪಡೆದಿದೆ.

ಕಾರಿಡಾರ್ ಉದ್ಘಾಟನೆಗೆ ಸಂಬಂಧಿಸಿ, ರಾಜ್ಯ ಸರ್ಕಾರವು ತಿಂಗಳು ಪೂರ್ತಿ ಕಾರ್ಯಕ್ರಮಗಳನ್ನು ಆಯೋಜಿಸಲಿದೆ. ದೇಶದ ವಿವಿಧ ಭಾಗಗಳ ಪ್ರಮುಖ ಹಿಂದೂ ಸಂತರು, ಪ್ರಮುಖ ದೇವಸ್ಥಾನಗಳ ಮುಖ್ಯಸ್ಥರು, ಪಂಚಾಯಿತಿ ಅಧ್ಯಕ್ಷರು, ಪರಿಶಿಷ್ಟ ಜಾತಿ ಮತ್ತು ಪಂಗಡದ ಚಿಂತಕರು, ಇತಿಹಾಸಕಾರರು, ಪ್ರವಾಸ ಕಥನ ಬರಹಗಾರರು, ಮುಂತಾದವರನ್ನು ಕಾರ್ಯಕ್ರಮಗಳಿಗೆ ಕರೆಸಲಾಗುವುದು ಎನ್ನಲಾಗಿದೆ.

ಉದ್ಘಾಟನೆ ಸಮಾರಂಭದ ಮರುದಿನ ಬಿಜೆಪಿ ನೇತೃತ್ವದ ರಾಜ್ಯ ಸರ್ಕಾರಗಳ ಮುಖ್ಯಮಂತ್ರಿಗಳ ಸಭೆಯನ್ನು ಕಾಶಿ ವಿಶ್ವನಾಥ ಕಾರಿಡಾರ್‌ನಲ್ಲಿ ಆಯೋಜಿಸಲಾಗಿದೆ. ಪ್ರಧಾನಿ ಅವರು ಮೂರು ದಿನ ಕಾಶಿಯಲ್ಲಿಯೇ ಇದ್ದು ಹಲವಾರು ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳಲಿದ್ದಾರೆ ಎನ್ನಲಾಗಿದೆ. ಕಾರಿಡಾರ್ ಸಮುಚ್ಚಯದಲ್ಲಿ ಡಿ.16ರಂದು ರಾಜ್ಯ ಸರ್ಕಾರವು ಸಚಿವ ಸಂಪುಟ ಸಭೆ ನಡೆಸಲಿದೆ. ದೇಶದ ನಗರಗಳ 200ಕ್ಕೂ ಹೆಚ್ಚು ಮೇಯರ್‌ಗಳು ಕೂಡಾ ಅದೇ ಸ್ಥಳದಲ್ಲಿ ಸಭೆ ನಡೆಸಲಿದ್ದಾರೆ.

ಆಮಂತ್ರಣ ಪತ್ರಗಳನ್ನು ತಯಾರಿಸಲಾಗುತ್ತಿದೆ. ಸದ್ಯದಲ್ಲೇ ಪತ್ರಗಳು ರವಾನೆ ಆಗಲಿವೆ. 12 ಜ್ಯೋತಿರ್ಲಿಂಗಗಳಲ್ಲಿ ಒಂದಾಗಿರುವ ಕಾಶಿ ವಿಶ್ವನಾಥ ದೇವಾಲಯದ ವೈಭವವನ್ನು ಮತ್ತು ಪ್ರಾಚೀನ ನಗರವಾದ ವಾರಾಣಸಿಯಲ್ಲಿ ಆಗಿರುವ ಮಹತ್ತರ ಬದಲಾವಣೆಗಳನ್ನು ಸಂತರು ನೋಡುವಂತಾಗಬೇಕು ಎಂಬುದು ಸಂತರನ್ನು ಕಾರ್ಯಕ್ರಮಕ್ಕೆ ಕರೆಸುತ್ತಿರುವ ಪ್ರಮುಖ ಉದ್ದೇಶ ಎಂದು ಸ್ಥಳೀಯ ಅಧಿಕಾರಿಗಳು ತಿಳಿಸಿದ್ದಾರೆ.

ಕಾಶಿ ವಿಶ್ವನಾಥ ದೇವಾಲಯ ಜೀರ್ಣೋದ್ಧಾರದ ಕುರಿತ ಕಿರುಹೊತ್ತಗೆಯನ್ನು ಸ್ಥಳೀಯರಿಗೆ ನೀಡುವ ಯೋಜನೆಯನ್ನೂ ಬಿಜೆಪಿ ಹಾಕಿಕೊಂಡಿದೆ. ಹಿಂದೂಗಳ ಪ್ರಮುಖ ಪವಿತ್ರ ಸ್ಥಳವಾದ ಕಾಶಿ ವಿಶ್ವನಾಥ ದೇವಾಲಯದ ಭವ್ಯತೆ ಹೆಚ್ಚಿಸಲು ಸರ್ಕಾರ ಏನೆಲ್ಲಾ ಕೆಲಸಗಳನ್ನು ಮಾಡಿದೆ ಎಂಬುದನ್ನು ಜನರಿಗೆ ತಿಳಿಸಲು ನಾವು ಇಚ್ಛಿಸುತ್ತೇವೆ ಎಂದು ಬಿಜೆಪಿ ನಾಯಕರೊಬ್ಬರು ಪ್ರಜಾವಾಣಿಗೆ ತಿಳಿಸಿದ್ದಾರೆ.

ಚುನಾವಣೆಗೆ ಮುನ್ನ ಈ ಕಾರ್ಯಕ್ರಮವನ್ನು ಸರ್ಕಾರ ಆಯೋಜಿಸುತ್ತಿರುವ ಕುರಿತು ವಿಪಕ್ಷಗಳು ಟೀಕಿಸಿವೆ. 'ಧರ್ಮವನ್ನು ಬಳಸಿಕೊಂಡು ಜನರ ಬೆಂಬಲ ಪಡೆಯಲು ಬಿಜೆಪಿ ಸದಾ ಪ್ರಯತ್ನಿಸುತ್ತದೆ. ಈ ಕಾರ್ಯಕ್ರಮದ ಹಿಂದೆಯೂ ಅಂಥದ್ದೇ ಉದ್ದೇಶವಿದೆ' ಎಂದು ಸಮಾಜವಾದಿ ಪಕ್ಷದ ನಾಯಕರೊಬ್ಬರು ಹೇಳಿದ್ದಾರೆ. ಆದರೆ ಈ ಟೀಕೆಗಳನ್ನು ಬಿಜೆಪಿ ಅಲ್ಲಗಳೆದಿದೆ.

ಪ್ರಧಾನಿ ಮೋದಿ ಅವರು ಕಾಶಿ ವಿಶ್ವನಾಥ ದೇವಾಲಯ ಕಾರಿಡಾರ್ ಯೋಜನೆಗೆ 2019ರ ಮಾರ್ಚ್‌ನಲ್ಲಿ ಶಿಲಾನ್ಯಾಸ ನೆರವೇರಿಸಿದ್ದರು. ಈ ಕಾರಿಡಾರ್‌ನಲ್ಲಿ ಯಾತ್ರಿಕರಿಗೆ ಅನುಕೂಲ ಆಗುವಂತೆ ವೇದಗಳ ಕುರಿತ ಗ್ರಂಥಾಲಯ, ಧ್ಯಾನ ಮಂದಿರ, ವೇದಗಳ ವರ್ಚುವಲ್ ಗ್ಯಾಲರಿ, ಉಪಹಾರ ಮಂದಿರವನ್ನು ನಿರ್ಮಿಸಲಾಗಿದೆ. ಈ ಯೋಜನೆಗೆ ₹1000 ಕೋಟಿ ವೆಚ್ಚ ತಗುಲಿದೆ ಎನ್ನಲಾಗಿದೆ.

ಈ ಯೋಜನೆ ಹಲವಾರು ವಿವಾದಗಳನ್ನು ಹುಟ್ಟುಹಾಕಿತ್ತು. ದೇವಸ್ಥಾನದ ಮಾರ್ಗ ನಿರ್ಮಿಸಲು ಹಲವಾರು ಮನೆಗಳನ್ನು ಮತ್ತು ಅಂಗಡಿಗಳನ್ನು ಧ್ವಂಸ ಮಾಡಲಾಗಿತ್ತು. ಹಲವಾರು ಪ್ರಾಚೀನ ದೇವಸ್ಥಾನಗಳನ್ನೂ ನೆಲಸಮ ಮಾಡಲಾಗಿತ್ತು. ಸರ್ಕಾರದ ಈ ನಡೆಯನ್ನು ವಿಪಕ್ಷಗಳು ವಿರೋಧಿಸಿದ್ದವು.

ಉತ್ತರ ಪ್ರದೇಶ: 32 ಕ್ಷೇತ್ರ ಗುರುತಿಸಿದ ಆರ್‌ಎಲ್‌ಡಿ

ಲಖನೌ (ಪಿಟಿಐ): ಸಮಾಜವಾದಿ ಪಕ್ಷದೊಂದಿಗೆ ಮೈತ್ರಿ ಮಾಡಿಕೊಂಡಿರುವ ರಾಷ್ಟ್ರೀಯ ಲೋಕ ದಳ (ಆರ್‌ಎಲ್‌ಡಿ), ಮುಂದಿನ ವರ್ಷ ನಡೆಯಲಿರುವ ಉತ್ತರಪ್ರದೇಶದ ವಿಧಾನಸಭಾ ಚುನಾವಣೆಯಲ್ಲಿ ತಾನು ಸ್ಪರ್ಧಿಸಲಿರುವ 32 ವಿಧಾನಸಭಾ ಕ್ಷೇತ್ರಗಳನ್ನು ಗುರುತಿಸಿದೆ ಎಂದು ಆರ್‌ಎಲ್‌ಡಿ ರಾಜ್ಯ ಘಟಕದ ಅಧ್ಯಕ್ಷ ಮಸೂದ್ ಅಹಮದ್ ತಿಳಿಸಿದ್ದಾರೆ.

ಸದ್ಯಕ್ಕೆ, ಉತ್ತರ ಪ್ರದೇಶದ ಪಶ್ಚಿಮ ಭಾಗದ 32 ವಿಧಾನಸಭಾ ಕ್ಷೇತ್ರಗಳನ್ನು ಗುರುತಿಸಲಾಗಿದ್ದು, ಈ ಸಂಖ್ಯೆ ಇನ್ನೂ ಹೆಚ್ಚುವ ಸಾಧ್ಯತೆ ಇದೆ ಎಂದೂ ಅವರು ಹೇಳಿದ್ದಾರೆ.

ಉತ್ತರ ಪ್ರದೇಶದಲ್ಲಿ, ಸಮಾಜವಾದಿ ಪಕ್ಷದ ನೇತೃತ್ವದ ಮೈತ್ರಿಕೂಟವು ಅಧಿಕಾರಕ್ಕೆ ಬಂದಲ್ಲಿ ಅಖಿಲೇಶ್ ಯಾದವ್ ಮುಖ್ಯಮಂತ್ರಿ ಆಗಲಿದ್ದಾರೆ ಎಂದೂ ಅವರು ತಿಳಿಸಿದ್ದಾರೆ.

ಆರ್‌ಎಲ್‌ಡಿ ಮುಖ್ಯಸ್ಥ ಜಯಂತ್ ಚೌಧರಿ ಉಪ ಮುಖ್ಯಮಂತ್ರಿ ಆಗಲಿದ್ದಾರೆಯೇ ಎಂಬ ಪ್ರಶ್ನೆಗೆ, 'ಜಯಂತ್ ಅವರು ಸ್ಪರ್ಧಿಸುತ್ತಾರೋ ಇಲ್ಲವೋ ಗೊತ್ತಿಲ್ಲ. ಮೂರು ತಿಂಗಳ ಹಿಂದೆಯೇ ನಾನು ಅವರನ್ನು ಕೇಳಿದ್ದಾಗ, ಸ್ಪರ್ಧಿಸುವುದಿಲ್ಲ ಎಂದಿದ್ದರು. ಆದರೆ, ರಾಜಕಾರಣದಲ್ಲಿ ಬದಲಾವಣೆಗಳು ಆಗಲು ಹೆಚ್ಚು ಸಮಯ ಬೇಕಾಗುವುದಿಲ್ಲ' ಎಂದು ಪ್ರತಿಕ್ರಿಯಿಸಿದರು.

ಜಯಂತ್ ಚೌಧರಿ ಅವರು ಸ್ಪರ್ಧಿಸಬೇಕು ಎಂದು ಕಾರ್ಯಕರ್ತರು ಬಯಸುತ್ತಿದ್ದಾರೆ. ಅದು ಪಕ್ಷದ ಬಯಕೆಯೂ ಹೌದು. ಅವರು ಆಯ್ದುಕೊಳ್ಳಬಹುದಾದ ಹಲವು ಕ್ಷೇತ್ರಗಳಿವೆ. ಅಂಬೇಡ್ಕರ್ ನಗರ ಜಿಲ್ಲೆಯ ಟಾಂಡಾ ವಿಧಾನಸಭಾ ಕ್ಷೇತ್ರವನ್ನು ಆಯ್ಕೆ ಮಾಡಿಕೊಳ್ಳುವಂತೆ ತಾವು ಪ್ರಸ್ತಾಪಿಸುವುದಾಗಿ ಮಸೂದ್ ಹೇಳಿದರು.

ಕೃಷಿ ಕಾಯ್ದೆ ವಿರೋಧಿಸಿ ನಡೆದ ಹೋರಾಟದಲ್ಲಿ ಮೃತಪಟ್ಟ ರೈತರ ಮಕ್ಕಳು ಸ್ಪರ್ಧಿಸಲು ಇಚ್ಛಿಸಿದಲ್ಲಿ, ಅವರ ಗೆಲುವಿನ ಸಾಮರ್ಥ್ಯ ಆಧರಿಸಿ ಅವರಿಗೆ ಟಿಕೆಟ್ ನೀಡುವ ನಿರ್ಧಾರ ಕೈಗೊಳ್ಳಲಾಗುವುದು ಎಂದು ಅವರು ತಿಳಿಸಿದ್ದಾರೆ.

ಕಾಂಗ್ರೆಸ್, ಎಎಪಿ ನಿರ್ನಾಮ ನಿಶ್ಚಿತ: ಬಾದಲ್

ಚಂಡೀಗಡ (ಪಿಟಿಐ): ಪಂಜಾಬ್ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಹಾಗೂ ಆಮ್ ಆದ್ಮಿ ಪಕ್ಷ (ಎಎಪಿ) ಹೇಳಹೆಸರಿಲ್ಲದಂತಾಗುತ್ತವೆ ಎಂದು ಶಿರೋಮಣಿ ಅಕಾಲಿ ದಳ (ಎಸ್‌ಎಡಿ) ಮುಖ್ಯಸ್ಥ ಸುಖಬೀರ್ ಸಿಂಗ್ ಬಾದಲ್ ಹೇಳಿದರು.

ಕಾಂಗ್ರೆಸ್ ಪಕ್ಷವು ಕೊಟ್ಟ ಭರವಸೆಗಳನ್ನು ಈಡೇರಿಸದೇ, ಆಡಳಿತ ವಿರೋಧಿ ಅಲೆಯನ್ನು ಎದುರಿಸುತ್ತಿದೆ. ಆಮ್ ಆದ್ಮಿ ಪಕ್ಷವನ್ನು ಜನರು ನಂಬುವುದಿಲ್ಲ ಎಂದಿದ್ದಾರೆ.

ಮುಖ್ಯಮಂತ್ರಿ ಚರಣ್‌ಜಿತ್ ಸಿಂಗ್ ಚನ್ನಿ ತಾವು 'ಸಾಮಾನ್ಯ ಮನುಷ್ಯ' ಎಂದು ಬಿಂಬಿಸಿಕೊಳ್ಳುವ ನಾಟಕ ಮಾಡುತ್ತಿದ್ದಾರೆ ಎಂದು ಆರೋಪಿಸಿದ ಅವರು, ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್, ಪಂಜಾಬ್ ಮುಖ್ಯಮಂತ್ರಿಯಾಗಲು ಬಯಸುತ್ತಿದ್ದಾರೆ ಎಂದು ಟೀಕಿಸಿದರು.

ಆದರೆ, ನೀಡಿದ ಭರವಸೆಗಳನ್ನು ಈಡೇರಿಸುವುದು ತಮ್ಮ ಪಕ್ಷ ಮಾತ್ರ ಎಂಬುದು ರಾಜ್ಯದ ಜನರಿಗೆ ಗೊತ್ತಿದೆ ಎಂದು ಬಾದಲ್ ಹೇಳಿದರು.

'ಕಳೆದ ನಾಲ್ಕೂವರೆ ವರ್ಷಗಳಲ್ಲಿ ರಾಜ್ಯದ ಅಭಿವೃದ್ಧಿ ಸ್ಥಗಿತವಾಗಿದೆ. ಈ ಸರ್ಕಾರದಿಂದ ಜನ ಬೇಸತ್ತಿದ್ದಾರೆ. ಇನ್ನು, ಕೇಜ್ರಿವಾಲ್ ಅವರು ಪಂಜಾಬ್‌ನಲ್ಲಿ ಏನು ಭರವಸೆಗಳನ್ನು ನೀಡುತ್ತಿದ್ದಾರೋ ಅವುಗಳನ್ನು ಮೊದಲು ದೆಹಲಿಯಲ್ಲಿ ಅನುಷ್ಠಾನಕ್ಕೆ ತರಲಿ' ಎಂದರು.

ಮುಖ್ಯಮಂತ್ರಿ ಚನ್ನಿ, ಮಾಜಿ ಮುಖ್ಯಮಂತ್ರಿ ಅಮರಿಂದರ್ ಸಿಂಗ್, ಕಾಂಗ್ರೆಸ್‌ನ ರಾಜ್ಯ ಘಟಕದ ಅಧ್ಯಕ್ಷ ನವಜೋತ್ ಸಿಂಗ್ ಸಿಧು ಎಲ್ಲರ ವಿರುದ್ಧವೂ ಹರಿಹಾಯ್ದ ಬಾದಲ್, 'ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷಕ್ಕಿರುವ ದೊಡ್ಡ ಕಂಟಕವೇ ಸಿಧು' ಎಂದರು. ಎಸ್‌ಎಡಿ–ಬಿಎಸ್‌ಪಿ ಮೈತ್ರಿಕೂಟವು ಅಧಿಕಾರಕ್ಕೆ ಬಂದಲ್ಲಿ, ರಾಜ್ಯದ ಸಮಗ್ರ ಅಭಿವೃದ್ಧಿಗೆ ಮುಂದಾಗುವುದಾಗಿ ಅವರು ಹೇಳಿದರು.


ಸುದ್ದಿ 2 ನಿಮಿಷ

'ಬಿಜೆಪಿಯಲ್ಲಿರುವ ಪೆದ್ದ ಈಶ್ವರಪ್ಪ'

ಚಿತ್ರದುರ್ಗ: 'ಸಚಿವ ಕೆ.ಎಸ್. ಈಶ್ವರಪ್ಪ ಬಿಜೆಪಿಯಲ್ಲಿರುವ ಒಬ್ಬ ಪೆದ್ದ, ರಾಜಕೀಯ ಗಂಧ–ಗಾಳಿ ಗೊತ್ತಿಲ್ಲದೇ ಮಂತ್ರಿ ಆಗಿರುವ ಏಕಮಾತ್ರ ಕಾರಣಕ್ಕೆ ಬಾಯಿಗೆ ಬಂದಂತೆ ಮಾತನಾಡುತ್ತಿದ್ದಾರೆ' ಎಂದು ವಿಧಾನಸಭೆ ವಿರೋಧಪಕ್ಷದ ನಾಯಕ ಸಿದ್ದರಾಮಯ್ಯ ಟೀಕಿಸಿದರು.

ಕಾಂಗ್ರೆಸ್ ಅಭ್ಯರ್ಥಿ ಬಿ. ಸೋಮಶೇಖರ ಪರ ಭಾನುವಾರ ಮತಯಾಚನೆ ಮಾಡಿ ಬಹಿರಂಗ ಸಭೆಯಲ್ಲಿ ಮಾತನಾಡಿದರು.

'ಕಾಂಗ್ರೆಸ್ ಅಭ್ಯರ್ಥಿಯ ಆಯ್ಕೆಗೆ ಸಂಬಂಧಿಸಿದಂತೆ ಮಾತನಾಡಲು ಈಶ್ವರಪ್ಪ ಯಾರು? ನಿಮ್ಮ ತಟ್ಟೆಯಲ್ಲಿ ಹೆಗ್ಗಣ ಬಿದ್ದಿದೆ. ನಿಮ್ಮ ಕೆಲಸವನ್ನು ನೀವು ನೋಡಿಕೊಳ್ಳಿ. ನಮ್ಮ ಪಕ್ಷದ ಆಂತರಿಕ ವಿಚಾರಗಳ ಬಗ್ಗೆ ಹಗುರವಾಗಿ ಮಾತನಾಡಬೇಡಿ' ಎಂದರು.



'ಸಂವಿಧಾನಕ್ಕೆ 73 ಮತ್ತು 74ನೇ ತಿದ್ದುಪಡಿ ತಂದು ಮಹಿಳೆಯರು, ಹಿಂದುಳಿದ ವರ್ಗ ಹಾಗೂ ಅಲ್ಪಸಂಖ್ಯಾತ ಸಮುದಾಯಕ್ಕೆ ಸಂವಿಧಾನಬದ್ಧ ಮೀಸಲಾತಿ ದೊರಕಿಸಿಕೊಟ್ಟಿದ್ದು ರಾಜೀವ್‌ಗಾಂಧಿ. ಗ್ರಾಮ ಪಂಚಾಯಿತಿ ಅಧ್ಯಕ್ಷರ ಮೀಸಲಾತಿಯನ್ನು ಪ್ರತಿ ವರ್ಷ ಬದಲಿಸಿ ಅಧಿಕಾರಕ್ಕೆ ತೊಡಕುಂಟು ಮಾಡಿದ್ದು ಬಿಜೆಪಿ. ಇದು ನಿನಗೆ ಗೊತ್ತೇ ಈಶ್ವರಪ್ಪ' ಎಂದು ಏಕವಚನದಲ್ಲಿ ಪ್ರಶ್ನಿಸಿದರು.

'ಕಟೀಲ್ ಭಯೋತ್ಪಾದಕ': ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಮಾತಿಗೆ ಮೂರು ಕಾಸಿನ ಕಿಮ್ಮತ್ತು ಇಲ್ಲ. ಅವರೇ ಒಬ್ಬ ಭಯೋತ್ಪಾದಕ ಎಂದು ಸಿದ್ದರಾಮಯ್ಯ ಆಕ್ರೋಶ ವ್ಯಕ್ತಪಡಿಸಿದರು.

'ಭಯೋತ್ಪಾದನೆಗೆ ಕಾಂಗ್ರೆಸ್ ಬೆಳೆ ನೀಡುತ್ತಿದೆ' ಎಂಬ ಕಟೀಲ್ ಹೇಳಿಕೆಗೆ ಅವರು ತಿರುಗೇಟು ನೀಡಿದರು.

ರಮೇಶ ಮೋಸ ಮಾಡ್ತಿದ್ದಾರೆಂದು ಲಕ್ಷ್ಮಿ ಆಗ ಹೇಳಲಿಲ್ಲವೇಕೆ: ಈಶ್ವರಪ್ಪ ಪ್ರಶ್ನೆ

ಬೆಳಗಾವಿ: 'ಗೋಕಾಕದ ಬಿಜೆಪಿ ಶಾಸಕ ರಮೇಶ ಜಾರಕಿಹೊಳಿ ಅವರು ಕಾಂಗ್ರೆಸ್‌ನಲ್ಲಿದ್ದಾಗ ಆ ಪಕ್ಷಕ್ಕೆ ಮೋಸ ಮಾಡುತ್ತಿದ್ದಾರೆ ಎಂದು ಶಾಸಕಿ ಲಕ್ಷ್ಮಿ ಹೆಬ್ಬಾಳಕರ ಅವರು ಆಗಲೇ ಹೇಳಲಿಲ್ಲವೇಕೆ?' ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವ ಕೆ.ಎಸ್. ಈಶ್ವರಪ್ಪ ವ್ಯಂಗ್ಯವಾಡಿದರು.

ಇಲ್ಲಿ ಭಾನುವಾರ ಪತ್ರಕರ್ತರೊಂದಿಗೆ ಮಾತನಾಡಿದ ಅವರು, 'ರಮೇಶ ಕಾಂಗ್ರೆಸ್ ಬಿಟ್ಟು ಬಂದ ನಂತರ ಅವರಿಗೆ ಎಲ್ಲವೂ ನೆನಪಾಗಿದೆ. ಸತ್ಯವನ್ನು ಸ್ಪಷ್ಟವಾಗಿ ಹೇಳಬೇಕು, ತಮಗೆ ಬೇಕಾದಂತೆ ತಿರುಚಿದರೆ ಸತ್ಯವಾಗುವುದಿಲ್ಲ' ಎಂದು ತಿರುಗೇಟು ನೀಡಿದರು.

'ರಮೇಶ ಯಾವುದೇ ಕಾರಣಕ್ಕೂ ಪಕ್ಷಕ್ಕೆ ಮೋಸ ಮಾಡುವುದಿಲ್ಲ. ವಿಧಾನಪರಿಷತ್‌ನ ಜಿಲ್ಲೆಯ ಎರಡು ಸ್ಥಾನಗಳಿಗೆ ಚುನಾವಣೆ ನಡೆಯುತ್ತಿದೆ. ಮೊದಲನೇ ಪ್ರಾಶಸ್ತ್ಯದ ಮತ ಬಿಜೆಪಿಗೆ ಕೊಡಿ; 2ನೇ ಪ್ರಾಶಸ್ತ್ಯದ ಮತವನ್ನು ತಮ್ಮ ಲಖನ್ ಜಾರಕಿಹೊಳಿ ಅವರಿಗೆ ಕೊಡಿ ಎಂದು ಮುಕ್ತವಾಗಿಯೇ ಕೇಳುತ್ತಿದ್ದಾರೆ. ಲಕ್ಷ್ಮಿಗೆ ಇದನ್ನು ತಡೆದುಕೊಳ್ಳಲಾಗದೆ ಏನೇನೋ ಆರೋಪ ಮಾಡುತ್ತಿದ್ದಾರೆ' ಎಂದು ಟೀಕಿಸಿದರು.

'ಅಭ್ಯರ್ಥಿಯಾಗಿ ಲಖನ್ ಪ್ರಥಮ ಪ್ರಾಶಸ್ತ್ಯದ ಮತ ಕೇಳಿಕೊಳ್ಳಬಹುದು. ಆದರೆ, ಬಿಜೆಪಿಯವರು ನಮ್ಮ ಅಭ್ಯರ್ಥಿ ಬೆಂಬಲಿಸುತ್ತಾರೆ' ಎಂದರು.

'ಕಾಮಗಾರಿಗಳ ಟೆಂಡರ್ ನೀಡುವಾಗ ಶೇ 40ರಷ್ಟು ಲಂಚ ಪಡೆಯಲಾಗುತ್ತಿದೆ ಎಂಬ ಆರೋಪದ ಬಗ್ಗೆ ತನಿಖೆ ನಡೆಸುವುದಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದ್ದಾರೆ. ಈಗಿನ ಹಾಗೂ ಹಿಂದಿನ ಸರ್ಕಾರದಲ್ಲಿ ಕೊಡಲಾದ ಟೆಂಡರ್‌ಗಳ ಬಗ್ಗೆಯೂ ತನಿಖೆ ನಡೆಸಲಾಗುತ್ತದೆ. ಯಾರು ತಪ್ಪಿತಸ್ಥರಿದ್ದಾರೋ ಅವರು ಅನುಭವಿಸುತ್ತಾರೆ' ಎಂದು ಪ್ರತಿಕ್ರಿಯಿಸಿದರು.

ನಿಧನ ವಾರ್ತೆ

ರಾಜೇಂದ್ರ ಗೋಖಲೆ



ಧಾರವಾಡ: ಇಲ್ಲಿನ ರಾಮನಗರ ನಿವಾಸಿ ರಾಜೇಂದ್ರ ಗೋಖಲೆ (63) ಭಾನುವಾರ ಬಹು ಅಂಗಾಂಗ ವೈಫಲ್ಯದಿಂದ ಪುಣೆಯಲ್ಲಿ ನಿಧನರಾದರು.

ಮೂರು ತಿಂಗಳಿಂದ ಅವರು ಅಂಗಾಂಗ ವೈಫಲ್ಯದಿಂದ ಬಳಲುತ್ತಿದ್ದರು. ಗೋಖಲೆ ಅವರು ಅಖಿಲ ಭಾರತ ವಿದ್ಯಾರ್ಥಿ ಪರಿಷತ್‌ನ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರವಹಿಸಿದ್ದರು. ತುರ್ತು ಪರಿಸ್ಥಿತಿಯಲ್ಲಿ ಜೈಲುವಾಸ ಅನುಭವಿಸಿದ್ದರು. ಅಸ್ಸಾಂನಲ್ಲಿ ಎಂಟು ವರ್ಷ ಪೂರ್ಣಾವಧಿ ಪ್ರಚಾರಕರಾಗಿ ಕಾರ್ಯ ನಿರ್ವಹಿಸಿದ್ದರು. ದಿ. ಸುಷ್ಮಾ ಸ್ವರಾಜ್ ಅವರು ಬಳ್ಳಾರಿಯಲ್ಲಿ ಚುನಾವಣೆಗೆ ಸ್ಪರ್ಧಿಸಿದ್ದಾಗ ಚುನಾವಣೆಯ ಉಸ್ತುವಾರಿಯಾಗಿದ್ದರು. ಅನೇಕ ವರ್ಷ ಎಬಿವಿಪಿ ಕಾರ್ಯಾಲಯವೇ ಅವರ ಮನೆಯಾಗಿತ್ತು. ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಪ್ರಚಾರಕರಾಗಿ, ಬಿಜೆಪಿ ಯುವ ಮೋರ್ಚಾದ ರಾಷ್ಟ್ರೀಯ ಉಪಾಧ್ಯಕ್ಷರಾಗಿ ಕೆಲಸ ಮಾಡಿದ್ದಾರೆ. ರೊನಾಲ್ಡ್ ರೇಗನ್ ಅವರು ಅಮೆರಿಕ ಅಧ್ಯಕ್ಷ ಸ್ಥಾನದ ಚುನಾವಣೆಗೆ ಸ್ಪರ್ಧಿಸಿದ್ದಾಗ ಭಾರತದಿಂದ ಚುನಾವಣೆ ವೀಕ್ಷಕರಾಗಿ ಆಯ್ಕೆಯಾಗಿದ್ದವರಲ್ಲಿ ರಾಜೇಂದ್ರ ಸಹ ಒಬ್ಬರಾಗಿದ್ದರು.

ಮಾಜಿ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಹಾಗೂ ಬಿಜೆಪಿಯ ಹಿರಿಯ ಮುಖಂಡ ಎಲ್.ಕೆ. ಅಡ್ವಾಣಿ ಅವರು ಉತ್ತರ ಕರ್ನಾಟಕ ಭಾಗದಲ್ಲಿ ಪ್ರವಾಸವನ್ನು ಕೈಗೊಂಡರೆ ಅದನ್ನು ಗೋಖಲೆ ನಿರ್ವಹಿಸುತ್ತಿದ್ದರು. ಹುಬ್ಬಳ್ಳಿ ಈದ್ಗಾ ಮೈದಾನ ಪ್ರಕರಣದಲ್ಲಿ ಬಿಜೆಪಿ ನಾಯಕಿ ಉಮಾ ಭಾರತಿ ಅವರೊಂದಿಗೆ ರಾಜೇಂದ್ರ ಗೋಖಲೆ ಮುಂಚೂಣಿಯಲ್ಲಿ ಕೆಲಸ ಮಾಡಿದ್ದರು.

ಅವರಿಗೆ ಪತ್ನಿ, ಪುತ್ರ ಇದ್ದಾರೆ. ಅಂತ್ಯಕ್ರಿಯೆ ಭಾನುವಾರ ರಾತ್ರಿ ಹೊಸಯಲ್ಲಾಪುರ ರುದ್ರಭೂಮಿಯಲ್ಲಿ ಜರುಗಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.



ತ್ರಿಪುರಾದ ಧರ್ಮನಗರ ನಗರಸಭೆ ಚುನಾವಣೆಯಲ್ಲಿ ಪಕ್ಷದ ಅಭ್ಯರ್ಥಿಗಳು ಗೆಲುವು ಸಾಧಿಸಿದ ಹಿನ್ನೆಲೆಯಲ್ಲಿ ಬಿಜೆಪಿ ಬೆಂಬಲಿಗರು ಭಾನುವಾರ ವಿಜಯೋತ್ಸವ ಆಚರಿಸಿದರು –ಪಿಟಿಐ ಚಿತ್ರ

ನಾವು ಯಾರ 'ಬಿ ಟೀಮ್' ಅಲ್ಲ, ಜನರ ಟೀಮ್: ಎಚ್‌ಡಿಕೆ

ಪ್ರಜಾವಾಣಿ ವಾರ್ತೆ

ಕೋಲಾರ: 'ಬಿಜೆಪಿಯಲ್ಲಿ ತುಂಬಿರುವುದು ಕಾಂಗ್ರೆಸ್‌ನಿಂದ ವಲಸೆ ಹೋದ ಮುಖಂಡರೇ ಹೊರತು ಜೆಡಿಎಸ್ ನಾಯಕರಲ್ಲ. ಹಾಗಾದರೆ, ಯಾರನ್ನು ಬಿಜೆಪಿಯ ಬಿ–ಟೀಮ್ ಎಂದು ಕರೆಯಬೇಕು' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಪ್ರಶ್ನಿಸಿದರು.

ಭಾನುವಾರ ಇಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ನಾವು ಯಾರ ಬಿ–ಟೀಮ್ ಅಲ್ಲ, ಈ ನಾಡಿನ ಜನತೆಯ ಟೀಮ್ ಅಷ್ಟೇ ಎಂದರು. ಮಾತು ಮಾತಿಗೂ ನಮ್ಮನ್ನು ಬಿಜೆಪಿಯ 'ಬಿ–ಟೀಮ್' ಎಂದು ಜರಿಯುವ ಕಾಂಗ್ರೆಸ್ ಪಕ್ಷವು ಬಿಜೆಪಿಯ ಯಾವ ಟೀಮ್ ಎಂದು ಜನರು ನಿರ್ಧರಿಸಬೇಕು' ಎಂದರು.

'ವಿಧಾನ ಪರಿಷತ್ ಚುನಾವಣೆಯಲ್ಲಿ ಕಾಂಗ್ರೆಸ್ ಮುಖಂಡರಿಗೆ ತಮ್ಮ ಪಕ್ಷದ ಅಭ್ಯರ್ಥಿಗಳು ಗೆಲ್ಲುವುದು ಬೇಕಿಲ್ಲ. ಅಭ್ಯರ್ಥಿಗಳ ಆಯ್ಕೆಯಿಂದಲೇ ಕಾಂಗ್ರೆಸ್ ಯಾವ ಟೀಮ್ ಎನ್ನುವ ವಿಷಯ ಬಹಿರಂಗವಾಗಿದೆ. ಇದೆಲ್ಲದ್ದಕ್ಕೂ ಜನರೇ ಮುಂದೆ ತಕ್ಕ ಉತ್ತರ ನೀಡುತ್ತಾರೆ' ಎಂದು ಕುಮಾರಸ್ವಾಮಿ ಹೇಳಿದರು.

ನಗರ ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆ

ತ್ರಿಪುರಾ: ಬಿಜೆಪಿಗೆ ಪ್ರಚಂಡ ಗೆಲುವು ಟಿಎಂಸಿ, ಸಿಪಿಎಂಗೆ ಮುಖಭಂಗ

ಅಗರ್ತಲಾ/ಕೋಲ್ಕತ್ತ (ಪಿಟಿಐ): ಹಿಂಸಾಚಾರ ನಡೆದ ಆರೋಪ, ಆಡಳಿತ–ಪ್ರತಿಪಕ್ಷಗಳ ನಡುವೆ ಜಟಾಪಟಿಯಿಂದ ಗಮನ ಸೆಳೆದಿದ್ದ ತ್ರಿಪುರಾದ 14 ನಗರ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಆಡಳಿತಾರೂಢ ಬಿಜೆಪಿ ಭಾನುವಾರ ಪ್ರಚಂಡ ಗೆಲುವು ಸಾಧಿಸಿದೆ.

ಅಗರ್ತಲಾ ಮಹಾನಗರ ಪಾಲಿಕೆ ಸೇರಿದಂತೆ 14 ನಗರ ಸ್ಥಳೀಯ ಸಂಸ್ಥೆಗಳ ಒಟ್ಟು 334 ಸ್ಥಾನಗಳ ಪೈಕಿ 329 ಸ್ಥಾನಗಳಲ್ಲಿ ಬಿಜೆಪಿ ಗೆಲುವಿನ ನಗೆ ಬೀರಿದ್ದು, ಟಿಎಂಸಿ ಹಾಗೂ ಸಿಪಿಎಂ ಭಾರಿ ಮುಖಭಂಗ ಅನುಭವಿಸಿವೆ.

ಸಿಪಿಎಂ ಮೂರು ಸ್ಥಾನಗಳಲ್ಲಿ ಗೆದ್ದಿದೆ. ಟಿಎಂಸಿ ಹಾಗೂ ಪಕ್ಷೇತರ ಅಭ್ಯರ್ಥಿಗಳು ತಲಾ ಒಂದು ಸ್ಥಾನದಲ್ಲಿ ಗೆಲುವು ಸಾಧಿಸಿದ್ದಾರೆ.

2018ರಲ್ಲಿ ನಡೆದ ವಿಧಾನಸಭಾ ಚುನಾವಣೆಯಲ್ಲಿ ಬಹುಮತ ಪಡೆದು ಆಡಳಿತ ಚುಕ್ಕಾಣಿ ಹಿಡಿದ ನಂತರ ಬಿಜೆಪಿ ಎದುರಿಸಿದ ಮೊದಲ ನಗರ ಸ್ಥಳೀಯ ಸಂಸ್ಥೆಗಳ ಚುನಾವಣೆ ಇದಾಗಿದೆ.

ಅಗರ್ತಲಾ ಮಹಾನಗರ ಪಾಲಿಕೆಯ 51 ಸ್ಥಾನಗಳಲ್ಲಿ ವಿರೋಧ ಪಕ್ಷಗಳ ಒಬ್ಬ ಅಭ್ಯರ್ಥಿಯೂ ಗೆದ್ದಿಲ್ಲ. ಖೋವಾಯ್ (15 ಸ್ಥಾನ), ಬೆಲೋನಿಯಾ (17 ಸ್ಥಾನ) ಹಾಗೂ 15 ಸದಸ್ಯಬಲದ ಕುಮಾರಘಾಟ್ ನಗರಸಭೆಗಳು, 9 ಸದಸ್ಯರನ್ನು ಹೊಂದಿರುವ ಸಬ್ರೂಮ್ ನಗರ ಪಂಚಾಯಿತಿಗಳ ಎಲ್ಲ ಸ್ಥಾನಗಳಲ್ಲಿ ಬಿಜೆಪಿ ಅಭ್ಯರ್ಥಿಗಳು ಗೆದ್ದಿದ್ದಾರೆ ಎಂದು ರಾಜ್ಯ ಚುನಾವಣಾ ಆಯೋಗದ ಅಧಿಕಾರಿಗಳು ತಿಳಿಸಿದ್ದಾರೆ.

15 ಸದಸ್ಯ ಬಲದ ಅಂಬಾಸ ನಗರಸಭೆಯಲ್ಲಿ ಬಿಜೆಪಿ 12 ಸ್ಥಾನಗಳಲ್ಲಿ ಗೆದ್ದಿದೆ. ಟಿಎಂಸಿ ಹಾಗೂ ಸಿಪಿಎಂ ತಲಾ ಒಂದು ಸ್ಥಾನದಲ್ಲಿ ಗೆದ್ದಿವೆ. ಮತ್ತೊಂದು ಸ್ಥಾನ ಪಕ್ಷೇತರ ಅಭ್ಯರ್ಥಿ ಪಾಲಾಗಿದೆ.

ಕೈಲಾಶಹರ ನಗರಸಭೆಯಲ್ಲಿ 16 ಸ್ಥಾನಗಳಲ್ಲಿ ಬಿಜೆಪಿ ಗೆದ್ದಿದ್ದರೆ, ಸಿಪಿಎಂ ಒಂದು ಸ್ಥಾನ ಗೆದ್ದಿದೆ. ಪಾಣಿಸಾಗರ ನಗರ ಪಂಚಾಯಿತಿಯಲ್ಲಿ ಒಂದು ಸ್ಥಾನದಲ್ಲಿ ಸಿಪಿಎಂ ಗೆದ್ದಿದ್ದರೆ, 12 ಸ್ಥಾನಗಳಲ್ಲಿ ಬಿಜೆಪಿ ಅಭ್ಯರ್ಥಿಗಳು ಗೆಲುವಿನ ನಗೆಬೀರಿದ್ದಾರೆ.

ಚುನಾವಣಾ ಪ್ರಚಾರ ಆರಂಭಗೊಂಡ ದಿನದಿಂದಲೇ, ರಾಜ್ಯದಲ್ಲಿ ವ್ಯಾಪಕ ಹಿಂಸಾಚಾರ ನಡೆಯುತ್ತಿದೆ ಎಂಬ ಆರೋಪಗಳು ಕೇಳಿಬಂದವು. ಈ ವಿಷಯವಾಗಿ ಬಿಜೆಪಿ ಹಾಗೂ ಟಿಎಂಸಿ ನಡುವೆ ವಾಕ್ಸಮರವೂ ನಡೆದಿತ್ತು. ಒಂದು ಹಂತದಲ್ಲಿ ಟಿಎಂಸಿ ಸುಪ್ರೀಂಕೋರ್ಟ್ ಮೆಟ್ಟಿಲೇರಿ, ಮುಕ್ತ ಹಾಗೂ ಶಾಂತಿಯುತ ಮತದಾನಕ್ಕಾಗಿ ಮಧ್ಯಪ್ರವೇಶಿಸುವಂತೆ ಅರ್ಜಿ ಸಲ್ಲಿಸಿತ್ತು.

> **ತ್ರಿಪುರಾದಲ್ಲಿ ಟಿಎಂಸಿಗೆ ಅಸ್ತಿತ್ವವೇ ಇರಲಿಲ್ಲ. ಆದಾಗ್ಯೂ ಮೂರು ಸ್ಥಾನಗಳಲ್ಲಿ ಗೆಲುವು ಸಾಧಿಸಿರುವುದು ಹೆಮ್ಮೆಯ ವಿಷಯ**
> **ಅಭಿಷೇಕ್ ಬ್ಯಾನರ್ಜಿ,** ಟಿಎಂಸಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ

> **ಇದು ಐತಿಹಾಸಿಕ ಗೆಲುವು. ಬಿಜೆಪಿಯ ವಿರೋಧಿಗಳಿಗೆ ತ್ರಿಪುರಾ ಜನರು ತಕ್ಕ ಉತ್ತರ ನೀಡಿದ್ದಾರೆ**
> **ಬಿಪ್ಲವ್ ಕುಮಾರ್ ದೇವ್,** ತ್ರಿಪುರಾ ಮುಖ್ಯಮಂತ್ರಿ

'ಮನದ ಮಾತು' ಬಾನುಲಿ ಭಾಷಣದಲ್ಲಿ ಯುವ ಜನರಿಗೆ ಪ್ರಧಾನಿ ಶ್ಲಾಘನೆ

ಅಧಿಕಾರದಲ್ಲಿಲ್ಲ; ಸೇವೆಯಲ್ಲಿದ್ದೇನೆ: ಮೋದಿ

ನವದೆಹಲಿ (ಪಿಟಿಐ): ಜನರ ಸೇವೆ ಮಾಡುವುದು ತಮ್ಮ ಬಯಕೆಯೇ ಹೊರತು ಅಧಿಕಾರದಲ್ಲಿ ಇರುವುದು ಅಲ್ಲ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದರು.

ತಿಂಗಳ ಕೊನೆಯ ಭಾನುವಾರದ 'ಮನದ ಮಾತು' ಬಾನುಲಿ ಭಾಷಣ ಸರಣಿಯಲ್ಲಿ ಅವರು ಮಾತನಾಡಿದರು.

ಮುಂದೆಯೂ ತಾವು ಅಧಿಕಾರದಲ್ಲಿ ಇರಬೇಕು ಎಂದು ಆಯುಷ್ಮಾನ್ ಭಾರತ್ ಯೋಜನೆಯ ಫಲಾನುಭವಿಯೊಬ್ಬರ ಹಾರೈಕೆಗೆ ಮೋದಿ ಪ್ರತಿಕ್ರಿಯಿಸಿದರು. 'ನಾನು ಈಗಲೂ ಅಧಿಕಾರದಲ್ಲಿ ಇಲ್ಲ; ಮುಂದೆಯೂ ಇರಲು ಬಯಸುವುದಿಲ್ಲ. ನಾನೇನಿದ್ದರೂ 'ಸೇವೆ'ಗಾಗಿ ಇರುತ್ತೇನೆ. ನನಗೆ, ಪ್ರಧಾನಿ ಸ್ಥಾನವು ಸೇವೆಗಾಗಿ ಇರುವುದೇ ಹೊರತು ಅಧಿಕಾರಕ್ಕಾಗಿ ಅಲ್ಲ' ಎಂದರು.

ಸರ್ಕಾರವು ಅಭಿವೃದ್ಧಿಗೆ ಸಂಬಂಧಿಸಿದ ಹಲವಾರು ಕೆಲಸಯೋಜನೆಗಳನ್ನು ಕೈಗೊಂಡರೂ, ಮಾನವೀಯ ಸಂವೇದನೆಗಳಿಗೆ ಸಂಬಂಧಿಸಿದ ಯೋಜನೆಗಳು ಕೊಡುವ ಖುಷಿಯೇ ಬೇರೆ ಎಂದ ಮೋದಿ, ಇಂಥ ಯೋಜನೆಗಳಿಂದ ಜನರ ಬದುಕಲ್ಲಿ ಆದ ಸುಧಾರಣೆಯೇನು ಎಂಬುದನ್ನು ಕೇಳಿದಾಗ ಮನಸ್ಸಿಗೆ ತೃಪ್ತಿಯಾಗುತ್ತದೆ ಎಂದರು.

ಆಯುಷ್ಮಾನ್ ಭಾರತ್ ಯೋಜನೆ ಅಡಿಯಲ್ಲಿ ಚಿಕಿತ್ಸೆ ಪಡೆದ ಇಬ್ಬರೊಂದಿಗೆ ಮೋದಿ ಮಾತನಾಡಿದ್ದು, ಇಬ್ಬರೂ ತಮ್ಮ ಜೀವನ ಸುಧಾರಿಸಿದ್ದಾಗಿ ಹೇಳಿದರು.

ಕೊರೊನಾ ಇನ್ನೂ ಹೋಗಿಲ್ಲ: ಕೊರೊನಾ ವೈರಸ್ ಇನ್ನೂ ಹೋಗಿಲ್ಲ. ಹೀಗಾಗಿ ಮುನ್ನೆಚ್ಚರಿಕೆಯಿಂದ ಇರುವುದು ಜನರ ಜವಾಬ್ದಾರಿಯಾಗಿದೆ ಎಂದು ಮೋದಿ ಎಚ್ಚರಿಸಿದರು.

ಶೌರ್ಯ ಮೆರೆಯಲು ರಣಭೂಮಿಯೇ ಆಗಬೇಕಿಲ್ಲ ಎಂದ ಪ್ರಧಾನಿ, ಉತ್ತರ ಪ್ರದೇಶದ ಜಾಲೌನ್ ಜನರು ಅಳಿವಿನಂಚಿನಲ್ಲಿದ್ದ ನೂನ್ ನದಿಯನ್ನು ಪುನರುಜ್ಜೀವನಗೊಳಿಸಿದ ಬಗೆಯನ್ನು ಬಣ್ಣಿಸಿದರು. ಇದು ಸಂಘಟಿತ ಪ್ರಯತ್ನಕ್ಕೆ ಸಾಕ್ಷಿಯಾಗಿದೆ ಎಂದರು.

ನದಿ ಸಂರಕ್ಷಣೆಗಾಗಿ, ಪರಿಸರ ಮಾಲಿನ್ಯ ತಡೆಗಾಗಿ ದೇಶದ ಹಲವೆಡೆ ನಡೆದಿರುವ ಪ್ರಯತ್ನಗಳನ್ನು ಶ್ಲಾಘಿಸಿದರು.

'ನವೋದ್ಯಮದಲ್ಲಿ ಭಾರತವೇ ಮುಂದು'

ಈಗಿನದ್ದು ನವೋದ್ಯಮ ಯುಗವಾಗಿದ್ದು, ಈ ಕ್ಷೇತ್ರದಲ್ಲಿ ಭಾರತವೇ ಮುಂಚೂಣಿಯಲ್ಲಿದೆ. ಸುಮಾರು ₹7,500 (ನೂರು ಕೋಟಿ ಡಾಲರ್) ಕೋಟಿಗಿಂತ ಹೆಚ್ಚಿನ ಮಾರುಕಟ್ಟೆ ಮೌಲ್ಯ ಹೊಂದಿರುವ 70ಕ್ಕೂ ಹೆಚ್ಚು ನವೋದ್ಯಮಗಳು ಭಾರತದಲ್ಲಿ ಇವೆ ಎಂದು ಪ್ರಧಾನಿ ಮೋದಿ ಹೇಳಿದರು.

ವರ್ಷದಿಂದ ವರ್ಷಕ್ಕೆ ನವೋದ್ಯಮಗಳಲ್ಲಿ ದಾಖಲೆಯ ಹೂಡಿಕೆಯಾಗುತ್ತಿದ್ದು, ಈ ಕ್ಷೇತ್ರವು ವೇಗವಾಗಿ ಬೆಳೆಯುತ್ತಿದೆ. ದೇಶದ ಸಣ್ಣ ನಗರಗಳಲ್ಲಿಯೂ ನವೋದ್ಯಮಗಳು ಹೆಚ್ಚಿವೆ. ಯೂನಿಕಾರ್ನ್ ಬಗ್ಗೆಯೇ ಈಗ ಚರ್ಚೆಯಾಗುತ್ತಿದೆ. ನೂರು ಕೋಟಿ ಡಾಲರ್ ಮಾರುಕಟ್ಟೆ ಮೌಲ್ಯದ ಒಂಬತ್ತು ಅಥವಾ ಹತ್ತು ನವೋದ್ಯಮಗಳಷ್ಟೇ 2015ರಲ್ಲಿ ದೇಶದಲ್ಲಿ ಇದ್ದವು. ಆ ಪಟ್ಟಿಯಲ್ಲಿ ಈಗ ದೇಶದ 70 ನವೋದ್ಯಮಗಳಿವೆ ಎಂದರು.

ಕಳೆದ ಹತ್ತು ತಿಂಗಳಲ್ಲಿ ಈ ಸಂಖ್ಯೆ ಇನ್ನೂ ಹೆಚ್ಚಾಗಿದ್ದು, ಕೋವಿಡ್–19 ಸಾಂಕ್ರಾಮಿಕ ಸಂದರ್ಭದಲ್ಲಿಯೂ ದೇಶದ ಯುವಜನ ಈ ಸಾಧನೆ ಮಾಡಿದ್ದಾರೆ. ನವೋದ್ಯಮದ ಮೂಲಕ ಅವರು ಜಾಗತಿಕ ಸಮಸ್ಯೆಗಳಿಗೆ ಪರಿಹಾರವನ್ನೂ ನೀಡುತ್ತಿದ್ದಾರೆ ಎಂದು ಶ್ಲಾಘಿಸಿದರು.

ಕೆಲವೇ ಕೆಲವು ವರ್ಷಗಳ ಹಿಂದೆ ಇಂಥದ್ದನ್ನು ಕಲ್ಪಿಸಿಕೊಳ್ಳಲೂ ಸಾಧ್ಯವಾಗದಂಥ ಪರಿಸ್ಥಿತಿ ಇತ್ತು. ಆದರೆ, ಅದು ಇಂದು ಸಾಧ್ಯವಾಗಿದೆ. ಯುವಶಕ್ತಿಯೇ ಹೆಚ್ಚಿನ ಸಂಖ್ಯೆಯಲ್ಲಿರುವ ಯಾವುದೇ ದೇಶದಲ್ಲಿ, ಆಲೋಚನೆ–ಆವಿಷ್ಕಾರ, ಸಾಹಸಕ್ಕೆ ಕೈಹಾಕುವ ಉತ್ಸಾಹ ಹಾಗೂ 'ಮಾಡಬಲ್ಲೆವು' ಎಂಬ ಛಾತಿ ಮುಖ್ಯವಾಗುತ್ತವೆ. ಈ ಮೂರು ಅಂಶಗಳು ಒಟ್ಟಿಗೆ ಸೇರಿದಾಗ, ಅಭೂತಪೂರ್ವವಾದುದು ಸಾಧ್ಯವಾಗುತ್ತದೆ. ಆಗಲೇ ಪವಾಡ, ಅದ್ಭುತಗಳು ಸೃಷ್ಟಿಯಾಗುತ್ತವೆ ಎಂದರು.

'ಓಮಿಕ್ರಾನ್: ರೋಗ ಲಕ್ಷಣ ಸೌಮ್ಯ'

ಪ್ರಿಟೋರಿಯಾ (ಎಎಫ್‌ಪಿ): ಓಮಿಕ್ರಾನ್ ಸೋಂಕಿತರು ಸೌಮ್ಯ ರೋಗಲಕ್ಷಣಗಳನ್ನು ಹೊಂದಿದ್ದು, ಆಸ್ಪತ್ರೆಗೆ ದಾಖಲಾಗದೇ ಅವರು ಸಂಪೂರ್ಣ ಗುಣಮುಖರಾಗಿದ್ದಾರೆ ಎಂದು ವೈದ್ಯೆ ಹಾಗೂ ದಕ್ಷಿಣ ಆಫ್ರಿಕಾದ ವೈದ್ಯಕೀಯ ಸಂಘದ ಮುಖ್ಯಸ್ಥೆ ಏಂಜೆಲಿಕ್ ಕೊಯೆಟ್ಜಿ ಅವರು ಭಾನುವಾರ ಹೇಳಿದ್ದಾರೆ.

ಕಳೆದ 10 ದಿನಗಳಲ್ಲಿ ತಾವು ಚಿಕಿತ್ಸೆ ನೀಡಿದ 30 ರೋಗಿಗಳ ಪೈಕಿ 10ಕ್ಕೂ ಹೆಚ್ಚು ರೋಗಿಗಳು ಗುಣಮುಖರಾಗಿ ಮನೆಗೆ ತೆರಳಿದ್ದಾರೆ ಎಂದು ಅವರು ಹೇಳಿದ್ದಾರೆ. ಇವರು ಕೆಲವು ಅಪರಿಚಿತ ರೋಗಲಕ್ಷಣಗಳನ್ನು ಹೊಂದಿದ್ದರೂ ಅವು ಸೌಮ್ಯವಾಗಿದ್ದವು ಎಂದಿದ್ದಾರೆ.

'ಸಾಮಾನ್ಯವಾಗಿ ಚಿಕ್ಕ ವಯಸ್ಸಿನವರಲ್ಲಿ ಕಾಣಿಸದ ಸುಸ್ತು ಈ ರೋಗಿಗಳಲ್ಲಿ ಕಂಡುಬಂದಿದೆ. ಈ ತಳಿ ಕಂಡುಬಂದಿರುವವರ ಪೈಕಿ ಬಹುತೇಕ ಪುರುಷರು 40 ವರ್ಷಕ್ಕಿಂತ ಕಡಿಮೆ ವಯಸ್ಸಿನವರು. ಇವರಲ್ಲಿ ಅರ್ಧದಷ್ಟು ಜನರು ಲಸಿಕೆ ಹಾಕಿಸಿಕೊಂಡಿಲ್ಲ. ಮಾಂಸಖಂಡದಲ್ಲಿ ನೋವು, ಗಂಟಲು ಕೆರೆತ, ಒಣಕೆಮ್ಮು ಲಕ್ಷಣಗಳು ಗೋಚರಿಸಿದ್ದು, ಕೆಲವರಲ್ಲಿ ಮಾತ್ರ ಅಧಿಕ ಜ್ವರ ಕಂಡುಬಂದಿದೆ. ತೀವ್ರ ರೋಗಲಕ್ಷಣಗಳನ್ನು ಹೊಂದಿದ್ದ ಬೇರೆ ರೂಪಾಂತರ ತಳಿಗಳಿಗೆ ಹೋಲಿಸಿದರೆ, ಓಮಿಕ್ರಾನ್ ಸೌಮ್ಯ ಸ್ವರೂಪದ ರೋಗಲಕ್ಷಣಗಳನ್ನು ಹೊಂದಿದೆ' ಎಂದು ಅವರು ಹೇಳಿದ್ದಾರೆ.

'ವೈರಾಣುವಿನ ಕ್ಲಿನಿಕಲ್ ದತ್ತಾಂಶಗಳು ಡೆಲ್ಟಾ ತಳಿಗೆ ಹೋಲಿಕೆಯಾಗುತ್ತಿಲ್ಲ' ಎಂದು ಕೊಯೆಟ್ಜಿ ಅವರು ನವೆಂಬರ್ 18ರಂದು ಆರೋಗ್ಯ ಅಧಿಕಾರಿಗಳನ್ನು ಎಚ್ಚರಿಸಿದ್ದರು. ಅವರು ಚಿಕಿತ್ಸೆ ನೀಡುತ್ತಿದ್ದ 30 ಮಂದಿ ಪೈಕಿ ಮೊದಲ ಏಳು ಜನರಲ್ಲಿ ಈ ಸಮಸ್ಯೆ ಕಂಡುಬಂದಿತ್ತು. ಹೊಸ ತಳಿಯ ಬಗ್ಗೆ ಆಗಲೇ ಮಾಹಿತಿ ಪಡೆದಿದ್ದ ದಕ್ಷಿಣ ಆಫ್ರಿಕಾದ ವಿಜ್ಞಾನಿಗಳು ನ.25ರಂದು ಅಧಿಕೃತವಾಗಿ ಹೊಸ ತಳಿ ಸೃಷ್ಟಿಯಾಗಿರುವುದನ್ನು ಪ್ರಕಟಿಸಿದ್ದರು.

'ಓಮಿಕ್ರಾನ್ ಅನ್ನು ಅತ್ಯಂತ ಅಪಾಯಕಾರಿ ವೈರಸ್ ರೂಪಾಂತರ ಎಂದು ಪ್ರಚಾರ ಮಾಡಿರುವುದು ದುರದೃಷ್ಟಕರ. ಅದರ ತೀವ್ರ ಹಾನಿಯ ಪರಿಣಾಮ ಇನ್ನೂ ಸರಿಯಾಗಿ ತಿಳಿದಿಲ್ಲ' ಎಂದೂ ಅವರು ಹೇಳಿದ್ದಾರೆ.

ದೃಢಪಡುವಿಕೆ ದರ ಹೆಚ್ಚಳ: ದಕ್ಷಿಣ ಆಫ್ರಿಕಾದಲ್ಲಿ ಇತ್ತೀಚೆಗೆ ವರದಿಯಾಗುತ್ತಿರುವ ಕೋವಿಡ್ ಪ್ರಕರಣಗಳಲ್ಲಿ ಮುಕ್ಕಾಲು ಪಾಲು ಪ್ರಕರಣಗಳು ಓಮಿಕ್ರಾನ್ ತಳಿಗೆ ಸಂಬಂಧಿಸಿವೆ ಎಂದು ಅಧಿಕೃತ ದತ್ತಾಂಶಗಳು ಹೇಳುತ್ತವೆ. ದೇಶದಲ್ಲಿ ಕೋವಿಡ್ ದೃಢಪಡುವಿಕೆ ದರವು ಶೇ 3.6ರಿಂದ ಶೇ 9.2ಕ್ಕೆ ಏರಿಕೆಯಾಗಿದೆ. ಬೇರೆ ದೇಶಗಳಿಗೆ ಹೋಲಿಸಿದರೆ, ಇಲ್ಲಿ ವರದಿಯಾಗುತ್ತಿರುವ ಪ್ರಕರಣಗಳು ಕಡಿಮೆಯಿದ್ದರೂ, ಅವುಗಳ ಪ್ರಮಾಣ ನಿಧಾನವಾಗಿ ಏರುತ್ತಿದೆ.

ಸರ್ವಪಕ್ಷಗಳ ಸಭೆಯಲ್ಲಿ ವಿರೋಧ ಪಕ್ಷಗಳಿಂದ ಎಚ್ಚರಿಕೆ

ಚರ್ಚೆ ಇಲ್ಲದಿದ್ದರೆ ಗದ್ದಲಕ್ಕೆ ವಿಪಕ್ಷಗಳ ಸಿದ್ಧತೆ

ನವದೆಹಲಿ: 'ಸಂಸತ್ತಿನ ಚಳಿಗಾಲದ ಅಧಿವೇಶನದಲ್ಲಿ ಚರ್ಚೆಗೆ ಅವಕಾಶ ನೀಡದಿದ್ದರೆ ಕಲಾಪವನ್ನು ಸುಗಮವಾಗಿ ನಡೆಯಲು ಬಿಡುವುದಿಲ್ಲ' ಎಂದು ವಿರೋಧ ಪಕ್ಷಗಳು ಸರ್ಕಾರಕ್ಕೆ ಎಚ್ಚರಿಕೆ ನೀಡಿವೆ. ಅಧಿವೇಶನದ ಮುನ್ನಾದಿನ ನಡೆದ ಸರ್ವಪಕ್ಷ ಸಭೆಯಲ್ಲಿ ಈ ಎಚ್ಚರಿಕೆ ಕೊಡಲಾಗಿದೆ.

ಕೃಷಿ ಕಾಯ್ದೆಗಳನ್ನು ರದ್ದುಪಡಿಸುವ ಮಸೂದೆಯನ್ನು ಸೋಮವಾರವೇ ಮಂಡಿಸಲು ಸರ್ಕಾರ ಸಿದ್ಧವಾಗಿದೆ. ಆದರೆ ಯಾವುದೇ ರೀತಿಯ ಚರ್ಚೆ ನಡೆಸದೆ ಮಸೂದೆಯನ್ನು ಅಂಗೀಕರಿಸಲು ಸರ್ಕಾರ ಯೋಜಿಸಿರುವ ಸಾಧ್ಯತೆ ಅತ್ಯಧಿಕವಾಗಿದೆ. ಸರ್ಕಾರವು ಚರ್ಚೆಗೆ ಅವಕಾಶ ನೀಡದಿದ್ದರೆ, ಅದು ಗದ್ದಲಕ್ಕೆ ಕಾರಣವಾಗಬಹುದು. ಆಗ ನಾವುಗಳು ಅದಕ್ಕೆ ಹೊಣೆಗಾರರಲ್ಲ ಎಂದು ವಿರೋಧ ಪಕ್ಷಗಳು ಹೇಳಿವೆ.

'ಈ ಕಾಯ್ದೆಗಳು ಒಳ್ಳೆಯವು ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಹೇಳಿದ್ದಾರೆ. ಪಂಜಾಬ್ ಮತ್ತು ಉತ್ತರ ಪ್ರದೇಶ ವಿಧಾನಸಭೆ ಚುನಾವಣೆಗಳು ನಡೆದ ನಂತರ ಈ ಕಾಯ್ದೆಗಳನ್ನು ಸರ್ಕಾರವು ಮತ್ತೆ ಜಾರಿಗೆ ತರಲಿದೆ ಎಂಬ ಆತಂಕ ಕಾಡುತ್ತಿದೆ. ಸರ್ಕಾರವು ಬೇರೆ ರೂಪದಲ್ಲಿ ಇವನ್ನು ಜಾರಿಗೆ ತರಬಹುದು. ನಮಗೆ ಈ ಎಲ್ಲಾ ಅನುಮಾನಗಳಿವೆ. ಈ ಬಗ್ಗೆ ನಾವು ಅಧಿವೇಶನದಲ್ಲಿ ಪ್ರಶ್ನೆಗಳನ್ನು ಕೇಳಬೇಕು, ಚರ್ಚಿಸಬೇಕು. ಮಸೂದೆ ಅಂಗೀಕರಿಸಲು ನಾವೂ ಸಹಕಾರ ನೀಡುತ್ತೇವೆ' ಎಂದು ರಾಜ್ಯಸಭೆಯ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಹೇಳಿದ್ದಾರೆ.

ಪ್ರಧಾನಿ ಗೈರಾದುದಕ್ಕೆ ಅಸಮಾಧಾನ: ಸರ್ವಪಕ್ಷಗಳ ಸಭೆಗೆ ಪ್ರಧಾನಿ ನರೇಂದ್ರ ಮೋದಿ ಅವರು ಗೈರುಹಾಜರಾಗಿದ್ದಕ್ಕೆ ವಿರೋಧ ಪಕ್ಷಗಳು ತೀವ್ರ ಅಸಮಾಧಾನ ವ್ಯಕ್ತಪಡಿಸಿವೆ.

'ಪ್ರಧಾನಿ ಸಭೆಗೆ ಬರುತ್ತಾರೆ. ನಮ್ಮೊಂದಿಗೆ ಹೊಸ ವಿಷಯಗಳನ್ನು ಹಂಚಿಕೊಳ್ಳುತ್ತಾರೆ ಎಂದು ನಿರೀಕ್ಷಿಸಿದ್ದೆವು. ಆದರೆ ಅವರು ಬರಲಿಲ್ಲ' ಎಂದು ಖರ್ಗೆ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

'ಪ್ರಧಾನಿ ಅವರು ಅತಿಥಿಯ ರೀತಿಯಲ್ಲಿ ಸಂಸತ್ತಿಗೆ ಬರಬಾರದು. ಸಣ್ಣ–ಪುಟ್ಟ ಪಕ್ಷಗಳ ಸಂಸದರೂ ಮಾತನಾಡಲು ಅವಕಾಶ ಮಾಡಿಕೊಡಬೇಕು. ಸಂಸತ್ತು ಕೇವಲ ಕಾಯ್ದೆಯ ಕಾರ್ಖಾನೆ ಆಗಬಾರದು' ಎಂದು ಸಿಪಿಐನ ಬಿನೋಯ್ ವಿಸ್ವಂ ಹೇಳಿದ್ದಾರೆ.

ಕಾಂಗ್ರೆಸ್‌ನೊಂದಿಗೆ ನಮ್ಮ ಸಂಬಂಧ ಬೇರೆ: ಟಿಎಂಸಿ

'ಕಾಂಗ್ರೆಸ್ ಮತ್ತು ಬೇರೆ ವಿರೋಧ ಪಕ್ಷಗಳ ನಡುವೆ ಇರುವ ಸಂಬಂಧವೇ ಬೇರೆ, ಕಾಂಗ್ರೆಸ್ ಮತ್ತು ನಮ್ಮ ನಡುವೆ ಇರುವ ಸಂಬಂಧವೇ ಬೇರೆ' ಎಂದು ಟಿಎಂಸಿ ನಾಯಕರು ಹೇಳಿದ್ದಾರೆ.

'ಕಾಂಗ್ರೆಸ್ ಪಕ್ಷವು ಸಿಪಿಐ, ಎಸ್‌ಪಿ, ಎನ್‌ಸಿ, ಆರ್‌ಜೆಡಿ, ಎನ್‌ಸಿಪಿ ಮತ್ತು ಡಿಎಂಕೆ ಜತೆಗೆ ಮೈತ್ರಿ ಮಾಡಿಕೊಂಡು ಚುನಾವಣೆಯನ್ನು ಎದುರಿಸಿದೆ. ಎನ್‌ಸಿಪಿ, ಶಿವಸೇನಾ ಮತ್ತು ಡಿಎಂಕೆ ಜತೆಗೆ ಸರ್ಕಾರವನ್ನೂ ನಡೆಸುತ್ತಿದೆ. ಆದರೆ ನಾವು ಕಾಂಗ್ರೆಸ್‌ನೊಂದಿಗೆ ಚುನಾವಣೆಯನ್ನೂ ನಡೆಸುತ್ತಿಲ್ಲ. ಸರ್ಕಾರವನ್ನೂ ನಡೆಸುತ್ತಿಲ್ಲ. ನಮಗೂ ಮತ್ತು ಬೇರೆ ವಿರೋಧ ಪಕ್ಷಗಳಿಗೂ ಕಾಂಗ್ರೆಸ್ ಜತೆಗಿನ ಸಂಬಂಧದಲ್ಲಿ ಇರುವ ವ್ಯತ್ಯಾಸವಿದು. ಆದರೆ ಸಮಾನ ಆಸಕ್ತಿಯ ವಿಚಾರಗಳಲ್ಲಿ ಎಲ್ಲಾ ವಿರೋಧ ಪಕ್ಷಗಳು ಒಟ್ಟಿಗೆ ಇರಲಿವೆ' ಎಂದು ಟಿಎಂಸಿ ಸಂಸದ ಡೆರೆಕ್ ಒಬ್ರಿಯಾನ್ ಹೇಳಿದ್ದಾರೆ.

ವಿಪಕ್ಷಗಳ ಕಾರ್ಯಸೂಚಿ

ಸಂಸತ್ತಿನ ಅಧಿವೇಶನದಲ್ಲಿ ಯಾವೆಲ್ಲಾ ವಿಷಯಗಳ ಬಗ್ಗೆ ಚರ್ಚೆ ನಡೆಸಬೇಕು ಎಂಬುದರ ಬಗ್ಗೆ ವಿರೋಧ ಪಕ್ಷಗಳು ಈಗಾಗಲೇ ಸಿದ್ಧತೆ ಮಾಡಿಕೊಂಡಿವೆ. ಈ ವಿಷಯಗಳ ಚರ್ಚೆಗೆ ಸರ್ಕಾರವು ಅವಕಾಶ ಮಾಡಿಕೊಡಬೇಕು ಎಂದು ಸರ್ವಪಕ್ಷಗಳ ಸಭೆಯಲ್ಲಿ ಹೇಳಿವೆ.

- ಕೃಷಿ ಕಾಯ್ದೆಗಳ ರದ್ದತಿ ಮಸೂದೆ ಮೇಲೆ ಚರ್ಚೆ. ಕನಿಷ್ಠ ಬೆಂಬಲ ಬೆಲೆಯನ್ನು ಕಾನೂನುಬದ್ಧಗೊಳಿಸಲು ಆಗ್ರಹ
- ಇಂಧನಗಳ ಬೆಲೆ ಏರಿಕೆ ಕುರಿತು ಚರ್ಚೆ
- ಸುಗ್ರೀವಾಜ್ಞೆ ಮೂಲಕ, ಸಿಬಿಐ ಮತ್ತು ಜಾರಿ ನಿರ್ದೇಶನಾಲಯದ ನಿರ್ದೇಶಕರ ಅಧಿಕಾರದ ಅವಧಿಯನ್ನು ಐದು ವರ್ಷಗಳಿಗೆ ವಿಸ್ತರಣೆ

ಬೆಳಗಾವಿ ಅಧಿವೇಶನ: ಹೆಚ್ಚಿದ ಕಳವಳ

ಬೆಂಗಳೂರು: ರಾಜ್ಯದ ವಿವಿಧೆಡೆ ಕೋವಿಡ್ ಸೋಂಕಿನ ಹೊಸ ಪ್ರಕರಣಗಳ ಸಂಖ್ಯೆ ಹೆಚ್ಚುತ್ತಿರುವಾಗಲೇ ಡಿ. 13ರಿಂದ 24ರವರೆಗೆ ಬೆಳಗಾವಿಯ ಸುವರ್ಣ ವಿಧಾನಸೌಧದಲ್ಲಿ ವಿಧಾನ ಮಂಡಲದ ಚಳಿಗಾಲದ ಅಧಿವೇಶನ ನಿಗದಿಯಾಗಿರುವುದು ಶಾಸಕರು, ಅಧಿಕಾರಿಗಳು ಮತ್ತು ಸಿಬ್ಬಂದಿಯಲ್ಲಿ ಕಳವಳಕ್ಕೆ ಕಾರಣವಾಗಿದೆ.

ಅಧಿವೇಶನಕ್ಕಾಗಿ ಶಾಸಕರು, ಸರ್ಕಾರದ ವಿವಿಧ ಇಲಾಖೆಗಳ ಅಧಿಕಾರಿಗಳು, ಸಿಬ್ಬಂದಿ ಮತ್ತು ಮಾಧ್ಯಮ ಪ್ರತಿನಿಧಿಗಳೂ ಸೇರಿದಂತೆ ಬೃಹತ್ ಸಂಖ್ಯೆಯ ಜನರು ವಿಧಾನಮಂಡಲ ಅಧಿವೇಶನದಲ್ಲಿ ಪಾಲ್ಗೊಳ್ಳಲಿದ್ದಾರೆ. ಇಂತಹ ಸನ್ನಿವೇಶದಲ್ಲಿ ಬೆಳಗಾವಿಗೆ ಜನರು ದೊಡ್ಡ ಸಂಖ್ಯೆಯಲ್ಲಿ ಪ್ರಯಾಣಿಸುವುದು ಮತ್ತು ಸಮಾವೇಶಗೊಳ್ಳುವುದು ಮತ್ತೊಂದು ಬೃಹತ್ ಕೋವಿಡ್ ಸೋಂಕಿನ ವಲಯ ಸೃಷ್ಟಿಗೆ ಕಾರಣವಾಗಬಹುದು ಎಂಬ ಆತಂಕ ಸರ್ಕಾರದೊಳಗೇ ವ್ಯಕ್ತವಾಗುತ್ತಿದೆ.

'ಮುಂದಿನ ವಾರದ ವೇಳೆಗೆ ಕೋವಿಡ್ ಸೋಂಕಿನ ಹೊಸ ಪ್ರಕರಣಗಳ ದೃಢಪ್ರಮಾಣ ದರ ಹೇಗಿರಲಿದೆ ಎಂಬುದರ ಆಧಾರದಲ್ಲಿ ಬೆಳಗಾವಿಯಲ್ಲಿ ಅಧಿವೇಶನ ನಡೆಸಬೇಕೆ? ಬೇಡವೆ? ಎಂಬುದನ್ನು ನಿರ್ಧರಿಸುವ ಸಾಧ್ಯತೆ ಇದೆ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಈ ಬಗ್ಗೆ ಪುನರ್ ಪರಿಶೀಲನೆ ನಡೆಸುವ ಸಂಭವವಿದೆ' ಎಂದು ಮೂಲಗಳು ತಿಳಿಸಿವೆ.

'ಬೆಂಗಳೂರಿನ ವಿಧಾನಸೌಧದಲ್ಲಿ ವಿಧಾನಸಭೆ ಮತ್ತು ವಿಧಾನ ಪರಿಷತ್ ಸಭಾಂಗಣಗಳಲ್ಲಿ ಶಾಸಕರ ಆಸನಗಳ ನಡುವೆ ಗಾಜಿನ ತಡೆ ಅಳವಡಿಸಲಾಗಿದೆ. ಕೋವಿಡ್ ಹರಡುವುದನ್ನು ತಡೆಯಲು ಈ ಕ್ರಮ ಕೈಗೊಳ್ಳಲಾಗಿದೆ. ಬೆಳಗಾವಿ ಸುವರ್ಣ ವಿಧಾನಸೌಧದಲ್ಲಿ ಅಂತಹ ವ್ಯವಸ್ಥೆ ಇಲ್ಲ. ಇಂತಹ ಸನ್ನಿವೇಶದಲ್ಲಿ ಅಲ್ಲಿ ಅಧಿವೇಶನ ನಡೆಸುವುದು ಅಪಾಯಕಾರಿ' ಎನ್ನುತ್ತವೆ ವಿಧಾನಸಭೆ ಮತ್ತು ವಿಧಾನ ಪರಿಷತ್ ಸಚಿವಾಲಯದ ಮೂಲಗಳು.

'ಬೆಂಗಳೂರಿನಲ್ಲೇ ಅಧಿವೇಶನ ನಡೆದರೆ ಹೆಚ್ಚಿನವರು ತಮ್ಮ ಮನೆಗಳಿಂದಲೇ ಸದನಕ್ಕೆ ಬರುತ್ತಾರೆ. ಇದರಿಂದ ಆರೋಗ್ಯದ ದೃಷ್ಟಿಯಿಂದ ಯಾವುದೇ ಅಪಾಯ ಇರುವುದಿಲ್ಲ. ಆದರೆ, ಈ ವಿಚಾರದಲ್ಲಿ ಸರ್ಕಾರ ಅಂತಿಮ ನಿರ್ಧಾರ ಕೈಗೊಂಡು, ಅದಕ್ಕೆ ರಾಜ್ಯಪಾಲರ ಅನುಮೋದನೆ ಪಡೆಯಬೇಕಾಗುತ್ತದೆ' ಎಂದು ಮೂಲಗಳು ಹೇಳಿವೆ.

ಅಧಿವೇಶನ ಸಿದ್ಧತೆ ಕುರಿತು ಪರಿಶೀಲಿಸಲು ವಿಧಾನಸಭೆಯ ಅಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಮುಂದಿನ ವಾರ ಬೆಳಗಾವಿಗೆ ಭೇಟಿ ನೀಡುವ ಸಾಧ್ಯತೆ ಇದೆ.

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಶಿಕ್ಷಣ
ಸಾಹಿತ್ಯಕ್ಕೆ ಸಂಬಂಧಿಸಿದ ಪಾಕ್ಷಿಕ, ಮಾಸಿಕ ಪತ್ರಿಕೆಗಳನ್ನು ಓದಲು ಪ್ರೇರೇಪಿಸುವುದರಿಂದ, ಮಕ್ಕಳ ಆಂತರ್ಯದಲ್ಲಿ ಸಾಹಿತ್ಯದ ಆಸಕ್ತಿ ಮೂಡಿ, ಬಾಲ್ಯದಿಂದಲೇ ಸಾಹಿತ್ಯಾಭಿರುಚಿ ಬೆಳೆಯುತ್ತದೆ.



ಮಾರ್ಕೋನಹಳ್ಳಿ ಜಲಾಶಯ: ನಾಲ್ವರು ನೀರುಪಾಲು 4
ಕೆಎನ್‌ಎನ್‌ಎಲ್: ಮತ್ತೆ 20 ನಕಲಿ ಬಿಲ್ ಮೂಲಕ ₹ 11.73 ಕೋಟಿ ದುರ್ಬಳಕೆ ಪತ್ತೆ
ಆಳ-ಅಗಲ
ಒಮಿಕ್ರಾನ್ : ಜಗತ್ತಿಗೆ ಆತಂಕ
ಜಿಯೊ ಪ್ರಿಪೇಯ್ಡ್ ಸೇವಾ ಶುಲ್ಕ ಹೆಚ್ಚಳ 8
ನಕಲಿ ಬಿಲ್‌ಗಳ ಸೃಷ್ಟಿಸಿ ₹28 ಕೋಟಿ ಗುಳುಂ! 4

ರಾಜ್ಯಗಳಿಗೆ ಕೇಂದ್ರದಿಂದ ಪತ್ರ: ಕೋವಿಡ್ ಪರೀಕ್ಷೆ ಹೆಚ್ಚಳಕ್ಕೆ ನಿರ್ದೇಶನ

ಓಮಿಕ್ರಾನ್: ಕಟ್ಟೆಚ್ಚರಕ್ಕೆ ಸೂಚನೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಕೋವಿಡ್‌–19 ಪರೀಕ್ಷೆ ಹೆಚ್ಚಿಸಿ, ವಿಮಾನ ನಿಲ್ದಾಣಗಳಲ್ಲಿ ಕೋವಿಡ್ ತಪಾಸಣೆಯನ್ನು ಕಟ್ಟುನಿಟ್ಟುಗೊಳಿಸಿ, ಕೊರೊನಾ ವೈರಾಣುವಿನ ಹೊಸ ರೂಪಾಂತರ ತಳಿ ಓಮಿಕ್ರಾನ್ ಬಗ್ಗೆ ಕಣ್ಣಿಟ್ಟಿರಿ ಎಂದು ಕೇಂದ್ರ ಆರೋಗ್ಯ ಸಚಿವಾಲಯವು ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಭಾನುವಾರ ಸೂಚಿಸಿದೆ.

‘ಕೋವಿಡ್ ಪರೀಕ್ಷೆಯ ಪ್ರಮಾಣವು ಕೆಲವು ರಾಜ್ಯಗಳಲ್ಲಿ ಇಳಿಕೆ ಆಗಿರುವುದು ಕಂಡು ಬಂದಿದೆ. ಅಗತ್ಯ ಪ್ರಮಾಣದಲ್ಲಿ ಪರೀಕ್ಷೆ ಆಗದೇ ಇದ್ದರೆ ಸೋಂಕು ಯಾವ ಮಟ್ಟದಲ್ಲಿದೆ ಎಂಬುದನ್ನು ತಿಳಿಯುವುದು ಸಾಧ್ಯವಿಲ್ಲ. ರಾಜ್ಯಗಳು ಪರೀಕ್ಷೆ ಮೂಲ ಸೌಕರ್ಯ ಹೆಚ್ಚಿಸಬೇಕು ಮತ್ತು ಪರೀಕ್ಷಾ ಮಾರ್ಗಸೂಚಿಗಳನ್ನು ಕಟ್ಟು ನಿಟ್ಟಾಗಿ ಜಾರಿ ಮಾಡಬೇಕು’ ಎಂದು ರಾಜ್ಯಗಳಿಗೆ ಬರೆದ ಪತ್ರದಲ್ಲಿ ಕೇಂದ್ರ ಆರೋಗ್ಯ ಸಚಿವಾಲಯವು ಹೇಳಿದೆ.

ವಿಮಾನ ನಿಲ್ದಾಣಕ್ಕೆ ವಿದೇಶಗಳಿಂದ ಬಂದಿಳಿಯುವವರ ಪ್ರಯಾಣ ವಿವರಗಳನ್ನು ಪರಿಶೀಲಿಸಬೇಕು. ಓಮಿಕ್ರಾನ್ ದೃಢಪಟ್ಟಿರುವ ದೇಶಗಳಿಗೆ ಹೋದವರು ಅಥವಾ ಆ ದೇಶಗಳನ್ನು ಹಾದು ಬಂದವರನ್ನು ಕೋವಿಡ್ ಪರೀಕ್ಷೆಗೆ ಕಡ್ಡಾಯವಾಗಿ ಒಳಪಡಿಸಬೇಕು. ಪರೀಕ್ಷಾ ವರದಿ ಬರುವವರೆಗೆ ಈ ಪ್ರಯಾಣಿಕರು ವಿಮಾನ ನಿಲ್ದಾಣದಿಂದ ನಿರ್ಗಮಿಸುವಂತಿಲ್ಲ ಅಥವಾ ಮತ್ತೊಂದು ವಿಮಾನ ಏರುವಂತಿಲ್ಲ. ಈ ಮಾರ್ಗಸೂಚಿಗಳು ಡಿ.1ರಿಂದ ಜಾರಿಗೆ ಬರಲಿವೆ ಎಂದು ಪರಿಷ್ಕೃತ ಸಾಮಾನ್ಯ ಕಾರ್ಯನಿರ್ವಹಣಾ ಪ್ರಕ್ರಿಯೆಯಲ್ಲಿ ತಿಳಿಸಲಾಗಿದೆ.


ಕೋವಿಡ್‌ ದೃಢಪಟ್ಟ ಎಲ್ಲ ಮಾದರಿಗಳನ್ನು ವೈರಾಣುವಿನ ಸಂರಚನೆ ವಿಶ್ಲೇಷಣೆಗಾಗಿ (ಜಿನೋಮ್ ಸೀಕ್ವೆನ್ಸಿಂಗ್) ನಿಯೋಜಿತ ಪ್ರಯೋಗಾಲಯಗಳಿಗೆ ಕಳುಹಿಸಬೇಕು ಎಂದೂ ಸೂಚಿಸಲಾಗಿದೆ.

ಪ್ರಧಾನಿ ನರೇಂದ್ರ ಮೋದಿ ಅವರು ಓಮಿಕ್ರಾನ್ ಪತ್ತೆಯಾದ ಕಾರಣಕ್ಕೆ ಶನಿವಾರ ತುರ್ತು ಸಭೆ ನಡೆಸಿ, ಸಲಹೆ, ಸೂಚನೆಗಳನ್ನು ನೀಡಿದ್ದರು. ಅದರ ಮರು ದಿನವೇ ಕೇಂದ್ರ ಸರ್ಕಾರದ ಈ ಪತ್ರ ರವಾನೆಯಾಗಿದೆ.

ಒಂದು ಪ್ರದೇಶದಲ್ಲಿ, ಪ್ರಕರಣಗಳ ಪ್ರವೃತ್ತಿ ಬದಲಾವಣೆ ಮತ್ತು ಸೋಂಕು ದೃಢಪಡುವಿಕೆ ಪ್ರಮಾಣದ ಮೇಲೆ ನಿಗಾ ಇರಿಸಿ. ಹೆಚ್ಚು ಪ್ರಕರಣ ಇರುವ ಪ್ರದೇಶಗಳನ್ನು ಪ್ರತ್ಯೇಕಿಸಬೇಕು. ಸೋಂಕು ದೃಢ ಪ್ರಮಾಣವು ಶೇ 5ರ ಒಳಗೆ ಇರುವಂತೆ ನೋಡಿಕೊಳ್ಳಬೇಕು ಎಂದು ಕೇಂದ್ರವು ಸೂಚಿಸಿದೆ.

ವಿದೇಶಿ ಪ್ರಯಾಣಿಕರ ನಿರ್ಬಂಧಕ್ಕೆ ಮನವಿ: ಸಿಎಂ ಬೊಮ್ಮಾಯಿ

ಬೆಂಗಳೂರು: ಕೊರೊನಾ ವೈರಾಣುವಿನ ರೂಪಾಂತರ ತಳಿ ಓಮಿಕ್ರಾನ್ ಪತ್ತೆಯಾಗಿರುವ ದೇಶಗಳಿಂದ ಬೆಂಗಳೂರಿಗೆ ಬರುವ ಪ್ರಯಾಣಿಕರನ್ನು ನಿರ್ಬಂಧಿಸುವಂತೆ ಕೇಂದ್ರ ಸರ್ಕಾರಕ್ಕೆ ಮನವಿ ಮಾಡಲಾಗಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.



ಸುದ್ದಿಗಾರರ ಜತೆ ಭಾನುವಾರ ಮಾತನಾಡಿದ ಅವರು, ‘ದಕ್ಷಿಣ ಆಫ್ರಿಕಾ, ಬೋಟ್ಸ್‌ವಾನ, ಜಿಂಬಾಬ್ವೆ ಸೇರಿದಂತೆ ಕೆಲವು ರಾಷ್ಟ್ರಗಳಲ್ಲಿ ಹೊಸ ತಳಿಯ ಕೊರೊನಾ ವೈರಾಣು ಪತ್ತೆಯಾಗಿದೆ. ಹೊಸ ತಳಿಯ ವೈರಸ್ ಪತ್ತೆಯಾಗಿರುವ ದೇಶಗಳಿಂದ ವಿಮಾನಗಳ ಮೂಲಕ ಬರುವ ಪ್ರಯಾಣಿಕರಿಗೆ ಕೋವಿಡ್ ಪರೀಕ್ಷೆ ನಡೆಸಲಾಗುವುದು. ನೆಗೆಟಿವ್ ವರದಿ ಬಂದರಷ್ಟೇ ನಗರ ಪ್ರವೇಶಕ್ಕೆ ಅನುಮತಿ ನೀಡಲಾಗುವುದು. ಕೋವಿಡ್ ಸೋಂಕು ದೃಢಪಟ್ಟವರನ್ನು ಪ್ರತ್ಯೇಕ ವಾಸದಲ್ಲಿ ಇರಿಸಿ, ಚಿಕಿತ್ಸೆ ನೀಡಲಾಗುವುದು’ ಎಂದರು.

4ನೇ ಪುಟ ನೋಡಿ

ವಿಮಾನಯಾನ: ಮರುಪರಿಶೀಲನೆ

ಸಾಂಕ್ರಾಮಿಕ ಪರಿಸ್ಥಿತಿಯ ಬಗ್ಗೆ ನಿಕಟ ನಿಗಾ ಇರಿಸಲಾಗಿದೆ ಎಂದು ಕೇಂದ್ರ ಸರ್ಕಾರವು ಹೇಳಿದೆ. ಹಲವು ದೇಶಗಳಲ್ಲಿ ಓಮಿಕ್ರಾನ್ ರೂಪಾಂತರ ತಳಿ ಪತ್ತೆಯಾಗಿದೆ. ಹಾಗಾಗಿ, ಡಿ. 15ರಿಂದ ವಿದೇಶಗಳಿಗೆ ವಿಮಾನಯಾನ ಪುನರಾರಂಭಿಸಲು ಕೈಗೊಂಡ ನಿರ್ಧಾರವನ್ನು ಮರು ಪರಿಶೀಲಿಸಲಾಗುವುದು ಎಂದು ಸರ್ಕಾರ ಹೇಳಿದೆ.

ಕೇಂದ್ರ ಗೃಹ ಕಾರ್ಯದರ್ಶಿ ಅಜಯ್ ಭಲ್ಲಾ ಅವರ ನೇತೃತ್ವದಲ್ಲಿ ಭಾನುವಾರ ನಡೆದ ಸಭೆಯಲ್ಲಿ ಹಲವು ನಿರ್ಧಾರಗಳನ್ನು ಕೈಗೊಳ್ಳಲಾಗಿದೆ.

ನೀತಿ ಆಯೋಗದ ಸದಸ್ಯ (ಆರೋಗ್ಯ) ಡಾ. ವಿ.ಕೆ. ಪಾಲ್, ಪ್ರಧಾನಿಯವರ ಮುಖ್ಯ ವೈಜ್ಞಾನಿಕ ಸಲಹೆಗಾರ ಡಾ. ವಿಜಯ ರಾಘವನ್, ಆರೋಗ್ಯ, ನಾಗರಿಕ ವಿಮಾನಯಾನ ಮತ್ತು ಇತರ ಸಚಿವಾಲಯಗಳ ಹಿರಿಯ ಅಧಿಕಾರಿಗಳು ಸಭೆಯಲ್ಲಿ ಹಾಜರಿದ್ದರು.

ಮುನವ್ವರ್ ಫಾರೂಕಿ ಕಾರ್ಯಕ್ರಮ ರದ್ದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಭಾನುವಾರ (ನ. 28) ಸಂಜೆ ನಿಗದಿಪಡಿಸಿದ್ದ ಮುನವ್ವರ್ ಫಾರೂಕಿ ಅವರ ಸ್ಟ್ಯಾಂಡ್ ಅಪ್ ಕಾಮಿಡಿ ಕಾರ್ಯಕ್ರಮವನ್ನು ಪೊಲೀಸರ ನೋಟಿಸ್ ಹಿನ್ನೆಲೆಯಲ್ಲಿ ದಿಢೀರ್ ರದ್ದು ಮಾಡಲಾಗಿದೆ. ‘ಕಾರ್ಯಕ್ರಮದಿಂದ ಶಾಂತಿ ಸುವ್ಯವಸ್ಥೆಗೆ ಧಕ್ಕೆ ಆಗುತ್ತದೆ’ ಎಂಬುದಾಗಿ ನೋಟಿಸ್ ನೀಡಿದ್ದ ಪೊಲೀಸರ ನಡೆಗೆ ಆಯೋಜಕರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.



ಮುನವ್ವರ್ ಫಾರೂಕಿ

ಅಶೋಕನಗರ ಬಳಿಯ 'ಗುಡ್ ಶೆಫರ್ಡ್' ಸಭಾಂಗಣದಲ್ಲಿ ‘ಡೊಂಗ್ರಿ ಟು ನೋವೇರ್’ ಹೆಸರಿನಲ್ಲಿ ಕಾರ್ಯಕ್ರಮ ನಿಗದಿಪಡಿಸಲಾಗಿತ್ತು. 600 ಮಂದಿ ಟಿಕೆಟ್ ಸಹ ಕಾಯ್ದಿರಿಸಿದ್ದರು.

ಕಾರ್ಯಕ್ರಮ ವಿರೋಧಿಸಿದ್ದ ಹಿಂದೂ ಜನಜಾಗೃತಿ ಸಮಿತಿ ಸದಸ್ಯರು, ‘ಹಿಂದೂ ವಿರೋಧಿ ಆಗಿರುವ ಮುನವ್ವರ್ ಫಾರೂಕಿ ಕಾರ್ಯಕ್ರಮಕ್ಕೆ ಅವಕಾಶ ನೀಡಬಾರದು’ ಎಂದು ನಗರ ಪೊಲೀಸ್ ಕಮಿಷನರ್ ಕಮಲ್ ಪಂತ್ ಅವರಿಗೆ ದೂರು ಸಲ್ಲಿಸಿದ್ದರು.

4ನೇ ಪುಟ ನೋಡಿ

ಲೋಕಾಯುಕ್ತ ಪೊಲೀಸರ 2ನೇ ‘ಬಿ’ ವರದಿಯೂ ತಿರಸ್ಕೃತ

ಬಿಎಸ್‌ವೈ ವಿರುದ್ಧ ವಿಚಾರಣೆ

• ವಿ.ಎಸ್.ಸುಬ್ರಹ್ಮಣ್ಯ

ಬೆಂಗಳೂರು: ಮಾಹಿತಿ ತಂತ್ರಜ್ಞಾನ (ಐ.ಟಿ) ಕಾರಿಡಾರ್ ನಿರ್ಮಾಣಕ್ಕಾಗಿ ನಗರದ ಬೆಳ್ಳಂದೂರು ಮತ್ತು ದೇವರ ಬೀಸನಹಳ್ಳಿ ಗ್ರಾಮಗಳಲ್ಲಿ ಸ್ವಾಧೀನಪಡಿಸಿಕೊಂಡಿದ್ದ 15 ಎಕರೆ 30 ಗುಂಟೆ ಜಮೀನನ್ನು ಅಕ್ರಮವಾಗಿ ಡಿನೋಟಿಫಿಕೇಷನ್ ಮಾಡಿದ ಆರೋಪಕ್ಕೆ ಸಂಬಂಧಿಸಿದಂತೆ ಬಿಜೆಪಿ ನಾಯಕ ಬಿ.ಎಸ್.ಯಡಿಯೂರಪ್ಪ ವಿರುದ್ಧದ ಖಾಸಗಿ ದೂರನ್ನು ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ವಿಚಾರಣೆಗೆ ಅಂಗೀಕರಿಸಿದೆ.



ವಾಸುದೇವ ರೆಡ್ಡಿ ಎಂಬುವವರು 2013 ರಲ್ಲಿ ಸಲ್ಲಿಸಿದ್ದ ಖಾಸಗಿ ದೂರಿನಲ್ಲಿರುವ ಆರೋಪಗಳ ಕುರಿತು ತನಿಖೆ ನಡೆಸಿದ್ದ ಲೋಕಾಯುಕ್ತ ಪೊಲೀಸರು ಸಲ್ಲಿಸಿದ್ದ ಎರಡನೇ ‘ಬಿ’ ವರದಿಯನ್ನು ವಿಶೇಷ ನ್ಯಾಯಾಲಯ ಶನಿವಾರ ತಿರಸ್ಕರಿಸಿದೆ. ಜತೆಯಲ್ಲೇ ಯಡಿಯೂರಪ್ಪ ವಿರುದ್ಧ ವಿಚಾರಣೆ ಆರಂಭಿಸುವ ತೀರ್ಮಾನವನ್ನೂ ನ್ಯಾಯಾಧೀಶ ಬಿ. ಜಯಂತ್ ಕುಮಾರ್ ಪ್ರಕಟಿಸಿದ್ದಾರೆ. ಡಿಸೆಂಬರ್ 1ಕ್ಕೆ ದೂರುದಾರರ ಪ್ರಮಾಣಿತ ಹೇಳಿಕೆ ದಾಖಲು ಮತ್ತು ಸಮನ್ಸ್ ಜಾರಿಗಾಗಿ ಮುಂದಿನ ವಿಚಾರಣೆ ನಿಗದಿಯಾಗಿದೆ.

ಪ್ರಜಾವಾಣಿ ವಿಶೇಷ

ಐ.ಟಿ ಕಾರಿಡಾರ್ ನಿರ್ಮಾಣಕ್ಕಾಗಿ ಬೆಳ್ಳಂದೂರು, ದೇವರ ಬೀಸನಹಳ್ಳಿ, ಕರಿಯಮ್ಮನ ಅಗ್ರಹಾರ ಮತ್ತು ಅಮಾನಿ ಬೆಳ್ಳಂದೂರು ಖಾನೆ ಗ್ರಾಮಗಳಲ್ಲಿ 434 ಎಕರೆ ಜಮೀನು ಸ್ವಾಧೀನಕ್ಕೆ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ (ಕೆಐಎಡಿಬಿ) 2001 ರಲ್ಲಿ ಪ್ರಾಥಮಿಕ ಅಧಿಸೂಚನೆ ಹೊರಡಿಸಿತ್ತು.

4ನೇ ಪುಟ ನೋಡಿ

ಕ್ರಿಕೆಟ್: ಅಯ್ಯರ್ ‘ಶ್ರೇಯ’

ಕಾನ್ಪುರ: ಪದಾರ್ಪಣೆಯ ಟೆಸ್ಟ್ ಪಂದ್ಯದ ಮೊದಲ ಇನಿಂಗ್ಸ್‌ನಲ್ಲಿ ಶತಕ ಮತ್ತು ಎರಡನೇ ಇನಿಂಗ್ಸ್‌ನಲ್ಲಿ ಅರ್ಧಶತಕ ಗಳಿಸಿದ ಭಾರತದ ಮೊದಲ ಕ್ರಿಕೆಟಿಗ ನೆಂಬ ಶ್ರೇಯಕ್ಕೆ ಶ್ರೇಯಸ್ ಅಯ್ಯರ್ (105 ಮತ್ತು 65) ಪಾತ್ರರಾದರು. 1971ರಲ್ಲಿ ವೆಸ್ಟ್ ಇಂಡೀಸ್ ವಿರುದ್ಧದ ಪಂದ್ಯದಲ್ಲಿ ಸುನೀಲ್ ಗಾವಸ್ಕರ್ ಎರಡೂ ಇನಿಂಗ್ಸ್‌ಗಳಲ್ಲಿ ಅರ್ಧಶತಕ (65 ಮತ್ತು ಔಟಾಗದೇ 67) ದಾಖಲಿಸಿದ್ದರು.

9

‘ಮುರುಗೇಶ ನಿರಾಣಿ ಸಿ.ಎಂ ಆಗ್ತಾರೆ’

ಪ್ರಜಾವಾಣಿ ವಾರ್ತೆ

ಬೀಳಗಿ (ಬಾಗಲಕೋಟೆ): ‘ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಮುರುಗೇಶ ಆರ್. ನಿರಾಣಿ ಆದಷ್ಟು ಬೇಗ ಮುಖ್ಯಮಂತ್ರಿ ಆಗಲಿದ್ದಾರೆ. ಆದರೆ ಯಾವ ಸಂದರ್ಭದಲ್ಲಿ ಆಗುತ್ತಾರೆ ಎಂಬುದು ನನಗೆ ಗೊತ್ತಿಲ್ಲ’ ಎಂದು ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ಸಚಿವ ಕೆ.ಎಸ್.ಈಶ್ವರಪ್ಪ ಅವರು ಹೇಳಿದರು.

ಪಟ್ಟಣದಲ್ಲಿ ಭಾನುವಾರ ಬಿಜೆಪಿ ಹಿಂದುಳಿದ ವರ್ಗಗಳ ಮೋರ್ಚಾ ವತಿಯಿಂದ ವಿಜಾಪುರ ಹಾಗೂ ಬಾಗಲಕೋಟೆ



ಕೆ.ಎಸ್.ಈಶ್ವರಪ್ಪ

ಜಿಲ್ಲೆಗಳ ಕಾರ್ಯಕರ್ತರ ಸಮಾವೇಶದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು. ‘ನಮ್ಮ ನಾಯಕರಾದ ಮುರುಗೇಶ್ ನಿರಾಣಿ ಅವರು ರಾಜ್ಯದ ಮುಖ್ಯಮಂತ್ರಿ ಆಗುವುದು ನೂರಕ್ಕೆ ನೂರರಷ್ಟು ಖಚಿತ. ಆದರೆ, ನಾಳೆಯೇ ಆಗುತ್ತಾರೆ ಎಂದು ನಾನು ಹೇಳುವುದಿಲ್ಲ’ ಎಂದರು.

9ನೇ ಪುಟ ನೋಡಿ

ಸರ್ವಪಕ್ಷಗಳ ಸಭೆಗೆ ಪ್ರಧಾನಿ ನರೇಂದ್ರ ಮೋದಿ ಗೈರು

ಸಂಸತ್ ಅಧಿವೇಶನ ಇಂದಿನಿಂದ

ಪ್ರಜಾವಾಣಿ ವಾರ್ತೆ

ನವದೆಹಲಿ: ಸಂಸತ್ತಿನ ಚಳಿಗಾಲದ ಅಧಿವೇಶನವು ಸೋಮವಾರದಿಂದ ಆರಂಭವಾಗಲಿದೆ. ಕೇಂದ್ರ ಸರ್ಕಾರದ ಮೂರು ಕೃಷಿ ಕಾಯ್ದೆಗಳನ್ನು ರದ್ದುಪಡಿಸುವ ಮಸೂದೆಯು ಸಂಸತ್ತಿನಲ್ಲಿ ಸೋಮವಾರವೇ ಮಂಡನೆ ಆಗಲಿದೆ.

ಈ ಅಧಿವೇಶನದಲ್ಲಿ ಕೃಷಿ ಕಾಯ್ದೆ ರದ್ದು ಮಸೂದೆಯನ್ನು ಚರ್ಚೆ ಮಾಡದೆಯೇ ಅಂಗೀಕರಿಸಲು ಬಿಡುವುದಿಲ್ಲ. ಚರ್ಚೆಗೆ ಅವಕಾಶ ಕೊಡದೇ ಇದ್ದರೆ, ಕಲಾಪ ಸುಗಮವಾಗಿ ನಡೆಯುವುದಿಲ್ಲ ಎಂದು ವಿರೋಧ ಪಕ್ಷಗಳು ಎಚ್ಚರಿಕೆ ನೀಡಿವೆ. ರೈತರ ಸಮಸ್ಯೆಗಳ ಬಗ್ಗೆ ಈ ಅಧಿವೇಶನದಲ್ಲಿ ವ್ಯಾಪಕವಾದ ಚರ್ಚೆ ನಡೆಯಬೇಕು. ಕನಿಷ್ಠ ಬೆಂಬಲ ಬೆಲೆ, ಪ್ರತಿಭಟನೆಯಲ್ಲಿ ಮೃತಪಟ್ಟ ರೈತರ ಕುಟುಂಬಗಳಿಗೆ ಪರಿಹಾರ ನೀಡುವಂತೆ ಆಗ್ರಹಿಸುವುದಾಗಿ ವಿರೋಧ ಪಕ್ಷಗಳು ಹೇಳಿವೆ.

ಪ್ರಧಾನಿ ಗೈರು: ಅಧಿವೇಶನ ಆರಂಭಕ್ಕೂ ಮುನ್ನಾ ದಿನವಾದ ಭಾನುವಾರ ಆಯೋಜಿಸಲಾಗಿದ್ದ ಸರ್ವಪಕ್ಷಗಳ ಸಭೆಗೆ ಪ್ರಧಾನಿ ನರೇಂದ್ರ ಮೋದಿ ಅವರು ಗೈರುಹಾಜರಾಗಿದ್ದಾರೆ. ಪ್ರಧಾನಿಯ ಈ ನಡೆಯನ್ನು ವಿರೋಧ ಪಕ್ಷಗಳು ಟೀಕಿಸಿವೆ.

ಚಿನಕುರಳಿ

ಪ್ರಕಾಶ್ ಶೆಟ್ಟಿ



ಆಯುಷ್ಮಾನ್: ಮೂರು ವರ್ಷ ಕಳೆದರೂ ನಿವಾರಣೆಯಾಗದ ಗೊಂದಲ

ಕೈಗೆಟುಕದ ‘ದುಬಾರಿ’ ವೆಚ್ಚದ ಚಿಕಿತ್ಸೆ

• ವರುಣ ಹೆಗಡೆ

ಬೆಂಗಳೂರು: ರಾಜ್ಯದ ಆರೂವರೆ ಕೋಟಿ ಜನರಿಗೂ ಆರೋಗ್ಯ ಭದ್ರತೆಯ ಭರವಸೆ ಒದಗಿಸಿದ್ದ ‘ಆಯುಷ್ಮಾನ್ ಭಾರತ್–ಆರೋಗ್ಯ ಕರ್ನಾಟಕ’ ಯೋಜನೆಯಡಿ ದುಬಾರಿ ವೆಚ್ಚದ ಚಿಕಿತ್ಸೆಗಳನ್ನು ಪಡೆಯುವುದು ರೋಗಿಗಳಿಗೆ ಸವಾಲಾಗಿದೆ. ಮೂರು ವರ್ಷಗಳ ಅವಧಿಯಲ್ಲಿ 60 ಮಂದಿಗೆ ಮಾತ್ರ ₹ 3 ಲಕ್ಷ ಹಾಗೂ ಅದಕ್ಕಿಂತ ಹೆಚ್ಚಿನ ಮೊತ್ತದ ಚಿಕಿತ್ಸೆಗಳು ಲಭಿಸಿವೆ.

ಜಗತ್ತಿನ ಅತಿದೊಡ್ಡ ‘ಆರೋಗ್ಯ ರಕ್ಷಾ ಕವಚ’ ಎಂದು ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರ ಬಿಂಬಿಸಿಕೊಂಡಿರುವ ‘ಆಯುಷ್ಮಾನ್ ಭಾರತ್’ ಯೋಜನೆಯು ಆಯುಷ್ಮಾನ್ ಮಿಷನ್ ಅಡಿ 2018 ರಲ್ಲಿ ಪ್ರಾರಂಭವಾಗಿದೆ. ಬಿಪಿಎಲ್ ಪಡಿತರ ಕಾರ್ಡ್ ಹೊಂದಿದವರು ಹಾಗೂ ರಾಷ್ಟ್ರೀಯ ಆರೋಗ್ಯ ವಿಮೆ ಯೋಜನೆಯಡಿ ನೋಂದಾಯಿಸಿದವರು ಈ ಯೋಜನೆಯ ಫಲಾನುಭವಿಗಳಾಗಿದ್ದಾರೆ. ವರ್ಷಕ್ಕೆ ₹ 5 ಲಕ್ಷದವರೆಗೆ ಆರೋಗ್ಯ ವಿಮೆ ಕಲ್ಪಿಸಲು ಅವಕಾಶವಿದೆ. ಆದರೆ, ಬೆರಳಣಿಕೆಯಷ್ಟು ಮಂದಿಗೆ ಮಾತ್ರ ದೊಡ್ಡ ಮೊತ್ತದ ವಿಮಾ ಹಣವನ್ನು ರಾಜ್ಯದಲ್ಲಿ ಭರಿಸಲಾಗಿದೆ.

ರಾಜ್ಯದಲ್ಲಿ 62.09 ಲಕ್ಷ ಕುಟುಂಬಗಳು ‘ಆಯುಷ್ಮಾನ್ ಭಾರತ್’ ಯೋಜನೆ ಅಡಿ ಬರಲಿವೆ. ಉಳಿದ ಕುಟುಂಬಗಳನ್ನು ‘ಆರೋಗ್ಯ ಕರ್ನಾಟಕ’ ಯೋಜನೆಯಡಿ ಸೇರ್ಪಡೆ ಮಾಡಲಾಗಿದೆ.

9ನೇ ಪುಟ ನೋಡಿ

ಖಾಸಗಿ ಆಸ್ಪತ್ರೆಗಳ ನಿರಾಸಕ್ತಿ

‘ಆಯುಷ್ಮಾನ್ ಭಾರತ್–ಆರೋಗ್ಯ ಕರ್ನಾಟಕ ಯೋಜನೆಯಡಿ ಪ್ರತಿ ಚಿಕಿತ್ಸೆಗೂ ನಿರ್ದಿಷ್ಟ ದರ ನಿಗದಿ ಮಾಡಲಾಗಿದೆ. ಹೀಗಾಗಿ, ಹೆಸರು ನೋಂದಾಯಿಸಿಕೊಂಡು ಚಿಕಿತ್ಸೆ ಒದಗಿಸಲು ಹಲವು ಖಾಸಗಿ ಆಸ್ಪತ್ರೆಗಳು ಹಿಂದೇಟು ಹಾಕುತ್ತಿವೆ. ರಾಜ್ಯದಲ್ಲಿ 586 ಖಾಸಗಿ ಆಸ್ಪತ್ರೆಗಳು ಮಾತ್ರ ಸದ್ಯ ಯೋಜನೆಯಡಿ ನೋಂದಾಯಿಸಲ್ಪಟ್ಟಿವೆ. ನಿಗದಿಪಡಿಸಲಾಗಿರುವ ಪ್ಯಾಕೇಜ್ ಮೊತ್ತವು ಖಾಸಗಿ ವ್ಯವಸ್ಥೆಯಡಿ ನೀಡುತ್ತಿರುವ ದರದ ಅರ್ಧಕ್ಕಿಂತ ಕಡಿಮೆಯಿದೆ’ ಎನ್ನುವುದು ಆಸ್ಪತ್ರೆಗಳ ಆರೋಪ.

‘ಸರ್ಕಾರ ನಿಗದಿಪಡಿಸಿದ ದರ ಹಾಗೂ ನಾವು ಸದ್ಯ ಚಿಕಿತ್ಸೆ ಒದಗಿಸುತ್ತಿರುವ ದರದಲ್ಲಿ ಭಾರೀ ವ್ಯತ್ಯಾಸವಿದೆ. ಶೇ 60 ರಿಂದ ಶೇ 70 ರಷ್ಟು ಮೊತ್ತವನ್ನು ನಿಗದಿಪಡಿಸಿದ್ದರೂ ಹೆಚ್ಚಿನ ಸಂಖ್ಯೆಯಲ್ಲಿ ಆಸ್ಪತ್ರೆಗಳು ನೋಂದಾಯಿಸಲ್ಪಡುತ್ತಿದ್ದವು. ಪ್ಯಾಕೇಜ್ ದರವನ್ನು ಪರಿಷ್ಕರಿಸಬೇಕು. ಹಾಲಿ ಪ್ಯಾಕೇಜ್ ಮೊತ್ತದ ಪಾವತಿಯೂ ವಿಳಂಬ ಆಗುತ್ತಿದೆ’ ಎಂದು ಖಾಸಗಿ ಆಸ್ಪತ್ರೆಗಳು ಮತ್ತು ನರ್ಸಿಂಗ್ ಹೋಮ್ಸ್ ಅಸೋಸಿಯೇಷನ್ (ಫನಾ) ಅಧ್ಯಕ್ಷ ಡಾ. ಪ್ರಸನ್ನ ಎಚ್.ಎಂ. ತಿಳಿಸಿದರು.

ಯೋಜನೆಯಡಿ ಬರುವ ಆಸ್ಪತ್ರೆಗಳು	
24	ಜಿಲ್ಲಾ ಆಸ್ಪತ್ರೆಗಳು
20	ವೈದ್ಯಕೀಯ ಕಾಲೇಜು ಆಸ್ಪತ್ರೆಗಳು
16	ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳು
148	ತಾಲ್ಲೂಕು ಆಸ್ಪತ್ರೆಗಳು
211	ಸಮುದಾಯ ಆರೋಗ್ಯ ಕೇಂದ್ರಗಳು
2,440	ಪ್ರಾಥಮಿಕ ಆರೋಗ್ಯ ಕೇಂದ್ರಗಳು
22	ಹೆರಿಗೆ ಆಸ್ಪತ್ರೆಗಳು
586	ಖಾಸಗಿ ಆಸ್ಪತ್ರೆಗಳು

ಕೆಟಿಪಿಪಿ ಕಾಯ್ದೆ ಉಲ್ಲಂಘಿಸಿ ಕಾಮಗಾರಿಗೆ ಅನುಮೋದನೆ: ಆರೋಪ

ಟೆಂಡರ್ ಆಹ್ವಾನಿಸದೆಯೇ ವೈಟ್‌ಟಾಪಿಂಗ್

• ವಿಜಯಕುಮಾರ್ ಎಸ್.ಕೆ.

ಬೆಂಗಳೂರು: ವೈಟ್ ಟಾಪಿಂಗ್ ಎರಡನೇ ಹಂತದ ಯೋಜನೆಯಲ್ಲಿ ₹35.50 ಕೋಟಿ ಮೊತ್ತದ ಬದಲಿ ಕಾಮಗಾರಿಯನ್ನು ಟೆಂಡರ್ ಪ್ರಕ್ರಿಯೆ ನಡೆಸದೆಯೇ ನಿರ್ವಹಿಸಲು ಬಿಬಿಎಂಪಿ ಮುಂದಾಗಿದ್ದು, ಸರ್ಕಾರ ಕೂಡ ಇದಕ್ಕೆ ಅನುಮೋದನೆ ನೀಡಿದೆ.

ಬೆಂಗಳೂರಿನ ವಿಶೇಷ ಮೂಲಸೌಕರ್ಯ ಯೋಜನೆಯಡಿ 2017-18ರಲ್ಲಿ ಸರ್ಕಾರ ₹2,191 ಕೋಟಿ ಮಂಜೂರು ಮಾಡಿತ್ತು. ಈ ಮೊತ್ತದಲ್ಲಿ ಎರಡನೇ ಹಂತದ ವೈಟ್‌ಟಾಪಿಂಗ್ ಕಾಮಗಾರಿ ಕೈಗೆತ್ತಿಕೊಳ್ಳಲಾಗಿದೆ. ಮೊದಲ ಪ್ಯಾಕೇಜ್‌ನಲ್ಲಿ ಇಲ್ಲದ ಕಾಮಗಾರಿಯನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ (ಕೆಟಿಪಿಪಿ) ಕಾಯ್ದೆ ಉಲ್ಲಂಘಿಸಿ ಬಿಬಿಎಂಪಿ ಮುಖ್ಯ ಆಯುಕ್ತರು ತೂರಿಸಿದ್ದಾರೆ ಎಂಬ ಆಕ್ಷೇಪ ವ್ಯಕ್ತವಾಗಿದೆ.

ಬೆಂಗಳೂರು ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಕೆ.ಆರ್. ವೇಣುಗೋಪಾಲ ಅವರು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮತ್ತು ನಗರಾಭಿವೃದ್ಧಿ ಇಲಾಖೆ ಹೆಚ್ಚುವರಿ ಮುಖ್ಯಕಾರ್ಯದರ್ಶಿ ರಾಕೇಶ್‌ಸಿಂಗ್ ಅವರಿಗೆ 2021ರ ಆ.17ರಂದು ಪತ್ರವೊಂದನ್ನು ಬರೆದಿದ್ದಾರೆ.

'ನಾಗರಬಾವಿ, ವಿಶ್ವೇಶ್ವರಯ್ಯ ಬಡಾವಣೆ, ಉಲ್ಲಾಳು, ರಾಜರಾಜೇಶ್ವರಿನಗರ, ಕೆಂಗೇರಿ ಮತ್ತು ಮಾಗಡಿ ರಸ್ತೆಗೆ ಸಂಪರ್ಕ ಕಲ್ಪಿಸುವ ಪ್ರಮುಖ ರಸ್ತೆ ಜ್ಞಾನಭಾರತಿ ಆವರಣದ ಮೂಲಕ ಹಾದು ಹೋಗುತ್ತಿದೆ. ಮೈಸೂರು ರಸ್ತೆಯಲ್ಲಿ ಮೆಟ್ರೊ ರೈಲು ನಿಲ್ದಾಣ ಕೂಡ ಇದ್ದು, ವಾಹನ ದಟ್ಟಣೆ ಇನ್ನಷ್ಟು ಹೆಚ್ಚಾಗುತ್ತಿದೆ. ಈಗಿರುವ ರಸ್ತೆ ಹಾಳಾಗಿರುವುದರಿಂದ ವೈಟ್‌ಟಾಪಿಂಗ್ ಕಾಮಗಾರಿ ಕೈಗೆತ್ತಿಕೊಳ್ಳಬೇಕು' ಎಂದು ಪತ್ರದಲ್ಲಿ ಕೋರಿದ್ದರು.

ಈಗಾಗಲೇ ಅನುಮೋದನೆಗೊಂಡಿರುವ ಹಾಗೂ ಪ್ರಗತಿಯಲ್ಲಿರುವ ಯೋಜನೆಯಲ್ಲಿ ಉಳಿತಾಯ ಆಗಿರುವ ಮೊತ್ತ ಇದ್ದರೆ ಕಾಮಗಾರಿ ಕೈಗೆತ್ತಿಕೊಳ್ಳಲು ಅಂದಾಜುಪಟ್ಟಿ ಸಿದ್ಧಪಡಿಸುವಂತೆ ಮುಖ್ಯಮಂತ್ರಿ ಸೂಚಿಸಿದ್ದರು. ಈ ಕಾಮಗಾರಿ ಕೈಗೆತ್ತಿಕೊಳ್ಳಲು 2021ರ ಆ.16ರಂದು ನಡೆದ ಪ್ರಗತಿ ಪರಿಶೀಲನಾ ಸಭೆಯಲ್ಲಿ ತೋಟಗಾರಿಕಾ ಸಚಿವ ಮುನಿರತ್ನ ಕೂಡ ಸೂಚನೆ ನೀಡಿದ್ದರು.

ಉಳಿತಾಯ ಮೊತ್ತದಲ್ಲಿ ಜ್ಞಾನಭಾರತಿ ಆವರಣದಲ್ಲಿ 1.03 ಕಿಲೋ ಮೀಟರ್ ಉದ್ದದ ಆರು ಪಥಗಳ ರಸ್ತೆ, ಸೈಕಲ್ ಪಥ, ಪಾದಚಾರಿ ಮಾರ್ಗ, ಚರಂಡಿ ಸೇರಿ ₹35.50 ಕೋಟಿ ಮೊತ್ತದ ಯೋಜನೆ ರೂಪಿಸಿ ಸರ್ಕಾರಕ್ಕೆ ಬಿಬಿಎಂಪಿ ಮುಖ್ಯ ಆಯುಕ್ತರು ಪ್ರಸ್ತಾವನೆ ಸಲ್ಲಿಸಿದ್ದರು. ಪ್ರಸ್ತಾವನೆ ಅನುಮೋದಿಸಿ 2021ರ ಅ.29ರಂದು ಆದೇಶ ಹೊರಡಿಸಿದ ಸರ್ಕಾರ, 'ಹೊಸದಾಗಿ ಡಿಪಿಆರ್ ಸಿದ್ಧಪಡಿಸಿ, ತಾಂತ್ರಿಕ ಮತ್ತು ಆಡಳಿತಾತ್ಮಕ ಅನುಮೋದನೆ ಪಡೆಯಬೇಕು. ಟೆಂಡರ್ ಕರೆದು ಕಾಮಗಾರಿ ಅನುಷ್ಠಾನಗೊಳಿಸಬೇಕು' ಎಂದು ತಿಳಿಸಿತ್ತು.

ನ.17ರಂದು ಮತ್ತೊಮ್ಮೆ ಪ್ರಸ್ತಾವನೆ ಸಲ್ಲಿಸಿದ ಬಿಬಿಎಂಪಿ ಮುಖ್ಯ ಆಯುಕ್ತರು, ಟೆಂಡರ್ ಕರೆಯಬೇಕು ಎಂಬ ಷರತ್ತು ಸಡಿಲಿಸಬೇಕು ಎಂದು ಮನವಿ ಮಾಡಿದ್ದರು. 'ಹೊಸದಾಗಿ ಟೆಂಡರ್ ಕರೆದರೆ ಮೂಲ ಗುತ್ತಿಗೆದಾರರಾದ ಶಂಕರನಾರಾಯಣ ಕನ್‌ಸ್ಟ್ರಕ್ಷನ್ ಪ್ರವೈಟ್ ಲಿಮಿಟೆಡ್‌ನಿಂದ ₹35.50 ಕೋಟಿ ವಾಪಸ್ ಪಡೆಯಬೇಕಾಗುತ್ತದೆ. ಗುತ್ತಿಗೆದಾರರು ನ್ಯಾಯಾಲಯದ ಮೊರೆ ಹೋಗುವ ಸಾಧ್ಯತೆಯೂ ಇರುತ್ತದೆ. ಹೊಸದಾಗಿ ಟೆಂಡರ್ ಕರೆಯಲು ಮುಂದಾದರೆ ಮೊತ್ತ ಕೂಡ ಹೆಚ್ಚಾಗಲಿದೆ' ಎಂದು ಕಾರಣ ನೀಡಿದ್ದರು. ಈ ಪಸ್ತಾವನೆಯನ್ನು ಮುಖ್ಯಮಂತ್ರಿ ಅದೇ ದಿನ ಅನುಮೋದಿಸಿದ್ದಾರೆ.

'ಬೇರೆಡೆಗೆ ಮಂಜೂರಾಗಿದ್ದ ಕಾಮಗಾರಿಯನ್ನು ಇಲ್ಲಿಗೆ ಬದಲಾವಣೆ ಮಾಡಲಾಗಿದೆ. ಆದರೆ, ಕೆಟಿಪಿಪಿ ಕಾಯ್ದೆ ಪ್ರಕಾರ ಟೆಂಡರ್ ಕರೆಯುವುದರಿಂದ ವಿನಾಯಿತಿ ಪಡೆಯಲು ಉಳಿತಾಯ ಮೊತ್ತ ಎಂದು ತೋರಿಸಲಾಗುತ್ತಿದೆ. ಹೀಗೆ ಮಾಡುವುದು ಕೂಡ ಕಾಯ್ದೆಯ ಉಲ್ಲಂಘನೆ' ಎಂದು ಬಿಬಿಎಂಪಿ ಹಿರಿಯ ಎಂಜಿನಿಯರ್ ಒಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

'ಯಾವುದೇ ಪ್ಯಾಕೇಜ್ ಸಿದ್ಧಪಡಿಸುವಾಗ ತಜ್ಞರಿಂದ ಸಲಹೆ ಪಡೆಯಲಾಗುತ್ತದೆ. ₹35.50 ಕೋಟಿ ಉಳಿತಾಯ ಎನ್ನುವುದಾದರೆ ಈ ಹಿಂದೆ ಕುರುಡಾಗಿ ಅಂದಾಜು ಮಾಡಲಾಗಿದೆಯೇ' ಎಂದು ಅವರು ಪ್ರಶ್ನಿಸುತ್ತಾರೆ.

ಈ ಕುರಿತು ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ಅವರ ಪ್ರತಿಕ್ರಿಯೆ ಪಡೆಯಲು ಪ್ರಯತ್ನಿಸಲಾಯಿತು. ಆದರೆ, ಅವರು ಕರೆ ಸ್ವೀಕರಿಸಲಿಲ್ಲ.

ಪ್ರಜಾವಾಣಿ ವಿಶೇಷ

'1 ಕಿ.ಮೀಗೆ ₹35 ಕೋಟಿ ಏಕೆ'


ರಮೇಶ್


ಶಿವರಾಜು

'1 ಕಿಲೋ ಮೀಟರ್ ಉದ್ದದ ರಸ್ತೆಯ ವೈಟ್‌ಟಾಪಿಂಗ್ ಕಾಮಗಾರಿ ನಿರ್ವಹಿಸಲು ₹35.50 ಕೋಟಿ ಖರ್ಚು ಮಾಡಲು ಹೊರಟಿರುವುದು ಸರಿಯಲ್ಲ' ಎಂದು ಬಿಜೆಪಿ ಮುಖಂಡ ಎನ್.ಆರ್. ರಮೇಶ್ ಹೇಳಿದರು.

'ಈ ಮೊತ್ತದಲ್ಲಿ 4 ಕಿಲೋ ಮೀಟರ್ ವೈಟ್‌ಟಾಪಿಂಗ್ ರಸ್ತೆ ಅಭಿವೃದ್ಧಿಪಡಿಸಬಹುದು. ಸಾರ್ವಜನಿಕರ ತೆರಿಗೆ ಹಣವನ್ನು ಈ ರೀತಿ ವ್ಯಯ ಮಾಡಬಾರದು. ಈ ಸಂಬಂಧ ಮುಖ್ಯಮಂತ್ರಿ ಅವರಿಗೆ ಪತ್ರ ಬರೆಯುತ್ತೇನೆ' ಎಂದರು.

'₹1 ಲಕ್ಷಕ್ಕೂ ಹೆಚ್ಚಿನ ಮೊತ್ತದ ಕಾಮಗಾರಿಯನ್ನು ಟೆಂಡರ್ ಇಲ್ಲದೆ ನಿರ್ವಹಿಸಲು ಸಾಧ್ಯವೇ ಇಲ್ಲ. ತಡೆಯುವ ಪ್ರಯತ್ನ ಮಾಡಲಾಗುವುದು' ಎಂದು ಹೇಳಿದರು.'ಉಳಿತಾಯ ಮೊತ್ತದ ಕಾಮಗಾರಿಯಾದರೂ ಟೆಂಡರ್ ಕರೆಯಲೇಬೇಕು. ಟೆಂಡರ್ ಇಲ್ಲದೆ ಕಾಮಗಾರಿ ನಿರ್ವಹಿಸುವುದು ಕಾನೂನಿನ ಉಲ್ಲಂಘನೆ' ಎಂದು ಕಾಂಗ್ರೆಸ್ ಮುಖಂಡ ಎಂ. ಶಿವರಾಜು ಹೇಳಿದರು.

ಟೆಂಡರ್ ಅಗತ್ಯವಿಲ್ಲ: ಸಚಿವ ಮುನಿರತ್ನ


ಮುನಿರತ್ನ

'ಉಳಿತಾಯ ಮೊತ್ತದಲ್ಲಿ ಅದೇ ಗುತ್ತಿಗೆದಾರರಿಂದ ಕಾಮಗಾರಿ ನಿರ್ವಹಿಸಲು ಕೆಟಿಪಿಪಿ ಕಾಯ್ದೆಯಲ್ಲೇ ಅವಕಾಶ ಇದೆ. ಇದು ಕಾನೂನಿನ ಉಲ್ಲಂಘನೆ ಅಲ್ಲ' ಎಂದು ತೋಟಗಾರಿಕಾ ಸಚಿವ ಮುನಿರತ್ನ ಸ್ಪಷ್ಟಪಡಿಸಿದರು.

'ಗುತ್ತಿಗೆ ರದ್ದುಗೊಳಿಸಿದರೆ, ಏಜೆನ್ಸಿ ಬದಲಾವಣೆಯಾದರೆ ಅಥವಾ ಕ್ರಿಯಾಯೋಜನೆ ಬದಲಾಯಿಸಿದರೆ ಮಾತ್ರ ಟೆಂಡರ್ ಕರೆಯಬೇಕಾಗುತ್ತದೆ. ಮೂಲ ಟೆಂಡರ್ ಮೊತ್ತದಲ್ಲೇ ಕಾಮಗಾರಿ ನಿರ್ವಹಿಸಲು ಮರು ಟೆಂಡರ್ ಬೇಕಿಲ್ಲ. ಆದರೂ ಸರ್ಕಾರದ ಗಮನಕ್ಕೆ ತಂದು ಮತ್ತೊಮ್ಮೆ ಅನುಮೋದನೆ ಪಡೆಯಲಾಗಿದೆ. ಈ ಪ್ರಕ್ರಿಯೆಯಲ್ಲಿ ಯಾವುದೇ ತಪ್ಪಿಲ್ಲ' ಎಂದು ಹೇಳಿದರು.

'ಕನ್ನಡ ಬೆಳವಣಿಗೆಗೆ ಉದ್ಯಮ ಕ್ಷೇತ್ರದ ಸಹಕಾರ ಅಗತ್ಯ'

ಬೆಂಗಳೂರು: 'ಎಲ್ಲಾ ಉದ್ಯಮ ಸಂಸ್ಥೆಗಳೂ ಕನ್ನಡ ಕಾಳಜಿ ಮೆರೆಯಬೇಕು. ಹಾಗಾದಾಗ ಮಾತ್ರ ಭಾಷೆಯ ಉಳಿವು ಹಾಗೂ ಬೆಳವಣಿಗೆಯ ಹಾದಿ ಸುಲಭವಾಗುತ್ತದೆ' ಎಂದು ಕನ್ನಡ ಮತ್ತು ಸಂಸ್ಕೃತಿ ಸಚಿವ ವಿ.ಸುನಿಲ್ ಕುಮಾರ್ ಅಭಿಪ್ರಾಯಪಟ್ಟರು.

ಮುಳಿಯ ಪ್ರತಿಷ್ಠಾನವು ಕರ್ನಾಟಕ ಲೇಖಕಿಯರ ಸಂಘದ ಸಹಯೋಗದಲ್ಲಿ ಕರ್ನಾಟಕ ರಾಜ್ಯೋತ್ಸವದ ಅಂಗವಾಗಿ ಹಮ್ಮಿಕೊಂಡಿದ್ದ 'ಮನೆ-ಮನದಲ್ಲಿ ಕನ್ನಡ' ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

'ಭಾಷೆಯು ಭಾಷಣದ ವಸ್ತುವಲ್ಲ. ಅದು ಸಂಸ್ಕೃತಿಯ ಪ್ರತಿಬಿಂಬ. ದೇಶದಲ್ಲಿ ಕನ್ನಡದಷ್ಟು ಶ್ರೀಮಂತ ಭಾಷೆ ಮತ್ತೊಂದಿಲ್ಲ. ಇಲಾಖೆ ವತಿಯಿಂದ ಹಮ್ಮಿಕೊಳ್ಳಲಾಗಿದ್ದ 'ಮಾತಾಡ್ ಮಾತಾಡ್ ಕನ್ನಡ' ಕಾರ್ಯಕ್ರಮಕ್ಕೆ ಉತ್ತಮ ಸ್ಪಂದನೆ ವ್ಯಕ್ತವಾಗಿದೆ. ಕನ್ನಡಿಗರಲ್ಲಿರುವ ಭಾಷಾಭಿಮಾನಕ್ಕೆ ಇದು ಸಾಕ್ಷಿ' ಎಂದರು.

ಸಾಹಿತಿ ಕಮಲಾ ಹಂಪನಾ, 'ಹಿಂದಿ ರಾಷ್ಟ್ರಭಾಷೆಯಲ್ಲ. ಕನ್ನಡ ಸಹಿತ ದೇಶದ 23 ಭಾಷೆಗಳೂ ರಾಷ್ಟ್ರಭಾಷೆಗಳೇ. ಹೀಗಿದ್ದೂ ಹಿಂದಿ ಹೇರಿಕೆಗೆ ಮುಂದಾದರೆ ಅದಕ್ಕೆ ಪ್ರತಿರೋಧ ತೋರಲೇಬೇಕಾಗುತ್ತದೆ' ಎಂದು ಹೇಳಿದರು.

ಶಿಕ್ಷಣ ತಜ್ಞೆ ಗೀತಾ ರಾಮಾನುಜಮ್, ಸಾಹಿತಿ ಭುವನೇಶ್ವರಿ ಹೆಗಡೆ, ಮುಳಿಯ ಆಭರಣ ಸಂಸ್ಥೆಯ ಆಡಳಿತ ನಿರ್ದೇಶಕ ಕೇಶವ ಪ್ರಸಾದ್ ಮುಳಿಯ, ಕರ್ನಾಟಕ ಲೇಖಕಿಯರ ಸಂಘದ ಅಧ್ಯಕ್ಷೆ ವನಮಾಲಾ ಸಂಪನ್ನಕುಮಾರ್, ಸಾಹಿತಿ ನಾ.ದಾಮೋದರ ಶೆಟ್ಟಿ ಹಾಗೂ ನೀರಜ್ ಪಾಟೀಲ್ ಇದ್ದರು.

ಅಧ್ಯಕ್ಷರಾಗಿ ಎರಡನೇ ಬಾರಿ ಆಯ್ಕೆ


ಪಾಟೀಲ

ಬೆಂಗಳೂರು: 'ರಾಜ್ಯ ಅಭಿಯೋಜನಾಧಿಕಾರಿಗಳ ಸಂಘ'ದ ಅಧ್ಯಕ್ಷರಾಗಿ ಬೆಂಗಳೂರಿನ ಪಬ್ಲಿಕ್ ಪ್ರಾಸಿಕ್ಯೂಟರ್ ಬಿ.ಎಸ್. ಪಾಟೀಲ ಅವರು ಎರಡನೇ ಬಾರಿ ಆಯ್ಕೆಯಾಗಿದ್ದಾರೆ.ಸಂಘದ ನೂತನ ಪದಾಧಿಕಾರಿಗಳ ಆಯ್ಕೆಗಾಗಿ ಬೆಂಗಳೂರಿನ ವಕೀಲರ ಭವನದಲ್ಲಿ ಭಾನುವಾರ ಚುನಾವಣೆ ಜರುಗಿತು.

ಸಂಘದ ಉಪಾಧ್ಯಕ್ಷರಾಗಿ ದಾವಣಗೆರೆಯ ಪಬ್ಲಿಕ್ ಪ್ರಾಸಿಕ್ಯೂಟರ್ ಎಸ್.ವಿ. ಪಾಟೀಲ ಹಾಗೂ ಬೆಂಗಳೂರಿನ ಪಬ್ಲಿಕ್ ಪ್ರಾಸಿಕ್ಯೂಟರ್ ಕೆ. ಸತ್ಯವತಿ ಆಯ್ಕೆಗೊಂಡರು.

'ಬ್ಯಾಂಕ್ ಬಚಾವ್ ದೇಶ್ ಬಚಾವ್' ರ‍್ಯಾಲಿ ನಾಳೆ

ಬೆಂಗಳೂರು: 'ಬ್ಯಾಂಕ್‌ಗಳ ಖಾಸಗೀಕರಣ ವಿರೋಧಿಸಿ ಅಖಿಲ ಭಾರತ ಬ್ಯಾಂಕ್ ಅಧಿಕಾರಿಗಳ ಒಕ್ಕೂಟವು (ಎಐಬಿಒಸಿ) ದೆಹಲಿಯ ಜಂತರ್ ಮಂತರ್‌ನಲ್ಲಿ 'ಬ್ಯಾಂಕ್ ಬಚಾವ್ ದೇಶ್ ಬಚಾವ್' (ಬ್ಯಾಂಕ್ ಉಳಿಸಿ-ದೇಶ ರಕ್ಷಿಸಿ) ರ‍್ಯಾಲಿಯನ್ನು ನ.30ರಂದು ಹಮ್ಮಿಕೊಂಡಿದೆ' ಎಂದು ಒಕ್ಕೂಟದ ರಾಜ್ಯ ಘಟಕದ ಅಧ್ಯಕ್ಷ ತಾಪಸ್ ಘೋಷ್ ತಿಳಿಸಿದರು.

ಶುಕ್ರವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು ಈ ಯಾತ್ರೆ ನ.29ರಂದು ದೆಹಲಿ ತಲುಪಲಿದ್ದು, 30ರಂದು ರ‍್ಯಾಲಿ ಸ್ವರೂಪ ಪಡೆಯಲಿದೆ' ಎಂದರು.

ಮೂರು ದಿನಗಳ ಜಾತ್ರೆ ಇಂದಿನಿಂದ ಆರಂಭ

ಕಡಲೆಕಾಯಿ ಪರಿಷೆ: ಕಳೆಗಟ್ಟಿದ ಸಂಭ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಬಸವನಗುಡಿಯ ದೊಡ್ಡ ಗಣಪತಿ ದೇವಸ್ಥಾನದ ಬಳಿ ನಡೆಯುವ ಐತಿಹಾಸಿಕ ಕಡಲೆಕಾಯಿ ಪರಿಷೆ ಮತ್ತೆ ಕಳೆಗಟ್ಟಿದೆ.

ಕಡಲೆಕಾಯಿ ಪರಿಷೆ ಸೋಮವಾರದಿಂದ ಮೂರು ದಿನಗಳ ಕಾಲ ನಡೆಯಲಿದೆ. ಜಾತ್ರೆಯ ಆರಂಭಕ್ಕೆ ಇಲ್ಲಿನ ಬೀದಿಗಳಲ್ಲಿ ಎರಡು ದಿನಗಳ ಮುಂಚಿತವಾಗಿಯೇ ಸಂಭ್ರಮ ಮನೆ ಮಾಡಿದೆ. ರಸ್ತೆಯ ಇಕ್ಕೆಲಗಳಲ್ಲಿ ಕಡಲೆಕಾಯಿ ರಾಶಿಗಳು ಗಮನ ಸೆಳೆಯುತ್ತಿವೆ. ಕಡಲೆಕಾಯಿ ಖರೀದಿಸಲು ಭಾನುವಾರ ಭಾರಿ ಸಂಖ್ಯೆಯಲ್ಲಿ ಜನರು ಸೇರಿದ್ದರು.

ಮುಜರಾಯಿ ಇಲಾಖೆ ಹಾಗೂ ಬಿಬಿಎಂಪಿ ಸಹಯೋಗದೊಂದಿಗೆ ನಡೆಯುವ ಕಡಲೆಕಾಯಿ ಪರಿಷೆಗೆ ಸೋಮವಾರ ಬೆಳಿಗ್ಗೆ 10.30ಕ್ಕೆ ಅಧಿಕೃತ ಚಾಲನೆ ದೊರೆಯಲಿದೆ. ದೇವಾಲಯದಲ್ಲಿ ವಿಶೇಷ ಪೂಜೆ ನಡೆಸಿ, ನಂದಿಗೆ ಕಡಲೆಕಾಯಿ ಅಭಿಷೇಕ ಮಾಡಲಾಗುತ್ತದೆ.

ಕೋವಿಡ್ ಕಾರಣಕ್ಕೆ ಕಳೆದ ವರ್ಷ ಪರಿಷೆಗೆ ನಿರ್ಬಂಧಗಳನ್ನು ವಿಧಿಸಲಾಗಿತ್ತು. ಇದರಿಂದ, ಕಡಲೆಕಾಯಿ ವ್ಯಾಪಾರ ವಹಿವಾಟು ನಡೆದಿರಲಿಲ್ಲ.

ಪರಿಷೆಯಲ್ಲಿ ಪ್ಲಾಸ್ಟಿಕ್ ಬಳಕೆಗೆ ಬಿಬಿಎಂಪಿ ನಿರ್ಬಂಧ ಹೇರಿದೆ. ಕಡಲೆಕಾಯಿ ಜತೆಗೆ ಆಟಿಕೆಗಳು, ಕರಕುಶಲ ವಸ್ತುಗಳು, ತಿಂಡಿ ತಿನಿಸುಗಳ ಮಳಿಗೆಗಳ ವ್ಯಾಪಾರ ವಹಿವಾಟವೂ ಜೋರಾಗಿ ನಡೆಯುತ್ತಿದೆ. ವಿದ್ಯುತ್ ದೀಪಗಳಿಂದ ಅಲಂಕಾರಗೊಂಡ ಬೀದಿಯ ಎರಡೂ ಬದಿ ಅಂಗಡಿಗಳನ್ನು ತೆರೆಯಲಾಗಿದೆ.

ಪರಿಷೆ ನಡೆಯುತ್ತಿರುವುದರಿಂದ ಈ ಪ್ರದೇಶದಲ್ಲಿ ದಟ್ಟಣೆ ನಿಯಂತ್ರಣಕ್ಕಾಗಿ ವಾಹನಗಳ ಸಂಚಾರ ಮಾರ್ಗಗಳನ್ನು ಡಿ.1ರವರೆಗೆ ಬದಲಾವಣೆ ಮಾಡಲಾಗಿದೆ.

ನವಂಬರ್ ತಿಂಗಳಲ್ಲಿ ಕಾರ್ತಿಕ ಮಾಸದ ಕೊನೆ ಸೋಮವಾರ ಕಡಲೆಕಾಯಿ ಪರಿಷೆ ಆಚರಿಸಲಾಗುತ್ತದೆ. ಪರಂಪರಾನುಗತವಾಗಿ ನಡೆಯುತ್ತಾ ಬಂದಿರುವ ಈ ಪರಿಷೆಯಲ್ಲಿ ಲಕ್ಷಾಂತರ ಮಂದಿ ಪಾಲ್ಗೊಳ್ಳುತ್ತಾರೆ.


ನಗರದ ಬಸವನಗುಡಿಯಲ್ಲಿ ಕಡಲೆಕಾಯಿ ಪರಿಷೆ ಅಂಗವಾಗಿ ಭಾನುವಾರವೇ ಅಪಾರ ಸಂಖ್ಯೆಯಲ್ಲಿ ಸೇರಿದ್ದ ಜನರು– ಪ್ರಜಾವಾಣಿ ಚಿತ್ರ/ಎಸ್.ಕೆ. ದಿನೇಶ್



ಮುಖಗವಸು ಕಡ್ಡಾಯ

ಕೋವಿಡ್ ಭೀತಿ ಹೆಚ್ಚುತ್ತಿರುವಂತೆಯೇ ಬೆಂಗಳೂರಿನ ಕೃಷ್ಣರಾಜ ಮರುಕಟ್ಟೆಯಲ್ಲಿ ಭಾನುವಾರ ಬಿಬಿಎಂಪಿ ಮಾರ್ಷಲ್ ಒಬ್ಬರು ಕಡ್ಡಾಯವಾಗಿ ಮುಖಗವಸು ಧರಿಸುವಂತೆ ಧ್ವನಿವರ್ಧಕದ ಮೂಲಕ ಜನರಲ್ಲಿ ಜಾಗೃತಿ ಮೂಡಿಸಿದರು ಪ್ರಜಾವಾಣಿ ಚಿತ್ರ/ ಪ್ರಶಾಂತ್ ಎಚ್.ಜಿ.

ಇಸ್ರೊ ಯೋಜನೆ ಸ್ಥಳಾಂತರಿಸದಂತೆ ಡಿಕೆಶಿ ಆಗ್ರಹ



ಬೆಂಗಳೂರು: ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯ (ಇಸ್ರೊ) ಮಾನವಸಹಿತ ಗಗನಯಾನ ಯೋಜನೆಯನ್ನು ಬೆಂಗಳೂರಿನಿಂದ ಗುಜರಾತ್‌ಗೆ ಸ್ಥಳಾಂತರಿಸುವ ಪ್ರಸ್ತಾವ ಕೈಬಿಡುವಂತೆ ಆಗ್ರಹಿಸಿ ಪ್ರಧಾನಿ ನರೇಂದ್ರ ಮೋದಿ ಮತ್ತು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಪತ್ರ ಬರೆದಿದ್ದಾರೆ.

'ಇಸ್ರೊ ಕೇಂದ್ರ ಕಚೇರಿಯನ್ನು ಹೊಂದಿರುವ ಬೆಂಗಳೂರಿನಲ್ಲಿ ಮಾನವಸಹಿತ ಗಗನಯಾನ ಯೋಜನೆಗಾಗಿ 2007 ರಿಂದಲೂ ಸಿದ್ಧತೆ ನಡೆಯುತ್ತಿದೆ. 2023ರಲ್ಲಿ ಮಾನವಸಹಿತ ಗಗನಯಾನ ಕೈಗೊಳ್ಳಲು ತೀರ್ಮಾನಿಸಲಾಗಿದೆ. ಈ ಯೋಜನೆಯನ್ನು ಗುಜರಾತ್‌ಗೆ ಸ್ಥಳಾಂತರಿಸುವ ಪ್ರಸ್ತಾವವಿದೆ ಎಂಬ ಸುದ್ದಿ ಕನ್ನಡಿಗರಿಗೆ ಬೇಸರ ಉಂಟುಮಾಡಿದೆ' ಎಂದು ಪತ್ರದಲ್ಲಿ ತಿಳಿಸಿದ್ದಾರೆ.

ಈ ಯೋಜನೆಯನ್ನು ಗುಜರಾತ್‌ಗೆ ಸ್ಥಳಾಂತರಿಸಿದರೆ ಅದು ಒಕ್ಕೂಟ ವ್ಯವಸ್ಥೆಗೆ ಬಗೆಯುವ ದ್ರೋಹ. ಇಂತಹ ಪ್ರಕ್ರಿಯೆ ಕನ್ನಡಿಗರ ಸ್ವಾಭಿಮಾನ ಮತ್ತು ಆತ್ಮಗೌರವಕ್ಕೆ ಧಕ್ಕೆ ತರಲಿದೆ. ಆದ್ದರಿಂದ, ಮಾನವಸಹಿತ ಗಗನಯಾನ ಯೋಜನೆಯನ್ನು ಬೆಂಗಳೂರಿನಿಂದ ಸ್ಥಳಾಂತರಿಸುವ ಪ್ರಸ್ತಾವ ಕೈಬಿಡಬೇಕು. ನಗರದಿಂದಲೇ ಯೋಜನೆ ಕಾರ್ಯರೂಪಕ್ಕೆ ಬರುವಂತೆ ವ್ಯವಸ್ಥೆ ಮಾಡಬೇಕು ಎಂದು ಒತ್ತಾಯಿಸಿದ್ದಾರೆ. ಮುಖ್ಯಮಂತ್ರಿಯವರಿಗೆ ಪ್ರತ್ಯೇಕ ಪತ್ರ ಬರೆದಿರುವ ಶಿವಕುಮಾರ್, 'ಈ ವಿಷಯದಲ್ಲಿ ರಾಜ್ಯದ ಮುಖಂಡರ ನಿಯೋಗವೊಂದನ್ನು ದೆಹಲಿಗೆ ಕರೆದೊಯ್ದು ಪ್ರಧಾನಿಯವರ ಮೇಲೆ ಒತ್ತಡ ಹೇರಬೇಕು. ಯೋಜನೆ ಸ್ಥಳಾಂತರದ ಪ್ರಸ್ತಾವ ಕೈಬಿಡುವಂತೆ ಕ್ರಮ ಕೈಗೊಳ್ಳಬೇಕು' ಎಂದು ಆಗ್ರಹಿಸಿದ್ದಾರೆ.

ಕೋವಿಡ್ ಅಂಕಿ-ಅಂಶ

ಆಧಾರ: ಮೈಗೌ.ಇನ್/ಕೋವಿಡ್19 ವರ್ಲ್ಡೋಮೀಟರ್

	ವಿಶ್ವ	ಭಾರತ
ಒಟ್ಟು ಪ್ರಕರಣ	26.16 ಕೋಟಿ ▲	3.45 ಕೋಟಿ
ಸಕ್ರಿಯ ಪ್ರಕರಣ	2.01ಕೋಟಿ ▼	1.05 ಲಕ್ಷ ▼
ಗುಣಮುಖ	23.63 ಕೋಟಿ ▲	3.39 ಕೋಟಿ
ಸಾವು	52.16 ಲಕ್ಷ ▲	4.68 ಲಕ್ಷ ▲

ದಿನದ ಮಾಹಿತಿ

	ವಿಶ್ವ	ಭಾರತ
ಹೊಸ ಪ್ರಕರಣ	4.83 ಲಕ್ಷ ▼	8,774 ▲
ಗುಣಮುಖ	3.73 ಲಕ್ಷ ▼	9,481 ▼
ಸಾವು	6,012 ▼	621 ▲

ಎಲ್ಲಿ ಹೆಚ್ಚು ಪ್ರಕರಣ (ಹಿಂದಿನ 24 ಗಂಟೆಗಳಲ್ಲಿ)

ಜರ್ಮನಿ	ಬ್ರಿಟನ್	ರಷ್ಯಾ
49,311 ▼	39,517 ▼	33,946 ▲

ಎಲ್ಲಿ ಹೆಚ್ಚು ಸಕ್ರಿಯ ಪ್ರಕರಣಗಳು (ಲಕ್ಷಗಳಲ್ಲಿ)

ಅಮೆರಿಕ	ರಷ್ಯಾ	ಬ್ರಿಟನ್
94.16 ▲	10.27 ▼	10.13

ಎಲ್ಲಿ ಹೆಚ್ಚು ಸಾವು (ಒಟ್ಟು)

ಮಹಾರಾಷ್ಟ್ರ	1.40 ಲಕ್ಷ
ತಮಿಳುನಾಡು	36,454 ▲
ಕೇರಳ	39,679 ▲

ಎಲ್ಲಿ ಹೆಚ್ಚು ಪ್ರಕರಣ (ಲಕ್ಷಗಳಲ್ಲಿ)

ಮಹಾರಾಷ್ಟ್ರ	66.33
ಕೇರಳ	51.29 ▲
ತಮಿಳುನಾಡು	27.24 ▲

ಪ್ರಜಾವಾಣಿ ಗ್ರಾಫಿಕ್ಸ್

ಬೆಂಗಳೂರು ನಗರ ಜಿಲ್ಲಾ ಕೋವಿಡ್ ಅಂಕಿ-ಅಂಶ

12,56,136 ▲ ಒಟ್ಟು ಸೋಂಕಿತರು (12,55,984 ನಿನ್ನೆಯ ವಿವರ)

ಸಕ್ರಿಯ ಪ್ರಕರಣ	ಗುಣಮುಖ ಆದವರು	ಒಟ್ಟು ಸಾವು
5,287 ▲	12,34,519 ▲	16,329 ▲

ದಿನದ ಏರಿಕೆ

ಹೊಸ ಪ್ರಕರಣ	152 ▲
ಗುಣಮುಖ	142 ▲
ಸಾವು	02 ▲

ಆಧಾರ: ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ರಾಜ್ಯ ಕೋವಿಡ್ ಅಂಕಿ-ಅಂಶ

29,95,600 ▲ ಒಟ್ಟು ಸೋಂಕಿತರು (29,95,285 ನಿನ್ನೆಯ ವಿವರ)

ಸಕ್ರಿಯ ಪ್ರಕರಣಗಳು	6,831 ▲
ಗುಣಮುಖರಾದವರು	29,50,542 ▲
ಒಟ್ಟು ಸಾವು	38,198 ▲

ದಿನದ ಏರಿಕೆ

ಹೊಸ ಪ್ರಕರಣ	315 ▼
ಗುಣಮುಖ	236 ▲
ಸಾವು	02 ▼

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಆಗಾಗ ಸಾಬೂನಿನಿಂದ ಕೈ ತೊಳೆಯುತ್ತಿರಿ

'ಎಲ್ಲರನ್ನೂ ಸಮಾನವಾಗಿ ಕಾಣುತ್ತಿದ್ದ ಶಂಕರ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ದಿವಂಗತ ನಟ ಶಂಕರನಾಗ್ ಅವರು ಪುರುಷ, ಮಹಿಳೆ, ಮಕ್ಕಳು, ನಟರು, ಲೈಟ್‌ಬಾಯ್‌ಗಳು ಹೀಗೆ ಎಲ್ಲರನ್ನೂ ಸಮಾನವಾಗಿ ಕಾಣುತ್ತಿದ್ದರು' ಎಂದು ರಂಗಕರ್ಮಿ ಲಕ್ಷ್ಮೀ ಚಂದ್ರಶೇಖರ್ ಹೇಳಿದರು.

2021ನೇ ಸಾಲಿನ ಶಂಕರನಾಗ್ ನಾಟಕೋತ್ಸವದ ಅಂಗವಾಗಿ ರಂಗಪಯಣ ಆಯೋಜಿಸಿದ್ದ 'ರಂಗ ಧಾರಿಣಿ' ಮಹಿಳಾ ರಂಗೋತ್ಸವ ಉದ್ಘಾಟನಾ ಕಾರ್ಯಕ್ರಮದಲ್ಲಿ ಭಾನುವಾರ ಮಾತನಾಡಿದರು. ಕಾರ್ಯಕ್ರಮದಲ್ಲಿ ರಂಗಕರ್ಮಿ ಹನುಮಕ್ಕ ಅವರಿಗೆ ಶಂಕರನಾಗ್ ಪ್ರಶಸ್ತಿ ನೀಡಿ ಗೌರವಿಸಲಾಯಿತು.

'ಶಂಕರನಾಗ್ ಅವರು ಪಾದರಸದಂತೆ ಸದಾ ಚಟುವಟಿಕೆಯಿಂದ ಇರುತ್ತಿದ್ದರು. ಅವರ ನೆನಪಿನಲ್ಲಿ ಮಹಿಳಾ ಪ್ರಧಾನ ನಾಟಕ ಆಯೋಜಿಸಲಾಗುತ್ತಿರುವುದು ಅರ್ಥಪೂರ್ಣ. ಗಂಡು ಮತ್ತು ಹೆಣ್ಣು ಸಮಾನವಾಗಿ ನಡೆದರೆ ಮಾತ್ರ ಉತ್ತಮ ಸಮಾಜ ನಿರ್ಮಿಸಲು ಸಾಧ್ಯ' ಎಂದರು.


ಕುಂಬಾರವ್ವ ಆರ್‌.ರಾಜಲಕ್ಷ್ಮಿ ಅವರು ಕುಡಿಕೆ ತಯಾರಿಸುವ ಮೂಲಕ ರಂಗೋತ್ಸವ ಉದ್ಘಾಟಿಸಿದರು. (ಎಡದಿಂದ) ಹೋರಾಟಗಾರ್ತಿ ದು.ಸರಸ್ವತಿ, 'ಇಂದು ಸಂಜೆ' ಪತ್ರಿಕೆಯ ಸಂಪಾದಕಿ ಪದ್ಮಾ ನಾಗರಾಜ್, ಲಕ್ಷ್ಮೀ ಚಂದ್ರಶೇಖರ್, ಹನುಮಕ್ಕ ಹಾಗೂ ವರಲಕ್ಷ್ಮಿ ಇದ್ದರು– ಪ್ರಜಾವಾಣಿ ಚಿತ್ರ

ಪ್ರಶಸ್ತಿ ಪುರಸ್ಕೃತ ಹನುಮಕ್ಕ, 'ನಮ್ಮದು ಬಡ ಕುಟುಂಬ. ತಂದೆ ವೃತ್ತಿ ರಂಗಭೂಮಿ ಕಲಾವಿದರಾಗಿದ್ದರು. ಕಿರಿಯ ಮಗಳಾದ ನಾನು ರಂಗಭೂಮಿಗೆ ಹೋಗುವುದು ಅವರಿಗೆ ಕಿಂಚಿತ್ತೂ ಇಷ್ಟವಿರಲಿಲ್ಲ. ತಂದೆಯ ಹೆಸರು ಉಳಿಸಬೇಕು ಎಂಬ ಉದ್ದೇಶದಿಂದ ಅವರ ವಿರೋಧ ಧಿಕ್ಕರಿಸಿ ನೀನಾಸಂ ನಾಟಕ ಶಿಬಿರ ಸೇರಿದೆ. ಇದರಿಂದ ಕುಪಿತಗೊಂಡ ಅಪ್ಪ ಮನೆಗೆ ಬರದಂತೆ ಸೂಚಿಸಿದ್ದರು. ಕ್ರಮೇಣ ನನ್ನ ಸಾಧನೆ ಕಂಡು ಅವರೇ ಖುಷಿಪಟ್ಟಿದ್ದರು' ಎಂದು ಸ್ಮರಿಸಿದರು.

'ಹೆಣ್ಣು ಮಕ್ಕಳನ್ನು ರಂಗಭೂಮಿಗೆ ಕಳುಹಿಸಲು ಪೋಷಕರೂ ಮನಸ್ಸು ಮಾಡಬೇಕು' ಎಂದರು.

ರಾಜ್ಯ ಅಂಗನವಾಡಿ ಕಾರ್ಯಕರ್ತರ ಸಂಘದ ಅಧ್ಯಕ್ಷೆ ವರಲಕ್ಷ್ಮಿ,'ಸಮಾಜವನ್ನು ಮುನ್ನಡೆಸುವಲ್ಲಿ ಮಹಿಳೆಯ ಪಾತ್ರ ಹೆಚ್ಚಿದೆ. ಬೇರೆ ಬೇರೆ ವಿಭಾಗಗಳ ಮಹಿಳೆಯರ ಸಮಸ್ಯೆಗಳನ್ನು ಸಮಾಜಕ್ಕೆ ಪರಿಚಯಿಸುವಂತಹ ನಾಟಕಗಳನ್ನು ಮಾಡುವತ್ತ ಗಮನ ಹರಿಸಬೇಕು' ಎಂದು ಸಲಹೆ ನೀಡಿದರು.

'ಬೆಂಗಳೂರು ಅಭಿವೃದ್ಧಿಗೆ ವಿಶೇಷ ಕಾರ್ಯಸೂಚಿ'

ಬೆಂಗಳೂರು: ಬೆಂಗಳೂರಿನ ಅಭಿವೃದ್ಧಿಗೆ ವಿಶೇಷ ಕಾರ್ಯಸೂಚಿಯೊಂದನ್ನು ರೂಪಿಸಿ, ಶಾಸನಸಭೆಯ ಅನುಮೋದನೆ ಪಡೆಯಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಬಯೋಕಾನ್ ಸಂಸ್ಥೆ ಭಾನುವಾರ ಆಯೋಜಿಸಿದ್ದ 'ಬೆಂಗಳೂರು ಕಾರ್ಯಸೂಚಿ' ಕುರಿತ ಚರ್ಚೆಯಲ್ಲಿ ಭಾಗವಹಿಸುವ ಮುನ್ನ ಸುದ್ದಿಗಾರರ ಜತೆ ಮಾತನಾಡಿದ ಅವರು, 'ರಾಜಧಾನಿಯ ಅಭಿವೃದ್ಧಿಗೆ ಸಂಬಂಧಿಸಿದಂತೆ ವಿವಿಧ ಕ್ಷೇತ್ರಗಳ ಪ್ರಮುಖರ ಅಭಿಪ್ರಾಯ ಆಲಿಸಲಾಗುವುದು. ಬಳಿಕ ಸಂಪುಟ ಸದಸ್ಯರ ಜತೆ ಚರ್ಚಿಸಿ ಕಾರ್ಯಸೂಚಿಯನ್ನು ಸಿದ್ಧಪಡಿಸಲಾಗುವುದು' ಎಂದರು.


ನಗರದ ಸಮಗ್ರ ಅಭಿವೃದ್ಧಿಗೆ ಪೂರಕವಾದ ಕಾರ್ಯಸೂಚಿಯನ್ನು ವಿಧಾನಮಂಡಲ ಅಧಿವೇಶನದಲ್ಲಿ ಮಂಡಿಸಿ, ಚರ್ಚಿಸಲಾಗುವುದು. ಶಾಸನಸಭೆಯಲ್ಲಿ ಕಾರ್ಯಸೂಚಿಯನ್ನು ಅಂತಿಮಗೊಳಿಸಲಾಗುವುದು. ಆ ಬಳಿಕ ಅಭಿವೃದ್ಧಿ ಯೋಜನೆಗಳನ್ನು ಅನುಷ್ಠಾನಕ್ಕೆ ತರಲಾಗುವುದು ಎಂದು ಹೇಳಿದರು.

ಬೆಂಗಳೂರಿನ ಆರ್ಥಿಕತೆ ಮತ್ತು ಅಭಿವೃದ್ಧಿಯ ದಿಸೆಯಲ್ಲಿ ಕೈಗೊಳ್ಳಬೇಕಿರುವ ಯೋಜನೆಗಳ ಕುರಿತು ಚರ್ಚಿಸಲು ಕೆಲವು ಉದ್ಯಮಿಗಳು ಆಸಕ್ತಿ ತೋರಿದ್ದಾರೆ. ಈ ರೀತಿಯ ಸರಣಿ ಸಭೆಗಳು ನಡೆಯಲಿವೆ ಎಂದರು.

ನಗರದಲ್ಲಿ ಇಂದು

ತಾಯಂದಿರ ದಿನ ಮತ್ತು ರಕ್ತದಾನ ಶಿಬಿರ: ಉದ್ಘಾಟನೆ-ಅಶೋಕ್ ಆರ್. ಮಾನೆ, ಅತಿಥಿಗಳು-ಸುರೇಶ್ ರಾಮು, ಟಿ.ಜೆ.ರಮಾ ಮೂರ್ತಿ, ಆಯೋಜನೆ-ಬಿಎನ್‌ಎಂ ಶಿಕ್ಷಣ ಸಂಸ್ಥೆಗಳು, ಸ್ಥಳ-ಬಿಎನ್‌ಎಂಐಟಿ ಸಭಾಂಗಣ, ಬನಶಂಕರಿ ಎರಡನೇ ಹಂತ, ಬೆಳಿಗ್ಗೆ 9

ಕನ್ನಡ ಹಬ್ಬ ಮತ್ತು 2021-22ನೇ ಸಾಲಿನ ಪಠ್ಯ ಮತ್ತು ಪಠ್ಯೇತರ ಚಟುವಟಿಕೆಗಳ ಪ್ರಾರಂಭೋತ್ಸವ: ಉದ್ಘಾಟನೆ-ಲೇಖಕ ಹಿ.ಚಿ. ಬೋರಲಿಂಗಯ್ಯ, ಅತಿಥಿ-ಗೀತಾ ಸಿದ್ದಿ, ಅಧ್ಯಕ್ಷತೆ-ಎಂ.ಆರ್. ಭವಾನಿ, ಅರ್ಚನಾ ಸುರಾನಾ, ಆಯೋಜನೆ ಮತ್ತು ಸ್ಥಳ-ಸುರಾನಾ ಕಾಲೇಜು ಆವರಣ, ಸೌತ್‌ಎಂಡ್ ರಸ್ತೆ, ಮಧ್ಯಾಹ್ನ 12.30


ಹಿ.ಚಿ. ಬೋರಲಿಂಗಯ್ಯ

ನಟ ಪುನೀತ್ ರಾಜ್‌ಕುಮಾರ್ ಅವರಿಗೆ ಸಾಂಸ್ಕೃತಿಕ ನಮನ-ಸ್ವಯಂಪ್ರೇರಿತ ನೇತ್ರದಾನ ಮತ್ತು ಗೀತಗಾಯನ: ಅತಿಥಿಗಳು-ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕ ಎಸ್. ರಂಗಪ್ಪ, ಗೀತರಚನೆಕಾರ ವಿ.ನಾಗೇಂದ್ರ ಪ್ರಸಾದ್, ಸಾಂಸ್ಕೃತಿಕ ಚಿಂತಕ ಜಗನ್ನಾಥ್ ಪ್ರಕಾಶ್, ಸ್ಥಳ-ನಯನ ಸಭಾಂಗಣ, ಕನ್ನಡ ಭವನ, ಮಧ್ಯಾಹ್ನ 1

ಶಂಕರನಾಗ್ ನಾಟಕೋತ್ಸವ: ಸಂಜೆ 4.30ಕ್ಕೆ 'ನಾಟಕವನ್ನು ವೃತ್ತಿಯಾಗಿ ಸ್ವೀಕರಿಸಿದ ಮಹಿಳೆಯರು' ಸಂವಾದ, ಅತಿಥಿಗಳು-ಮಾಲತಿ ಸುಧೀರ್, ಹನುಮಕ್ಕ, ಸಂಜೆ 5.45ಕ್ಕೆ 'ಉಧೋ ಉಧೋ ಎಲ್ಲವ್ವ' ಹಾಗೂ ಸಂಜೆ 7 ಗಂಟೆಗೆ 'ಉಡಿಯೊಳಗಣ ಕಿಚ್ಚು' ನಾಟಕಗಳ ಪ್ರದರ್ಶನ, ಆಯೋಜನೆ-ರಂಗಪಯಣ, ಸ್ಥಳ-ರವೀಂದ್ರ ಕಲಾಕ್ಷೇತ್ರ

'ಸಂವಿಧಾನ ಪೀಠಿಕೆ' ಪುಸ್ತಕ ಬಿಡುಗಡೆ: ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎಚ್.ಎನ್.ನಾಗಮೋಹನ್ ದಾಸ್, ಅತಿಥಿಗಳು-ಎನ್.ವೆಂಕಟೇಶ್, ಎಂ.ಡಿ. ಪಲ್ಲವಿ, ಅಕ್ಕೈ ಪದ್ಮಶಾಲಿ, ಫಾದರ್ ಜೆರಾಲ್ಡ್ ಡಿಸೌಜ, ಅಧ್ಯಕ್ಷತೆ-ಷಾಕಿರ ಖಾನಂ, ಆಯೋಜನೆ-ಜನ ಪ್ರಕಾಶನ, ಪರ್ಯಾಯ ಕಾನೂನು ವೇದಿಕೆ, ಸ್ಥಳ-ಅಂಬೇಡ್ಕರ್ ಸಮುದಾಯ ಭವನ, ರಾಜೇಂದ್ರ ನಗರ, ಕೋರಮಂಗಲ 8ನೇ ಬ್ಲಾಕ್, ಸಂಜೆ 4

ಕನ್ನಡ ರಾಜೋತ್ಸವ: ಅತಿಥಿಗಳು-ಕಂದಾಯ ಸಚಿವ ಆರ್.ಅಶೋಕ, ಕನ್ನಡ ಮತ್ತು ಸಂಸ್ಕೃತಿ ಸಚಿವ ವಿ.ಸುನಿಲ್ ಕುಮಾರ್, ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಸಿ.ಸೋಮಶೇಖರ, ವಿದ್ವಾಂಸ ಮಲ್ಲೇಪುರಂ ಜಿ. ವೆಂಕಟೇಶ್, ಆಯೋಜಕರು-ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆ (ಎಫ್‌ಕೆಸಿಸಿಐ), ಸ್ಥಳ-ಸರ್ ಎಂ.ವಿ. ಸಭಾಭವನ, ಎಫ್‌ಕೆಸಿಸಿಐ, ಕೆ.ಜಿ.ರಸ್ತೆ, ಸಂಜೆ 5

ಹಾ.ವೀ.ಮಂಜುಳಾ ಶಿವಾನಂದ ಅವರ 'ಸತ್ಯಾಗ್ರಹಿ ದಂಪತಿಗಳು' ಪುಸ್ತಕ ಬಿಡುಗಡೆ: ಮೀನಾ ದೇಶಪಾಂಡೆ, ಅಧ್ಯಕ್ಷತೆ-ವೂಡೇ ಪಿ.ಕೃಷ್ಣ, ಅತಿಥಿಗಳು-ಚನ್ನಮ್ಮ ಹಳ್ಳಿಕೇರಿ, ಅರವಿಂದ ಹಾರನಹಳ್ಳಿ, ಆಯೋಜನೆ-ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಮತ್ತು ಚೇತನಾ ಪ್ರಕಾಶನ, ಸ್ಥಳ-ಬಾಪು ಸಭಾಂಗಣ, ಗಾಂಧಿ ಭವನ, ಸಂಜೆ 4

ಕಸಾಪ ಬೆಂಗಳೂರು ನಗರ ಜಿಲ್ಲಾಧ್ಯಕ್ಷ ಎಂ.ಪ್ರಕಾಶ್ ಮೂರ್ತಿ ಅಧಿಕಾರ ಸ್ವೀಕಾರ: ಅತಿಥಿ-ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಹೇಶ್ ಜೋಶಿ, ಸ್ಥಳ-ಶ್ರೀಕೃಷ್ಣರಾಜ ಪರಿಷನ್ಮಂದಿರ, ಕನ್ನಡ ಸಾಹಿತ್ಯ ಪರಿಷತ್, ಚಾಮರಾಜಪೇಟೆ, ಸಂಜೆ 5.30

'ಅಪ್ಪು ಅಮರ' ಕಾರ್ಯಕ್ರಮದಲ್ಲಿ ಪುನೀತ್ ಪಾತ್ರ ಅಭಿನಯಿಸಿದ ಚಿಣ್ಣರು

ಕಿರುತೆರೆ ಕಲಾವಿದರಲ್ಲಿ 'ಅವತರಿಸಿದ' ಅಪ್ಪು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಟ ದಿವಂಗತ ಪುನೀತ್ ರಾಜ್‌ಕುಮಾರ್ ಅವರು ಅಮರರು...

ಹೀಗೆ ಬೆಳ್ಳಿ ತೆರೆಯ ಹಾಗೂ ಸಮಾಜದ ಆದರ್ಶ ಯುವ ನಾಯಕನೊಬ್ಬನನ್ನು ಕಿರುತೆರೆ ಕಲಾವಿದರು ಸ್ಮರಿಸಿ ಕಲಾಗೌರವ ಅರ್ಪಿಸಿದರು.

ಕರ್ನಾಟಕ ಟೆಲಿವಿಷನ್ ಸಂಘದ ವತಿಯಿಂದ ಹಮ್ಮಿಕೊಂಡ 'ಅಪ್ಪು ಅಮರ' ಕಾರ್ಯಕ್ರಮದಲ್ಲಿ ಭಕ್ತ ಪ್ರಹ್ಲಾದನಾಗಿ, ಬೆಟ್ಟದ ಹೂವಿನ ಪುಟ್ಟ ನಾಯಕನಾಗಿ, ಗುರು ರಾಘವೇಂದ್ರ ರಾಯರ ಭಕ್ತನಾಗಿ 'ಪುನೀತ್' ಕಾಣಿಸಿಕೊಂಡರು. ಅವರನ್ನೇ ಹೋಲುವ ಮಕ್ಕಳು ಈ ಪಾತ್ರಗಳಲ್ಲಿ ಅಪ್ಪಟ 'ಪುನೀತ್' ಅವರಂತೆ ಅಭಿನಯಿಸಿದರು.

ಪುನೀತ್ ಅವರು ಕಿರುತೆರೆಯಲ್ಲಿ ಕಾಣಿಸಿಕೊಂಡ ಕಾರ್ಯಕ್ರಮಗಳು, ಧಾರಾವಾಹಿಗಳಿಗೆ ಅವರು ಕೊಟ್ಟ ಬೆಂಬಲ, ಕಿರುತೆರೆ ಕಲಾವಿದರನ್ನು ಅವರು ಪ್ರೋತ್ಸಾಹಿಸುತ್ತಿದ್ದ ಕ್ಷಣಗಳ ವಿಡಿಯೊ ತುಣುಕುಗಳು ವೇದಿಕೆಯ ಪರದೆಯ ಮೇಲೆ ಬಿತ್ತರಗೊಂಡವು.


ಪ್ರವೀಣ್ ಡಿ. ರಾವ್ ಸಂಗೀತ ನಿರ್ದೇಶನದಲ್ಲಿ ಯುವ ಗಾಯಕರು ಪುನೀತ್ ನಟಿಸಿದ್ದ ಚಿತ್ರಗಳ ಗೀತೆಗಳನ್ನು ಹಾಡಿದರು. ಇದೇ ವೇದಿಕೆಯಲ್ಲಿ ಅಪ್ಪು ಲೇಸರ್ ಕಿರಣಗಳ ಮೂಲಕ ಮೂಡಿ ಬಂದರು.

ಪುನೀತ್ ನೆನಪಿನಲ್ಲಿ ನಗರದ ಕಾವೇರಿ ಆಸ್ಪತ್ರೆಯ ವತಿಯಿಂದ ಅಪ್ಪು ಅಮರ ಹೆಸರಿನ ಆಸ್ಪತ್ರೆ ಸೌಲಭ್ಯಗಳ ಕಾರ್ಡನ್ನು ವಿತರಿಸಲಾಯಿತು. 'ಸುಮಾರು 4 ಸಾವಿರ ಕಲಾವಿದರಿಗೆ ಈ ಕಾರ್ಡನ್ನು ವಿತರಿಸಲಾಗಿದೆ' ಎಂದು ಸಂಘದ ಅಧ್ಯಕ್ಷ ಎಸ್.ವಿ. ಶಿವಕುಮಾರ್ ಹೇಳಿದರು.

ಆಸ್ಪತ್ರೆಯ ಕಾರ್ಯಕಾರಿ ನಿರ್ದೇಶಕ ಡಾ.ವಿಜಯ ಭಾಸ್ಕರನ್ ಸುಂದರರಾಜ್ ಈ ಕಾರ್ಡನ್ನು ಅನಾವರಣಗೊಳಿಸಿದರು. 100ಕ್ಕೂ ಹೆಚ್ಚು ಕಲಾವಿದರು ನೇತ್ರದಾನಕ್ಕಾಗಿ ನೋಂದಣಿ ಮಾಡಿಸಿಕೊಂಡರು.

ದಾನದ ರಾಯಭಾರಿ: ಕಂದಾಯ ಸಚಿವ ಆರ್. ಅಶೋಕ್ ಮಾತನಾಡಿ, 'ದಾನಕ್ಕೆ ಅಪ್ಪು ರಾಯಭಾರಿಯಾಗಿದ್ದಾರೆ. ನಮ್ಮ ಜೊತೆ ಇಲ್ಲವಾದರೂ ಅವರು ಧ್ರುವತಾರೆಯಾಗಿಯೇ ನಮ್ಮೊಂದಿಗೆ ಇರುತ್ತಾರೆ. ನನ್ನ ಕ್ಷೇತ್ರದ ರಸ್ತೆಯೊಂದನ್ನು ಪುನೀತ್ ಹೆಸರಿನಲ್ಲಿ ಅಭಿವೃದ್ಧಿಪಡಿಸಿ ಅವರ ಹೆಸರಿಡಲಾಗುವುದು. ಅವರು ಅಗಲಿದ ದಿನ ಅವರ ಕುಟುಂಬದವರು ನಡೆದುಕೊಂಡ ರೀತಿಗೆ ಆಭಾರಿಯಾಗಿದ್ದೇನೆ' ಎಂದರು.

ನಟರಾದ ರಾಘವೇಂದ್ರ ರಾಜ್‌ಕುಮಾರ್, ಸಿಹಿಕಹಿ ಚಂದ್ರು, ನಟಿ ಉಮಾಶ್ರೀ ಸೇರಿದಂತೆ ಹಲವು ಪ್ರಮುಖ ಕಲಾವಿದರು ಭಾಗವಹಿಸಿದ್ದರು.


ನಗರದಲ್ಲಿ ಭಾನುವಾರ ನಡೆದ 'ಅಪ್ಪು ಅಮರ' ಕಾರ್ಯಕ್ರಮದಲ್ಲಿ ಕರ್ನಾಟಕ ಟಿ.ವಿ ಅಸೋಸಿಯೇಷನ್ ಅಧ್ಯಕ್ಷ ಎಸ್.ವಿ. ಶಿವಕುಮಾರ್, ರಾಘವೇಂದ್ರ ರಾಜಕುಮಾರ್, ನಟಿ ಉಮಾಶ್ರೀ, ಸಚಿವ ಆರ್. ಅಶೋಕ್ ಪುಷ್ಪನಮನ ಸಲ್ಲಿಸಿದರು. – ಪ್ರಜಾವಾಣಿ ಚಿತ್ರ

ಕುಂದು ಕೊರತೆ ಜನದನಿ



ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.

ನಿಮ್ಮ ಅಹವಾಲುಗಳನ್ನು ಇ ಮೇಲ್ ಮಾಡಬೇಕಾದ ವಿಳಾಸ: peoplesproblem@prajavani.co.in.

ಸಮಸ್ಯೆಗಳ ಕುರಿತ ಬರಹಗಳನ್ನು ವಾಟ್ಸ್ ಆ್ಯಪ್ (9606038256) ಸಹ ಮಾಡಬಹುದು.

ಕಾಮಗಾರಿ ವಿಳಂಬ– ನಾಗರಿಕರಿಗೆ ಪೀಕಲಾಟ



ಹಲಸೂರಿನ ಜೋಗುಪಾಳ್ಯದ 9ನೇ ಅಡ್ಡರಸ್ತೆ ಹದಗೆಟ್ಟಿರುವುದು.

ಉಲ್ಲಾಳು ಕ್ರಾಸ್‌ನಿಂದ ಜ್ಞಾನಗಂಗಾ ನಗರದವರೆಗಿನ ಸುಮಾರು 1 ಕಿ.ಮೀ ಉದ್ದದ ರಸ್ತೆ ಕಾಮಗಾರಿ ಪ್ರಾರಂಭವಾಗಿ ಆರು ತಿಂಗಳು ಕಳೆದಿದ್ದು, ಈವರೆಗೂ ಪೂರ್ಣಗೊಂಡಿಲ್ಲ. ಇದರಿಂದ ಜನರು ಪ್ರತಿನಿತ್ಯ ಈ ರಸ್ತೆಯಲ್ಲಿ ಸಾಗುವಾಗ ನರಕಯಾತನೆ ಅನುಭವಿಸುತ್ತಿದ್ದಾರೆ. ವೈಟ್‌ಟಾಪಿಂಗ್ ಕಾಮಗಾರಿ ಸ್ವಲ್ಪ ದೂರದವರೆಗೆ ಮುಗಿದಿದೆ. ಸರಿಯಾಗಿದ್ದ ಪಾದಚಾರಿ ಮಾರ್ಗವನ್ನೂ ಕಿತ್ತುಹಾಕಲಾಗಿದೆ. ಪ್ರಯಾಣಿಕರ ತಂಗುದಾಣವನ್ನು ಅಭಿವೃದ್ಧಿ ಹೆಸರಿನಲ್ಲಿ ಕೆಡವಿದ್ದಾರೆ. ಇದರಿಂದ ಪ್ರಯಾಣಿಕರು, ಶಾಲಾ-ಕಾಲೇಜು ವಿದ್ಯಾರ್ಥಿಗಳು ಮಳೆಬಂದಾಗ ನಿಲ್ಲಲು ಸ್ಥಳವಿಲ್ಲದೆ ಪರದಾಡುತ್ತಾರೆ. ಕಾಮಗಾರಿಯನ್ನು ಶೀಘ್ರವಾಗಿ ಪೂರ್ಣಗೊಳಿಸಿದರೆ ಅನುಕೂಲ.

ಬಾಲಗಂಗಾಧರ, ಸ್ಥಳೀಯ



ಉಲ್ಲಾಳು ಕ್ರಾಸ್‌ನಿಂದ ಜ್ಞಾನಗಂಗಾ ನಗರದ ಕಡೆಗೆ ಸಾಗುವ ರಸ್ತೆಯಲ್ಲಿ ನಿಧಾನಗತಿಯ ಕಾಮಗಾರಿಯಿಂದ ವಾಹನಗಳ ಸಂಚಾರಕ್ಕೆ ಸಮಸ್ಯೆಯಾಗಿದೆ.

ಕೆರೆ ಮಧ್ಯದಲ್ಲೇ ವಿದ್ಯುತ್ ಪರಿವರ್ತಕ !

ಯಲಹಂಕ ಸಮೀಪದ ದೊಡ್ಡಜಾಲ ಕೆರೆಯ ಮಧ್ಯದಲ್ಲಿ ಅವೈಜ್ಞಾನಿಕವಾಗಿ ವಿದ್ಯುತ್ ಪರಿವರ್ತಕ ಅಳವಡಿಸಲಾಗಿದೆ. ಸುಮಾರು 10 ವರ್ಷಗಳಿಂದ ಕಂಬ ಕೆರೆಯ ಮಧ್ಯದಲ್ಲೇ ಇದ್ದು, ಇದನ್ನು ಸೂಕ್ತವಾದ ಸ್ಥಳಕ್ಕೆ ಸ್ಥಳಾಂತರಿಸುವ ಕೆಲಸವನ್ನು ಈವರೆಗೆ ಮಾಡಿಲ್ಲ. ಹುತ್ತನಹಳ್ಳಿ, ಮಾರನಾಯಕನಹಳ್ಳಿ ಸೇರಿದಂತೆ ಕೆರೆಯ ಸುತ್ತಲಿನ ಗ್ರಾಮಗಳಿಗೆ ನೀರು ಪೂರೈಸುವ ಬೋರ್‌ವೆಲ್‌ಗೆ ವಿದ್ಯುತ್ ಸಂಪರ್ಕ ನೀಡುವ ಉದ್ದೇಶದಿಂದ ಈ ಪರಿವರ್ತಕ ಅಳವಡಿಸಲಾಗಿದೆ. ಆದರೆ, ಅದನ್ನು ನೆಟ್ಟಿರುವ ಜಾಗ ಅಪಾಯಕ್ಕೆ ಆಹ್ವಾನ ನೀಡುವಂತಿದೆ. ಇಂತಹ ಬುದ್ಧಿವಂತರನ್ನು ಶ್ಲಾಘಿಸಲೇಬೇಕು. ನೀರಿನಲ್ಲೇ ಕಂಬ ಇರುವುದಿಂದ ವಿದ್ಯುತ್ ಪ್ರವಹಿಸಿ ಅವಘಡ ಸಂಭವಿಸುವ ಸಾಧ್ಯತೆಗಳು ಹೆಚ್ಚು. ಕೆರೆಗೆ ಇಳಿದವರಿಗೂ ಅಪಾಯ ಕಟ್ಟಿಟ್ಟಬುತ್ತಿ. ತುರ್ತಾಗಿ ಈ ಪರಿವರ್ತಕವನ್ನು ಕೆರೆಯ ಹೊರಭಾಗಕ್ಕೆ ಸ್ಥಳಾಂತರಿಸಿ.



ದೊಡ್ಡಜಾಲ ಕೆರೆಯ ಮಧ್ಯಭಾಗದಲ್ಲಿ ವಿದ್ಯುತ್ ಪರಿವರ್ತಕ ಅಳವಡಿಸಿರುವುದು.

ಶಿವಕುಮಾರ್, ಹುತ್ತನಹಳ್ಳಿ ನಿವಾಸಿ

ಬಸ್ ಪ್ರಯಾಣಿಕರ ತಂಗುದಾಣ ನಿರ್ಮಿಸಿ

ಮೈಸೂರು ರಸ್ತೆಯ ಬಾಪೂಜಿ ನಗರದ ಮಸೀದಿ ಎದುರು ವಿವಿಧ ಸ್ಥಳಗಳಲ್ಲಿ ಸಂಚರಿಸಲು ಪ್ರಯಾಣಿಕರು ಪ್ರತಿದಿನ ಬಸ್‌ಗಾಗಿ ರಸ್ತೆಯಲ್ಲೇ ಕಾಯುತ್ತಾರೆ. ಇಲ್ಲಿ ಬಸ್ ಪ್ರಯಾಣಿಕರ ತಂಗುದಾಣ ಇಲ್ಲದ ಕಾರಣ, ಮಹಿಳೆಯರು, ವಿದ್ಯಾರ್ಥಿಗಳು ಬಿಸಿಲು–ಮಳೆಯಲ್ಲಿ ಪಾದಚಾರಿ ಮಾರ್ಗದ ಮೇಲೆ ಕುಳಿತು ಗಂಟೆಗಟ್ಟಲೆ ಕಾಯಬೇಕಾದ ಪರಿಸ್ಥಿತಿ ಇದೆ. ಪ್ರಯಾಣಿಕರು ರಸ್ತೆಯ ಮೇಲೂ ನಿಲ್ಲುವುದರಿಂದ ಅಪಘಾತ ಸಂಭವಿಸುವ ಅಪಾಯವೂ ಇದೆ. ಇಲ್ಲಿ ಪ್ರಯಾಣಿಕರಿಗಾಗಿ ತಂಗುದಾಣ ನಿರ್ಮಿಸಿದರೆ, ಬಹಳ ಅನುಕೂಲವಾಗಲಿದೆ.

ಉಮೇಶ್, ಸ್ಥಳೀಯ ನಿವಾಸಿ



ಮೈಸೂರು ರಸ್ತೆಯ ಬಾಪೂಜಿನಗರದಲ್ಲಿ ಬಸ್‌ಗಾಗಿ ರಸ್ತೆಯಲ್ಲಿ ಕಾಯುತ್ತಿರುವ ಜನರು

ಡಾಂಬರು ಹಾಕಿ

ಹಲಸೂರಿನ ಜೋಗುಪಾಳ್ಯದ 9ನೇ ಅಡ್ಡರಸ್ತೆ ಸಂಪೂರ್ಣವಾಗಿ ಹಾಳಾಗಿದ್ದು, ಗುಂಡಿಗಳ ಕೂಪವಾಗಿದೆ. ಮಳೆ ಬಂದರೆ ಈ ರಸ್ತೆಯ ಬದಿಗಳಲ್ಲಿ ನೀರು ಸರಾಗವಾಗಿ ಹರಿಯುವುದಿಲ್ಲ. ಕೆಲ ತಿಂಗಳ ಹಿಂದೆ ಚರಂಡಿ ದುರಸ್ತಿ ಮಾಡಲಾಗಿದ್ದು, ಸಮಸ್ಯೆ ಹಾಗೆಯೇ ಇದೆ. ಕುಡಿಯುವ ನೀರು ಸರಬರಾಜಿಗಾಗಿ ಇಲ್ಲಿ ನಲ್ಲಿ ಅಳವಡಿಸಲಾಗಿದ್ದು, ವಾಸನೆಯಿಂದ ಕೂಡಿದ ನೀರು ಬರುತ್ತಿದೆ. ಒಟ್ಟಾರೆ ಇಲ್ಲಿನ ನಿವಾಸಿಗಳು ಮೂಲ ಸೌಕರ್ಯಗಳಿದ್ದೂ ಇಲ್ಲದಂತಹ ಪರಿಸ್ಥಿತಿಯಲ್ಲಿ ಜೀವನ ನಡೆಸುತ್ತಿದ್ದಾರೆ. ಸಂಬಂಧಪಟ್ಟ ಅಧಿಕಾರಿಗಳು ರಸ್ತೆಗೆ ಡಾಂಬರು ಹಾಕಿಸಿ. ಮಳೆ ನೀರು ಸರಾಗವಾಗಿ ಹರಿದುಹೋಗುವಂತೆ ಕ್ರಮ ಕೈಗೊಳ್ಳಿ.

ಕೃಷ್ಣೋಜಿರಾವ್, ಹಲಸೂರು ನಿವಾಸಿ

ನೀರಿಗಾಗಿ ಜಾಗರಣೆ

ಚಾಮರಾಜಪೇಟೆ ಕ್ಷೇತ್ರದ ಭಕ್ಷಿ ಗಾರ್ಡನ್ ಪ್ರದೇಶದ ಜನ ನೀರಿಗಾಗಿ ಪರದಾಡುವ ಸ್ಥಿತಿ ನಿರ್ಮಾಣವಾಗಿದೆ. ಇಲ್ಲಿ ಹಗಲಿನ ಬದಲಿಗೆ ಮಧ್ಯರಾತ್ರಿಯಲ್ಲಿ ನೀರು ಪೂರೈಕೆ ಮಾಡಲಾಗುತ್ತದೆ. ಕೇವಲ ಎರಡು ಗಂಟೆ ಮಾತ್ರ ನೀರು ಪೂರೈಕೆ ಮಾಡುವುದರಿಂದ ಜನ ನೀರಿಗಾಗಿ ರಾತ್ರಿಯೆಲ್ಲ ಜಾಗರಣೆ ಮಾಡಬೇಕಿದೆ. ಜಲಮಂಡಳಿ ಅಧಿಕಾರಿಗಳಿಗೆ ಈ ಬಗ್ಗೆ ಹಲವು ಬಾರಿ ಮನವಿ ಸಲ್ಲಿಸಿದರೂ ಯಾವುದೇ ಕ್ರಮ ಕೈಗೊಂಡಿಲ್ಲ. 'ಪಂಪ್ ಕೆಟ್ಟು ಹೋಗಿದೆ. ಹಾಗಾಗಿ, ನೀರು ಸರಬರಾಜು ಆಗುತ್ತಿಲ್ಲ' ಎಂದು ಸಿಬ್ಬಂದಿ ಸಬೂಬು ಹೇಳುತ್ತಾರೆ. ಈ ಭಾಗದಲ್ಲಿ ಟೆಂಡರ್‌ಶ್ಯೂರ್ ಕಾಮಗಾರಿ ಆರಂಭವಾಗಿದ್ದು, ಹೊಸ ಪೈಪ್‌ಗಳನ್ನು ಅಳವಡಿಸಿದರೆ ನೀರಿನ ಸಂಪರ್ಕಕ್ಕೆ ಶಾಶ್ವತ ಪರಿಹಾರ ಕಂಡುಕೊಳ್ಳಬಹುದು. ಈ ಬಗ್ಗೆ ಜಲಮಂಡಳಿ ಅಧಿಕಾರಿಗಳು ಗಮನಹರಿಸಲಿ.

ಪ್ರಭಾಕರ್, ಚಾಮರಾಜಪೇಟೆ

ಸಂಚಾರ ಸಿಗ್ನಲ್ ಅಳವಡಿಸಿ

ಯಲಹಂಕ ಬಳಿಯ ಪುಟ್ಟೇನಹಳ್ಳಿ ರಸ್ತೆಯಲ್ಲಿ ಟ್ರಾಫಿಕ್ ಸಿಗ್ನಲ್ ಇಲ್ಲದ ಕಾರಣ ಸಾರ್ವಜನಿಕರು ರಸ್ತೆ ದಾಟಲು ಪ್ರತಿನಿತ್ಯ ಪರದಾಡುತ್ತಾರೆ. ವಾಹನಗಳು ವೇಗವಾಗಿ ಸಂಚರಿಸುವುದರಿಂದ ರಸ್ತೆ ದಾಟಲು ಸಾರ್ವಜನಿಕರು ರಸ್ತೆಯಲ್ಲೇ ಗಂಟೆಗಟ್ಟಲೆ ಕಾಯುವ ಸ್ಥಿತಿ ಇದೆ. ರಸ್ತೆ ದಾಟುವಾಗ ಹಲವು ಸಲ ಅಪಘಾತಗಳೂ ಸಂಭವಿಸಿವೆ. ಈ ರಸ್ತೆಯಲ್ಲಿ ಸಂಚಾರ ಸಿಗ್ನಲ್ ಅಳವಡಿಸಿದರೆ, ಈ ಎಲ್ಲ ಸಮಸ್ಯೆಗಳಿಗೆ ಪರಿಹಾರ ಸಿಗಲಿದೆ. ಪ್ರಯಾಣಿಕರು ನಿರಾತಂಕವಾಗಿ ರಸ್ತೆ ದಾಟುವುದರ ಜೊತೆಗೆ , ವಾಹನಗಳ ವೇಗಕ್ಕೂ ನಿಯಂತ್ರಣ ಹಾಕಿದಂತಾಗುತ್ತದೆ. ಈ ಬಗ್ಗೆ ಸಂಚಾರ ಪೊಲೀಸರು ಗಮನಹರಿಸಬೇಕು.

ಎಂ.ಮಲ್ಲೇಶಯ್ಯ, ಪುಟ್ಟೇನಹಳ್ಳಿ ಕೆಎಚ್‌ಬಿ ಕಾಲೊನಿ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ

ನಿಯಮ ಪಾಲಿಸದ ಸವಾರರು

ಹನುಮಂತನಗರದ 50 ಅಡಿ ರಸ್ತೆಯಲ್ಲಿ ಏಕಮುಖ ಸಂಚಾರಕ್ಕೆ (ಒನ್‌ವೇ) ಮಾತ್ರ ಅವಕಾಶ ಕಲ್ಪಿಸಲಾಗಿದೆ. ಆದರೆ, ಬಹುತೇಕ ವಾಹನ ಸವಾರರು ಈ ನಿಯಮವನ್ನು ಪಾಲಿಸುವುದಿಲ್ಲ. ಎರಡೂ ಬದಿಗಳಲ್ಲಿ ವಾಹನ ಚಲಾಯಿಸಿ ಸಂಚಾರಕ್ಕೆ ಅಡಚಣೆ ಉಂಟು ಮಾಡುತ್ತಾರೆ. ಸಂಚಾರ ಪೊಲೀಸರ ಕಣ್ಣಿಗೂ ಇದು ಕಾಣಿಸುತ್ತಿಲ್ಲ. ದಯವಿಟ್ಟು ಈ ರಸ್ತೆಯಲ್ಲಿ ನಿಯಮ ಉಲ್ಲಂಘಿಸುವವರ ವಿರುದ್ಧ ಕ್ರಮ ಕೈಗೊಂಡು, ಸುಗಮ ಸಂಚಾರಕ್ಕೆ ಅನುವು ಮಾಡಿಕೊಡಬೇಕು.

ಎಂ.ರಾಧಾಕೃಷ್ಣ, ಸ್ಥಳೀಯ

ಸುದ್ದಿ 2 ನಿಮಿಷ

₹ 3.45 ಲಕ್ಷ ಮೌಲ್ಯ ಚಿನ್ನಾಭರಣ ಜಪ್ತಿ: ಆರೋಪಿ ಬಂಧನ

ಬೆಂಗಳೂರು: ಸರ ಕಳವು ಹಾಗೂ ಮನೆಗಳಲ್ಲಿ ಕಳ್ಳತನ ಮಾಡುತ್ತಿದ್ದ ಆರೋಪದಡಿ ಯೋಗೇಶ್ ಎಂಬಾತನನ್ನು ವಿಜಯನಗರ ಪೊಲೀಸರು ಬಂಧಿಸಿದ್ದಾರೆ.

'ಆರೋಪಿ ಯೋಗೇಶ್, ಹಲವು ತಿಂಗಳಿನಿಂದ ಕೃತ್ಯ ಎಸಗುತ್ತಿದ್ದ. ಆತನಿಂದ ₹ 3.45 ಲಕ್ಷ ಮೌಲ್ಯದ ಚಿನ್ನಾಭರಣ ಹಾಗೂ ಬೆಳ್ಳಿ ಸಾಮಗ್ರಿ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಠಾಣೆ ವ್ಯಾಪ್ತಿಯಲ್ಲಿ ವಾಸವಿದ್ದ ದೂರುದಾರರು, ಮನೆಗೆ ಬೀಗ ಹಾಕಿಕೊಂಡು ಕುಟುಂಬ ಸಮೇತ ಪ್ರವಾಸಕ್ಕೆಂದು ಮಡಿಕೇರಿಗೆ ನ. 3ರಂದು ಹೋಗಿದ್ದರು. ಮನೆಯಲ್ಲಿ ಯಾರೂ ಇಲ್ಲದ್ದನ್ನು ತಿಳಿದುಕೊಂಡ ಆರೋಪಿ, ರಾತ್ರಿ ವೇಳೆ ಬೀಗ ಮುರಿದು ಒಳನುಗ್ಗಿದ್ದ. ಚಿನ್ನಾಭರಣ ಹಾಗೂ ಬೆಳ್ಳಿ ಸಾಮಗ್ರಿ ಕದ್ದುಕೊಂಡು ಪರಾರಿಯಾಗಿದ್ದ.'

'ಕಬ್ಬಿಣದ ಗೇಟ್ ಬೀಗ ಮುರಿದಿದ್ದನ್ನು ಗಮನಿಸಿದ್ದ ಪಕ್ಕದ ಮನೆಯವರು, ದೂರುದಾರರಿಗೆ ಕರೆ ಮಾಡಿ ವಿಷಯ ತಿಳಿಸಿದ್ದರು. ಮನೆಗೆ ಬಂದು ಪರಿಶೀಲಿಸಿದಾಗ, ಕಳ್ಳತನವಾಗಿದ್ದು ಗೊತ್ತಾಗಿತ್ತು. ಈ ಬಗ್ಗೆ ಪ್ರಕರಣವೂ ದಾಖಲಾಗಿತ್ತು' ಎಂದೂ ತಿಳಿಸಿದರು.

'ಪುರಾವೆಗಳನ್ನು ಆಧರಿಸಿ ಆರೋಪಿ ಯೋಗೇಶ್‌ನನ್ನು ಬಂಧಿಸಿ ವಿಚಾರಿಸಿದಾಗ ತಪ್ಪೊಪ್ಪಿಕೊಂಡ. ಗಿರಿನಗರ ಹಾಗೂ ಹುಳಿಮಾವು ಠಾಣೆ ವ್ಯಾಪ್ತಿಯಲ್ಲೂ ಆರೋಪಿ ಕೃತ್ಯ ಎಸಗಿರುವುದಾಗಿ ತಿಳಿಯಿತು' ಎಂದೂ ವಿವರಿಸಿದರು.



ಲೈಂಗಿಕ ದೌರ್ಜನ್ಯ: 'ಬಿ ರಿಪೋರ್ಟ್' ಸಲ್ಲಿಕೆ?

ಬೆಂಗಳೂರು: ನಟಿ ಶ್ರುತಿ ಹರಿಹರನ್ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಆರೋಪದಡಿ ನಟ ಅರ್ಜುನ್ ಸರ್ಜಾ ವಿರುದ್ಧ ದಾಖಲಾಗಿದ್ದ ಪ್ರಕರಣದ ತನಿಖೆ ಪೂರ್ಣಗೊಳಿಸಿರುವ ಕಬ್ಬನ್ ಪಾರ್ಕ್ ಪೊಲೀಸರು, ನ್ಯಾಯಾಲಯಕ್ಕೆ 'ಬಿ–ರಿಪೋರ್ಟ್' ಸಲ್ಲಿಸಿರುವುದಾಗಿ ಗೊತ್ತಾಗಿದೆ.

ಶ್ರುತಿ ಅವರು ನೀಡಿದ್ದ ದೂರು ಆಧರಿಸಿ ಸಂಜ್ಞೆ ಮೂಲಕ ಮಹಿಳೆ ಗೌರವಕ್ಕೆ ಧಕ್ಕೆ (354,509) ಲೈಂಗಿಕ ಕಿರುಕುಳ (ಐಪಿಸಿ 354ಎ) ಹಾಗೂ ಜೀವಬೆದರಿಕೆ (ಐಪಿಸಿ 506) ಆರೋಪದಡಿ 2018ರಲ್ಲಿ ಪ್ರಕರಣ ದಾಖಲಾಗಿತ್ತು.

'ವಿಸ್ಮಯ' ಸಿನಿಮಾ ಚಿತ್ರೀಕರಣದ ವೇಳೆ ಲೈಂಗಿಕ ದೌರ್ಜನ್ಯ ನಡೆದಿದೆ ಎನ್ನಲಾಗುತ್ತಿತ್ತು. ಆರೋಪಕ್ಕೆ ಸಂಬಂಧ ಪಟ್ಟಂತೆ ಅರ್ಜುನ್ ಸರ್ಜಾ ಹಾಗೂ ಹಲವರನ್ನು ವಿಚಾರಣೆ ನಡೆಸಲಾಗಿತ್ತು. ಆರೋಪ ಸಾಬೀತುಪಡಿಸುವ ಯಾವುದೇ ಪುರಾವೆಗಳು ಸಿಗದಿದ್ದರಿಂದ ಪೊಲೀಸರು, ನ್ಯಾಯಾಲಯಕ್ಕೆ ಬಿ–ರಿಪೋರ್ಟ್ ಸಲ್ಲಿಸಿರುವುದಾಗಿ ತಿಳಿದುಬಂದಿದೆ.

ಪ್ರತ್ಯೇಕ ಅಪಘಾತ: ಇಬ್ಬರು ಸ್ಥಳದಲ್ಲೇ ಸಾವು

ಬೆಂಗಳೂರು: ನಗರದ ಹೆಬ್ಬಾಳ ಹಾಗೂ ಜಾಲಹಳ್ಳಿ ಸಂಚಾರ ಠಾಣೆ ವ್ಯಾಪ್ತಿಯಲ್ಲಿ ಪ್ರತ್ಯೇಕ ಅಪಘಾತಗಳು ಸಂಭವಿಸಿದ್ದು, ಬಸ್ ಹಾಗೂ ಲಾರಿ ಚಕ್ರ ಮೈ ಮೇಲೆ ಹರಿದು ಇಬ್ಬರು ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಕೆ. ಕಿರಣ್ (26) ಹಾಗೂ ಮಲ್ಲಿಕಾರ್ಜುನ್ (20) ಮೃತರು. ಎರಡೂ ಪ್ರಕರಣಗಳ ಬಗ್ಗೆ ಆಯಾ ಠಾಣೆಗಳಲ್ಲಿ ಪ್ರತ್ಯೇಕ ಎಫ್‌ಐಆರ್ ದಾಖಲಾಗಿವೆ.

ದ್ವಿಚಕ್ರ ವಾಹನದಲ್ಲಿ ಹೊರಟ್ಟಿದ್ದ ಕಿರಣ್ ಅವರಿಗೆ ಕೆಎಸ್‌ಆರ್‌ಟಿಸಿ ಬಸ್ ಡಿಕ್ಕಿ ಹೊಡೆದು, ಬಸ್ಸಿನ ಚಕ್ರ ಅವರ ತಲೆಯ ಮೇಲೆ ಹರಿದಿದೆ. ಕಟ್ಟಡ ಕಾರ್ಮಿಕರಾಗಿದ್ದ ಯಾದಗಿರಿಯ ಮಲ್ಲಿಕಾರ್ಜುನ್, ಕೆಲಸದ ಸ್ಥಳಕ್ಕೆ ಸ್ನೇಹಿತನ ಜೊತೆ ಬೈಕ್‌ನಲ್ಲಿ ಹೋಗುವಾಗ ವೇಗವಾಗಿ ಬಂದ ಲಾರಿ ಅವರ ಮೇಲೆ ಹರಿದ ಪರಿಣಾಮ ಅವರು ಸ್ಥಳದಲ್ಲೇ ಸಾವಿಗೀಡಾಗಿದ್ದಾರೆ.



ನಕಲಿ ಅಂಕಪಟ್ಟಿ ಜಾಲ ಪತ್ತೆ: ಇಬ್ಬರು ವಶಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೇಶದ ವಿವಿಧ ವಿಶ್ವವಿದ್ಯಾಲಯಗಳ ಹೆಸರಿನಲ್ಲಿ ನಕಲಿ ಅಂಕಪಟ್ಟಿಗಳನ್ನು ತಯಾರಿಸಿ ಮಾರಾಟ ಮಾಡುತ್ತಿದ್ದ ಜಾಲವನ್ನು ಅಮೃತಹಳ್ಳಿ ಠಾಣೆ ಪೊಲೀಸರು ಭೇದಿಸಿದ್ದು, ಈ ಸಂಬಂಧ ಇಬ್ಬರನ್ನು ವಶಕ್ಕೆ ಪಡೆದಿದ್ದಾರೆ.

'ಡ್ರೀಮ್ ಎಜ್ಯುಕೇಷನ್ ಸರ್ವೀಸಸ್' ಹೆಸರಿನಲ್ಲಿ ನಗರದ ಹೆಬ್ಬಾಳ ಕೆಂಪಾಪುರದಲ್ಲಿ ಕಚೇರಿ ತೆರೆದಿದ್ದ ಆರೋಪಿಗಳು, ನಕಲಿ ಅಂಕಪಟ್ಟಿ ದಂಧೆ ನಡೆಸುತ್ತಿದ್ದರು. ಈ ಜಾಲದ ಬಗ್ಗೆ ಎಚ್.ಎಸ್. ಮೋಹನ್‌ಕುಮಾರ್ ಎಂಬುವರು ವಿಡಿಯೊ ಸಮೇತ ದೂರು ನೀಡಿದ್ದರು. ಅದರನ್ವಯ ತನಿಖೆ ಕೈಗೊಳ್ಳಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'₹ 47 ಸಾವಿರಕ್ಕೆ ಬಿ.ಕಾಂ ಅಂಕಪಟ್ಟಿ'

'ದೂರುದಾರರ ಪರಿಚಯಸ್ಥರೊಬ್ಬರು, ಬಿ.ಕಾಂ ಪದವಿ ಅಂಕಪಟ್ಟಿ ಬೇಕೆಂದು ಹೇಳಿಕೊಂಡು ಆರೋಪಿಗಳ ಬಳಿ ಹೋಗಿದ್ದರು. ₹ 47 ಸಾವಿರ ಕೊಟ್ಟರೆ ಅಂಕಪಟ್ಟಿ ನೀಡುವುದಾಗಿ ಆರೋಪಿಗಳು ಹೇಳಿದ್ದರು. ಜೊತೆಗೆ, ಕೆಲ ಅಂಕಪಟ್ಟಿಗಳನ್ನು ತೋರಿಸಿದ್ದರು. ಆದರೆ, ಅವೆಲ್ಲ ನಕಲಿ ಅಂಕಪಟ್ಟಿಗಳಾಗಿದ್ದವು. ಈ ಎಲ್ಲ ದೃಶ್ಯಗಳು ವಿಡಿಯೊದಲ್ಲಿವೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಹಿಮಾಚಲ ಪ್ರದೇಶದ ಅರ್ನಿ ವಿಶ್ವವಿದ್ಯಾಲಯ, ಐಇಸಿ ವಿಶ್ವವಿದ್ಯಾಲಯ ಹಾಗೂ ರಾಯ್‌ಪುರದ ಕಳಿಂಗ ವಿಶ್ವವಿದ್ಯಾಲಯ ಹೆಸರಿನಲ್ಲಿ ತಯಾರಿಸಿದ್ದ ನಕಲಿ ಅಂಕಪಟ್ಟಿಗಳು ಆರೋಪಿಗಳ ಬಳಿ ಸಿಕ್ಕಿವೆ. ಪ್ರಮುಖ ಆರೋಪಿಗಳು ಎನ್ನಲಾದ ರಾಕೇಶ್ ಹಾಗೂ ಕೃಷ್ಣ ಎಂಬುವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುತ್ತಿದೆ' ಎಂದೂ ತಿಳಿಸಿವೆ.

'ಉನ್ನತ ವ್ಯಾಸಂಗ ಪೂರ್ಣಗೊಳಿಸಲು ನೆರವು ನೀಡುವುದಾಗಿ ಹೇಳಿ ಆರೋಪಿಗಳು ಸಾಮಾಜಿಕ ಮಾಧ್ಯಮಗಳಲ್ಲಿ ಜಾಹೀರಾತು ನೀಡುತ್ತಿದ್ದರು. ಅದನ್ನು ಗಮನಿಸುತ್ತಿದ್ದ ಯುವಜನತೆ, ಆರೋಪಿಗಳನ್ನು ಸಂಪರ್ಕಿಸುತ್ತಿದ್ದರು' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಕಾಲೇಜಿಗೆ ಪ್ರವೇಶ ಪಡೆದ ನಂತರ, ತರಗತಿಗಳಿಗೆ ಹಾಜರಾಗಬೇಕು. ನಂತರ, ಪರೀಕ್ಷೆಯನ್ನೂ ಬರೆಯಬೇಕು. ಬಳಿಕವೇ ಅಂಕಪಟ್ಟಿ ಸಿಗುತ್ತದೆ. ಇದರ ಬದಲು ಹಣ ಕೊಟ್ಟರೆ, ಪರೀಕ್ಷೆ ಇಲ್ಲದೇ ಕೆಲವೇ ದಿನಗಳಲ್ಲಿ ಅಂಕಪಟ್ಟಿ ಕೊಡುತ್ತೇವೆ' ಎಂದು ಆರೋಪಿಗಳು ಹೇಳುತ್ತಿದ್ದರು. ಅದನ್ನು ನಂಬಿ ಹಲವರು ಹಣ ಕೊಟ್ಟು ಅಂಕಪಟ್ಟಿಯನ್ನೂ ಪಡೆದಿದ್ದಾರೆ. ಅವರಲ್ಲಿ ಬಹುಪಾಲು ಮಂದಿ, ಖಾಸಗಿ ಕಂಪನಿಯಲ್ಲಿ ಕೆಲಸ ಪಡೆದುಕೊಂಡಿದ್ದಾರೆ' ಎಂದೂ ಮೂಲಗಳು ವಿವರಿಸಿವೆ.

ಆಲ್ ಸೇಂಟ್ಸ್ ಚರ್ಚ್ ಬಳಿ ಮೆಟ್ರೊ ನಿಲ್ದಾಣ ಕಾಮಗಾರಿಗೆ ವಿರೋಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಾಗವಾರ–ಗೊಟ್ಟಿಗೆರೆ ಮಾರ್ಗದ ವೆಲ್ಲಾರ ಜಂಕ್ಷನ್‌ನಲ್ಲಿ ಮೆಟ್ರೊ ನಿಲ್ದಾಣ ನಿರ್ಮಾಣಕ್ಕೆ ಭೂಮಿ ಸ್ವಾಧೀನ ಪಡಿಸಿಕೊಳ್ಳುವುದನ್ನು ವಿರೋಧಿಸಿ ಆಲ್ ಸೇಂಟ್ಸ್ ಚರ್ಚ್‌ನ ಸದಸ್ಯರು ಹಾಗೂ ಪರಿಸರ ಪ್ರೇಮಿಗಳು ಭಾನುವಾರ ಪ್ರತಿಭಟನೆ ನಡೆಸಿದರು.

'ಎಲ್ಲರೂ ಒಟ್ಟಾಗಿ ಬೆಂಗಳೂರಿನ ಶ್ರೀಮಂತ ಪರಂಪರೆ ಹಾಗೂ ಜೀವವೈವಿಧ್ಯತೆ ಉಳಿಸೋಣ' ಎಂಬ ಘೋಷವಾಕ್ಯದಡಿ ಆಲ್ ಸೇಂಟ್ಸ್ ಚರ್ಚ್ ಆವರಣದಲ್ಲಿ ಧರಣಿ ನಡೆಸಿದ ಪ್ರತಿಭಟನಾಕಾರರು, 'ಬೆಂಗಳೂರು ಮೆಟ್ರೊ ರೈಲು ನಿಗಮ (ಬಿಎಂಆರ್‌ಸಿಎಲ್) ತನ್ನ ಮೂಲ ಸಮಗ್ರ ಯೋಜನಾ ವರದಿ (ಡಿಪಿಆರ್) ಹಾಗೂ ಹೈಕೋರ್ಟ್ ಆದೇಶವನ್ನು ಉಲ್ಲಂಘಿಸಿ ಕಾಮಗಾರಿ ನಡೆಸುತ್ತಿದೆ' ಎಂದು ಆರೋಪಿಸಿದರು.

'ಮೆಟ್ರೊ ನಿಲ್ದಾಣದ ಪ್ರವೇಶ ದ್ವಾರದ ನಿರ್ಮಾಣಕ್ಕೆ ಚರ್ಚ್‌ನ ಜಾಗವನ್ನು ಸ್ವಾಧೀನಪಡಿಸಿಕೊಳ್ಳುವುದು ಸರಿಯಲ್ಲ. ನಿಗಮದ ಈ ಕ್ರಮದಿಂದ 150 ವರ್ಷಗಳ ಹಳೆಯ ಚರ್ಚ್ ಅನ್ನು ನೆಲಸಮ ಮಾಡಬೇಕಾಗುತ್ತದೆ.



ಮೆಟ್ರೊ ಕಾಮಗಾರಿಗೆ ಪಾರಂಪರಿಕ ಕಟ್ಟಡ ಹಾಗೂ ಜೀವವೈವಿಧ್ಯ ಬಲಿಕೊಡಬಾರದು ಎಂದು ಒತ್ತಾಯಿಸಿ ಆಲ್ ಸೇಂಟ್ಸ್ ಚರ್ಚ್ ಸದಸ್ಯರು ಹಾಗೂ ಪರಿಸರ ಪ್ರೇಮಿಗಳು ಮರಗಳನ್ನು ಅಪ್ಪಿಕೊಳ್ಳುವ ಮೂಲಕ ಭಾನುವಾರ ಪ್ರತಿಭಟನೆ ನಡೆಸಿದರು –ಪ್ರಜಾವಾಣಿ ಚಿತ್ರ

ಅಲ್ಲದೆ, ಚರ್ಚ್ ಆವರಣದಲ್ಲಿರುವ 100ಕ್ಕೂ ಹೆಚ್ಚು ಮರಗಳನ್ನು ಕತ್ತರಿಸಬೇಕಾಗುತ್ತದೆ. ಇದಕ್ಕೆ ನಾವು ಅವಕಾಶ ಕೊಡುವುದಿಲ್ಲ' ಎಂದು ಚರ್ಚ್‌ನ ಸದಸ್ಯ ರೊನಾಲ್ಡ್ ಫರ್ನಾಂಡಿಸ್ ಆಕ್ರೋಶ ವ್ಯಕ್ತಪಡಿಸಿದರು.

'ಚರ್ಚ್ ಜಾಗ ಹೊರತುಪಡಿಸಿ, ರಕ್ಷಣಾ ಇಲಾಖೆಯಲ್ಲಿನ ಜಾಗದಲ್ಲಿ ನಿಲ್ದಾಣ ನಿರ್ಮಾಣ ಮಾಡಲು ಅವಕಾಶವಿದೆ. ನಿಗಮ ಈ ನಿಟ್ಟನಲ್ಲಿ ಯೋಚಿಸಬೇಕು' ಎಂದು ಒತ್ತಾಯಿಸಿದರು.

ಚರ್ಚ್‌ನ ಸದಸ್ಯರು ಹಾಗೂ ಪರಿಸರ ಪ್ರೇಮಿಗಳು ಆನ್‌ಲೈನ್ ವೇದಿಕೆಯಲ್ಲಿಯೂ 'ಆಲ್ ಸೇಂಟ್ಸ್ ಚರ್ಚ್ ರಕ್ಷಿಸಿ' ಎಂಬ ಆಗ್ರಹದೊಂದಿಗೆ ಸಹಿ ಸಂಗ್ರಹಿಸುತ್ತಿದ್ದಾರೆ.

ಆಟೊದಲ್ಲಿ ಸುತ್ತಾಟ: ಕಳ್ಳತನ ಮಾಡಿ ಪರಾರಿ

ಬೆಂಗಳೂರು: ರಾಜಾಜಿನಗರ ಹಾಗೂ ಸುತ್ತಮುತ್ತಲ ಪ್ರದೇಶಗಳಲ್ಲಿ ಕಳ್ಳತನ ಮಾಡಿದ್ದ ಆರೋಪದಡಿ ಆಟೊ ಚಾಲಕ ವರದರಾಜು ಎಂಬಾತನನ್ನು ಪೊಲೀಸರು ಬಂಧಿಸಿದ್ದಾರೆ.

'ಕುರುಬರಹಳ್ಳಿ ನಿವಾಸಿ ವರದರಾಜು ನಗರದ ವಿವಿಧೆಡೆ ಆಟೊದಲ್ಲಿ ಸುತ್ತಾಡುತ್ತಿದ್ದ, ಮಳಿಗೆ ಹಾಗೂ ಮನೆಗಳನ್ನು ಗುರುತಿಸಿ ಕಳ್ಳತನ ಮಾಡುತ್ತಿದ್ದ. ಆತನಿಂದ ₹ 25 ಲಕ್ಷ ಮೌಲ್ಯದ 455 ಗ್ರಾಂ ಚಿನ್ನಾಭರಣ ಹಾಗೂ ₹ 12 ಸಾವಿರ ನಗದು ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ರಾಜಾಜಿನಗರ ಠಾಣೆ ವ್ಯಾಪ್ತಿಯಲ್ಲಿ ಕೆಲ ದಿನಗಳ ಹಿಂದಷ್ಟೇ ಅಂಗಡಿ ಹಾಗೂ ಮನೆಯೊಂದರಲ್ಲಿ ಕಳ್ಳತನ ನಡೆದಿತ್ತು. ಈ ಬಗ್ಗೆ ಪ್ರಕರಣ ದಾಖಲಾಗಿತ್ತು. ಸ್ಥಳ ಪರಿಶೀಲನೆ ವೇಳೆ ಸಿಕ್ಕ ಬೆರಳಚ್ಚು ಮಾದರಿಯಿಂದ ಆರೋಪಿ ಸುಳಿವು ಸಿಕ್ಕಿತ್ತು. ಕಳೆದ ವರ್ಷ ಪ್ರಕರಣವೊಂದರಲ್ಲಿ ಬಂಧನಕ್ಕೊಳಗಾಗಿ ಜೈಲಿನಲ್ಲಿದ್ದರು ಆತ, ಜಾಮೀನು ಮೇಲೆ ಹೊರಬಂದ ಮೇಲೂ ಕೃತ್ಯ ಮುಂದುವರಿಸಿದ್ದ' ಎಂದರು.

ಪತ್ನಿ ಹತ್ಯೆ: ಆಂಧ್ರದಲ್ಲಿ ಆರೋಪಿ ಮೃತದೇಹ ಪತ್ತೆ

ಬೆಂಗಳೂರು: ಆಡುಗೋಡಿ ಠಾಣೆ ವ್ಯಾಪ್ತಿಯಲ್ಲಿ ಆಯೀಷಾ (45) ಎಂಬುವರನ್ನು ಪೆಟ್ರೋಲ್ ಸುರಿದು ಬೆಂಕಿ ಹಚ್ಚಿ ಹತ್ಯೆ ಮಾಡಲಾಗಿದ್ದು, ಕೃತ್ಯದ ಆರೋಪಿ ಎನ್ನಲಾದ ಪತಿ ನಾಸೀರ್ (54) ಸಹ ಆಂಧ್ರಪ್ರದೇಶದಲ್ಲಿ ಅನುಮಾನಾಸ್ಪದ ರೀತಿಯಲ್ಲಿ ಮೃತಪಟ್ಟಿದ್ದಾನೆ.

'ರಾಜೇಂದ್ರನಗರ ನಿವಾಸಿ ಆಯೀಷಾ ಅವರನ್ನು ಮನೆಯಲ್ಲೇ ನ. 19ರಂದು ಕೊಲೆ ಮಾಡಲಾಗಿತ್ತು. ಸ್ಥಳದಿಂದ ಪರಾರಿಯಾಗಿದ್ದ ಪತಿ ನಾಸೀರ್, ಆಂಧ್ರಪ್ರದೇಶದ ಪೆನ್ನಗೊಂಡಕ್ಕೆ ಹೋಗಿದ್ದ. ಆತನನ್ನು ಬಂಧಿಸಲು ವಿಶೇಷ ತಂಡ ಆಂಧ್ರಕ್ಕೆ ಹೋಗಿತ್ತು. ಅಲ್ಲಿ ಆತನ ಮೃತದೇಹ ಪತ್ತೆಯಾಗಿದೆ. ಮರಣೋತ್ತರ ಪರೀಕ್ಷೆ ನಡೆಸಿ, ಮೃತದೇಹವನ್ನು ಸಂಬಂಧಿಕರಿಗೆ ನೀಡಲಾಗಿದೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

ಅಪರಾಧ ಸುದ್ದಿ

'ನಾಸೀರ್‌ನೇ ಆಯೀಷಾ ಅವರನ್ನು ಕೊಂದಿದ್ದ ಬಗ್ಗೆ ಪುರಾವೆಗಳು ಸಿಕ್ಕಿದ್ದವು. ಆತನನ್ನು ಬಂಧಿಸಬೇಕು ಎನ್ನುವಷ್ಟರಲ್ಲೇ ಮೃತದೇಹ ಸಿಕ್ಕಿದೆ. ಆತ, ಆತ್ಮಹತ್ಯೆ ಮಾಡಿಕೊಂಡಿರುವುದು ಮೇಲ್ನೋಟಕ್ಕೆ ಗೊತ್ತಾಗುತ್ತಿದೆ' ಎಂದೂ ಅವರು ತಿಳಿಸಿದರು.

ಶೀಲ ಶಂಕಿಸಿ ಕೊಲೆ: 'ಪ್ರಾರ್ಥನಾ ಸ್ಥಳಗಳ ಅಭಿವೃದ್ಧಿಗಾಗಿ ದೇಣಿಗೆ ಸಂಗ್ರಹಿಸುವ ಕೆಲಸವನ್ನು ನಾಸೀರ್ ಮಾಡುತ್ತಿದ್ದ. 25 ವರ್ಷಗಳ ಹಿಂದೆ ಆಯೀಷಾ ಅವರನ್ನು ಮದುವೆಯಾಗಿದ್ದ. ದಂಪತಿಗೆ ಇಬ್ಬರು ಮಕ್ಕಳಿದ್ದಾರೆ. ಇಬ್ಬರಿಗೂ ಮದುವೆಯಾಗಿದೆ' ಎಂದು ಪೊಲೀಸ್ ಅಧಿಕಾರಿ ಹೇಳಿದರು.

'ಗಂಡು ಮಗ, ಪತ್ನಿ ಜೊತೆ ಪ್ರತ್ಯೇಕವಾಗಿ ವಾಸವಿದ್ದಾರೆ. ನಾಸೀರ್ ಹಾಗೂ ಆಯೀಷಾ ಮಾತ್ರ ಮನೆಯಲ್ಲಿದ್ದರು. ಪತ್ನಿಯ ಶೀಲದ ಬಗ್ಗೆ ಶಂಕೆ ವ್ಯಕ್ತಪಡಿಸಿದ್ದ ನಾಸೀರ್, ಮನೆಯಲ್ಲಿ ನಿತ್ಯವೂ ಜಗಳ ಮಾಡಲಾರಂಭಿಸಿದ್ದ. ಕೆಲ ಬಾರಿ ಹಲ್ಲೆ ಸಹ ಮಾಡಿದ್ದ. ದಿನ ಕಳೆದಂತೆ ಜಗಳ ಹೆಚ್ಚಾಗಿತ್ತು.'

'ಪತ್ನಿಯನ್ನು ಹತ್ಯೆ ಮಾಡಬೇಕೆಂದು ತೀರ್ಮಾನಿಸಿ ಸಂಚು ರೂಪಿಸಿದ್ದ ನಾಸೀರ್, ಪೆಟ್ರೋಲ್ ಖರೀದಿಸಿ ತಂದು ಮನೆಯಲ್ಲಿ ಬಚ್ಚಿಟ್ಟಿದ್ದ. ಆಯೀಷಾ ಜೊತೆ ನ. 19ರಂದು ಜಗಳ ತೆಗೆದಿದ್ದ ಆರೋಪಿ, ಕೊಠಡಿಗೆ ಎಳೆದೊಯ್ದು ಬಾಯಿಗೆ ಬಟ್ಟೆ ಸುತ್ತಿದ್ದ. ಅವರ ಮೇಲೆ ಪೆಟ್ರೋಲ್ ಸುರಿದಿದ್ದ. ಕೊಠಡಿ ಬಾಗಿಲು ಹಾಕಿಕೊಂಡು ಹೊರಬಂದಿದ್ದ ಆರೋಪಿ, ಕಿಟಕಿ ಬಳಿ ನಿಂತು ಬೆಂಕಿಪೊಟ್ಟಣದಿಂದ ಕಡ್ಡಿ ಗೀರಿ ಬೆಂಕಿ ಹಚ್ಚಿ ಪರಾರಿಯಾಗಿದ್ದ' ಎಂದೂ ಅವರು ತಿಳಿಸಿದರು.

'ಆಯೀಷಾ ಅವರ ಮೈಗೆ ಬೆಂಕಿ ಹೊತ್ತಿಕೊಂಡು ಉರಿಯುತ್ತಿತ್ತು. ನಂತರ, ಇಡೀ ಕೊಠಡಿಗೆ ಬೆಂಕಿ ಆವರಿಸಿಕೊಂಡಿತ್ತು. ಬೆಂಕಿ ಕಂಡ ಸ್ಥಳೀಯರು, ಬಾಗಿಲು ಮುರಿದು ಒಳಗೆ ಹೋಗಿ ಆಯೀಷಾ ಅವರನ್ನು ರಕ್ಷಿಸಿ ವಿಕ್ಟೋರಿಯಾ ಆಸ್ಪತ್ರೆಗೆ ದಾಖಲಿಸಿದ್ದರು. ಆದರೆ, ಚಿಕಿತ್ಸೆಗೆ ಸ್ಪಂದಿಸದೇ ಆಯೀಷಾ ಅಸುನೀಗಿದ್ದರು. ಅವರ ಸಾವಿನ ನಂತರ ನಾಪತ್ತೆಯಾಗಿದ್ದ ನಾಸೀರ್ ಮೇಲೆಯೇ ಅನುಮಾನ ದಟ್ಟವಾಗಿತ್ತು. ಆದರೆ, ಆತನ ಮೊಬೈಲ್ ಸ್ವಿಚ್ ಆಫ್ ಆಗಿತ್ತು. ಕೆಲ ಪುರಾವೆಗಳ ಮೂಲಕ ಸಿಕ್ಕ ಸುಳಿವು ಆಧರಿಸಿ ಆತನಿರುವ ವಿಳಾಸ ಪತ್ತೆ ಮಾಡಲಾಗಿತ್ತು' ಎಂದೂ ಅಧಿಕಾರಿ ಹೇಳಿದರು.

ಈ ವಾರದೊಳಗೆ ಮಕ್ಕಳ ಪ್ರವೇಶಕ್ಕೆ ಅವಕಾಶ • ಶೀಘ್ರವೇ ರೈಲಿನ ಚುಕುಬುಕು ಸದ್ದು

ಚಿಣ್ಣರ ರಂಜಿಸಲು ಬಾಲಭವನ ಸಜ್ಜು

• ಮನೋಹರ್ ಎಂ.

ಬೆಂಗಳೂರು: ಕೋವಿಡ್‌ನಿಂದ ಬಾಲಭವನದಲ್ಲಿ ನಿಶ್ಯಬ್ದವಾಗಿದ್ದ ಚಿಣ್ಣರ ಕಲರವ ಮತ್ತೆ ಶುರುವಾಗಲಿದೆ. ಒಂದೂವರೆ ವರ್ಷದ ನಂತರ ಮಕ್ಕಳನ್ನು ಬರಮಾಡಿಕೊಳ್ಳಲು ಕಬ್ಬನ್ ಉದ್ಯಾನದಲ್ಲಿರುವ ಜವಾಹರ ಬಾಲಭವನ ಸಜ್ಜಾಗಿದೆ.

ನಗರದಲ್ಲಿ ಮಕ್ಕಳ ಆಕರ್ಷಣೆಯ ಕೇಂದ್ರವಾಗಿರುವ ಬಾಲಭವನದಲ್ಲಿ ಸದಾ ಮಕ್ಕಳ ಚಟುವಟಿಕೆ ನಡೆಯುತ್ತಿತ್ತು. ಪೋಷಕರು ಮಕ್ಕಳನ್ನು ಮನರಂಜಿಸಲು ಕುಟುಂಬದೊಂದಿಗೆ ಇಲ್ಲಿಗೆ ಬರುತ್ತಿದ್ದರು. ಆದರೆ, ಕೋವಿಡ್ ನಿಯಂತ್ರಣದ ಕಾರಣದಿಂದ ಬಾಲಭವನವನ್ನು ಕಳೆದ ವರ್ಷ ಮುಚ್ಚಲಾಗಿತ್ತು.

12 ಎಕರೆ ವಿಸ್ತೀರ್ಣದಲ್ಲಿರುವ ಬಾಲಭವನದ ಆವರಣದಲ್ಲಿ ಮಕ್ಕಳನ್ನು ರಂಜಿಸುವ ಹಾಗೂ ರೈಲು ಪ್ರಯಾಣದ ಅನುಭವ ಕಟ್ಟಿಕೊಡುವ ಉದ್ದೇಶದಿಂದ ಆರಂಭಿಸಿದ್ದ ಪುಟಾಣಿ ರೈಲಿನ ಸಂಚಾರವೂ ತಾಂತ್ರಿಕ ಕಾರಣಗಳಿಂದ ನಿಂತಿತ್ತು. ಸದ್ಯ ರೈಲ್ವೆ ಇಲಾಖೆಯು ಪುಟಾಣಿಗಳ ರೈಲಿನ ದುರಸ್ತಿ ಕಾರ್ಯ ಪೂರ್ಣಗೊಳಿಸಿದೆ. ರೈಲು ಸಂಚಾರಕ್ಕಾಗಿ ಹಳಿಗಳನ್ನು ಅಂದಗೊಳಿಸುವ ಕಾರ್ಯದಲ್ಲಿ ಕೆಲಸಗಾರರು ತೊಡಗಿದ್ದು, ರೈಲಿನ 'ಚುಕುಬುಕು..' ಸದ್ದು ಶೀಘ್ರವೇ ಮೊಳಗಲಿದೆ.

'ಕಳೆದ ವರ್ಷ ಕೋವಿಡ್ ತೀವ್ರತೆ ಹೆಚ್ಚಾಗಿದ್ದರಿಂದ ಬಾಲಭವನಕ್ಕೆ ಮಕ್ಕಳ ಪ್ರವೇಶ ನಿರ್ಬಂಧಿಸಲಾಗಿತ್ತು. ವರ್ಷದಿಂದ ಆವರಣವೂ ಮಕ್ಕಳಿಲ್ಲದೆ ಮಂಕಾಗಿತ್ತು. ಸರ್ಕಾರದ ಮಾರ್ಗಸೂಚಿಗಳ ಅನ್ವಯ ಬಾಲಭವನ ಪುನರಾರಂಭಕ್ಕೆ 15 ದಿನಗಳಿಂದ ಸಿದ್ಧತೆಗಳು ನಡೆಯುತ್ತಿವೆ. ಈ ವಾರದೊಳಗೆ ಮಕ್ಕಳು ಎಂದಿನಂತೆ ಬಾಲಭವನಕ್ಕೆ ಬಂದು ಸಂಭ್ರಮಿಸಬಹುದು' ಎಂದು ಜವಾಹರ ಬಾಲಭವನ ಸೊಸೈಟಿಯ ಅಧ್ಯಕ್ಷೆ ಚಿಕ್ಕಮ್ಮ ಬಸವರಾಜ್ 'ಪ್ರಜಾವಾಣಿ'ಗೆ ತಿಳಿಸಿದರು.

'ಪುಟಾಣಿ ರೈಲಿನ ಎಂಜಿನ್ ಕಳೆದ ವರ್ಷವೇ ಬದಲಾಯಿಸಲಾಗಿದೆ. ತಾಂತ್ರಿಕ ದೋಷಗಳನ್ನೂ ಸರಿಪಡಿಸಲಾಗಿದೆ. ಮಕ್ಕಳ ಪ್ರಯಾಣಕ್ಕೆ ಯಾವುದೇ ಸಮಸ್ಯೆ ಆಗದಂತೆ ಹಳಿಗಳನ್ನು ಸ್ವಚ್ಛಗೊಳಿಸಿದ್ದೇವೆ. ಕೆಲವು ಕಡೆ ಹಳಿಯ ಪಕ್ಕ ಬೆಳೆದಿದ್ದ ಗಿಡ-ಗಂಟಿಗಳನ್ನೂ ತೆರವು ಮಾಡಲಾಗಿದೆ' ಎಂದರು.

'ಬಾಲಭವನ ಪ್ರವೇಶಿಸಲು ಕೆಲವು ನಿರ್ಬಂಧಗಳನ್ನು ತಾತ್ಕಾಲಿಕವಾಗಿ ಮುಂದುವರಿಸಲಾಗುವುದು. 5 ವರ್ಷದೊಳಗಿನ ಮಕ್ಕಳು, ಗರ್ಭಿಣಿಯರು ಹಾಗೂ 65 ವರ್ಷ ಮೇಲ್ಪಟ್ಟವರಿಗೆ ಸದ್ಯಕ್ಕೆ ಬಾಲಭವನ ಪ್ರವೇಶಿಸಲು ಅವಕಾಶವಿಲ್ಲ. ಪ್ರವೇಶ ದ್ವಾರಗಳಲ್ಲಿ ಸ್ಯಾನಿಟೈಸರ್ ಒದಗಿಸಲಿದ್ದೇವೆ. ದೇಹದ ಉಷ್ಣಾಂಶ ತಪಾಸಣೆಗೆ ವ್ಯವಸ್ಥೆ ಇರಲಿದೆ. ಇಲ್ಲಿಗೆ ಬರುವ ಎಲ್ಲರೂ ಮಾಸ್ಕ್ ಧರಿಸುವುದು ಕಡ್ಡಾಯ' ಎಂದೂ ಹೇಳಿದರು.

ಸಭಾಂಗಣದ ದುರಸ್ತಿ ಪೂರ್ಣ: ಬಾಲಭವನದ ಹಳೆಯ ಕಟ್ಟಡದಲ್ಲಿರುವ ಸಭಾಂಗಣವನ್ನೂ ದುರಸ್ತಿ ಮಾಡಲಾಗಿದೆ. ಸಭಾಂಗಣದಲ್ಲಿ ಮಳೆ ನೀರು ಸೋರಿಕೆಯನ್ನು ಸರಿಪಡಿಸಲಾಗಿದ್ದು, ಬಣ್ಣ ಹಚ್ಚಿ ಮೆರುಗು ಹೆಚ್ಚಿಸಲಾಗಿದೆ ಎಂದು ಬಾಲಭವನದ ಅಧಿಕಾರಿಗಳು ತಿಳಿಸಿದರು.





ಬಾಲಭವನದ ಆವರಣದಲ್ಲಿ ಪುಟಾಣಿ ರೈಲು ಸಂಚರಿಸುವ ಹಳಿಯನ್ನು ಕಾರ್ಮಿಕರು ಸ್ವಚ್ಛಗೊಳಿಸುತ್ತಿರುವುದು (ಎಡಚಿತ್ರ), ಬಾಲಭವನದಲ್ಲಿ ಕಳೆಗುಂದಿದ್ದ ಮಕ್ಕಳ ಮನರಂಜನಾ ಆಟಿಕೆಗಳಿಗೆ ಕಾರ್ಮಿಕರು ಬಣ್ಣ ಹಚ್ಚುತ್ತಿರುವುದು ಪ್ರಜಾವಾಣಿ ಚಿತ್ರಗಳು /ರಂಜು ಪಿ.

ಪ್ರಜಾವಾಣಿ ವಿಶೇಷ

ಮತ್ತೆ ಬರಲಿದೆ 'ಮಕ್ಕಳ ಹಬ್ಬ'

ಮಕ್ಕಳ ದಿನಾಚರಣೆ ಅಂಗವಾಗಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ವತಿಯಿಂದ ಬಾಲಭವನದಲ್ಲಿ ಮಕ್ಕಳ ಹಬ್ಬ ಆಯೋಜಿಸಲಾಗುತ್ತಿತ್ತು. ಕಾರಣಾಂತರಗಳಿಂದ ಮಕ್ಕಳ ಹಬ್ಬ ಇತ್ತೀಚಿನ ವರ್ಷಗಳಲ್ಲಿ ನಡೆದಿರಲಿಲ್ಲ. ಮುಂದಿನ ವರ್ಷ ಮಕ್ಕಳ ಹಬ್ಬವನ್ನು ಎಂದಿನಂತೆ ಆಯೋಜಿಸುವ ಉದ್ದೇಶವಿದೆ ಎನ್ನಲಾಗಿದೆ.



ಚಿಕ್ಕಮ್ಮ ಬಸವರಾಜ್

'ಬಾಲಭವನದಲ್ಲಿ ಈ ಬಾರಿ ಮಕ್ಕಳ ದಿನಾಚರಣೆ ಆಚರಿಸಲು ಸಾಧ್ಯವಾಗಲಿಲ್ಲ. ಈ ಕಾರ್ಯಕ್ರಮವನ್ನು ಜನವರಿಯಲ್ಲಿ ಆಯೋಜಿಸುವ ಚಿಂತನೆ ಇದೆ. ಮಕ್ಕಳ ಹಬ್ಬವೂ ಮುಂದಿನ ವರ್ಷದಿಂದ ನಡೆಯುವ ಸಾಧ್ಯತೆ ಇದೆ' ಎಂದು ಚಿಕ್ಕಮ್ಮ ಬಸವರಾಜ್ ಹೇಳಿದರು.

ಬೋಟಿಂಗ್‌ಗೆ ಮರುಜೀವ

ಬಾಲಭವನ ಆವರಣದಲ್ಲಿರುವ ಸಣ್ಣ ಕೆರೆಯಲ್ಲಿ ಈ ಹಿಂದೆ ಮಕ್ಕಳಿಗಾಗಿ ಬೋಟಿಂಗ್ ವ್ಯವಸ್ಥೆ ಮಾಡಲಾಗಿತ್ತು. ಕಾರಣಾಂತರಗಳಿಂದ 2008ರಲ್ಲಿ ಬೋಟಿಂಗ್ ನಿಲ್ಲಿಸಲಾಗಿತ್ತು. ಸ್ಮಾರ್ಟ್‌ಸಿಟಿ ಯೋಜನೆಯಡಿ ಬಾಲಭವನದಲ್ಲೂ ವಿವಿಧ ಅಭಿವೃದ್ಧಿ ಕಾಮಗಾರಿಗಳು ನಡೆಯಲಿದ್ದು, ಕೆರೆಯನ್ನು ಅಭಿವೃದ್ಧಿಪಡಿಸಿ, ಹೊಸ ಬೋಟ್‌ಗಳ ಸೇರ್ಪಡೆಯೊಂದಿಗೆ ಬೋಟಿಂಗ್‌ಗೆ ಮರುಜೀವ ನೀಡುವುದಾಗಿ ಮೂಲಗಳು ತಿಳಿಸಿವೆ.

'ಸ್ವಾತಂತ್ರ್ಯ ಲಭಿಸಿ 75 ವರ್ಷ ಗತಿಸಿದರೂ ಜಾತೀಯತೆ ಅಳಿದಿಲ್ಲ'

ನವದೆಹಲಿ (ಪಿಟಿಐ): ಜಾತೀಯತೆ ಪ್ರೇರಿತ ಹಿಂಸಾಕೃತ್ಯಗಳು ಇನ್ನೂ ನಡೆಯುತ್ತಿವೆ. ದೇಶಕ್ಕೆ ಸ್ವಾತಂತ್ರ್ಯ ಲಭಿಸಿ 75 ವರ್ಷಗಳು ಗತಿಸಿದರೂ ಜಾತಿ ಪದ್ಧತಿ ನಿರ್ಮೂಲನೆಯಾಗಿಲ್ಲ ಎಂಬುದನ್ನು ಇಂಥ ಘಟನೆಗಳು ತೋರಿಸುತ್ತವೆ ಎಂದು ಸುಪ್ರೀಂ ಕೋರ್ಟ್ ಕಳವಳ ವ್ಯಕ್ತಪಡಿಸಿದೆ.

1991ರಲ್ಲಿ ಉತ್ತರ ಪ್ರದೇಶದಲ್ಲಿ ಮರ್ಯಾದೆಗೇಡು ಹತ್ಯೆ ನಡೆದಿತ್ತು. ಮಹಿಳೆ ಸೇರಿ ಮೂವರನ್ನು ಕೊಲೆ ಮಾಡಲಾಗಿತ್ತು. ಈ ಪ್ರಕರಣಕ್ಕೆ ಸಂಬಂಧಿಸಿ ಸಲ್ಲಿಕೆಯಾಗಿದ್ದ ಹಲವು ಅರ್ಜಿಗಳ ವಿಚಾರಣೆ ನಂತರ ಪ್ರಕಟಿಸಿದ ತೀರ್ಪಿನಲ್ಲಿ ಸುಪ್ರೀಂ ಕೋರ್ಟ್ ಈ ಅಭಿಪ್ರಾಯ ವ್ಯಕ್ತಪಡಿಸಿದೆ.

ನ್ಯಾಯಮೂರ್ತಿಗಳಾದ ಎಲ್. ನಾಗೇಶ್ವರರಾವ್, ಸಂಜೀವ್ ಖನ್ನಾ ಹಾಗೂ ಬಿ.ಆರ್.ಗವಾಯಿ ಅವರಿದ್ದ ನ್ಯಾಯಪೀಠ ಈ ಅರ್ಜಿಗಳ ವಿಚಾರಣೆ ನಡೆಸಿತ್ತು.



'ಜಾತಿ ಹೆಸರಿನಲ್ಲಿ ನಡೆಯುವ ಇಂಥ ಘೋರ ಅಪರಾಧಗಳನ್ನು ನಾಗರಿಕ ಸಮಾಜ ಬಲವಾಗಿ ತಿರಸ್ಕರಿಸಬೇಕು' ಎಂದೂ ಸುಪ್ರೀಂ ಕೋರ್ಟ್ ತೀರ್ಪಿನಲ್ಲಿ ಹೇಳಿದೆ.

'ಮರ್ಯಾದೆಗೇಡು ಹತ್ಯೆಗಳನ್ನು ತಡೆಯಲು ಕೈಗೊಳ್ಳಬೇಕಾದ ಕಠಿಣ ಕ್ರಮಗಳ ಕುರಿತು ಕೋರ್ಟ್ ಈ ಹಿಂದೆಯೇ ಹಲವು ನಿರ್ದೇಶನಗಳನ್ನು ನೀಡಿದೆ. ಈ ನಿರ್ದೇಶನಗಳನ್ನು ಯಾವುದೇ ವಿಳಂಬವಿಲ್ಲದೇ ಅನುಷ್ಠಾನಗೊಳಿಸಬೇಕು' ಎಂದು ಸೂಚಿಸಿದೆ.

'ಇಂಥ ಪ್ರಕರಣಗಳಲ್ಲಿ ಸಾಕ್ಷಿಗಳನ್ನು ರಕ್ಷಿಸುವಲ್ಲಿ ಸರ್ಕಾರಗಳ ಪಾತ್ರ ಮಹತ್ವದ್ದು. ಅದರಲ್ಲೂ, ಅಧಿಕಾರದಲ್ಲಿರುವವರು, ಹಣ ಮತ್ತು ತೋಳ್ಬಲದ ಪ್ರಭಾವ ಬೀರುವವರನ್ನು ಒಳಗೊಂಡ ಪ್ರಕರಣಗಳಲ್ಲಿ ಸಾಕ್ಷಿಗಳಿಗೆ ರಕ್ಷಣೆ ನೀಡುವುದು ಮುಖ್ಯ' ಎಂದು ನ್ಯಾಯಪೀಠ ಹೇಳಿದೆ.

'ಸಾಕ್ಷಿಗಳು ಪ್ರತಿಕೂಲ ಹೇಳಿಕೆ ನೀಡಲು ಅವರಿಗೆ ಸೂಕ್ತ ರಕ್ಷಣೆ ಸಿಗದಿರುವುದೇ ಕಾರಣ. ಇದು ಕಟು ವಾಸ್ತವ' ಎಂದೂ ಅದು ಹೇಳಿತು.

'ಜಾತಿ ಆಧಾರಿತ ಆಚರಣೆಗಳು ಮತಾಂಧತೆಯನ್ನು ಪೋಷಿಸುತ್ತವೆ. ಇಂಥ ಆಚರಣೆಗಳು ಈಗಲೂ ಜೀವಂತವಾಗಿವೆ. ಎಲ್ಲರೂ ಸಮಾನ ಎಂಬ ಸಂವಿಧಾನದ ಆಶಯಕ್ಕೆ ಇಂಥ ಆಚರಣೆಗಳೇ ಅಡ್ಡಿಯಾಗುತ್ತಿವೆ' ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿದೆ.

ಈ ಪ್ರಕರಣದ 23 ಅಪರಾಧಿಗಳಿಗೆ ಶಿಕ್ಷೆ ವಿಧಿಸಿ, ಮೂವರು ಆರೋಪಿಗಳನ್ನು ಖುಲಾಸೆಗೊಳಿಸಿ ಅಲಹಾಬಾದ್ ಹೈಕೋರ್ಟ್ ನೀಡಿದ್ದ ತೀರ್ಪನ್ನು ನ್ಯಾಯಪೀಠ ಎತ್ತಿ ಹಿಡಿಯಿತು.

ಪಿಆರ್‌ಆರ್‌ಗೆ ಭೂಸ್ವಾಧೀನ: ಬಿಡಿಎಗೆ 'ಸುಪ್ರೀಂ' ಸೂಚನೆ

ಪ್ರಜಾವಾಣಿ ವಾರ್ತೆ

ನವದೆಹಲಿ: 'ಪೆರಿಫೆರಲ್ ವರ್ತುಲ ರಸ್ತೆ' (ಪಿಆರ್‌ಆರ್) ನಿರ್ಮಾಣಕ್ಕೆ ಭೂಸ್ವಾಧೀನ ಮಾಡಿಕೊಂಡು, ಯೋಜನೆ ಅನುಷ್ಠಾನಗೊಳಿಸುವಂತೆ ಕರ್ನಾಟಕ ಸರ್ಕಾರ ಹಾಗೂ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ (ಬಿಡಿಎ) ಸುಪ್ರೀಂಕೋರ್ಟ್ ನಿರ್ದೇಶನ ನೀಡಿದೆ.

ನ್ಯಾಯಮೂರ್ತಿಗಳಾದ ಎಸ್. ಅಬ್ದುಲ್ ನಜೀರ್, ಸಂಜೀವ್ ಖನ್ನಾ ಅವರಿದ್ದ ನ್ಯಾಯಪೀಠ ಅರ್ಜಿ ವಿಚಾರಣೆ ನಡೆಸಿತು. ರಾಜ್ಯ ಸರ್ಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಹಾಗೂ ನಗರಾಭಿವೃದ್ಧಿ ಇಲಾಖೆ ಈ ಸಂಬಂಧ ಸಲ್ಲಿಸಿದ ಅಫಿಡವಿಟ್ ಪರಿಶೀಲಿಸಿದ ನಂತರ ನ್ಯಾಯಪೀಠ ಈ ನಿರ್ದೇಶನ ನೀಡಿತು.

'ಬೆಂಗಳೂರು ನಗರ ಎಲ್ಲ ದಿಕ್ಕುಗಳಲ್ಲಿಯೂ ಬೃಹತ್ತಾಗಿ ಬೆಳೆದಿದೆ. ನಗರದ ಈ ಬೆಳವಣಿಗೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ಒಟ್ಟು 116 ಕಿ.ಮೀ. ಉದ್ದದ ಪೆರಿಫೆರಲ್ ವರ್ತುಲ ರಸ್ತೆ ನಿರ್ಮಿಸುವ ಸಂಬಂಧ 2006ರ ನವೆಂಬರ್ 27ರಂದು ಬಿಡಿಎ ಪ್ರಸ್ತಾವನೆ ಸಲ್ಲಿಸಿತ್ತು' ಎಂದು ರಾಜ್ಯ ಸರ್ಕಾರ ಅಫಿಡವಿಟ್‌ನಲ್ಲಿ ವಿವರಿಸಿದೆ.

'ನಗರ ಭೌಗೋಳಿಕವಾಗಿ 2,196 ಚದರ ಕಿ.ಮೀ.ನಷ್ಟು ಬೆಳೆದಿದೆ. ನಗರದಲ್ಲಿ 80 ಲಕ್ಷಕ್ಕೂ ಅಧಿಕ ವಾಹನಗಳಿವೆ. ಬೆಂಗಳೂರು ರಾಜಧಾನಿಯೂ ಆಗಿರುವುದರಿಂದ ರಾಜ್ಯದ ವಿವಿಧ ಭಾಗಗಳಿಂದ, ಬೇರೆ ರಾಜ್ಯಗಳಿಂದ ನಿತ್ಯವೂ ಸಾವಿರಾರು ವಾಹನಗಳು ನಗರಕ್ಕೆ ಬರುತ್ತವೆ. ಹೀಗಾಗಿ ನಗರದ ರಸ್ತೆಗಳು ಹಾಗೂ ಸಾರ್ವಜನಿಕ ವ್ಯವಸ್ಥೆ ಮೇಲೆ ವಿಪರೀತ ಒತ್ತಡ ಬೀಳುತ್ತಿದೆ' ಎಂದೂ ವಿವರಿಸಲಾಗಿದೆ.

'ಯೋಜನೆ ಅನುಷ್ಠಾನಕ್ಕೆ 216 ಎಕರೆ 18 ಗುಂಟೆ ಅಗತ್ಯ ಇದ್ದು, 2007ರಲ್ಲಿ ಈ ಕುರಿತು ಅಧಿಸೂಚನೆ ಹೊರಡಿಸಲಾಗಿತ್ತು. 2020ರ ಡಿಸೆಂಬರ್‌ನಲ್ಲಿ ಮಾಡಿದ್ದ ಯೋಜನಾ ವೆಚ್ಚ ₹ 15,475 ಕೋಟಿ ಎಂದು ಅಂದಾಜಿಸಲಾಗಿತ್ತು. ಪರಿಷ್ಕೃತ ಅಂದಾಜಿನಂತೆ, ವೆಚ್ಚವು ಈಗ ₹ 21,091 ಕೋಟಿ ಆಗುವುದು' ಎಂದೂ ಕರ್ನಾಟಕ ರಾಜ್ಯ ಸರ್ಕಾರ ಅಫಿಡವಿಟ್‌ನಲ್ಲಿ ತಿಳಿಸಿದೆ.

'ಸುಪ್ರಿಂ'ಗೆ ಬಿಬಿಎಂಪಿ ಅರ್ಜಿ: ರಾಜ್ಯ ಸರ್ಕಾರಕ್ಕೆ ನೋಟಿಸ್

ನವದೆಹಲಿ: ಬೆಂಗಳೂರಿನ ಮಹಾಲಕ್ಷ್ಮಿಪುರದಲ್ಲಿರುವ ಕಸ ವಿಲೇವಾರಿ ಮತ್ತು ಸಂಸ್ಕರಣಾ ಘಟಕ ಮುಚ್ಚುವಂತೆ ಹೈಕೋರ್ಟ್ ನೀಡಿರುವ ಆದೇಶವನ್ನು ಪ್ರಶ್ನಿಸಿ ಬಿಬಿಎಂಪಿ ಸಲ್ಲಿಸಿರುವ ಅರ್ಜಿಗೆ ಸಂಬಂಧಿಸಿ ಪ್ರತಿಕ್ರಿಯೆ ಸಲ್ಲಿಸುವಂತೆ ಕರ್ನಾಟಕ ಸರ್ಕಾರಕ್ಕೆ ಸುಪ್ರೀಂಕೋರ್ಟ್ ಸೂಚಿಸಿದೆ.

ನ್ಯಾಯಮೂರ್ತಿಗಳಾದ ವಿನೀತ್ ಸರನ್ ಹಾಗೂ ಅನಿರುದ್ಧ ಬೋಸ್ ಅವರಿರುವ ನ್ಯಾಯಪೀಠ ಈ ಸೂಚನೆ ನೀಡಿದ್ದು, ಎರಡು ವಾರಗಳ ಒಳಗಾಗಿ ಉತ್ತರಿಸುವಂತೆ ನಿರ್ದೇಶನ ನೀಡಿದೆ.

ಘಟಕ ಇರುವ ಸ್ಥಳದಲ್ಲಿ ಬಯೋ ಮಿಥೇನೇಷನ್ ಘಟಕ ಸ್ಥಾಪಿಸಲು ಹಾಗೂ ಈ ಸ್ಥಳವನ್ನೇ ಘನ ತ್ಯಾಜ್ಯ ಸಾಗಣೆಗೆ ಬಳಸಲು ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಅನುಮತಿ ತೆಗೆದುಕೊಳ್ಳದ ಕಾರಣ, ಘಟಕವನ್ನು ಸ್ಥಗಿತಗೊಳಿಸುವಂತೆ ಕರ್ನಾಟಕ ಹೈಕೋರ್ಟ್ ಬಿಬಿಎಂಪಿಗೆ ನಿರ್ದೇಶಿಸಿತ್ತು. ಮೂರು ಶಾಲೆಗಳು ಹಾಗೂ ಒಂದು ಆಸ್ಪತ್ರೆ ಸಮೀಪದಲ್ಲಿಯೇ ಈ ಘಟಕ ಇದೆ. ಘಟಕವನ್ನು ಸ್ಥಳಾಂತರಿಸಿ, ಈ ಜಾಗವನ್ನು ಮೈದಾನವನ್ನಾಗಿ ಅಭಿವೃದ್ಧಿಪಡಿಸಲು ಸಂಬಂಧಿಸಿದವರಿಗೆ ನಿರ್ದೇಶನ ನೀಡುವಂತೆ ಕೋರಿ ಸ್ಥಳೀಯ ನಿವಾಸಿಗಳು ಸಹ ಹೈಕೋರ್ಟ್ ಮೆಟ್ಟಿಲೇರಿದ್ದರು.

ಸಿದ್ಧಲಿಂಗ ಸ್ವಾಮೀಜಿಗೆ 'ಕೃಷಿ ಚೇತನ' ಪ್ರಶಸ್ತಿ

ಜಮಖಂಡಿ: ಬೆಳಗಾವಿ ಜಿಲ್ಲೆ ಅಥಣಿ ತಾಲ್ಲೂಕಿನ ಮಲಹಾಬಾದ ದೇವದಾಸಿ ವಿಮೋಚನಾ ಸಂಘ 2020ನೇ ಸಾಲಿನ ಬಸವಚೇತನ ಪ್ರಶಸ್ತಿ, ಲಿಂಗಸಗೂರು ಶ್ರೀ ವಿಜಯ ಮಹಾಂತೇಶ್ವರ ಶಾಖಾ ಅನುಭವ ಮಂಟಪದ ಸಿದ್ಧಲಿಂಗ ಸ್ವಾಮೀಜಿ ಕೃಷಿಚೇತನ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ ಎಂದು ಬಸವ ಜ್ಞಾನ ಗುರುಕುಲದ ಅಧ್ಯಕ್ಷ ಶರಣ ಡಾ. ಈಶ್ವರ ಮಂಟೂರ ತಿಳಿಸಿದರು.

ಕಲಾ ಚೇತನ ಪ್ರಶಸ್ತಿಗೆ ಧಾರವಾಡದ ಹಿಂದುಸ್ತಾನಿ ಗಾಯಕ ಪಂ. ಡಾ. ಎಂ. ವೆಂಕಟೇಶಕುಮಾರ ಆಯ್ಕೆಯಾಗಿದ್ದಾರೆ. 2021ನೇ ಸಾಲಿನ ಬಸವಚೇತನ ಪ್ರಶಸ್ತಿಗೆ ಕರ್ನಾಟಕ ಗಡಿಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಡಾ. ಸಿ. ಸೋಮಶೇಖರ, ಕೃಷಿಚೇತನ ಪ್ರಶಸ್ತಿಗೆ ಮುಳಗುಂದದ ಕೃಷಿ ಮಹಿಳೆ ಮಂಗಳಾ ಕಿರಣ ನೀಲಗುಂದ, ಕಲಾಚೇತನ ಪ್ರಶಸ್ತಿಗೆ ಚಲನಚಿತ್ರ ಕಲಾವಿದ ರಾಜೇಶ್ ಆಯ್ಕೆಯಾಗಿದ್ದಾರೆ ಎಂದರು.



ಡಾ.ಸಿ. ಸೋಮಶೇಖರ




ಮಂಗಳಾ ನೀಲಗುಂದ



ಸಿದ್ಧಲಿಂಗ ಸ್ವಾಮೀಜಿ



ರಾಜೇಶ್



ಡಾ.ಎಂ. ವೆಂಕಟೇಶಕುಮಾರ

ಹುನ್ನೂರ-ಮಧುರಖಂಡಿಯ ಬಸವ ಜ್ಞಾನ ಗುರುಕುಲದಲ್ಲಿ ಡಿ.25ರಿಂದ 27ರ ವರೆಗೆ ನಡೆಯುವ ಶರಣ ಸಂಸ್ಕೃತಿ ಉತ್ಸವ ಜಾನಪದ ಕಲಾ ಮಹೋತ್ಸವ-2021ರ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಮಾಹಿತಿ ನೀಡಿದ್ದಾರೆ. ಬಸವ ಜ್ಞಾನ ಗುರುಕುಲ ನೀಡುವ ಈ ಪ್ರಶಸ್ತಿಗಳು ₹ 10 ಸಾವಿರ ನಗದು ಬಹುಮಾನ ಹೊಂದಿವೆ.

'ಸುಧಾರಣಾ ಕಾಯ್ದೆ ಜಾರಿಗೆ ರೈತರು ಒತ್ತಾಯಿಸುವ ದಿನ ಬರಲಿದೆ'

ಬೆಂಗಳೂರು: 'ಒಂದಲ್ಲ ಒಂದು ದಿನ ರೈತರಿಗೆ ಕೃಷಿ ಸುಧಾರಣಾ ಕಾಯ್ದೆಗಳ ಮಹತ್ವ ಅರ್ಥವಾಗಲಿದೆ. ಆಗ ಅವರೇ ಬೀದಿಗಿಳಿದು ಈ ಕಾಯ್ದೆಗಳನ್ನು ಜಾರಿಗೊಳಿಸಲು ಒತ್ತಾಯಿಸುವ ದಿನ ಬರಲಿದೆ' ಎಂದು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ ಹೇಳಿದ್ದಾರೆ.

ನಗರದಲ್ಲಿ ಭಾನುವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, ಕೃಷಿ ಸುಧಾರಣೆಗೆ ಸಂಬಂಧಿಸಿದ ಮೂರು ಕಾಯ್ದೆಗಳು ರೈತ ವಿರೋಧಿಯಲ್ಲ. ರೈತ ವಿರೋಧಿಯಾದ ಯಾವುದೇ ಅಂಶಗಳೂ ಅದರಲ್ಲಿ ಇರಲಿಲ್ಲ. ಆದರೆ ಕೆಲವರಿಗೆ ಕಾಯಿದೆ ಬಗ್ಗೆ ಮನವರಿಕೆ ಮಾಡಲು ಸಾಧ್ಯವಾಗಲಿಲ್ಲ ಎಂದು ಅವರು ಹೇಳಿದರು.

ದೇಶ ವಿರೋಧಿ ಶಕ್ತಿಗಳು ಈ ಕಾಯ್ದೆ ಬಗ್ಗೆ ತಪ್ಪು ಅಭಿಪ್ರಾಯ ಮೂಡಿಸಿ ದೇಶದ ವಿರುದ್ಧ ಬಳಸಿಕೊಳ್ಳಬಾರದೆಂಬ ದೃಷ್ಟಿಯಿಂದ ಅದನ್ನು ಹಿಂದಕ್ಕೆ ಪಡೆಯಲಾಗಿದೆ. ರೈತರು ತಾವು ಬೆಳೆದ ಉತ್ಪನ್ನವನ್ನೂ ಎಲ್ಲಿ ಬೇಕಾದರೂ ಉತ್ತಮ ಬೆಲೆಗೆ ಮಾರಾಟ ಮಾಡಲು ಅವಕಾಶ ನೀಡುವುದು ರೈತ ವಿರೋಧಿ ಕ್ರಮವೇ ಎಂದು ರವಿ ಪ್ರಶ್ನಿಸಿದರು.

ಕೃಷಿ ಕಾಯ್ದೆ ರೈತ ವಿರೋಧಿ ಎಂಬ ಭ್ರಮೆಯನ್ನು ಹುಟ್ಟಿಸುವ ಕೆಲಸವನ್ನು ಕೆಲವರು ರಾಜಕೀಯ ಪ್ರೇರಿತವಾಗಿ ಮಾಡಿದ್ದಾರೆ. ಇದು ದುರದೃಷ್ಟಕರ ಎಂದರು.

ಟ್ಯಾನರಿ ರಸ್ತೆಯಲ್ಲಿನ ಇಟಿಪಿ ಮೇಲ್ದರ್ಜೆಗೆ: ಎನ್‌ಜಿಟಿಗೆ ಬಿಬಿಎಂಪಿ ಮಾಹಿತಿ

ನವದೆಹಲಿ: ಟ್ಯಾನರಿ ರಸ್ತೆಯಲ್ಲಿನ ಕಸಾಯಿಖಾನೆ ಬಳಿ ಇರುವ ತ್ಯಾಜ್ಯ ನೀರು ಸಂಸ್ಕರಣಾ ಘಟಕವನ್ನು (ಇಟಿಪಿ) ಮೇಲ್ದರ್ಜೆಗೇರಿಸಲಾಗುವುದು. ಕಸಾಯಿಖಾನೆಯ ತ್ಯಾಜ್ಯ ಹಲಸೂರು ಕೆರೆ ಸೇರದಂತೆ ಕ್ರಮ ಕೈಗೊಳ್ಳಲಾಗುವುದು ಎಂದು ರಾಷ್ಟ್ರೀಯ ಹಸಿರು ನ್ಯಾಯಮಂಡಳಿಗೆ (ಎನ್‌ಜಿಟಿ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ತಿಳಿಸಿದೆ.

'ಇಟಿಪಿಯನ್ನು ಮೇಲ್ದರ್ಜೆಗೇರಿಸುವ ಕಾರ್ಯ ಪೂರ್ಣಗೊಂಡ ಬಳಿಕ ತ್ಯಾಜ್ಯ ನೀರು ನೇರವಾಗಿ ಶುದ್ಧೀಕರಣ ಘಟಕವನ್ನು ಸೇರುವುದು. ಇದರಿಂದ ಯಾವುದೇ ತ್ಯಾಜ್ಯ ಇಟಿಪಿಯಲ್ಲಿ ಶೇಖರಣೆಯಾಗುವುದಿಲ್ಲ' ಎಂದು ನ್ಯಾಯಮಂಡಳಿಯ ದಕ್ಷಿಣ ಪೀಠಕ್ಕೆ ಸಲ್ಲಿಸಿರುವ ಅಫಿಡವಿಟ್‌ನಲ್ಲಿ ಬಿಬಿಎಂಪಿ ಆಯುಕ್ತ ಗೌರವ ಗುಪ್ತ ತಿಳಿಸಿದ್ದಾರೆ.

'ಟ್ಯಾನರಿ ರಸ್ತೆಯಲ್ಲಿರುವ ಕಸಾಯಿಖಾನೆ ಹಾಗೂ 50 ಕೆಎಲ್‌ಡಿ ಸಾಮರ್ಥ್ಯದ ಇಟಿಪಿ ಘಟಕದ ಕಾರ್ಯಾರಂಭಕ್ಕಾಗಿ ಪರವಾನಗಿ ನವೀಕರಣ ಅಗತ್ಯವಿದ್ದು, ಈ ಸಂಬಂಧ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಗೆ ಅರ್ಜಿ ಸಲ್ಲಿಸಲಾಗಿದೆ' ಎಂದೂ ಅವರು ತಿಳಿಸಿದ್ದಾರೆ.

ಒಳಚರಂಡಿ ಹಾಗೂ ತ್ಯಾಜ್ಯಗಳು ಹಲಸೂರು ಕೆರೆಗೆ ಸೇರುತ್ತಿರುವ ಕಾರಣ, ಕೆರೆ ನೀರು ಕಲುಷಿತಗೊಳ್ಳುತ್ತಿದೆ ಎಂಬ ಬಗ್ಗೆ ಎನ್‌ಜಿಟಿಯ ದಕ್ಷಿಣ ಪೀಠವು ಸ್ವಯಂಪ್ರೇರಿತ ದೂರು ದಾಖಲಿಸಿಕೊಂಡಿತ್ತು.

ತೆರಿಗೆ ಸಲಹೆಗಾರರ ಸಂಘಕ್ಕೆ ಆಯ್ಕೆ

ದೊಡ್ಡಬಳ್ಳಾಪುರ: ಕರ್ನಾಟಕ ರಾಜ್ಯ ತೆರಿಗೆ ಸಲಹೆಗಾರರ ಸಂಘದ ರಾಜ್ಯ ಘಟಕದ ಅಧ್ಯಕ್ಷರಾಗಿ ಎಸ್. ನಂಜುಂಡಪ್ರಸಾದ್ ಆಯ್ಕೆಯಾಗಿದ್ದಾರೆ.

ಸಂಘದ ಪದಾಧಿಕಾರಿಗಳ ಸ್ಥಾನಕ್ಕೆ ಭಾನುವಾರ ನಗರದ ಬಸವ ಭವನದಲ್ಲಿ ಚುನಾವಣೆ ನಡೆಯಿತು.

ಬೆಂಗಳೂರು ವಲಯ ಉಪಾಧ್ಯಕ್ಷರಾಗಿ ರಾಧೇಶ್ ಜಂಬಗಿ, ಮೈಸೂರು ವಲಯ ಉಪಾಧ್ಯಕ್ಷರಾಗಿ ಟಿ.ಪಿ. ಪ್ರಕಾಶ್, ಪ್ರಧಾನ ಕಾರ್ಯದರ್ಶಿಯಾಗಿ ಮುಕುಂದ ಪೋತ್ನೀಸ್, ಖಜಾಂಚಿಯಾಗಿ ಸೋಮಲಿಂಗಪ್ಪ ಸೊಲಾರಗುಪ್ಪ, ರಾಜ್ಯ ಜಂಟಿ ಕಾರ್ಯದರ್ಶಿಯಾಗಿ ಕೆ.ಸಿ. ಆನಂದ್ ಆಯ್ಕೆಯಾಗಿದ್ದಾರೆ.

ಬೆಳಗಾವಿ ವಲಯ ಉಪಾಧ್ಯಕ್ಷರಾಗಿ ಪ್ರಶಾಂತ್ ವಿ. ಹಂಚಾಟೆ, ಕಲಬುರ್ಗಿ ವಲಯ ಉಪಾಧ್ಯಕ್ಷರಾಗಿ ಪ್ರಶಾಂತ್ ಚಿಟಗೇಪರ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಬೆಂಗಳೂರು ಗ್ರಾಮಾಂತರ ಜಿಲ್ಲಾ ಘಟಕದ ಅಧ್ಯಕ್ಷ ಕೆ.ಪಿ. ಲಕ್ಷ್ಮೀನಾರಾಯಣ ಅವರು ತಿಳಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

ಎಐಡಿವೈಒ: ಶರಣಪ್ಪ ಉದ್ಬಾಳ್ ನೂತನ ಅಧ್ಯಕ್ಷ

ಕಲಬುರಗಿ: ಅಖಿಲ ಭಾರತ ಪ್ರಜಾಸತ್ತಾತ್ಮಕ ಯುವಜನ ಸಂಘಟನೆಯ (ಎಐಡಿವೈಒ) ರಾಜ್ಯ ಘಟಕದ ನೂತನ ಅಧ್ಯಕ್ಷರಾಗಿ ಶರಣಪ್ಪ ಉದ್ಬಾಳ್ ಮತ್ತು ಕಾರ್ಯದರ್ಶಿಯಾಗಿ ಸಿದ್ದಲಿಂಗ ಬಾಗೇವಾಡಿ ಆಯ್ಕೆಯಾಗಿದ್ದಾರೆ.



ಶರಣಪ್ಪ ಉದ್ಬಾಳ್

ನಗರದಲ್ಲಿ ಭಾನುವಾರ ಮುಕ್ತಾಯವಾದ ಸಂಘಟನೆಯ 5ನೇ ರಾಜ್ಯಮಟ್ಟದ ಸಮ್ಮೇಳನದಲ್ಲಿ ನೂತನ ಸಮಿತಿಯನ್ನು ಆಯ್ಕೆ ಮಾಡಲಾಯಿತು.

ಉಪಾಧ್ಯಕ್ಷರಾಗಿ ಚನ್ನಬಸವ ಜಾನೇಕಲ್ (ರಾಯಚೂರು), ವಿಜಯಕುಮಾರ್ ಹೊಸದುರ್ಗ (ಚಿತ್ರದುರ್ಗ), ಕೃಷ್ಣ (ಬೆಂಗಳೂರು), ಜಗನ್ನಾಥ್ ಎಚ್.ಎಸ್. (ಕಲಬುರಗಿ) ಹಾಗೂ ವಿನಯ್ ಸಾರಥಿ (ಬೆಂಗಳೂರು) ಅವರನ್ನು ಆಯ್ಕೆ ಮಾಡಲಾಯಿತು. ಕಚೇರಿ ಕಾರ್ಯದರ್ಶಿ ಹಾಗೂ ಖಜಾಂಚಿಯಾಗಿ ಜಯಣ್ಣ (ಬೆಂಗಳೂರು), ಸೆಕ್ರೆಟೇರಿಯೇಟ್ ಸದಸ್ಯರಾಗಿ ಭವಾನಿಶಂಕರ ಗೌಡ (ಧಾರವಾಡ), ಶ್ರೀಕಾಂತ ಕೊಂಡಗೂಳಿ (ವಿಜಯಪುರ), ಶರಣು ಗಡ್ಡಿ (ಕೊಪ್ಪಳ), ಸುನಿಲ್, ಜಗದೀಶ ವಿ.ಎನ್. (ಬಳ್ಳಾರಿ) ಹಾಗೂ ಅಂಬಿಕಾ (ಕಲಬುರಗಿ) ಆಯ್ಕೆಯಾಗಿದ್ದಾರೆ.

29 ಮಂದಿ ರಾಜ್ಯ ಕಾರ್ಯಕಾರಿ ಸಮಿತಿ ಸದಸ್ಯರನ್ನು ಹಾಗೂ 20 ಮಂದಿ ಕೌನ್ಸಿಲ್ ಸದಸ್ಯರನ್ನು ಆಯ್ಕೆ ಮಾಡಲಾಯಿತು.

ಸಂಘಟನೆಯ ರಾಷ್ಟ್ರೀಯ ಘಟಕದ ಅಧ್ಯಕ್ಷ ರಾಮಾಂಜನಪ್ಪ ಆಲ್ದಳ್ಳಿ, ಪ್ರಧಾನ ಕಾರ್ಯದರ್ಶಿ ಪ್ರತಿಭಾ ನಾಯಕ್, ನಿಕಟಪೂರ್ವ ರಾಜ್ಯ ಘಟಕದ ಅಧ್ಯಕ್ಷೆ ಎಂ. ಉಮಾದೇವಿ ಮತ್ತು ಕಾರ್ಯದರ್ಶಿ ಜಿ. ಶಶಿಕುಮಾರ್ ಇದ್ದರು.

ಮೃತ ವ್ಯಕ್ತಿಯ ಹೆಬ್ಬೆಟ್ಟು ಹಾಕಿಸಿಕೊಂಡ ಸಂಬಂಧಿಕರು!


ಮೈಸೂರು: ಇಲ್ಲಿನ ಶ್ರೀರಾಂಪುರ ನಿವಾಸಿ ಜಯಮ್ಮ ಎಂಬುವವರು ಮೃತಪಟ್ಟ ಬಳಿಕ ಅವರ ಹೆಬ್ಬೆರಳಿನ ಮುದ್ರೆಯನ್ನು ಸಂಬಂಧಿಕರು ಕೆಲ ಕಾಗದ ಪತ್ರಗಳಿಗೆ ಹಾಕಿಕೊಳ್ಳುತ್ತಿರುವ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ.

ಜಯಮ್ಮ ಅವರ ಅಕ್ಕನ ಮಗ ಸುರೇಶ್ ಎಂಬಾತನ ವಿರುದ್ಧ ಇಲ್ಲಿನ ವಿದ್ಯಾರಣ್ಯಪುರಂ ಪೊಲೀಸ್ ಠಾಣೆಯಲ್ಲಿ ಐಪಿಸಿ ಸೆಕ್ಷನ್ 420, 467, 511 ಅನ್ವಯ ಭಾನುವಾರ ಪ್ರಕರಣ ದಾಖಲಾಗಿದೆ.

'ಜಯಮ್ಮ ಅವರಿಗೆ ಮಕ್ಕಳಿರಲಿಲ್ಲ. ಇವರ ಪತಿ ಬಹಳ ಹಿಂದೆಯೇ ಮೃತಪಟ್ಟಿದ್ದರು. ನ.17ರಂದು ಜಯಮ್ಮ ಮೃತಪಟ್ಟ ಬಳಿಕ ಸುಮಾರು 7ರಿಂದ 8 ಕಾಗದ ಪತ್ರಗಳಿಗೆ ಹೆಬ್ಬೆರಳಿನ ಮುದ್ರೆಯನ್ನು ಸುರೇಶ್ ಹಾಕಿಕೊಳ್ಳುತ್ತಿದ್ದ. ಇದನ್ನು ವಿಡಿಯೊ ಮಾಡಿಕೊಂಡ ಸಂಬಂಧಿಕರೊಬ್ಬರು ದೂರು ನೀಡಿದ್ದಾರೆ' ಎಂದು ಪೊಲೀಸರು ತಿಳಿಸಿದ್ದಾರೆ.

'ಮುಂದಿನ ವಿಧಾನಸಭೆ ಚುನಾವಣೆಗೆ ಸ್ಪರ್ಧೆ'

ಮೊಳಕಾಲ್ಮುರು: ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಚಿತ್ರದುರ್ಗ ಜಿಲ್ಲೆಯ ಎಸ್‌.ಟಿ. ಮೀಸಲು ಕ್ಷೇತ್ರದಿಂದ ಸ್ಪರ್ಧಿಸುವುದು ಖಚಿತ. ಚಳ್ಳಕೆರೆ, ಮೊಳಕಾಲ್ಮುರು ಕ್ಷೇತ್ರಗಳು ಮೀಸಲು ಕ್ಷೇತ್ರವಾಗಿವೆ. ಯಾವ ಕ್ಷೇತ್ರ ಹಾಗೂ ಪಕ್ಷ ಎಂದು ಆಯ್ಕೆ ಮಾಡಲಾಗುತ್ತಿದೆ ಎಂದು ಮಾಜಿ ಸಂಸದ, ನಟ ಶಶಿಕುಮಾರ್ ಹೇಳಿದರು.



ಶಶಿಕುಮಾರ್

ತಾಲ್ಲೂಕಿನ ಹಾನಗಲ್‌ನಲ್ಲಿ ಭಾನುವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, 'ವಿಧಾನಪರಿಷತ್ ಚುನಾವಣೆ ನಂತರ ಮೊಳಕಾಲ್ಮುರಿಗೆ ಭೇಟಿ ನೀಡುತ್ತೇನೆ. ಕೆಲ ದಿನಗಳಿಂದ ಎರಡೂ ಕ್ಷೇತ್ರಗಳ ಗ್ರಾಮಗಳಿಗೆ ಭೇಟಿ ನೀಡುತ್ತಿದ್ದೇನೆ. ಹೋದ ಕಡೆ ಉತ್ತಮ ವಾತಾವರಣ ಕಂಡುಬರುತ್ತಿದೆ. ಸ್ಪರ್ಧೆ ಮಾಡಿದಲ್ಲಿ ಜನರು ಕೈಹಿಡಿಯುವ ವಿಶ್ವಾಸವಿದೆ. ಸ್ಪರ್ಧೆ ಇಂಗಿತದ ಬಗ್ಗೆ ರಾಜ್ಯ ನಾಯಕರನ್ನು ಭೇಟಿಯಾಗಿ ಮಾತನಾಡಿದ್ದು, ಅವರು ಸ್ಪಂದಿಸಿದ್ದಾರೆ. ಶೀಘ್ರ ನಿರ್ಧಾರ ಪ್ರಕಟಿಸುತ್ತೇನೆ' ಎಂದು ಹೇಳಿದರು.

ಓಮಿಕ್ರಾನ್: ಬ್ರಿಟನ್‌ನಲ್ಲಿ ಮೂರನೇ ಪ್ರಕರಣ ಪತ್ತೆ

ಲಂಡನ್ (ಪಿಟಿಐ): ಬ್ರಿಟನ್‌ನಲ್ಲಿ ರೂಪಾಂತರಿ ಓಮಿಕ್ರಾನ್ ತಳಿ ಸೋಂಕಿನ ಮೂರನೇ ಪ್ರಕರಣ ಪತ್ತೆಯಾಗಿದೆ ಎಂದು ಹೆಲ್ತ್ ಸೆಕ್ಯುರಿಟಿ ಏಜೆನ್ಸಿ ಭಾನುವಾರ ಹೇಳಿದೆ.

ಸೋಂಕು ಪ್ರಸರಣ ತಡೆಯಲು, ವಾಣಿಜ್ಯ ಪ್ರದೇಶ ಹಾಗೂ ಸಾರ್ವಜನಿಕ ಸಾರಿಗೆಗಳಲ್ಲಿ ಮಾಸ್ಕ್ ಧರಿಸುವುದನ್ನು ಮಂಗಳವಾರದಿಂದ ಕಡ್ಡಾಯಗೊಳಿಸಿ ಸರ್ಕಾರ ಆದೇಶಿಸಿದೆ.

ದಕ್ಷಿಣ ಆಫ್ರಿಕಾ ಪ್ರವಾಸ ಕೈಗೊಂಡಿದ್ದ ವ್ಯಕ್ತಿಯಲ್ಲಿ ಈ ಸೋಂಕು ದೃಢಪಟ್ಟಿದೆ.

'ಭಾರತದ ಗೌರವ ಕಳೆದ ಬಿಜೆಪಿ'

ಬೆಂಗಳೂರು: ಉತ್ತರ ಪ್ರದೇಶ ವಿಧಾನಸಭಾ ಚುನಾವಣೆಯಲ್ಲಿ ಮತ ಗಳಿಸುವುದಕ್ಕಾಗಿ ಚೀನಾದ ಬೀಜಿಂಗ್ ವಿಮಾನ ನಿಲ್ದಾಣದ ಚಿತ್ರವನ್ನು ನೋಯ್ಡಾ ವಿಮಾನ ನಿಲ್ದಾಣ ಎಂದು ಬಿಂಬಿಸಿ ನಗೆಪಾಟಲಿಗೀಡಾದ ಬಿಜೆಪಿ ಭಾರತದ ಗೌರವ ಕಳೆದಿದೆ ಎಂದು ಕಾಂಗ್ರೆಸ್ ಮುಖಂಡ ಡಾ.ಎಚ್.ಸಿ. ಮಹದೇವಪ್ಪ ಟೀಕಿಸಿದ್ದಾರೆ.

ಈ ಕುರಿತು ಭಾನುವಾರ ಸರಣಿ ಟ್ವೀಟ್ ಮಾಡಿರುವ ಅವರು, 'ಬಿಜೆಪಿಯು ಬೀಜಿಂಗ್ ವಿಮಾನ ನಿಲ್ದಾಣದ ಚಿತ್ರವನ್ನು ಫೋಟೊಶಾಪ್ ಮಾಡಿ ನೊಯ್ಡಾ ವಿಮಾನ ನಿಲ್ದಾಣ ಎಂದು ಬಿಂಬಿಸಿರುವುದನ್ನು ಚೀನಾದ ಮಾಧ್ಯಮಗಳು ಬಯಲು ಮಾಡಿವೆ. ಅಭಿವೃದ್ಧಿ ಎಂದರೆ ಸುಳ್ಳು ಹೇಳುವುದು ಎಂದು ಬಿಜೆಪಿಯವರು ನಂಬಿದ್ದಾರೆ. ಚೀನಾ ದೇಶದ ಅಭಿವೃದ್ಧಿಯ ಚಿತ್ರಗಳನ್ನು ಪ್ರಕಟಿಸಿ, ಅದನ್ನು ತಾವೇ ಮಾಡಿದ್ದೇವೆ ಎಂದು ಹೇಳಿಕೊಳ್ಳುತ್ತಿರುವುದು ನಗೆಪಾಟಲಿನ ಸಂಗತಿ' ಎಂದಿದ್ದಾರೆ.

ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅಭಿವೃದ್ಧಿ ಎಂದರೆ ಕೇವಲ ಹೆಸರು ಬದಲಾವಣೆ ಎಂದು ಭಾವಿಸಿದ್ದಾರೆ. ಅದಕ್ಕಾಗಿಯೇ ಬೀಜಿಂಗ್ ವಿಮಾನ ನಿಲ್ದಾಣದ ಹೆಸರನ್ನು ಉತ್ತರ ಪ್ರದೇಶ ಎಂದು ಬದಲಿಸಲು ಹೊರಟಂತಿದೆ. ಪ್ರಧಾನಿ ನರೇಂದ್ರ ಮೋದಿಯವರ ಫೋಟೊಶಾಪ್ ಅಭಿವೃದ್ಧಿ ತಂತ್ರದ ಆಯಸ್ಸು ಮುಗಿದಿದೆ. ಅವರು ಎಚ್ಚೆತ್ತುಕೊಂಡು ನಿಜವಾದ ಅಭಿವೃದ್ಧಿ ಕೆಲಸಗಳನ್ನು ಮಾಡಬೇಕು ಎಂದು ಟ್ವೀಟ್ ಮಾಡಿದ್ದಾರೆ.

ಪೊಲೀಸರ ವಶದಲ್ಲಿದ್ದ ವ್ಯಕ್ತಿ ಸಾವು

ನಂಜನಗೂಡು: ನಂಜನಗೂಡು ಗ್ರಾಮಾಂತರ ಪೊಲೀಸರ ವಶದಲ್ಲಿದ್ದ ತಾಲ್ಲೂಕಿನ ಬ್ಯಾಳ್ಯಾರು ಗ್ರಾಮದ ಸಿದ್ಧರಾಜು (31) ಭಾನುವಾರ ಅಸ್ವಸ್ಥಗೊಂಡು ಮೃತಪಟ್ಟಿದ್ದಾರೆ.

'ಗ್ರಾಮದ ಮಹಿಳೆಯೊಬ್ಬರ ಮನೆಯ ಮುಂದೆ ಶನಿವಾರ ರಾತ್ರಿ ಇವರು ಅತಿಯಾಗಿ ಮದ್ಯಪಾನ ಮಾಡಿ ಗಲಾಟೆ ಮಾಡಿದ್ದರು. ಪೊಲೀಸ್ ಸಹಾಯವಾಣಿ 112ಗೆ ಮಹಿಳೆ ಕರೆ ಮಾಡಿ ಸಹಾಯ ಮಾಡುವಂತೆ ಮನವಿ ಮಾಡಿದ್ದರು. ಸ್ಥಳಕ್ಕೆ ಬಂದ ಪೊಲೀಸರು ಸಿದ್ಧರಾಜು ಅವರನ್ನು ವಶಕ್ಕೆ ಪಡೆದಿದ್ದರು. ಭಾನುವಾರ ಮಧ್ಯಾಹ್ನ ಗ್ರಾಮಾಂತರ ಠಾಣೆಯಲ್ಲಿದ್ದ ಅವರು ಅಸ್ವಸ್ಥಗೊಂಡಿದ್ದು, ಆಸ್ಪತ್ರೆಗೆ ಕರೆದೊಯ್ಯುವಷ್ಟರಲ್ಲಿ ಮೃತಪಟ್ಟರು. ಈ ಬಗ್ಗೆ ತನಿಖೆ ಕೈಗೊಳ್ಳಲಾಗುವುದು' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಆರ್. ಚೇತನ್ ತಿಳಿಸಿದ್ದಾರೆ.

'ಅವಿತಿಟ್ಟ ಅಂಬೇಡ್ಕರ್' ಪುಸ್ತಕ ಬಿಡುಗಡೆ

'ಅಂಬೇಡ್ಕರ್ ಸೋಲಿಗೆ ಕಾಂಗ್ರೆಸ್ ಪ್ರಯತ್ನಿಸಿದ್ದೇಕೆ?'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಡಾ.ಬಿ.ಆರ್. ಅಂಬೇಡ್ಕರ್ ಅವರು ಲೋಕಸಭಾ ಚುನಾವಣೆಗೆ ಸ್ಪರ್ಧಿಸಿದ್ದಾಗ ಅವರನ್ನು ಸೋಲಿಸುವ ಸಾಹಸಕ್ಕೆ ಕಾಂಗ್ರೆಸ್ ಮುಂದಾಗಿದ್ದೇಕೆ. ಆ ಪಕ್ಷ ಅವಿರೋಧ ಆಯ್ಕೆಗೆ ಏಕೆ ಮುಂದಾಗಲಿಲ್ಲ ಎಂಬ ಪ್ರಶ್ನೆಗಳು ಈಗಲೂ ಕಾಡುತ್ತಿವೆ. ಅಂಬೇಡ್ಕರ್ ತಮ್ಮ ಜೀವಿತಾವಧಿಯಲ್ಲಿ ಅನೇಕ ಅವಮಾನಗಳನ್ನು ಎದುರಿಸಿದ್ದರು. ಅದನ್ನು ತೆರೆದಿಡುವ ಪ್ರಯತ್ನ ಈ ಪುಸ್ತಕ' ಎಂದು ನಟ ಪ್ರಕಾಶ್ ಬೆಳವಾಡಿ ತಿಳಿಸಿದರು.

ಅಖಿಲ ಭಾರತ ಸಾಹಿತ್ಯ ಪರಿಷತ್ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಪ್ರವೀಣ ಮಾವಿನಕಾಡು ಹಾಗೂ ಸುಧಾಕರ ಹೊಸಳ್ಳಿ ಅವರ 'ಅವಿತಿಟ್ಟ ಅಂಬೇಡ್ಕರ್' ಪುಸ್ತಕವನ್ನು ಭಾನುವಾರ ಬಿಡುಗಡೆ ಮಾಡಿ ಅವರು ಮಾತನಾಡಿದರು.

'ಕಾಂಗ್ರೆಸ್ ಸದಸ್ಯರೊಬ್ಬರು ಸಂವಿಧಾನದ ಕರಡು ಪ್ರತಿಯನ್ನು ಬಹಿರಂಗವಾಗಿ ಟೀಕಿಸಿದ್ದರು. ಅಂಬೇಡ್ಕರ್ ಅವರನ್ನು ಜೈಲಿಗೆ ಅಟ್ಟುವ ಮಾತುಗಳನ್ನೂ ಅವರು ಆಡಿದ್ದರು. ಆಗ ಕಾಂಗ್ರೆಸ್ ಮೌನದ ಮೊರೆ ಹೋಗಿತ್ತಂತೆ. 'ನನ್ನೆದುರು ಕಾಂಗ್ರೆಸ್ ಪಕ್ಷದಿಂದ ಗೆದ್ದು ಬಂದವನು ನನ್ನ ಸಹಾಯಕ. ಆತನನ್ನು ದಾಳವಾಗಿಟ್ಟುಕೊಂಡು ನನ್ನನ್ನು ಸೋಲಿಸಿದವರು ತಳ ಸಮುದಾಯಕ್ಕೆ ಕೊಟ್ಟ ಸಂದೇಶವಾದರೂ ಏನು. ನನ್ನ ಸೋಲು ಅಪೇಕ್ಷಿಸಿದವರಿಗೆ ಕೀಳಾಗಿ ಕಂಡಿದ್ದು ನಾನೆ ಅಥವಾ ಸಂವಿಧಾನವೇ' ಎಂದು ಅಂಬೇಡ್ಕರ್ ನೋವು ತೋಡಿಕೊಂಡಿದ್ದರಂತೆ. ಇವೆಲ್ಲದರ ಉಲ್ಲೇಖವೂ ಈ ಪುಸ್ತಕದಲ್ಲಿದೆ' ಎಂದರು.

'ಸಂವಿಧಾನದ ಪೀಠಿಕೆಯಲ್ಲಿ ಜಾತ್ಯತೀತ ಹಾಗೂ ಸಮಾಜವಾದಿ ಎಂಬ ಪದಗಳನ್ನು ಬಲವಂತದಿಂದ ತುರುಕಲಾಗಿದೆ. ಪುಸ್ತಕದಲ್ಲಿ ಅದರ ಪ್ರಸ್ತಾವವೂ ಇದೆ. ಅಂಬೇಡ್ಕರ್ ವಿಚಾರ ಮಾತನಾಡುವುದೇ ಅಸ್ಪೃಶ್ಯತೆ ಎಂಬ ಪರಿಸ್ಥಿತಿ ಈಗ ಇದೆ. ನಾವು ಸ್ವತಂತ್ರ್ಯ ಭಾರತೀಯರು. ಟೀಕೆ ಮಾಡುವ ಹಕ್ಕು ನಮಗಿದೆ. ಸಂವಿಧಾನವನ್ನು ನೂರಾರು ಬಾರಿ ತಿದ್ದುಪಡಿ ಮಾಡುವುದನ್ನು ಟೀಕಿಸುವುದರಲ್ಲಿ ತಪ್ಪೇನಿದೆ' ಎಂದು ಪ್ರಶ್ನಿಸಿದರು.

'ಶ್ಯಾಮ್ ಪ್ರಸಾದ್ ಮುಖರ್ಜಿ ಅವರು ಕಾಶ್ಮೀರಕ್ಕೆ ಹೋದಾಗ ಅವರನ್ನು ಹಿಡಿದು ಜೈಲಿಗಟ್ಟಲಾಗಿತ್ತು. ವಾರದ ಬಳಿಕ ಅವರ ನಿಧನದ ಸುದ್ದಿ ಹೊರಬಿದ್ದಿತ್ತು. ಅವರ ಬಲಿದಾನವನ್ನು ಇತಿಹಾಸದ ಯಾವ ಪುಟದಲ್ಲೂ ಕಾಣಲು ಸಾಧ್ಯವಿಲ್ಲ. ಶಾಲಾ ಪಠ್ಯದಲ್ಲೂ ಸೇರ್ಪಡೆ ಮಾಡಿಲ್ಲ' ಎಂದು ಹೇಳಿದರು.

ರಾಜ್ಯ ವಕೀಲರ ಪರಿಷತ್‌ನ ಅಧ್ಯಕ್ಷ ಶ್ರೀನಿವಾಸ ಬಾಬು, 'ಈ ಪುಸ್ತಕದಲ್ಲಿ ನಮಗೆ ಗೊತ್ತಿರದ ಅನೇಕ ಸಂಗತಿಗಳು ಅಡಕವಾಗಿವೆ. ಅಂಬೇಡ್ಕರ್ ಅವರು ನಿರಂತರ ಅಭ್ಯಾಸದ ಮೂಲಕ ಜ್ಞಾನ ವೃದ್ಧಿಸಿಕೊಂಡಿದ್ದರು. ಶೇಷ, ವಿಶೇಷ ಹಾಗೂ ಸುಧಾಮ ಎಂಬ ಪಾತ್ರಗಳ ಉಲ್ಲೇಖ ಪುಸ್ತಕದಲ್ಲಿವೆ. ಆ ಪಾತ್ರಗಳು ಓದುಗರಿಗೆ ಹೆಚ್ಚು ಆಪ್ತವೆನಿಸುತ್ತವೆ' ಎಂದರು.



ನಟ ಪ್ರಕಾಶ್ ಬೆಳವಾಡಿ (ಎಡದಿಂದ ಎರಡನೇಯವರು) ಪುಸ್ತಕ ಬಿಡುಗಡೆ ಮಾಡಿದರು. (ಎಡದಿಂದ) ಸುಧಾಕರ ಹೊಸಳ್ಳಿ, ಅಖಿಲ ಭಾರತೀಯ ಸಾಹಿತ್ಯ ಪರಿಷತ್ ಪ್ರಧಾನ ಕಾರ್ಯದರ್ಶಿ ರಘುನಂದನ ಭಟ್, ಶ್ರೀನಿವಾಸ ಬಾಬು ಹಾಗೂ ಪ್ರವೀಣ ಮಾವಿನಕಾಡು ಇದ್ದಾರೆ– ಪ್ರಜಾವಾಣಿ ಚಿತ್ರ

ಚಿತ್ರಾವಳಿ



ಅಕ್ಷರ ಚಪ್ಪರ ಕನ್ನಡ ಸಾಹಿತ್ಯ ಮತ್ತು ಸಾಂಸ್ಕೃತಿಕ ಸಂಸ್ಥೆಯು ನಗರದಲ್ಲಿ ಭಾನುವಾರ ಆಯೋಜಿಸಿದ್ದ 'ಅಪ್ಪು ಅಪ್ಪುಗೆ' ಗೀತನಮನ ಹಾಗೂ 'ಕನ್ನಡ ಪುಸ್ತಕಗಳು ಗಾಲಿಗಳ ಮೇಲೆ' ಅಭಿಯಾನದಲ್ಲಿ ಭಾಗವಹಿಸಿದ್ದ ಆಟೊ ಚಾಲಕರಿಗೆ ಅಭಿನಂದನಾ ಪತ್ರಗಳನ್ನು ವಿತರಿಸಿ ಗೌರವಿಸಲಾಯಿತು. ನಿರ್ಮಾಪಕ ಗೋವಿಂದರಾಜು ಮತ್ತು ಲಕ್ಷ್ಮೀ ಗೋವಿಂದರಾಜು ದಂಪತಿ, ಅಕ್ಷರ ಚಪ್ಪರ ಸಂಸ್ಥೆಯ ಸದಸ್ಯರು ಇದ್ದರು.



ಮುಂಜಾನೆ ಮಂಜು: ಲಾಲ್‌ಬಾಗ್‌ನಲ್ಲಿ ಮಂಜಿನಿಂದ ಕೂಡಿದ ವಾತಾವರಣದ ಸೊಬಗು ಸವಿಯಲು ಭಾನುವಾರ ಮುಂಜಾನೆ ಸೇರಿದ್ದ ಜನ –ಪ್ರಜಾವಾಣಿ ಚಿತ್ರ



ಹೆಸರಘಟ್ಟ ಮುಖ್ಯರಸ್ತೆಯಲ್ಲಿರುವ ಮಂಜುನಾಥ ನೇತ್ರಾಲಯದ ನೂತನ ಶಸ್ತ್ರಚಿಕಿತ್ಸಾ ಕೊಠಡಿಯನ್ನು ಶಾಸಕ ಆರ್.ಮಂಜುನಾಥ್ ಉದ್ಘಾಟಿಸಿದರು. ಆಸ್ಪತ್ರೆ ನಿರ್ದೇಶಕರಾದ ಡಾ.ಮಂಜುನಾಥ್, ತುಂಗಪ್ಪ, ಜೆಡಿಎಸ್ ಮುಖಂಡರಾದ ಸಿದ್ದರಾಜು, ಲಕ್ಷ್ಮೀಪತಿ, ಕುಮಾರಸ್ವಾಮಿ ಹಾಗೂ ಆಸ್ಪತ್ರೆ ಸಿಬ್ಬಂದಿ ಇದ್ದರು.

ಕೆಎನ್‌ಎನ್‌ಎಲ್: ಮತ್ತೆ 20 ನಕಲಿ ಬಿಲ್ ಮೂಲಕ ₹ 11.73 ಕೋಟಿ ದುರ್ಬಳಕೆ ಪತ್ತೆ

ನಕಲಿ ಬಿಲ್‌ಗಳ ಸೃಷ್ಟಿಸಿ ₹28 ಕೋಟಿ ಗುಳುಂ!

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಎನ್‌ಎನ್‌ಎಲ್ (ಕರ್ನಾಟಕ ನೀರಾವರಿ ನಿಗಮ ನಿಯಮಿತ) ವ್ಯಾಪ್ತಿಯ ಅಥಣಿಯ ಹಿಪ್ಪರಗಿ ಬ್ಯಾರೇಜ್ ನಾಲಾ (ಎಚ್‌ಬಿಸಿ) ವಿಭಾಗದಲ್ಲಿ ಎಂಟು ನಕಲಿ ಬಿಲ್‌ಗಳನ್ನು ಸೃಷ್ಟಿಸಿ ₹ 16.62 ಕೋಟಿ ದುರ್ಬಳಕೆ ಮಾಡಿದ ಪ್ರಕರಣ ಪತ್ತೆಯಾದ ಬೆನ್ನಲ್ಲೇ, ಅದೇ ನಿಗಮದ ಕಲಬುರಗಿ ವಲಯ ಮತ್ತು ಮುನಿರಾಬಾದ್ ವಲಯ ಕಚೇರಿಗಳಲ್ಲಿ 20 ನಕಲಿ ಬಿಲ್‌ಗಳನ್ನು ಸೃಷ್ಟಿಸಿ ₹ 11.73 ಕೋಟಿ ದುರುಪಯೋಗಪಡಿಸಿದ ಪ್ರಕರಣ ಬಯಲಿಗೆ ಬಂದಿದೆ.

ಈ ಮೂಲಕ, ಯಾವುದೇ ಟೆಂಡರ್ ಕರೆಯದೆ ಮತ್ತು ಕಾಮಗಾರಿ ನಿರ್ವಹಿಸದೆ ಒಟ್ಟು 28 ನಕಲಿ ಬಿಲ್‌ಗಳನ್ನು ಸೃಷ್ಟಿಸಿ ₹ 28.35 ಕೋಟಿ ವಂಚಿಸಿದ ಪ್ರಕರಣ ಬಹಿರಂಗಗೊಂಡಿದೆ. ಅದರ ಜೊತೆಗೆ, ಇತರ ನೀರಾವರಿ ನಿಗಮಗಳಲ್ಲೂ ಇದೇ ರೀತಿಯ ವಂಚನೆ ನಡೆದಿರುವ ಅನುಮಾನಗಳು ವ್ಯಕ್ತವಾಗಿವೆ.

ಎಂಟು ನಕಲಿ ಬಿಲ್‌ಗಳನ್ನು ಸೃಷ್ಟಿಸಿ ₹ 16.62 ಕೋಟಿ ದುರುಪಯೋಗ ಮಾಡಿದ ಆರೋಪದಲ್ಲಿ ಜಲಸಂಪನ್ಮೂಲ ಇಲಾಖೆಯ ಐದು ಮಂದಿಯನ್ನು ಈಗಾಗಲೇ ಅಮಾನತುಗೊಳಿಸಿರುವ ರಾಜ್ಯ ಸರ್ಕಾರ, ಈ ಪ್ರಕರಣದಲ್ಲಿ ಭಾಗಿಯಾಗಿ, ಸದ್ಯ ಬೇರೆ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಇತರ ಇಬ್ಬರನ್ನು ಅಮಾನತು ಮಾಡುವಂತೆ ಆ ಅಧಿಕಾರಿಗಳ ಮಾತೃ ಇಲಾಖೆಗೆ (ಆರ್ಥಿಕ ಇಲಾಖೆ) ಸೂಚಿಸಿದೆ.

ಇದೀಗ, ಕಲಬುರಗಿ ನೀರಾವರಿ ಯೋಜನಾ ವಿಭಾಗ ಮತ್ತು ಮುನಿರಾಬಾದ್ ವಲಯದ ತುಂಗಭದ್ರಾ ಎಡದಂಡೆ ಕಾಲುವೆ ವಿಭಾಗದಲ್ಲಿ (ಸಿರವಾರ) ಯಾವುದೇ ಟೆಂಡರ್ ಕರೆಯದೆ ಮತ್ತು ಕಾಮಗಾರಿ ನಿರ್ವಹಿಸದೆ 20 ನಕಲಿ ಬಿಲ್‌ಗಳನ್ನು ಸೃಷ್ಟಿಸಿ ವಂಚಿಸಿದ ಪ್ರಕರಣದಲ್ಲಿ ಅಧಿಕಾರಿಗಳು ಮತ್ತು ನೌಕರರು ಸೇರಿ 16 ಮಂದಿ ಹಾಗೂ ಆರು ಗುತ್ತಿಗೆದಾರರು ಭಾಗಿಯಾಗಿರುವುದು ವಿಚಾರಣೆಯಿಂದ ಗೊತ್ತಾಗಿದೆ.

ಈ ಪ್ರಕರಣದಲ್ಲಿ ಭಾಗಿಯಾದ ಅಲಮಟ್ಟಿ ಕೃಷ್ಣ ಭಾಗ್ಯ ಜಲ ನಿಗಮದ ಪ್ರಧಾನ ಮುಖ್ಯಲೆಕ್ಕಾಧಿಕಾರಿ ಕಚೇರಿಯ ಮುಖ್ಯ ಲೆಕ್ಕಾಧಿಕಾರಿ ಅಜಿತ್‌ಕುಮಾರ್ ಹೆಗ್ಡೆ, ಪ್ರಥಮ ದರ್ಜೆ ಸಹಾಯಕ ಶರಣಪ್ಪ, ಅಥಣಿಯ ಹಿಪ್ಪರಗಿ ಯೋಜನೆಯ ಆರ್ ಆ್ಯಂಡ್ ಆರ್ ವಿಭಾಗದ ಲೆಕ್ಕಾಧೀಕ್ಷಕ ಕೆ.ಎಂ. ಕೋಟಿ ಅವರನ್ನು ಅಮಾನತು ಮಾಡಲಾಗಿದೆ.

ಅಲ್ಲದೆ, ಅಕ್ರಮದಲ್ಲಿ ಭಾಗಿಯಾಗಿ ಪ್ರಸ್ತುತ ಜಲಸಂಪನ್ಮೂಲ ಇಲಾಖೆಯಿಂದ ವರ್ಗಾವಣೆಗೊಂಡು ಸದ್ಯ ಧಾರವಾಡದಲ್ಲಿ ಪಂಚಾಯತ್‌ರಾಜ್ ಎಂಜಿನಿಯರಿಂಗ್ ವಿಭಾಗದಲ್ಲಿ ಪ್ರಥಮ ದರ್ಜೆ ಲೆಕ್ಕ ಸಹಾಯಕರಾಗಿರುವ ಎಸ್.ಎಂ.ಶಾಜಿ, ವಿಜಯಪುರದಲ್ಲಿ ಪಂಚಾಯತ್‌ರಾಜ್ ಎಂಜಿನಿಯರಿಂಗ್ ವಿಭಾಗದಲ್ಲಿ ಲೆಕ್ಕ ಪರಿಶೋಧಕನಾಗಿ ಕಾರ್ಯನಿರ್ವಹಿಸುತ್ತಿರುವ ಸಂತೋಷ್ ಸದಲಗಿ ಅವರನ್ನು ಅಮಾನತು ಮಾಡುವಂತೆ ಅವರ ಮಾತೃ ಇಲಾಖೆಯಾದ ಆರ್ಥಿಕ ಇಲಾಖೆಗೆ ಸೂಚಿಸಲಾಗಿದೆ.

ಇದೇ ಪ್ರಕರಣದಲ್ಲಿ ಭಾಗಿಯಾಗಿರುವ ಮುಖ್ಯ ಲೆಕ್ಕಾಧಿಕಾರಿಯಾಗಿದ್ದ ಎ.ಎನ್. ರಾಮದಾಸ್, ಲೆಕ್ಕಾಧಿಕಾರಿಗಳಾಗಿದ್ದ ಎನ್.ಜಿ. ಹೊಸಪ್ಪಗೋಳ್, ಎಚ್.ಎಂ.ಗಣೇಶ್‌ಬಾಬು, ಸಿ.ಎಫ್. ಕುಬಿಹಾಳ, ಲೆಕ್ಕ ಪರಿಶೋಧನಾಧಿಕಾರಿ ಪ್ರಕಾಶ್ ಶೆಟ್ಟಿ, ಲೆಕ್ಕಾಧೀಕ್ಷಕರಾಗಿದ್ದ ರಘುರಾಮ್, ಲಕ್ಷ್ಮಿಬಾಯಿ, ಪ್ರಥಮ ದರ್ಜೆ ಲೆಕ್ಕ ಸಹಾಯಕರಾಗಿದ್ದ ವಿಜಯರಾಜ್, ಮನೋಹರ್ ಕುಲಕರ್ಣಿ, ಆರ್.ಜಿ. ರಾಣದ ನಿವೃತ್ತರಾಗಿದ್ದಾರೆ. ಲೆಕ್ಕಾಧೀಕ್ಷಕ ಕೆ. ಪ್ರಕಾಶ್ ನಿಧನರಾಗಿದ್ದಾರೆ. ನಕಲಿ ಬಿಲ್‌ಗಳ ಹಣವನ್ನು ಗುತ್ತಿಗೆದಾರರಾದ ಬಿ.ಜಿ. ಬುಡವಿ, ಬಸವರಾಜ್ ವೈ. ಪಾಟೀಲ್, ಮಹೇಶ್ ಎಸ್. ದೇವಾಂಜಿ, ಮೊಹಮ್ಮದ್ ಇಸ್ಮಾಯಿಲ್, ರಾಜು ಜ್ಯೋತಿ ಬಂಡಿಗೆ, ರಾಜು ಎಂ. ದೊಡ್ಡಬೊಮ್ಮನ್ನವರ ಅವರು ವೈಯಕ್ತಿಕ ಖಾತೆಗೆ ಅಕ್ರಮವಾಗಿ ಜಮೆ ಮಾಡಿಕೊಂಡಿರುವುದು ವಿಚಾರಣೆಯಿಂದ ಗೊತ್ತಾಗಿದೆ.


ಅಕ್ರಮದಲ್ಲಿ ಭಾಗಿಯಾದ ಈ ಎಲ್ಲರ ಚರಾಸ್ತಿ ಮತ್ತು ಸ್ಥಿರಾಸ್ತಿಯನ್ನು ಪರಭಾರೆ ಮಾಡದಂತೆ ನೋಂದಣಿ ಮತ್ತು ಮುದ್ರಾಂಕ ಇಲಾಖೆಗೆ ಸೂಚಿಸಬೇಕು. ಅವರು ಹೊಂದಿರುವ ಖಾತೆಗಳನ್ನು ತಕ್ಷಣ ಸ್ಥಗಿತಗೊಳಿಸಬೇಕು. ಅಲ್ಲದೆ, ನಿಧನರಾಗಿರುವ ಕೆ. ಪ್ರಕಾಶ್ ಅವರನ್ನು ಹೊರತುಪಡಿಸಿ, ಉಳಿದವರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಬೇಕು ಎಂದು ಕೆಎನ್‌ಎನ್‌ಎಲ್ ವ್ಯವಸ್ಥಾಪಕ ನಿರ್ದೇಶಕರಿಗೆ ಜಲಸಂಪನ್ಮೂಲ ಇಲಾಖೆ ನಿರ್ದೇಶನ ನೀಡಿದೆ.

ಸುದ್ದಿ 2 ನಿಮಿಷ

ಮ್ಯಾನ್‌ಹೋಲ್‌ಗೆ ಇಳಿದು ಸ್ವಚ್ಛ ಮಾಡಿದ ಪೌರಕಾರ್ಮಿಕ,ಆಕ್ಷೇಪ

ಹೊಸಕೋಟೆ: ಪಟ್ಟಣ ಪುರಸಭೆ ವ್ಯಾಪ್ತಿಯ ಅಜ್ಜಯ ಬಡಾವಣೆಯಲ್ಲಿ ಶನಿವಾರ ಒಳಚರಂಡಿಯ ಮ್ಯಾನ್‌ಹೋಲ್‌ಗೆ ದಿನಗೂಲಿ ಪೌರಕಾರ್ಮಿಕರೊಬ್ಬರನ್ನು ಇಳಿಸಿ ಸ್ವಚ್ಛ ಮಾಡಿಸಿದ್ದು, ಸಾರ್ವಜನಿಕರಿಂದ ಆಕ್ಷೇಪ ವ್ಯಕ್ತವಾಗಿದೆ.

ಮ್ಯಾನ್‌ಹೋಲ್ ಸ್ವಚ್ಛಗೊಳಿಸುತ್ತಿರುವ ಫೋಟೊವನ್ನು ವ್ಯಕ್ತಿಯೊಬ್ಬರು ತೆಗೆದಿದ್ದಾರೆ. ಶೌಚಗುಂಡಿಗೆ ಕಾರ್ಮಿಕರನ್ನು ಇಳಿಸಿರುವ ವಿಚಾರ ಗೊತ್ತಾಗುತ್ತಿದ್ದಂತೆ ಹಲವರು ಆಕ್ರೋಶ ಹೊರಹಾಕಿ, ಪ್ರಕರಣವನ್ನು ತೀವ್ರವಾಗಿ ಖಂಡಿಸಿದ್ದಾರೆ.



ಈ ಬಗ್ಗೆ ತಹಶೀಲ್ದಾರ್ ಕೆ.ಕೆ. ಕೃಷ್ಣಮೂರ್ತಿ ಪ್ರತಿಕ್ರಿಯಿಸಿ, 'ಶೌಚಗುಂಡಿಗೆ ಇಳಿಸಿ ಕೆಲಸ ಮಾಡಿಸುವಂತಿಲ್ಲ. ಈ ಬಗ್ಗೆ ಸಮಗ್ರವಾಗಿ ತನಿಖೆ ನಡೆಸಿ, ಜಿಲ್ಲಾಧಿಕಾರಿಗೆ ವರದಿ ಸಲ್ಲಿಸುತ್ತೇವೆ. ಶೌಚಗುಂಡಿಗೆ ಇಳಿದ ದಿನಗೂಲಿ ಪೌರ ಕಾರ್ಮಿಕನ ಹಿತಕ್ಕೆ ಧಕ್ಕೆ ಬಾರದಂತೆ ನೋಡಿಕೊಳ್ಳುತ್ತೇವೆ' ಎಂದರು.

ಪುರಸಭೆ ಅಧಿಕಾರಿಗಳು ಈಚೆಗೆ ವಿಮೆ ಮಾಡಿಸದ ವಾಹನವನ್ನು ರಸ್ತೆಗೆ ಇಳಿಸಿದ್ದರು. ಆ ವಾಹನ ಅಪಘಾತವಾಗಿ ವಾಹನದಲ್ಲಿದ್ದ ಇಬ್ಬರು ಕಾರ್ಮಿಕರು ಮೃತಪಟ್ಟು ಅವರಿಗೆ ಪರಿಹಾರ ದೊರಕುವ ಅವಕಾಶ ತಪ್ಪಿತ್ತು. ಈಗ ಪುರಸಭೆ ಅಧಿಕಾರಿಗಳು ಮತ್ತೊಂದು ಎಡವಟ್ಟು ಎಸಗಿ, ಆಕ್ರೋಶಕ್ಕೆ ಗುರಿಯಾಗಿದ್ದಾರೆ.

ಕೋವಿಡ್ ಪರೀಕ್ಷೆ 80 ಸಾವಿರಕ್ಕೆ ಹೆಚ್ಚಳ

ಬೆಂಗಳೂರು: ಕೆಲವು ಜಿಲ್ಲೆಗಳಲ್ಲಿ ಅಧಿಕ ಕೋವಿಡ್ ಪ್ರಕರಣಗಳು ವರದಿಯಾಗುತ್ತಿರುವುದರಿಂದ ದೈನಂದಿನ ಕೋವಿಡ್ ಪರೀಕ್ಷೆಗಳ ಗುರಿಯನ್ನು 60 ಸಾವಿರದಿಂದ 80 ಸಾವಿರಕ್ಕೆ ಹೆಚ್ಚಳ ಮಾಡಲಾಗಿದೆ.

ಈ ಬಗ್ಗೆ ಆರೋಗ್ಯ ಇಲಾಖೆಯ ಪ್ರಧಾನ ಕಾರ್ಯದರ್ಶಿ ಟಿ.ಕೆ. ಅನಿಲ್ ಕುಮಾರ್ ಸುತ್ತೋಲೆ ಹೊರಡಿಸಿದ್ದಾರೆ. 'ಬಿಬಿಎಂಪಿ ವ್ಯಾಪ್ತಿಯಲ್ಲಿ ಈಗ ನಡೆಸಲಾಗುತ್ತಿರುವ 25 ಸಾವಿರ ಪರೀಕ್ಷೆಗಳ ಸಂಖ್ಯೆಯನ್ನು 30 ಸಾವಿರಕ್ಕೆ ಏರಿಸಬೇಕು. ಉಳಿದ ಎಲ್ಲ ಜಿಲ್ಲೆಗಳಿಂದ ನಡೆಸಲಾಗುತ್ತಿದ್ದ 35 ಸಾವಿರ ಪರೀಕ್ಷೆಗಳ ಸಂಖ್ಯೆಯನ್ನು 50 ಸಾವಿರಕ್ಕೆ ಹೆಚ್ಚಳ ಮಾಡಬೇಕು' ಎಂದು ತಿಳಿಸಿದ್ದಾರೆ.

'ಒಟ್ಟು ಪರೀಕ್ಷೆಗಳಲ್ಲಿ ಶೇ 10ರಷ್ಟು ಪರೀಕ್ಷೆಗಳನ್ನು ವಿದ್ಯಾರ್ಥಿಗಳಿಗೆ ಮಾಡಬೇಕು. ಶಾಲೆಗಳ ವಿದ್ಯಾರ್ಥಿಗಳ ಪೈಕಿ ಶೇ 5 ರಷ್ಟು ವಿದ್ಯಾರ್ಥಿಗಳಾದರೂ ಪ್ರತಿ ವಾರ ಕೋವಿಡ್ ಪರೀಕ್ಷೆಗೆ ಒಳಪಡಬೇಕು' ಎಂದು ಸೂಚಿಸಿದ್ದಾರೆ.

'ತೀವ್ರ ಉಸಿರಾಟದ ಸಮಸ್ಯೆ (ಸಾರಿ) ಹಾಗೂ ಶೀತಜ್ವರ ಮಾದರಿಯ ಅನಾರೋಗ್ಯ ಸಮಸ್ಯೆ (ಐಎಲ್‌ಐ) ಎದುರಿಸುತ್ತಿರುವವರನ್ನು ಗುರುತಿಸಿ, ಕೋವಿಡ್ ಪರೀಕ್ಷೆಗೆ ಒಳಪಡಿಸಬೇಕು. ಶಾಲಾ– ಕಾಲೇಜು, ಹೋಟೆಲ್, ಕಂಪನಿ, ಮಾಲ್ ಸೇರಿದಂತೆ ವಿವಿಧೆಡೆ ಸಾಮೂಹಿಕ ಕೋವಿಡ್ ಪರೀಕ್ಷೆ ನಡೆಸಬೇಕು' ಎಂದು ಸುತ್ತೋಲೆಯಲ್ಲಿ ವಿವರಿಸಿದ್ದಾರೆ.

ಶಿಕ್ಷಣ ಸಂಸ್ಥೆಗಳಲ್ಲಿ ಪ್ರಕರಣಗಳು ಪತ್ತೆ • ಆರೋಗ್ಯ ಇಲಾಖೆಯಿಂದ ಕ್ರಮ • ಲಸಿಕೆ ವೇಗ ಹೆಚ್ಚಳಕ್ಕೆ ಸೂಚನೆ

ಕೋವಿಡ್: ಶೈಕ್ಷಣಿಕ ಕಾರ್ಯಕ್ರಮ ಮುಂದೂಡಲು ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಧಾರವಾಡ, ಬೆಂಗಳೂರು ಸೇರಿದಂತೆ ವಿವಿಧೆಡೆ ಕೆಲ ಶಿಕ್ಷಣ ಸಂಸ್ಥೆಗಳಲ್ಲಿ ಕೋವಿಡ್ ಪ್ರಕರಣಗಳು ಕಾಣಿಸಿಕೊಂಡಿರುವುದರಿಂದ ಸಾಂಸ್ಕೃತಿಕ, ಸಾಮಾಜಿಕ ಹಾಗೂ ಶೈಕ್ಷಣಿಕ ಕಾರ್ಯಕ್ರಮಗಳನ್ನು ಶಾಲಾ–ಕಾಲೇಜುಗಳಲ್ಲಿ ಮುಂದೂಡುವಂತೆ ಆರೋಗ್ಯ ಇಲಾಖೆ ಸೂಚಿಸಿದೆ.

ಈ ಬಗ್ಗೆ ಆರೋಗ್ಯ ಇಲಾಖೆಯ ಪ್ರಧಾನ ಕಾರ್ಯದರ್ಶಿ ಟಿ.ಕೆ.ಅನಿಲ್ ಕುಮಾರ್ ಸುತ್ತೋಲೆ ಹೊರಡಿಸಿದ್ದಾರೆ. 'ಕೆಲ ಶಿಕ್ಷಣ ಸಂಸ್ಥೆಗಳಲ್ಲಿ ಅಧಿಕ ಸಂಖ್ಯೆಯಲ್ಲಿ ಕೋವಿಡ್ ಪ್ರಕರಣಗಳು ವರದಿಯಾಗುತ್ತಿವೆ. ಹೀಗಾಗಿ, ವೈದ್ಯಕೀಯ ಸೇರಿದಂತೆ ಎಲ್ಲ ಶೈಕ್ಷಣಿಕ ಸಂಸ್ಥೆಗಳಲ್ಲಿ ಪ್ರತಿನಿತ್ಯ ಕೋವಿಡ್ ತಪಾಸಣೆ ನಡೆಸಬೇಕು. ಸೋಂಕು ದೃಢಪಟ್ಟಲ್ಲಿ ಕೋವಿಡ್ ಮಾರ್ಗಸೂಚಿ ಅನುಸಾರ ಚಿಕಿತ್ಸೆ ಒದಗಿಸಬೇಕು' ಎಂದು ತಿಳಿಸಿದ್ದಾರೆ.

'ಸಮ್ಮೇಳನ, ವಿಚಾರ ಸಂಕಿರಣ ಸೇರಿದಂತೆ ವಿವಿಧ ಕಾರ್ಯಕ್ರಮಗಳನ್ನು ನಡೆಸಬೇಕಾದ ಅಗತ್ಯವಿದ್ದಲ್ಲಿ 'ಹೈಬ್ರಿಡ್' ಮಾದರಿ (ಸೀಮಿತ ಜನರಿಗೆ ಅವಕಾಶ) ಅನುಸರಿಸಬೇಕು. ಆನ್‌ಲೈನ್ ವೇದಿಕೆಗಳ ಮೂಲಕ ಕಾರ್ಯಕ್ರಮಗಳನ್ನು ಪ್ರಸಾರ ಮಾಡಬಹುದಾಗಿದೆ. 18 ವರ್ಷಗಳು ಮೇಲ್ಪಟ್ಟ ಎಲ್ಲ ವಿದ್ಯಾರ್ಥಿಗಳು ಹಾಗೂ ಸಿಬ್ಬಂದಿ ಎರಡೂ ಡೋಸ್ ಲಸಿಕೆ ಪಡೆದಿರುವ ಬಗ್ಗೆ ಶಿಕ್ಷಣ ಸಂಸ್ಥೆಗಳು ಖಚಿತಪಡಿಸಿಕೊಳ್ಳಬೇಕು. ಆದಷ್ಟು ಬೇಗ ಎಲ್ಲರೂ ಲಸಿಕೆ ಪಡೆಯಲು ಕ್ರಮವಹಿಸಬೇಕು' ಎಂದು ಹೇಳಿದ್ದಾರೆ.

'ಕೇರಳ, ಮಹಾರಾಷ್ಟ್ರದಿಂದ ಬರುವವರು 72 ಗಂಟೆಗಳ ಅವಧಿ ಮೀರಿರದ ಕೋವಿಡ್ ಆರ್‌ಟಿ–ಪಿಸಿಆರ್ ನೆಗೆಟಿವ್ ವರದಿಯನ್ನು ಕಡ್ಡಾಯವಾಗಿ ಹಾಜರುಪಡಿಸಬೇಕು. ಕಳೆದ 15 ದಿನಗಳ ಅವಧಿಯಲ್ಲಿ ಕೇರಳದಿಂದ ಬಂದಿರುವ ವಿದ್ಯಾರ್ಥಿಗಳು ಕೋವಿಡ್ ಪರೀಕ್ಷೆಗೆ ಒಳಪಡಬೇಕು. ಅಲ್ಲಿಂದ ಈಗ ಬಂದ ವಿದ್ಯಾರ್ಥಿಗಳಿಗೆ 7 ದಿನಗಳ ಬಳಿಕ ಮತ್ತೊಮ್ಮೆ ಆರ್‌ಟಿ–ಪಿಸಿಆರ್ ಪರೀಕ್ಷೆ ನಡೆಸಬೇಕು. ಅಧಿಕ ಕೋವಿಡ್ ಪ್ರಕರಣಗಳು ಪತ್ತೆಯಾದ ಶಿಕ್ಷಣ ಸಂಸ್ಥೆಗಳಲ್ಲಿ ಸೋಂಕಿತರಾಗಿರದ ವಿದ್ಯಾರ್ಥಿಗಳನ್ನೂ ಕ್ವಾರಂಟೈನ್‌ಗೆ ಒಳಪಡಿಸಿ, 7 ದಿನಗಳ ಬಳಿಕ ಮತ್ತೊಮ್ಮೆ ಪರೀಕ್ಷೆ ನಡೆಸಬೇಕು' ಎಂದು ಸೂಚಿಸಿದ್ದಾರೆ.



ಹುಬ್ಬಳ್ಳಿ ಮಹಾನಗರ ಪಾಲಿಕೆ ಆಯುಕ್ತರ ಸಭಾಭವನದಲ್ಲಿ ಭಾನುವಾರ ಜಿಲ್ಲಾಡಳಿತದಿಂದ ಮುಚ್ಚಳಿಕೆ ಬರೆಸಿಕೊಂಡು ಯಲ್ಲಾಪುರ ಓಣಿಯ ಆನಂದ ಕೊನ್ನೂರಕರ ಅವರು ಕೋವಿಡ್ ಲಸಿಕೆ ಪಡೆದರು. ಪಾಲಿಕೆ ಆಯುಕ್ತ ಸುರೇಶ ಇಟ್ನಾಳ್, ಪಾಲಿಕೆ ಸದಸ್ಯ ನಿರಂಜನಯ್ಯ ಹಿರೇಮಠ, ಉಪವಿಭಾಗಾಧಿಕಾರಿ ಡಾ. ಗೋಪಾಲಕೃಷ್ಣ ಬಿ.,ಜಿಲ್ಲಾಧಿಕಾರಿ ನಿತೇಶ್ ಪಾಟೀಲ ಇದ್ದಾರೆ



ಎಚ್.ಡಿ.ಕೋಟೆ ತಾಲ್ಲೂಕಿನ ಕೇರಳ ಮತ್ತು ಕರ್ನಾಟಕ ಗಡಿಭಾಗವಾದ ಬಾವಲಿ ಚೆಕ್ ಪೋಸ್ಟ್ ಗೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಕೆ.ಎಚ್. ಪ್ರಸಾದ್ ಭಾನುವಾರ ಭೇಟಿ ನೀಡಿ ಪರಿಶೀಲಿಸಿದರು. ತಾಲ್ಲೂಕು ಆರೋಗ್ಯಾಧಿಕಾರಿ ಡಾ.ಟಿ.ರವಿಕುಮಾರ್ ಬೀಚನಹಳ್ಳಿ ಪೊಲೀಸ್ ಠಾಣೆ ಪಿಎಸ್ ಐ ಜಯಪ್ರಕಾಶ್ ಇದ್ದರು.

ಮುಚ್ಚಳಿಕೆ ಬರೆಸಿಕೊಂಡು ಲಸಿಕೆ ಪಡೆದ!

ಹುಬ್ಬಳ್ಳಿ: 'ಕೋವಿಡ್ ಲಸಿಕೆಯಿಂದ ಆರೋಗ್ಯಕ್ಕೇನಾದರೂ ಸಮಸ್ಯೆಯಾದರೆ ನಾವೇ ಜವಾಬ್ದಾರಿ' ಎಂದು ಜಿಲ್ಲಾಡಳಿತ, ಮಹಾನಗರ ಪಾಲಿಕೆ ಮತ್ತು ಜಿಲ್ಲಾ ಪಂಚಾಯಿತಿ ವ್ಯಕ್ತಿಯೊಬ್ಬರಿಗೆ ಮುಚ್ಚಳಿಕೆ ಬರೆದುಕೊಟ್ಟು ಕೋವ್ಯಾಕ್ಸಿನ್ ಲಸಿಕೆ ನೀಡಿದ ಅಪರೂಪದ ಪ್ರಕರಣ ಭಾನುವಾರ ಹುಬ್ಬಳ್ಳಿ ಧಾರವಾಡ ಮಹಾನಗರ ಪಾಲಿಕೆ ಆಯುಕ್ತರ ಸಭಾಭವನದಲ್ಲಿ ನಡೆಯಿತು.

ಲಸಿಕೆ ಪಡೆಯುವ ಕುರಿತು ಜಿಲ್ಲಾಧಿಕಾರಿ ನಿತೇಶ್ ಪಾಟೀಲ ನೇತೃತ್ವದಲ್ಲಿ ಧಾರ್ಮಿಕ ಮುಖಂಡರ ಸಭೆ ಕರೆಯಲಾಗಿತ್ತು. 'ಲಸಿಕೆ ಪಡೆಯುವ ಕುರಿತು ಭಯವಾಗುತ್ತಿದೆ. ಆರೋಗ್ಯದಲ್ಲಿ ಸಮಸ್ಯೆಯಾದರೆ ಯಾರು ಹೊಣೆ?' ಎಂದು ಯಲ್ಲಾಪುರ ಓಣಿ ನಿವಾಸಿ ಆನಂದ ಕೊನ್ನೂರಕರ ಆತಂಕ ವ್ಯಕ್ತಪಡಿಸಿದರು.

'ಕುಟುಂಬ ಸದಸ್ಯರು ಈಗಾಗಲೇ ಲಸಿಕೆ ಪಡೆದಿದ್ದಾರೆ. ನಾನು ಲಸಿಕೆ ಪಡೆದಾಗ ಹೆಚ್ಚು ಕಡಿಮೆಯಾದರೆ ಎನ್ನುವ ಭಯ ಕಾಡುತ್ತಿದೆ. ಏನಾದರೂ ಆದರೆ ಕುಟುಂಬದ ಕಥೆಯೇನು? ಜಿಲ್ಲಾಡಳಿತವೇ ಜವಾಬ್ದಾರಿ ವಹಿಸಿಕೊಳ್ಳುತ್ತದೆ ಎಂದು ಮುಚ್ಚಳಿಕೆ ಬರೆದುಕೊಡಬೇಕು' ಎಂದು ಆಗ್ರಹಿಸಿದರು.

ಜಿಲ್ಲಾಧಿಕಾರಿ ನಿತೇಶ ಪಾಟೀಲ ತಿಳಿಸಿ ಹೇಳುವ ಪ್ರಯತ್ನ ಪ್ರಯೋಜನವಾಗಿಲ್ಲ. ಪಾಲಿಕೆ ಆಯುಕ್ತ ಸುರೇಶ ಇಟ್ನಾಳ್ 'ಲಸಿಕೆಯಿಂದ ಅಡ್ಡ ಪರಿಣಾಮ ಅಥವಾ ದುಷ್ಪರಿಣಾಮ ಉಂಟಾದರೆ ನಾವು ಜವಾಬ್ದಾರಿ ವಹಿಸಿಕೊಳ್ಳುತ್ತೇವೆ' ಎಂದು ಮುಚ್ಚಳಿಕೆ ಬರೆದು, ಜಿಲ್ಲಾಧಿಕಾರಿ, ಜಿಲ್ಲಾ ಪಂಚಾಯಿತಿ ಕಾರ್ಯನಿರ್ವಹಣಾ ಅಧಿಕಾರಿ, ಉಪ ವಿಭಾಗಾಧಿಕಾರಿ ಸಹಿ ಜೊತೆ ತಮ್ಮ ಸಹಿ ಹಾಕಿ ನೀಡಿದರು. ಅಲ್ಲದೆ, ಅಲ್ಲಿಯೇ ಆನಂದ ಅವರಿಗೆ ಕೋವ್ಯಾಕ್ಸಿನ್ ಲಸಿಕೆ ಹಾಕಿದರು.

ಓಮಿಕ್ರಾನ್ ಆತಂಕ: ತೀವ್ರ ತಪಾಸಣೆ

ಕಲಬುರಗಿ: ಕೋವಿಡ್‌ನ ಹೊಸ ತಳಿ ಓಮಿಕ್ರಾನ್ ವೈರಾಣು ಸೃಷ್ಟಿಸಿರುವ ಆತಂಕದ ಹಿನ್ನೆಲೆಯಲ್ಲಿ ಭಾನುವಾರ ಕಲಬುರಗಿ ಮತ್ತು ಬೀದರ್ ಜಿಲ್ಲೆಯ ಚೆಕ್‌ಪೋಸ್ಟ್‌ಗಳಲ್ಲಿ ತಪಾಸಣೆ ತೀವ್ರಗೊಳಿಸಲಾಗಿದೆ.

ಕಲಬುರಗಿ ಜಿಲ್ಲೆಯ ಆಳಂದ ತಾಲ್ಲೂಕಿನ ಮೂರು ಗಡಿ ತಪಾಸಣಾ ಕೇಂದ್ರಗಳಲ್ಲಿ ಪೊಲೀಸರು ನೆರೆಯ ಮಹಾರಾಷ್ಟ್ರದಿಂದ ಬರುವ ಪ್ರಯಾಣಿಕರ ವಾಹನಗಳ ತಪಾಸಣೆ ನಡೆಸಿದರು. ತಾಲ್ಲೂಕಿನ ಖಜೂರಿ, ಹಿರೋಳ್ಳಿ, ನಿಂಬಾಳ ಮತ್ತು ಮಾದನ ಹಿಪ್ಪರಗಿಯಲ್ಲಿ ಗಡಿ ತಪಾಸಣೆ ಕೇಂದ್ರಗಳನ್ನು ತೆರೆಯಲಾಗಿದೆ.

ಸೊಲ್ಲಾಪುರ, ಅಕ್ಕಲಕೋಟ ಮಾರ್ಗವಾಗಿ ರಾಜ್ಯದ ಗಡಿಯೊಳಗೆ ಪ್ರವೇಶಿಸುವ ವಾಹನಗಳಲ್ಲಿನ ಪ್ರಯಾಣಿಕರ ಕೋವಿಡ್ ವರದಿ, 2 ಡೋಸ್ ಲಸಿಕೆ ಪಡೆದ ಪ್ರಯಾಣಿಕರಿಗೆ ಮಾತ್ರ ಪ್ರವೇಶ ನೀಡಲಾಯಿತು.

ಸಕ್ರಿಯ ಪ್ರಕರಣ ಏರಿಕೆ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ಸಕ್ರಿಯ ಪ್ರಕರಣಗಳ ಸಂಖ್ಯೆ ನಾಲ್ಕು ದಿನಗಳಿಂದ ಏರುಗತಿ ಪಡೆದುಕೊಂಡಿದ್ದು, ಸದ್ಯ 6,831 ಮಂದಿ ಆಸ್ಪತ್ರೆ ಸೇರಿದಂತೆ ವಿವಿಧೆಡೆ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ.

ಭಾನುವಾರ 77 ಸಾವಿರ ಮಾದರಿಗಳನ್ನು ಪರೀಕ್ಷೆ ಮಾಡಲಾಗಿದೆ. 315 ಮಂದಿ ಕೋವಿಡ್ ಪೀಡಿತರಾಗಿದ್ದಾರೆ. ಸೋಂಕು ದೃಢ ಪ್ರಮಾಣ ಶೇ 0.63 ರಷ್ಟು ದೃಢಪಟ್ಟಿದೆ. ಆರು ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳ ಸಂಖ್ಯೆ ಎರಡಂಕಿ, 12 ಜಿಲ್ಲೆಗಳಲ್ಲಿ ಒಂದಂಕಿಯಲ್ಲಿದೆ. ಬಾಗಲಕೋಟೆ, ಬೆಳಗಾವಿ ಸೇರಿದಂತೆ 11 ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು ವರದಿಯಾಗಿಲ್ಲ.

ಕಟ್ಟೆಚ್ಚರ: 'ಕೇರಳ ರಾಜ್ಯಕ್ಕೆ ಹೊಂದಿಕೊಂಡಿರುವ ದಕ್ಷಿಣ ಕನ್ನಡ, ಕೊಡಗು, ಚಾಮರಾಜನಗರ ಹಾಗೂ ಮೈಸೂರು ಜಿಲ್ಲೆಯಲ್ಲಿ ನಿರ್ಮಿಸಲಾಗಿರುವ ಚೆಕ್‌ಪೋಸ್ಟ್‌ಗಳಲ್ಲಿ ಎಲ್ಲರನ್ನೂ ಕಟ್ಟುನಿಟ್ಟಾಗಿ ತಪಾಸಣೆ ನಡೆಸಬೇಕು. ಶಿಕ್ಷಣ, ವ್ಯಾಪಾರ– ವ್ಯವಹಾರದ ಸಂಬಂಧ ಕೇರಳದಿಂದ ಇಲ್ಲಿಗೆ ಪ್ರತಿನಿತ್ಯ ಬರುವವರು ಕೋವಿಡ್ ಆರ್‌ಟಿ– ಪಿಸಿಆರ್ ಪರೀಕ್ಷೆಯ ನೆಗೆಟಿವ್ ವರದಿ ಹೊಂದಿರಬೇಕು. ಒಮ್ಮೆ ನಡೆಸಲಾದ ಪರೀಕ್ಷೆಯ ವರದಿಯನ್ನು 14 ದಿನಗಳವರೆಗೆ ಗಡಿಯಲ್ಲಿ ಹಾಜರುಪಡಿಸಬಹುದು' ಎಂದಿದ್ದಾರೆ.

'ವಿದೇಶಿ ಪ್ರಯಾಣಿಕರ ನಿರ್ಬಂಧಕ್ಕೆ ಮನವಿ'

ಒಂದನೇ ಪುಟದಿಂದ

ರಾಜ್ಯದ ಯಾವುದೇ ಭಾಗದಲ್ಲೂ ಹೊಸ ತಳಿಯ ಕೊರೊನಾ ವೈರಾಣು ಪತ್ತೆಯಾಗಿಲ್ಲ. ಆದರೂ, ಮುನ್ನೆಚ್ಚರಿಕೆ ಕ್ರಮವಾಗಿ ವಿದೇಶಗಳಿಂದ ಬರುವವರನ್ನು ಪರೀಕ್ಷೆಗೆ ಒಳಪಡಿಸಿ, ನಿಗಾ ಇಡಲಾಗುತ್ತಿದೆ ಎಂದು ತಿಳಿಸಿದರು.

ಕೇರಳದಿಂದ ರಾಜ್ಯಕ್ಕೆ ಬಂದಿರುವ ಅರೆ ವೈದ್ಯಕೀಯ ಸಿಬ್ಬಂದಿಯಲ್ಲಿ ಕೋವಿಡ್ ಸೋಂಕು ಹೆಚ್ಚಿನ ಪ್ರಮಾಣದಲ್ಲಿ ಕಾಣಿಸಿಕೊಂಡಿದೆ. ಈ ಕಾರಣದಿಂದ ಕೇರಳಕ್ಕೆ ಹೊಂದಿಕೊಂಡಿರುವ ದಕ್ಷಿಣ ಕನ್ನಡ, ಕೊಡಗು, ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳ ಗಡಿ ಭಾಗಗಳಲ್ಲಿ ಕಟ್ಟೆಚ್ಚರಕ್ಕೆ ಆದೇಶಿಸಲಾಗಿದೆ. ಕೇರಳದಿಂದ ಬರುವವರಲ್ಲಿ ಎರಡು ಡೋಸ್ ಲಸಿಕೆ ಪಡೆದಿದ್ದು, ಆರ್‌ಟಿ– ಪಿಸಿಆರ್ ವಿಧಾನದಲ್ಲಿ ಪಡೆದ ಕೋವಿಡ್ ನೆಗೆಟಿವ್ ಇದ್ದವರಿಗೆ ಮಾತ್ರ ರಾಜ್ಯಕ್ಕೆ ಪ್ರವೇಶ ನೀಡಲಾಗುವುದು ಎಂದು ಹೇಳಿದರು.

ಧಾರವಾಡ, ಬೆಂಗಳೂರು ಮತ್ತು ಮೈಸೂರು ನಗರಗಳಲ್ಲಿ ಹಾಸ್ಟೆಲ್‌ನಲ್ಲಿರುವ ವಿದ್ಯಾರ್ಥಿಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಕೋವಿಡ್ ದೃಢಪಟ್ಟಿದೆ. ಅಂತಹ ಸ್ಥಳಗಳನ್ನೂ ನಿರ್ಬಂಧಿತ ವಲಯ ಎಂದು ಘೋಷಿಸಲಾಗುತ್ತಿದೆ. ಧಾರವಾಡದ ಎಸ್.ಡಿ.ಎಂ. ಕಾಲೇಜಿನ ವೈದ್ಯರು, ನರ್ಸ್‌ಗಳಿಗೆ ಕೋವಿಡ್ ಪತ್ತೆ ಪರೀಕ್ಷೆ ಮಾಡಿಸಲಾಗುತ್ತಿದೆ ಎಂದರು.

ರಾಜ್ಯದಲ್ಲಿ ಈವರೆಗೆ 91 ಲಕ್ಷ ಜನರಿಗೆ ಮೊದಲನೇ ಡೋಸ್ ಕೋವಿಡ್ ಲಸಿಕೆ ನೀಡಲಾಗಿದೆ. ಡಿಸೆಂಬರ್ ಅಂತ್ಯದೊಳಗೆ ಶೇಕಡ 70ರಷ್ಟು ಮಂದಿಗೆ ಎರಡನೇ ಡೋಸ್ ಲಸಿಕೆ ನೀಡುವ ಗುರಿ ಇದೆ. ಈಗ ರಾಜ್ಯದಲ್ಲಿ 80 ಲಕ್ಷ ಡೋಸ್ ಲಸಿಕೆ ದಾಸ್ತಾನಿದೆ ಎಂದರು.

ಮಾರ್ಕೋನಹಳ್ಳಿ ಜಲಾಶಯದಿಂದ ನೀರು

ನಾಲ್ವರು ನೀರುಪಾಲು

ಪ್ರಜಾವಾಣಿ ವಾರ್ತೆ

ಕುಣಿಗಲ್ (ತುಮಕೂರು): ಮಾರ್ಕೋನಹಳ್ಳಿ ಜಲಾಶಯದ ಕೋಡಿಹಳ್ಳದ ಬಳಿ ಭಾನುವಾರ ಮಧ್ಯಾಹ್ನ ನಡೆದ ಎರಡು ಪ್ರತ್ಯೇಕ ಘಟನೆಗಳಲ್ಲಿ ನಾಲ್ವರು ನೀರಿನಲ್ಲಿ ಕೊಚ್ಚಿ ಹೋಗಿದ್ದಾರೆ. ಇಬ್ಬರು ಮಕ್ಕಳನ್ನು ಕುಟುಂಬ ಸದಸ್ಯರೇ ರಕ್ಷಿಸಿದ್ದಾರೆ.

ಕೋಡಿಹಳ್ಳ ವೀಕ್ಷಿಸಲು ತೆರಳಿದ್ದ ಕೋಟೆ ಪ್ರದೇಶದ ಎರಡು ಕುಟುಂಬದ ಸದಸ್ಯರು ಆಟವಾಡಲು ನೀರಿಗೆ ಇಳಿದಾಗ ಏಕಾಏಕಿ ನೀರಿನ ಹರಿವು ಹೆಚ್ಚಾಗಿ ಪರ್ವೀನ್ ತಾಜ್ (35) ಮತ್ತು ಸಾದಿಕಾ (17) ಕೊಚ್ಚಿ ಹೋಗಿದ್ದಾರೆ. ಅರ್ಮಾನ್ (5) ಮತ್ತು ತಬರೆಸ್ (11) ಎಂಬ ಮಕ್ಕಳು ರೇಷ್ಮಾ ಎಂಬುವವರ ಸಮಯ ಪ್ರಜ್ಞೆಯಿಂದಾಗಿ ಬದುಕಿ ಉಳಿದಿದ್ದಾರೆ.

ಘಟನೆ ನಡೆದ ಸ್ಥಳದ ಸಮೀಪದಲ್ಲಿಯೇ ಸಹೋದರರಿಬ್ಬರು ನೀರು ಪಾಲಾಗಿರುವ ಶಂಕೆಯನ್ನು ಪೊಲೀಸರು ವ್ಯಕ್ತಪಡಿಸಿದ್ದಾರೆ.

ಮುಖ್ಯಾಂಶಗಳು
- ಕೊಚ್ಚಿ ಹೋದ ಮಹಿಳೆ ಮತ್ತು ಬಾಲಕಿಗಾಗಿ ಶೋಧ
- ನೀರಿನಲ್ಲಿ ಆಟವಾಡುತ್ತಿದ್ದ ಅಣ್ಣ–ತಮ್ಮ ನಾಪತ್ತೆ

ಹಳ್ಳದಲ್ಲಿ ಕೊಚ್ಚಿ ಹೋದ ಮಹಿಳೆ ಮತ್ತು ಯುವತಿಗಾಗಿ ಪರಿಶೀಲನೆ ನಡೆಸುತ್ತಿದ್ದ ಪೊಲೀಸರಿಗೆ ಹಳ್ಳದ ದಡದಲ್ಲಿ ನಿಂತಿದ್ದ ವಾರಸುದಾರರಿಲ್ಲದ ದ್ವಿಚಕ್ರ ವಾಹನ ಪತ್ತೆಯಾಗಿದೆ. ಈ ಬಗ್ಗೆ ವಿಚಾರಣೆ ನಡೆಸಿದಾಗ ವಾಹನ ತಂದಿದ್ದ ಯುವಕರಿಬ್ಬರೂ ನೀರು ಪಾಲಾಗಿರುವ ವಿಷಯ ಪ್ರತ್ಯಕ್ಷದರ್ಶಿಗಳಿಂದ ತಿಳಿದು ಬಂದಿದೆ.

ನಾಪತ್ತೆಯಾದವರನ್ನು ತಾಲ್ಲೂಕಿನ ಎಡೆಯೂರಿನ ಹನುಮಂತರಾವ್ ಎಂಬುವವರ ಮೊಮ್ಮಕಳಾದ ರಾಜು (23) ಮತ್ತು ಅಪ್ಪು (17) ಎಂದು ಗುರುತಿಸಲಾಗಿದೆ. ದ್ವಿಚಕ್ರ ವಾಹನವನ್ನು ಈ ಸಹೋದರರು ತಂದಿರುವುದು ಖಚಿತವಾಗಿದೆ. ನೀರಿನಲ್ಲಿ ಆಟವಾಡುತ್ತಿದ್ದ ಇಬ್ಬರೂ ನಂತರ ಕಾಣೆಯಾಗಿದ್ದಾರೆ ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ.

ಬೈಕ್ ಸಿಕ್ಕ ಸ್ಥಳದ ಸುತ್ತಮುತ್ತ ಸಹೋದರರಿಗಾಗಿ ಪೊಲೀಸರು ಹುಡುಕಾಟ ನಡೆಸಿದ್ದು, ಈವರೆಗೂ ಅವರು ಪತ್ತೆಯಾಗಿಲ್ಲ. ಅವರು ತಂದಿದ್ದ ದ್ವಿಚಕ್ರವಾಹನ ಅನಾಥವಾಗಿ ನಿಂತಿದೆ. ಹಾಗಾಗಿ ಈ ಇಬ್ಬರೂ ನೀರು ಪಾಲಾಗಿರಬಹುದು ಎಂದು ಪೊಲೀಸರು ಶಂಕಿಸಿದ್ದಾರೆ. ಕೊಚ್ಚಿ ಹೋದವರಿಗಾಗಿ ಪೊಲೀಸರು ಮತ್ತು ಅಗ್ನಿಶಾಮಕ ದಳದ ಸಿಬ್ಬಂದಿ ಶೋಧ ಕಾರ್ಯ ಮುಂದುವರೆಸಿದ್ದಾರೆ.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆ ಆರ್ ಎಸ್*	124.80	124.80	11,353	7,006
ಹಾರಂಗಿ	2,859	2,857.32	550	600
ಕಬಿನಿ	2,284	2,283.82	1,200	700
ಹೇಮಾವತಿ	2,922	2,913.60	1,828	840
ಲಿಂಗನಮಕ್ಕಿ	1,819	1,812.75	2440	-
ಸೂಪಾ (ಮೀ)	564	554.95	633	2,793
ಮಾಣಿ	594.36	586.56	448	-
ತುಂಗಭದ್ರಾ	1,633	1,633	17.172	17.412
ಮಲಪ್ರಭಾ	2,079.50	2,077.10	569	569
ಘಟಪ್ರಭಾ	2,175	2,165.78	319	179
ಭದ್ರಾ	186	186	4,529	4,529
ಆಲಮಟ್ಟಿ (ಮೀ)	519.60	518.50	2327	580
ನಾರಾಯಣಪುರ (ಮೀ)	492.25	492.06	1,340	120

*ನೆಲಮಟ್ಟದಿಂದ

ಮುನವ್ವರ್ ಫಾರೂಕಿ ಕಾರ್ಯಕ್ರಮ ರದ್ದು

ಒಂದನೇ ಪುಟದಿಂದ

'ಮಧ್ಯಪ್ರದೇಶದ ಇಂದೋರ್‌ನಲ್ಲಿ ಜನವರಿಯಲ್ಲಿ 'ಮುನರೋ ಕಂಪೇಮ್' ಕಾರ್ಯಕ್ರಮ ನಡೆಸಿಕೊಟ್ಟಿದ್ದ ಮುನವ್ವರ್, ಹಿಂದೂ ಧರ್ಮ, ದೇವತೆಗಳು ಹಾಗೂ ಕೇಂದ್ರ ಗೃಹ ಸಚಿವ ಅಮಿತ್ ಷಾ ಬಗ್ಗೆ ಅವಹೇಳನಕಾರಿಯಾಗಿ ಮಾತನಾಡಿದ್ದರು. ಅವರ ವಿರುದ್ಧ ಪ್ರಕರಣವೂ ದಾಖಲಾಗಿತ್ತು. 37 ದಿನ ಜೈಲಿನಲ್ಲಿದ್ದ ಅವರು, ಜಾಮೀನು ಮೇಲೆ ಹೊರಬಂದಿದ್ದಾರೆ' ಎಂಬ ಸಂಗತಿಯನ್ನೂ ದೂರಿನಲ್ಲಿ ಉಲ್ಲೇಖಿಸಿದ್ದರು.

ಕಮಲ್ ಪಂತ್ ಸೂಚನೆಯಂತೆ ದೂರಿನ ಪರಿಶೀಲನೆ ನಡೆಸಿದ್ದ ಅಶೋಕನಗರ ಪೊಲೀಸರು, ಕಾರ್ಯಕ್ರಮ ಆಯೋಜಕರಾದ ದೆಹಲಿಯ ಕರ್ಟೈನ್ ದೂರಿಯಾ ಇವೆಂಟ್ಸ್ ಏಜೆನ್ಸಿಯ ವಿಶೇಷ್ ದೂರಿಯಾ ಹಾಗೂ ಸಿದ್ದಾರ್ಥ್ ದಾಸ್ ಅವರಿಗೆ ನೋಟಿಸ್ ನೀಡಿದ್ದರು.

ಸಂಪರ್ಕಕ್ಕೆ ಸಿಗದ ಅಧಿಕಾರಿಗಳು: 'ಸೆನ್ಸಾರ್ ಪಡೆದಿರುವ ಕಾರ್ಯಕ್ರಮಕ್ಕೆ ಪೊಲೀಸರು ನೀಡಿರುವ ನೋಟಿಸ್ ನ್ಯಾಯಸಮ್ಮತವಲ್ಲ' ಎಂದು ಆರೋಪಿಸಿದ ಆಯೋಜಕರು, ನೋಟಿಸ್ ಪರಿಶೀಲಿಸುವಂತೆ ಪೊಲೀಸ್ ಹಿರಿಯ ಅಧಿಕಾರಿಗಳನ್ನು ಕೋರಿದರೂ ಪ್ರತಿಕ್ರಿಯೆ ಸಿಗಲಿಲ್ಲ.

'ಕಾನೂನಿನ ಮೂಲಕ ಒಪ್ಪಿಗೆ ಪಡೆದು ಕಾರ್ಯಕ್ರಮ ಆಯೋಜಿಸಲಾಗಿತ್ತು. ಅಷ್ಟಾದರೂ ಪೊಲೀಸರು ಏಕಾಏಕಿ ನೋಟಿಸ್ ನೀಡಿದ್ದಾರೆ. ಗೊಂದಲ ಬೇಡವೆಂದು ಸದ್ಯಕ್ಕೆ ಕಾರ್ಯಕ್ರಮ ರದ್ದು ಮಾಡಿದ್ದೇವೆ' ಎಂದು ಆಯೋಜಕರು ಹೇಳಿದರು.

'ರದ್ದು ಮಾಡಿಸಲು ಬೆದರಿಕೆಯೇ ಕಾರಣ'

ಈ ಕುರಿತು 'ಟ್ವೀಟ್' ಮಾಡಿರುವ ಮುನವ್ವರ್ ಫಾರೂಕಿ, 'ಕಾರ್ಯಕ್ರಮದಿಂದ ಯಾವುದೇ ಸಮಸ್ಯೆ ಇರಲಿಲ್ಲ. ಆದರೂ ರದ್ದುಪಡಿಸಲಾಗಿದೆ. ಇದು ನ್ಯಾಯಸಮ್ಮತವಲ್ಲ. ದಿಢೀರ್ ರದ್ದುಪಡಿಸುವುದರ ಹಿಂದೆ ಯಾರದ್ದೋ ಬೆದರಿಕೆ ಇರುವಂತೆ ಕಾಣಿಸುತ್ತಿದೆ' ಎಂದಿದ್ದಾರೆ.

'ದೇಶದ ಜನತೆ ಕಾರ್ಯಕ್ರಮದ ಬಗ್ಗೆ ಅಪಾರ ಪ್ರೀತಿ, ಅಭಿಮಾನ ವ್ಯಕ್ತಪಡಿಸಿದ್ದರು. ಕಾರ್ಯಕ್ರಮದಿಂದ ಯಾವುದೇ ಸಮಸ್ಯೆ ಇಲ್ಲವೆಂಬ ಬಗ್ಗೆ ಸೆನ್ಸಾರ್ ಪ್ರಮಾಣ ಪತ್ರ ಸಹ ಇದೆ. ಕೆಲವರ ಬೆದರಿಕೆಯಿಂದಾಗಿ ಎರಡು ತಿಂಗಳಲ್ಲಿ 12 ಕಾರ್ಯಕ್ರಮಗಳು ರದ್ದು ಮಾಡಲಾಗಿದೆ' ಎಂದೂ ಹೇಳಿದ್ದಾರೆ.

'ನನ್ನ ಕಾರ್ಯಕ್ರಮದ ಆಯೋಜಕರ ತಂಡ, ತಿಂಗಳ ಹಿಂದಷ್ಟೇ ನಟ ಪುನೀತ್ ರಾಜಕುಮಾರ್ ಅವರ ಸಂಸ್ಥೆಗೆ ಸಂಬಂಧಪಟ್ಟವರನ್ನೂ ಭೇಟಿ ಆಗಿತ್ತು. ಕಾರ್ಯಕ್ರಮ ಬಗ್ಗೆ ಮಾತನಾಡಿತ್ತು' ಎಂಬ ಸಂಗತಿಯನ್ನೂ ಟ್ವೀಟ್‌ನಲ್ಲಿ ಬರೆದುಕೊಂಡಿದ್ದಾರೆ.

ಯಡಿಯೂರಪ್ಪ ವಿರುದ್ಧ ವಿಚಾರಣೆ

ಒಂದನೇ ಪುಟದಿಂದ

ಅದರಲ್ಲಿ ಬೆಳ್ಳಂದೂರು ಮತ್ತು ದೇವರಬೀಸನಹಳ್ಳಿ ಗ್ರಾಮಗಳ ವಿವಿಧ ಸರ್ವೆ ನಂಬರ್‌ಗಳ 15 ಎಕರೆ 30 ಗುಂಟೆ ಜಮೀನನ್ನು ಆಗಿನ ಉಪ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಆದೇಶದಂತೆ ಭೂಸ್ವಾಧೀನ ಪ್ರಕ್ರಿಯೆಯಿಂದ ಕೈಬಿಟ್ಟು 2006 ರ ಜೂನ್ 21ರಂದು ಆದೇಶ ಹೊರಡಿಸಲಾಗಿತ್ತು.

ಕೆಐಎಡಿಬಿ ಅಧಿಕಾರಿಗಳ ವಿರೋಧದ ನಡುವೆಯೂ ಈ ಜಮೀನನ್ನು ಕಾನೂನುಬಾಹಿರವಾಗಿ ಡಿನೋಟಿಫಿಕೇಷನ್ ಮಾಡುವ ಮೂಲಕ ಭ್ರಷ್ಟಾಚಾರ ಎಸಗಿದ್ದಾರೆ ಎಂದು ಆರೋಪಿಸಿ ಹಿಂದಿನ ಕೈಗಾರಿಕಾ ಸಚಿವ ಆರ್.ವಿ. ದೇಶಪಾಂಡೆ, ಬಿ.ಎಸ್. ಯಡಿಯೂರಪ್ಪ ಸೇರಿದಂತೆ ಹತ್ತು ಮಂದಿಯ ವಿರುದ್ಧ ಖಾಸಗಿ ದೂರು ಸಲ್ಲಿಸಿದ್ದರು. ದೇಶಪಾಂಡೆ ವಿರುದ್ಧದ ವಿಚಾರಣೆಯನ್ನು ರದ್ದುಗೊಳಿಸಿ ಹೈಕೋರ್ಟ್ 2015ರಲ್ಲಿ ಆದೇಶ ಹೊರಡಿಸಿತ್ತು. ಉಳಿದ ಎಂಟು ಆರೋಪಿಗಳ ವಿರುದ್ಧದ ದೂರನ್ನು ವಿಚಾರಣಾ ನ್ಯಾಯಾಲಯ ತಿರಸ್ಕರಿಸಿದ್ದು, ಅದನ್ನು ಹೈಕೋರ್ಟ್ 2017 ರಲ್ಲಿ ಮಾನ್ಯ ಮಾಡಿತ್ತು.

ಯಡಿಯೂರಪ್ಪ ಕೂಡ ತಮ್ಮ ವಿರುದ್ಧದ ದೂರನ್ನು ರದ್ದುಗೊಳಿಸುವಂತೆ ಕೋರಿ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು. 2020ರ ಡಿಸೆಂಬರ್ 22ರಂದು ಅರ್ಜಿಯನ್ನು ವಜಾಗೊಳಿಸಿದ್ದ ಹೈಕೋರ್ಟ್, 'ಯಡಿಯೂರಪ್ಪ ವಿರುದ್ಧದ ಆರೋಪಗಳಲ್ಲಿ ಹುರುಳಿದೆ ಎಂಬುದು ಮೇಲ್ನೋಟಕ್ಕೆ ಕಾಣಿಸುತ್ತಿದೆ' ಎಂದು ಹೇಳಿತ್ತು. ನಾಲ್ಕು ವರ್ಷಗಳಾದರೂ ತನಿಖೆ ಪೂರ್ಣಗೊಳಿಸದ ಲೋಕಾಯುಕ್ತ ಪೊಲೀಸರನ್ನು ನ್ಯಾಯಾಲಯ ತರಾಟೆಗೆ ತೆಗೆದುಕೊಂಡಿತ್ತು.

ಎರಡು ಬಾರಿ 'ಬಿ' ವರದಿ: ಯಡಿಯೂರಪ್ಪ ವಿರುದ್ಧದ ಆರೋಪಗಳಿಗೆ ಪೂರಕವಾದ ಸಾಕ್ಷ್ಯಗಳಿಲ್ಲದ ಕಾರಣದಿಂದ ವಿಚಾರಣೆಯನ್ನು ಕೈಬಿಡುವಂತೆ ಶಿಫಾರಸು ಮಾಡಿ ಲೋಕಾಯುಕ್ತ ಡಿವೈಎಸ್‌ಪಿ ಎಂ.ಜಿ. ಶಂಕರನಾರಾಯಣ 2021ರ ಜನವರಿ 18ರಂದು ಅಂತಿಮ (ಬಿ) ವರದಿ ಸಲ್ಲಿಸಿದ್ದರು. ಅದನ್ನು ಪ್ರಶ್ನಿಸಿ ದೂರುದಾರರ ಪರ ವಕೀಲ ಕೆ.ವಿ. ಧನಂಜಯ ಆಕ್ಷೇಪಣಾ ಅರ್ಜಿ ಸಲ್ಲಿಸಿದ್ದರು.

ವಿಚಾರಣೆ ನಡೆಸಿ ಬಳಿಕ 'ಬಿ' ವರದಿಯನ್ನು ತಿರಸ್ಕರಿಸಿದ್ದ ನ್ಯಾಯಾಲಯ, ಮರು ತನಿಖೆ ನಡೆಸುವಂತೆ ಜುಲೈ 21ರಂದು ಲೋಕಾಯುಕ್ತ ಪೊಲೀಸರಿಗೆ ಆದೇಶಿಸಿತ್ತು. ಆಗಸ್ಟ್ 21ರಂದು ಎರಡನೇ ಬಾರಿಗೆ ಡಿವೈಎಸ್‌ಪಿ ಶಂಕರನಾರಾಯಣ 'ಬಿ' ವರದಿ ಸಲ್ಲಿಸಿದ್ದರು. ಅದನ್ನೂ ಪ್ರಶ್ನಿಸಿ ಆಕ್ಷೇಪಣಾ ಅರ್ಜಿ ಸಲ್ಲಿಸಿದ್ದ ದೂರುದಾರರ ಪರ ವಕೀಲರು, 'ಲೋಕಾಯುಕ್ತ ಪೊಲೀಸರು ಸರಿಯಾಗಿ ತನಿಖೆ ನಡೆಸದೇ ವರದಿ ನೀಡಿದ್ದಾರೆ. ಅದನ್ನು ತಿರಸ್ಕರಿಸಿ, ನ್ಯಾಯಾಲಯ ನೇರವಾಗಿ ವಿಚಾರಣೆ ಆರಂಭಿಸಬೇಕು' ಎಂದು ಮನವಿ ಮಾಡಿದ್ದರು.

'ಈ ಪ್ರಕರಣದಲ್ಲಿ ಉಲ್ಲೇಖಿಸಿರುವ ಡಿನೋಟಿಫಿಕೇಷನ್ ಕಾನೂನುಬಾಹಿರವಾಗಿ ನಡೆದಿದೆ ಎಂಬುದು ಮೇಲ್ನೋಟಕ್ಕೆ ಕಂಡುಬರುತ್ತಿದೆ. ಎರಡನೇ ಆರೋಪಿಯಾದ ಬಿ.ಎಸ್. ಯಡಿಯೂರಪ್ಪ ವಿರುದ್ಧ ಭ್ರಷ್ಟಾಚಾರ ನಿಯಂತ್ರಣ ಕಾಯ್ದೆಯ ಸೆಕ್ಷನ್ 13(1)(ಡಿ) ಮತ್ತು 13(2)ರ ವ್ಯಾಪ್ತಿಗೆ ಬರುವ ಆರೋಪಗಳಿಗೆ ಸಂಬಂಧಿಸಿದಂತೆ ವಿಚಾರಣೆ ಆರಂಭಿಸಲು ತನಿಖಾಧಿಕಾರಿಯ ವರದಿಯಲ್ಲೇ ಸಾಕಷ್ಟು ಸಾಕ್ಷ್ಯಗಳಿವೆ' ಎಂದು ನ್ಯಾಯಾಧೀಶ ಬಿ. ಜಯಂತ್ ಕುಮಾರ್ ಆದೇಶದಲ್ಲಿ ತಿಳಿಸಿದ್ದಾರೆ.

ಮುಂದಿನ ಪ್ರಕ್ರಿಯೆ ಏನು?

ಡಿಸೆಂಬರ್ 1ರಂದು ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯವು ದೂರುದಾರ ವಾಸುದೇವ ರೆಡ್ಡಿ ಅವರ ಪ್ರಮಾಣಿತ ಹೇಳಿಕೆಯನ್ನು ದಾಖಲಿಸಿಕೊಳ್ಳಲಿದೆ. ಆ ಬಳಿಕ ಯಡಿಯೂರಪ್ಪ ಅವರಿಗೆ ವಿಚಾರಣೆಗೆ ಹಾಜರಾಗುವಂತೆ ನ್ಯಾಯಾಲಯ ಸಮನ್ಸ್ ಜಾರಿಗೊಳಿಸಲಿದೆ.

'2013 ರಲ್ಲಿ ಹತ್ತು ಮಂದಿಯ ವಿರುದ್ಧ ನ್ಯಾಯಾಲಯಕ್ಕೆ ದೂರು ಸಲ್ಲಿಸಲಾಗಿತ್ತು. ಈಗ ಯಡಿಯೂರಪ್ಪ ವಿರುದ್ಧ ಮಾತ್ರ ವಿಚಾರಣೆ ನಡೆಯಲಿದೆ. ನ್ಯಾಯಾಲಯ ಸಮನ್ಸ್ ಜಾರಿಗೊಳಿಸಿದ ಬಳಿಕ ಯಡಿಯೂರಪ್ಪ ಅವರು ಜಾಮೀನು ಕೋರಿ ಅರ್ಜಿ ಸಲ್ಲಿಸಬೇಕಾಗುತ್ತದೆ' ಎನ್ನುತ್ತಾರೆ ಕಾನೂನು ತಜ್ಞರು.

ಒಳನೋಟ

ಸಿರಿಧಾನ್ಯ: ಸಂಸ್ಕರಣೆಯೇ ಸವಾಲು

ಬೆಂಗಳೂರು: 'ಸಿರಿಧಾನ್ಯ:ಸಂಸ್ಕರಣೆಯೇ ಸವಾಲು' ಶೀರ್ಷಿಕೆಯಡಿ 'ಪ್ರಜಾವಾಣಿ'ಯಲ್ಲಿ ಭಾನುವಾರ (ನ.28) ಪ್ರಕಟವಾದ 'ಒಳನೋಟ' ವರದಿಗೆ ರಾಜ್ಯದಾದ್ಯಂತ ಓದುಗರು ಪ್ರತಿಕ್ರಿಯಿಸಿದ್ದಾರೆ. ಆಯ್ದ ಪ್ರತಿಕ್ರಿಯೆಗಳು ಇಲ್ಲಿವೆ.

ನಿರುದ್ಯೋಗಿಗಳಿಗೆ ಪ್ರೋತ್ಸಾಹ ನೀಡಿ



ಸಿರಿಧಾನ್ಯ ಉತ್ಪನ್ನಗಳಿಗೆ ಮಾರುಕಟ್ಟೆ ವ್ಯವಸ್ಥೆ ಕಲ್ಪಿಸಲು ಹೋಟೆಲ್, ಬೇಕರಿ ಮಳಿಗೆಗಳನ್ನು ತೆರೆಯಲು ಅನುಕೂಲವಾಗುವಂತೆ ನಿರುದ್ಯೋಗಿ ಯುವಕ-ಯುವತಿಯರಿಗೆ ಸರ್ಕಾರ ಪ್ರೋತ್ಸಾಹ ನೀಡಬೇಕು. ಸಿರಿಧಾನ್ಯ ಪೋಷಕಾಂಶಗಳ ಬಗ್ಗೆ ಯುವಕ-ಯುವತಿಯರಲ್ಲಿ ಅರಿವು ಮೂಡಿಸುವುದರಿಂದ ಸಿರಿಧಾನ್ಯ ಉತ್ಪನ್ನಗಳಿಗೆ ಬೇಡಿಕೆ ಸೃಷ್ಟಿಸಬಹುದು. ಇದಕ್ಕಾಗಿ ಸರ್ಕಾರ ವಿಶೇಷ ಯೋಜನೆಗಳನ್ನು ಜಾರಿ ತರಬೇಕು.

ಶರತ್ ಕುಮಾರ್, ಬೆಂ. ಗ್ರಾಮಾಂತರ

'ಸಿರಿಧಾನ್ಯಗಳ ಮೇಳ ಆಯೋಜಿಸಿ'



ರೈತರಂತೆ ಯೋಚಿಸುತ್ತಿದ್ದರೆ ನಾವು ಬಡವರಾಗಿಯೇ ಉಳಿಯಬೇಕು. ಉದ್ಯಮಿಯಂತೆ ಯೋಚಿಸಿದರೆ ಮಾತ್ರ ಕೃಷಿಯಲ್ಲಿ ಲಾಭ ಕಾಣಬಹುದು. ಈಗಿನ ಕಾಲದಲ್ಲಿ ಸಿರಿಧಾನ್ಯಗಳಿಗೆ ಬಹಳ ಬೇಡಿಕೆ ಇದೆ. ಹಾಗಾಗಿ, ಸರ್ಕಾರ ಮೂರು ತಿಂಗಳಿಗೊಮ್ಮೆ ಸಿರಿಧಾನ್ಯ ಮೇಳಗಳನ್ನು ಆಯೋಜಿಸಿದರೆ, ರೈತರ ಸಿರಿಧಾನ್ಯಗಳಿಗೆ ಮಾರುಕಟ್ಟೆ ವ್ಯವಸ್ಥೆ ಸಿಗುತ್ತದೆ ಹಾಗೂ ಲಾಭವೂ ಕಾಣುತ್ತಾರೆ. ಸಿರಿಧಾನ್ಯಗಳಿಗೆ ಸರ್ಕಾರವೇ ಸೂಕ್ತ ಬೆಂಬಲ ಬೆಲೆ ನಿಗದಿಪಡಿಸಬೇಕು. ರಾಜ್ಯಕ್ಕೆ ಸಿರಿಧಾನ್ಯಗಳನ್ನು ಸಂಸ್ಕರಣೆ ಮಾಡುವ ತಂತ್ರಗಾರಿಕೆ ಬಂದರೆ, ಜನರಿಗೆ ಕಡಿಮೆ ಬೆಲೆಗೆ ಸಿರಿಧಾನ್ಯ ಸಿಗಲಿದೆ.

ಚನ್ನಬಸಪ್ಪ, ಕೊಟ್ಟೂರು, ವಿಜಯನಗರ ಜಿಲ್ಲೆ

ಸಿರಿಧಾನ್ಯ ಕೃಷಿ ಉದ್ದಿಮೆಯಾಗಲಿ



ಸಿರಿಧಾನ್ಯಗಳ ಬಳಕೆಯಿಂದ ಆರೋಗ್ಯವು ವೃದ್ಧಿಸುತ್ತದೆ. ದೇಹದಲ್ಲಿ ರೋಗನಿರೋಧಕ ಶಕ್ತಿ ಹೆಚ್ಚಿಸಲೂ ನೆರವಾಗುತ್ತವೆ. ಸರ್ಕಾರ 'ಕೃಷಿ ವಿಜ್ಞಾನ ಕೇಂದ್ರ'ಗಳ (ಕೆವಿಕೆ) ಮುಖೇನ ಸಿರಿಧಾನ್ಯಗಳ ಬಗ್ಗೆ ಪ್ರಚಾರ ನೀಡಬೇಕು. ಸಿರಿಧಾನ್ಯಗಳನ್ನು ಬೆಳೆಯಲು ರೈತರಿಗೆ ಪ್ರೋತ್ಸಾಹ ನೀಡಿ, ಬೆಂಬಲ ಬೆಲೆ ನಿಗದಿಪಡಿಸಬೇಕು. ಸಿರಿಧಾನ್ಯಗಳ ಬೆಳೆ ಸಂಸ್ಕರಣೆ ಯಂತ್ರೋಪಕರಣ ಖರೀದಿಗೆ ಸರ್ಕಾರ ಸಬ್ಸಿಡಿ ನೀಡಬೇಕು.

ವೀರಭದ್ರಪ್ಪ ಉಪ್ಪಿನ, ಬೀದರ್

ರೈತರಿಗೆ ಪ್ರೋತ್ಸಾಹ ಧನ ನೀಡಿ



ರೈತರು ಈ ಹಿಂದೆ ತಮ್ಮ ಹೊಲದಲ್ಲಿ ನವಣೆ, ರಾಗಿ, ಜೋಳ ಬೆಳೆಯುತ್ತಿದ್ದರು. ಬದಲಾದ ಜೀವನ ಶೈಲಿ ಮತ್ತು ವಿಜ್ಞಾನ– ತಂತ್ರಜ್ಞಾನ ಬೆಳವಣಿಗೆಯಿಂದ ರೈತರು ವಾಣಿಜ್ಯ ಬೆಳೆಗಳತ್ತ ಮುಖ ಮಾಡಿದರು. ಕ್ರಮೇಣ ಆರೋಗ್ಯ ಸಮಸ್ಯೆಗಳೂ ಹೆಚ್ಚಾದವು. ಈಗ ಮತ್ತೆ ನಮ್ಮ ಪೂರ್ವಜರ ಆಹಾರ ಪದ್ಧತಿಯನ್ನು ಅನುಸರಿಸಲು ಪ್ರಾರಂಭಿಸಿದ್ದೇವೆ. ಸಿರಿಧಾನ್ಯಗಳಿಗೆ ಸೂಕ್ತ ಮಾರುಕಟ್ಟೆ, ಬೆಳೆಗೆ ತಕ್ಕ ಬೆಲೆ ಸಿಗದಿರುವುದು ಬೆಳೆ ಸಂಸ್ಕರಣೆ ವ್ಯವಸ್ಥೆ ಇಲ್ಲದಿರುವುದರಿಂದ ರೈತರು ಸಿರಿಧಾನ್ಯಗಳನ್ನು ಬೆಳೆಯಲು ಹಿಂದೇಟು ಹಾಕುತ್ತಿದ್ದಾರೆ. ಸಿರಿಧಾನ್ಯ ಬೆಳೆಯಲು ಸರ್ಕಾರ ಅವರಿಗೆ ಪ್ರೋತ್ಸಾಹಧನ ನೀಡಬೇಕು.

ಮಲ್ಲಪ್ಪ, ಹಾವೇರಿ



ಸಾಹಿತ್ಯ ರುಚಿಸುವ ಪುಟ್ಟ ಹೆಜ್ಜೆಗಳು



ಸಾಹಿತ್ಯಕ್ಕೆ ಸಂಬಂಧಿಸಿದ ಪಾಕ್ಷಿಕ, ಮಾಸಿಕ ಪತ್ರಿಕೆಗಳನ್ನು ಓದಲು ಪ್ರೇರೇಪಿಸುವುದರಿಂದ, ಮಕ್ಕಳ ಅಂತರ್ಯದಲ್ಲಿ ಸಾಹಿತ್ಯದ ಆಸಕ್ತಿ ಮೂಡಿ, ಬಾಲ್ಯದಿಂದಲೇ ಸಾಹಿತ್ಯಾಭಿರುಚಿ ಬೆಳೆಯುತ್ತದೆ.



ಭಾರತಿ. ಎ

ಶಿಕ್ಷಣವೆಂದರೆ ಪಠ್ಯಪುಸ್ತಕದ ಜ್ಞಾನ ವರ್ಗಾವಣೆಯಷ್ಟೇ ಅಲ್ಲ. ಮಕ್ಕಳು ಪಠ್ಯ ಪುಸ್ತಕಗಳ ಹೊರತಾಗಿಯೂ ಓದುವ, ತಾವೇ ಬರೆಯುವ ಅಭ್ಯಾಸ ರೂಢಿಸಿಕೊಳ್ಳಲು ಪ್ರೇರೇಪಿಸಬೇಕು. ಇದು ಮಕ್ಕಳಲ್ಲಿ ಸಾಹಿತ್ಯಾಭಿರುಚಿ ಬೆಳೆಸುವ ಮೊದಲ ಮೆಟ್ಟಿಲು. ಈ ಹಂತದಲ್ಲಿ ಮಕ್ಕಳ ಆಸಕ್ತಿಗನುಗುಣವಾದ ಒಂದಿಷ್ಟು ಸಾಹಿತ್ಯ ಕೃತಿಗಳು, ಪತ್ರಿಕೆಗಳ ಮಕ್ಕಳ ಪುರವಣಿಗಳು, ಕೆಲವು ಪುಟಾಣಿ ಸಂಬಂಧಿಸಿದ ಪಾಕ್ಷಿಕ, ಮಾಸ ಪತ್ರಿಕೆಗಳನ್ನು ಓದಲು ಉತ್ತೇಜಿಸಿದರೆ, ಅವರಿಗೆ ಸಾಹಿತ್ಯ ಆಸಕ್ತಿ ಮೂಡುತ್ತದೆ. ಓದು ಮುಂದುವರಿದಂತೆಲ್ಲಾ ತಮ್ಮ ಅನುಭವ ಹಾಗೂ ಕಲ್ಪನೆಗಳನ್ನು ಅಕ್ಷರ ರೂಪಕ್ಕಿಳಿಸಲು ಸಾಧ್ಯ.

ಅನುದಾನದ ಸಹಕಾರ

ಮಕ್ಕಳಲ್ಲಿ ಕ್ರಿಯಾಶೀಲ ಸಾಹಿತ್ಯದ ಚಟುವಟಿಕೆಗಳನ್ನು ಉದ್ದೀಪನಗೊಳಿಸಲು ಶಾಲೆಗಳಿಗೆ ಆರ್ಥಿಕ ನೆರವು ಅಗತ್ಯ. ಇಂತಹ ಚಟುವಟಿಕೆಗಳಿಗೆ ಸಹಕಾರ ನೀಡುವ ಕೆಲವು ಸಂಸ್ಥೆಗಳಿವೆ. ಅದರಲ್ಲಿ ಬೆಂಗಳೂರಿನ ಇಂಡಿಯಾ ಫೌಂಡೇಶನ್ ಫಾರ್ ದಿ ಆರ್ಟ್ಸ್ ಸಂಸ್ಥೆ ಕೂಡ ಒಂದು. ಈ ಸಂಸ್ಥೆ ಸರ್ಕಾರಿ ಶಾಲೆಗಳಲ್ಲಿ ಮಕ್ಕಳಿಗೆ ಕಲೆ ಮತ್ತು ಸಾಹಿತ್ಯದ ಮೂಲಕ ಪಠ್ಯಂತರ್ಗತ ಕಲಿಕಾ ಪ್ರಯೋಗಗಳನ್ನು ನಡೆಸಲು ಆಸಕ್ತ ಶಿಕ್ಷಕರಿಗೆ ಮತ್ತು ಕಲಾವಿದರಿಗೆ ಅನುದಾನ ನೀಡುತ್ತದೆ. ಆಸಕ್ತರಿಂದ ಅರ್ಜಿ ಆಹ್ವಾನಿಸಿ, ಆಯ್ಕೆ ಪ್ರಕ್ರಿಯೆ ಮೂಲಕ ಆಯ್ದ ಶಾಲೆಗಳಿಗೆ ಈ ನೆರವು ನೀಡುತ್ತದೆ. ಹೆಚ್ಚಿನ ಮಾಹಿತಿಗಾಗಿ: https://indiaifa.org/ ನೋಡಬಹುದು.

ಬರೆಯುವ ವಿಶ್ವಾಸ ಮೂಡಿಸಿ

ಅನೇಕ ಮಕ್ಕಳಲ್ಲಿ ಬರೆಯುವ ಹವ್ಯಾಸವಿರುತ್ತದೆ. ಅದನ್ನು ಪೋಷಕರು, ಶಿಕ್ಷಕರು ಗುರುತಿಸಬೇಕು. ಮಕ್ಕಳಲ್ಲಿ 'ನಾನೂ ಬರೆಯಬಲ್ಲೆ' ಎಂಬ ಆತ್ಮವಿಶ್ವಾಸ ಮೂಡಿಸಬೇಕು. ಇದಕ್ಕೆ ಶಾಲೆಯಲ್ಲಿ ಮತ್ತು ಮನೆಯಲ್ಲಿ ಪೂರಕ ವಾತಾವರಣ ಸೃಷ್ಟಿಸುವುದು ಅಗತ್ಯ.

ಕೆಲ ಮಕ್ಕಳಿಗೆ ಪ್ರಾಸಬದ್ಧ ಶಿಶುಗೀತೆಗಳೆಂದರೆ ಬಲು ಇಷ್ಟ. ಅವುಗಳನ್ನು ಆಲಿಸುತ್ತಾ, ಹಾಡುತ್ತಾ ಬೆಳೆಯುವುದರಿಂದ ಅದರಲ್ಲಿನ ಪ್ರಾಸ ಪದಗಳು ಮನಸ್ಸನ್ನು ಬಹಳ ಬೇಗ ತಲುಪುತ್ತವೆ. ಹಾಗಾಗಿ ಮಕ್ಕಳಿಗೆ ಕೆಲವು ಪ್ರಾಸ ಪದಗಳು, ಅದಕ್ಕೆ ಪೂರಕ ಸುಳಿವು ಪದಗಳನ್ನು ಆರಂಭಿಕ ಹಂತದಲ್ಲಿ ನೀಡುವುದರಿಂದ ಬರವಣಿಗೆ ಸುಲಭವಾಗುತ್ತದೆ. ಮೊದ ಮೊದಲು ನಾಲ್ಕು ಸಾಲಿನ ಚುಟುಕಗಳು, ಶಿಶುಪ್ರಾಸಗಳು ಅವರ ಲೇಖನಿಯಲ್ಲಿ ಹೊರಹೊಮ್ಮಿದರೆ ಅದೇ ಚಂದ. ಸಣ್ಣ ಸಣ್ಣ ಬರವಣಿಗೆಗಳೇ ಮಕ್ಕಳ ಆತ್ಮವಿಶ್ವಾಸವನ್ನು ಹೆಚ್ಚಿಸುತ್ತವೆ. ಮುಂದೆ ಕವನ, ಕಥೆ, ಲೇಖನಗಳ ಪುಸ್ತಕ ಪ್ರಕಟ ಮಾಡಲು ಇವೆಲ್ಲಾ ಪುಟ್ಟ ಹೆಜ್ಜೆಗಳು.

ವಾಚನವೂ ಒಂದು ಅಭ್ಯಾಸ

ಓದುವ, ಓದಿದ ವಿಷಯಗಳನ್ನು ವಾಚಿಸುವ ಅಭ್ಯಾಸವೂ ಸಾಹಿತ್ಯ ಅಭಿರುಚಿ ಬೆಳೆಸುವ ಒಂದು ಭಾಗ. ಓದಿದ ಪ್ರಬಂಧ, ಕವಿತೆಯಂತಹ ಸಾಹಿತ್ಯವನ್ನು ಉತ್ತಮವಾಗಿ ವಾಚಿಸುವಂತಹ ಹವ್ಯಾಸವನ್ನು ಮಕ್ಕಳಲ್ಲಿ ಬೆಳೆಸಬೇಕು. ವಾಗ್ಮಿಗಳ ಭಾಷಣಗಳನ್ನು ಆಲಿಸಬೇಕು. ಕವಿಗೋಷ್ಠಿಗಳಲ್ಲಿ ಕವಿತಾ ವಾಚನವನ್ನು ಮಕ್ಕಳಿಗೆ ಗಮನಿಸುವಂತೆ ಸೂಚಿಸಬೇಕು. ಸಾಹಿತ್ಯ ಸಮ್ಮೇಳನದಂತಹ ಕಾರ್ಯಕ್ರಮಗಳಿಗೆ ಕರೆದುಕೊಂಡು ಹೋಗಬೇಕು. ಮಕ್ಕಳಲ್ಲಿ ಉತ್ತಮ ವಾಚನ ಕೌಶಲ ಬೆಳೆದಂತೆಲ್ಲಾ ವೇದಿಕೆಗಳಲ್ಲಿ ಯಾವುದೇ ಕಾರ್ಯಕ್ರಮಗಳಲ್ಲಿ ತಾವೇ ನಿರರ್ಗಳವಾಗಿ ಭಾಷಣ, ಕವನ ವಾಚನ, ಕಥಾ ನಿರೂಪಣೆಯನ್ನು ಯಶಸ್ವಿಯಾಗಿ ನಿರ್ವಹಿಸಬಲ್ಲರು. ಶಾಲಾ ಹಂತದಲ್ಲಿ ಇಂಥ ಸಾಹಿತ್ಯದ ವೇದಿಕೆಗಳನ್ನು ಕಲ್ಪಿಸಿಕೊಟ್ಟರೆ, ಮಕ್ಕಳಲ್ಲಿರುವ ಸಭಾಕಂಪನವನ್ನೂ ದೂರ ಮಾಡಬಹುದು.



ನಮ್ಮದೇ ಶಾಲಾ ಪತ್ರಿಕೆ

ಶಾಲೆಯಲ್ಲಿರುವ ಸಾಹಿತ್ಯಾಸಕ್ತ ಶಿಕ್ಷಕರು ಮಕ್ಕಳಿಂದಲೇ 'ಶಾಲಾ ಪತ್ರಿಕೆ' ರೂಪಿಸಬಹುದು. ವಿದ್ಯಾರ್ಥಿಗಳೇ ಒಂದು ಸಂಪಾದಕ ಮಂಡಳಿ ರಚಿಸಿಕೊಂಡು, ಶಿಕ್ಷಕರ ಸಹಭಾಗಿತ್ವದಲ್ಲಿ ಪತ್ರಿಕೆ ಹೊರತರಬಹುದು. ಇದರಿಂದ ಮಾಸ ಪತ್ರಿಕೆ, ತ್ರೈಮಾಸಿಕ ಪತ್ರಿಕೆಗಳ ಮೂಲಕ ಮಕ್ಕಳ ಮನಸ್ಸನ್ನು ಪತ್ರಿಕಾ ಪ್ರಪಂಚಕ್ಕೆ ಅಣಿಗೊಳಿಸಬಹುದು. ಮಕ್ಕಳಲ್ಲಿರುವ ಬರವಣಿಗೆ ಹವ್ಯಾಸಕ್ಕೆ ಪುಷ್ಟಿ ದೊರೆಯುತ್ತದೆ. ಈಗಾಗಲೇ ರಾಜ್ಯದ ಹಲವು ಶಾಲೆಗಳಲ್ಲಿ ಮಕ್ಕಳು, ಶಿಕ್ಷಕರು ಸೇರಿ, 'ಪೆನ್ಸಿಲ್', 'ಮಕ್ಕಳ ಮಂದಾರ', 'ಪಾತರಗಿತ್ತಿ', 'ಬಹುಮುಖಿ' ಯಂತಹ ಪತ್ರಿಕೆಗಳನ್ನು ಪ್ರಕಟಿಸುತ್ತಿದ್ದಾರೆ. ಇವು ಮಕ್ಕಳಲ್ಲಿರುವ ಸಾಹಿತ್ಯಾಸಾಕ್ತಿಯ ಬಿಂಬಗಳಾಗಿವೆ.

ಭಿತ್ತಿಪತ್ರದೊಂದಿಗೆ ಉತ್ತೇಜನ

ಮಕ್ಕಳು ಬರೆದ ಬರಹಗಳನ್ನು ಶಾಲೆಯಲ್ಲಿರುವವರು ಓದಿ, ಮೆಚ್ಚುಗೆ ಸೂಚಿಸಿದಾಗ ಮತ್ತಷ್ಟು ಬರೆಯಲು ಉತ್ಸಾಹ ಹೆಚ್ಚುತ್ತದೆ. ಮಕ್ಕಳ ಬರಹಗಳನ್ನು ಸ್ಥಳೀಯ ಓದುಗರಿಗೆ ತಲುಪಿಸಲು ಭಿತ್ತಿಪತ್ರ ಅಥವಾ ಬ್ಯಾನರ್‌ಗಳನ್ನು ಮಾಡಿಸಬಹುದು. ಮಕ್ಕಳ ಕೈ ಬರಹವನ್ನೇ ಸ್ಕ್ಯಾನ್ ಮಾಡಿಸಿ, ಭಿತ್ತಿಪತ್ರ ಅಥವಾ ಬ್ಯಾನರ್ ಮಾಡಿ ಊರಿನ ಕೇಂದ್ರ ಸ್ಥಳದಲ್ಲಿ ಪ್ರದರ್ಶಿಸಬಹುದು. ಆಯಾ ಗ್ರಾಮದ ಗ್ರಾಮ ಪಂಚಾಯತಿ ಕಚೇರಿ ಮುಂದೆ ಈ ಬ್ಯಾನರ್‌ಗಳನ್ನು ಪ್ರದರ್ಶಿಸುವುದರಿಂದ ಹೆಚ್ಚು ಜನರನ್ನು ತಲುಪಬಹುದು. ಪ್ರತಿ ತಿಂಗಳಿಗೊಮ್ಮೆ ಹೊಸ ಬರಹಗಳನ್ನು ಹಾಕಿ, ಹೊಸ ಬ್ಯಾನರ್ ಮಾಡುವುದರಿಂದ ಓದುಗರಿಗೂ ಕುತೂಹಲ ಬೆಳೆಯುತ್ತದೆ. ಮಕ್ಕಳಲ್ಲೂ ಹೊಸತನದ ಕ್ರಿಯಾಶೀಲತೆ ಪಡಿಮೂಡುತ್ತದೆ.

ಮಕ್ಕಳಲ್ಲಿ ಸಾಹಿತ್ಯಾಭಿರುಚಿ ಮೂಡಿಸುವುದರಿಂದ ಗ್ರಂಥಾಲಯದ ಸದುಪಯೋಗ ಮಾಡಿಕೊಳ್ಳುವ ಹವ್ಯಾಸ ಬೆಳೆಯುತ್ತದೆ. 'ಪುಸ್ತಕಗಳಿಗಿಂತ ಒಳ್ಳೆಯ ಮಿತ್ರ ಬೇರೊಬ್ಬರಿಲ್ಲ' ಎಂಬಂತೆ, ಜೀವನದ ಯಾವುದೇ ಸಂದರ್ಭದಲ್ಲೂ ಒತ್ತಡದ ಸನ್ನಿವೇಶ ಎದುರಾದರೂ, ಪುಸ್ತಕ ಪ್ರೀತಿ ಮನಸ್ಸನ್ನು ನಿರಾಳ ಮಾಡುತ್ತದೆ. ಎಳವೆಯಲ್ಲಿಯೇ ಮಕ್ಕಳಿಗೆ ಸಾಹಿತ್ಯದ ಬೀಜ ಬಿತ್ತಿ ಸಾಹಿತ್ಯದ ಲೋಕದಲ್ಲಿ ಸಮೃದ್ಧವಾಗಿ ಮಕ್ಕಳು ಬೆಳೆಯಲು ಹಿರಿಯರು ಪ್ರೇರೇಪಿಸಬೇಕಿದೆ.

ಪರಿಣಾಮಕಾರಿ ಓದುವಿಕೆ ಹೇಗೆ?

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ



ವಿ. ಪ್ರದೀಪ್‌ಕುಮಾರ್

1. ನಾವು ದೈನಂದಿನ ಜೀವನದಲ್ಲಿ ಸಾಕಷ್ಟು ಓದುತ್ತಿರುತ್ತೇವೆ. ಓದಿದ ವಿಷಯವನ್ನು ನೆನಪಿನಲ್ಲಿಟ್ಟುಕೊಳ್ಳುವುದು ಹೇಗೆ?

ಚೇತನ್ ಕಳ್ಳಿಮನಿ, ಮಹಾಲಿಂಗಪುರ

ವಿದ್ಯೆಯೆಂದರೆ ಕೇವಲ ಓದು, ಬರಹ, ಪರೀಕ್ಷೆಗಳಷ್ಟೇ ಅಲ್ಲ; ವಿದ್ಯೆಯ ಮೂಲ ಉದ್ದೇಶ ಜ್ಞಾನಾರ್ಜನೆ. ಶಾಲಾ ಕಾಲೇಜುಗಳಲ್ಲಿ ಹೇಗೆ ಕಲಿಸುತ್ತಾರೆ ಎಂಬುದರ ಜೊತೆಗೆ ನೀವು ಹೇಗೆ ಕಲಿಯುತ್ತೀರ ಎಂಬುದು ಮುಖ್ಯ. ಅಧ್ಯಾಪಕರೊಂದಿಗೆ ದೈಹಿಕ ಭಾಷೆ, ನಿಲುವು, ಕಣ್ಣುಸಂಪರ್ಕ, ಮುಖಭಾವ ಮುಂತಾದ ಅಮೌಖಿಕ ಸಂವಹನದ ಸಂಜ್ಞೆಗಳಿಂದ ಪ್ರತಿಕ್ರಿಯಿಸುತ್ತಾ, ಉಪನ್ಯಾಸವನ್ನು ಕೇಳುವ ಅಭ್ಯಾಸವಿರಲಿ. ಜೊತೆಗೆ, ನಿಮ್ಮ ಓದುವಿಕೆ ಪರಿಣಾಮಕಾರಿಯಾಗಿದ್ದರೆ, ಓದಿದ ವಿಷಯ ನೆನಪಿನಲ್ಲಿರುತ್ತದೆ. ಪರಿಣಾಮಕಾರಿ ಓದುವಿಕೆಗೆ ಈ ಕಾರ್ಯತಂತ್ರಗಳನ್ನು ಬಳಸಿ.

1.ಸಮೀಕ್ಷೆ: ಇದು, ನೀವು ಚಾರಣವನ್ನು ಪ್ರಾರಂಭಿಸುವ ಮೊದಲು ಬೆಟ್ಟದ ವೈಮಾನಿಕ ನೋಟವನ್ನು ಪಡೆಯುವಂತೆ. ಅಂದರೆ, ಆಳವಾದ ಓದುವಿಕೆಗೆ ಮೊದಲು ಓದುವ ವಸ್ತುವಿನ ಸಾರಾಂಶ/ಅಧ್ಯಾಯವನ್ನು ಅರ್ಥಮಾಡಿಕೊಳ್ಳುವುದು. ಸಮೀಕ್ಷೆಗಾಗಿ ಒಟ್ಟು ಸಮಯದ ಶೇ 10 ಬೇಕಾಗುತ್ತದೆ.

2.ಪ್ರಶ್ನಿಸುವಿಕೆ: ಪ್ರಶ್ನೆಗಳನ್ನು ಕೇಳುವುದರಿಂದ ವಿಷಯದಲ್ಲಿನ ಒಳನೋಟವನ್ನು ಪಡೆದು ಕಲಿಕೆ ಪರಿಣಾಮಕಾರಿ ಯಾಗುತ್ತದೆ. ಪ್ರಶ್ನಿಸುವಿಕೆಗೆ ಒಟ್ಟು ಸಮಯದ ಶೇ 10 ಬೇಕಾಗುತ್ತದೆ.

3.ಓದುವಿಕೆ: ಈ ಪ್ರಕ್ರಿಯೆಯನ್ನು ಮತ್ತೆ ಚಾರಣಕ್ಕೆ ಹೋಲಿಸಬಹುದು; ಕಷ್ಟಕರವಾದ ವಿಷಯವನ್ನು ನಿಧಾನವಾಗಿಯೂ (ನಿಧಾನವಾಗಿ ಏರುವುದು), ತಿಳಿದಿರುವ ಅಥವಾ ಸುಲಭದ ವಿಷಯವನ್ನು ತ್ವರಿತವಾಗಿಯೂ (ತ್ವರಿತವಾಗಿ ಇಳಿಯುವುದು) ಮತ್ತು ಪ್ರಚೋದನಕಾರಿ, ವಾದ, ಪರಿಕಲ್ಪನೆಯ ವಿಷಯವನ್ನು ಎಚ್ಚರಿಕೆಯಿಂದ ಓದುವುದು (ಅಪಾಯವಿರುವಲ್ಲಿ ಎಚ್ಚರಿಕೆಯಿಂದ). ಈ ರೀತಿ ಓದುವುದಕ್ಕೆ ಒಟ್ಟು ಸಮಯದ ಶೇ 50 ಮೀಸಲಿಡಿ.

4. ಪುನರುಚ್ಚಾರಣೆ: ಓದಿದ ನಂತರ ಪುಸ್ತಕವನ್ನು ತೆಗೆದಿಟ್ಟು, ಮುಖ್ಯ ಅಂಶಗಳು ಮತ್ತು ಪ್ರಮುಖ ವಿವರಗಳನ್ನು ಪುನರುಚ್ಚರಿಸುವುದು ಅಥವಾ ಟಿಪ್ಪಣಿ ಬರೆಯುವುದು ಪರಿಣಾಮಕಾರಿ ಕಲಿಕೆಗೆ ಅಗತ್ಯ. ಇದಕ್ಕಾಗಿ, ಒಟ್ಟು ಸಮಯದ ಶೇ 20 ಮೀಸಲಿಡಿ.

5. ಪುನರಾವರ್ತನೆ: ಕೊನೆಯ ಹಂತದಲ್ಲಿ, ಮೊದಲ ನಾಲ್ಕು ಹಂತಗಳನ್ನು ಮತ್ತೊಮ್ಮೆ ಪುನರಾವರ್ತಿಸಬೇಕು. ಈ ಪ್ರಕ್ರಿಯೆಗೆ, ಒಟ್ಟು ಸಮಯದ ಶೇ 10 ಬೇಕಾಗುತ್ತದೆ. ಒಂದು ವೇಳೆ, ನಿಮ್ಮ ಕಲಿಕೆ ಅಸಮರ್ಪಕವೆನಿಸಿದರೆ, ಈ ಪ್ರಕ್ರಿಯೆಯನ್ನು ಪುನರಾವರ್ತಿಸಿ.


ಓದುವ ಕಾರ್ಯತಂತ್ರಗಳ ಜೊತೆಗೆ, ಕಣ್ಣುಗಳಿಗೂ, ಮನಸ್ಸಿಗೂ ತರಬೇತಿಯ ಅಗತ್ಯವಿದೆ. ಹೆಚ್ಚಿನ ವಿವರಗಳಿಗೆ ಗಮನಿಸಿ: http://www.vpradeepkumar.com/effective-learning/



2. ನಾನು ಬಿಎಸ್‌ಸಿ (ಸಿಬಿಝಡ್) 2021 ರಲ್ಲಿ ಮುಗಿಸಿದ್ದೇನೆ. ಪರಿಸರ ವಿಜ್ಞಾನದಲ್ಲಿ ಸ್ನಾತಕೋತ್ತರ ಪದವಿ ಮಾಡಬೇಕೆಂದು ಬಯಸಿದ್ದೇನೆ. ಈ ಕ್ಷೇತ್ರದ ಉದ್ಯೋಗಾವಕಾಶಗಳೇನು?

ಹೆಸರು, ಊರು ತಿಳಿಸಿಲ್ಲ.

ನೀವು ಓದಲು ಬಯಸುತ್ತಿರುವ ಸ್ನಾತಕೋತ್ತರ ಪದವಿಯ ನಂತರ ಪರಿಸರ ವಿಜ್ಞಾನಿ, ಪರಿಸರ ಎಂಜಿನಿಯರ್, ಪರಿಸರ ಜೀವಶಾಸ್ತ್ರ, ಪರಿಸರ ಪತ್ರಕರ್ತ ಇತ್ಯಾದಿ ವೃತ್ತಿಗಳ ಅವಕಾಶಗಳಿವೆ. ಸರ್ಕಾರಿ ಮತ್ತು ಖಾಸಗಿ ಕ್ಷೇತ್ರದ ಗಣಿಗಳು, ಪರಮಾಣು ಘಟಕಗಳು, ರಸಗೊಬ್ಬರ ಸ್ಥಾವರಗಳು, ಡಿಸ್ಟಿಲರೀಸ್, ಜವಳಿ ಮತ್ತು ವರ್ಣದ್ರವ್ಯ ಉದ್ದಿಮೆಗಳು, ಆಹಾರ ಸಂಸ್ಕರಣಾ ಘಟಕಗಳು, ಜಲ ಮತ್ತು ಮಾಲಿನ್ಯ ನಿಯಂತ್ರಣ ಮಂಡಳಿಗಳು, ಸರೋವರ ಸಂರಕ್ಷಣಾ ಇಲಾಖೆಗಳು, ನಗರ ಪ್ರಾಧಿಕಾರಗಳು ಇತ್ಯಾದಿ ವಲಯಗಳಲ್ಲಿ ವೃತ್ತಿಯನ್ನು ಅರಸಬಹುದು. ಈ ಕ್ಷೇತ್ರದಲ್ಲಿ ವೈವಿಧ್ಯಮಯ ಅವಕಾಶಗಳಿ ರುವುದರಿಂದ ನಿಮ್ಮ ಆಸಕ್ತಿ ಮತ್ತು ಅಭಿರುಚಿಯಂತೆ ವೃತ್ತಿಯ ಯೋಜನೆಯನ್ನು ಮಾಡಿಕೊಳ್ಳಬೇಕು.



3. ನಾನು ಎಂ.ಕಾಂ ಮಾಡಿ ಖಾಸಗಿ ಕಂಪನಿಯಲ್ಲಿದ್ದೇನೆ. ಆದರೆ ಈ ಕಂಪನಿಯಲ್ಲಿ ಎಂಬಿಎ ಗೆ ತುಂಬಾ ಮಹತ್ವ ಕೊಡುತ್ತಾರೆ. ನನಗೀಗ 35 ವರ್ಷ. ನಾನು ಎಂಬಿಎ ಮಾಡಬೇಕೇ? ನಾನು ಎಂ.ಕಾಂ ಮಾಡಿದ್ದು ತಪ್ಪಾಯಿತೇ?

ಸ್ವಾತಿ, ಹುಬ್ಬಳ್ಳಿ

ವೃತ್ತಿಯ ಯೋಜನೆಯಂತೆ ಕೋರ್ಸ್ ಮಾಡುವುದು ಸಮಂಜಸ. ನೀವು ಕಲಿತ ವಿದ್ಯೆಗೂ, ನಿಮ್ಮಲ್ಲಿರುವ ಕೌಶಲಗಳಿಗೂ ಮತ್ತು ವೃತ್ತಿಯ ಅವಶ್ಯಕತೆಗಳಿಗೂ ಹೊಂದಾಣಿಕೆಯಿರಬೇಕು. ಪ್ರಮುಖವಾಗಿ, ಉದ್ಯೋಗದ ಯಶಸ್ಸಿಗೆ ವೃತ್ತಿ ಸಂಬಂಧಿತ ಕೌಶಲಗಳಲ್ಲದೆ ಯೋಜನೆ ಮತ್ತು ಸಮಯದ ನಿರ್ವಹಣೆ, ಸಂವಹನ ಕೌಶಲ, ಅಂತರ್-ವೈಯಕ್ತಿಕ ಕೌಶಲ, ನಾಯಕತ್ವದ ಕೌಶಲಗಳಂತಹ ಪ್ರಾಥಮಿಕ ಕೌಶಲಗಳಿರಬೇಕು. ಹಾಗಾಗಿ, ನಿಮ್ಮ ವ್ಯಕ್ತಿತ್ವದಲ್ಲಿ ಈ ಕೌಶಲಗಳನ್ನು ವೃದ್ಧಿಸಿ ನಿಮ್ಮ ಉದ್ಯೋಗದ ಕಾರ್ಯಕ್ಷಮತೆಯನ್ನು ನಿರೀಕ್ಷಿತ ಮಟ್ಟಕ್ಕೆ ಏರಿಸಿ.

4. ಎಂಕಾಂ ಮುಗಿಸಿದ್ದೇನೆ. ಎನ್‌ಇಟಿ, ಎಸ್‌ಎಲ್‌ಇಟಿ ಅಥವಾ ಕೆಎಸ್‌ಇಟಿ ಪರೀಕ್ಷೆ ಬರೆಯಬೇಕು ಎಂದಿದ್ದೇನೆ. ಯಾವ ಪುಸ್ತಕ ಓದಬೇಕು. ಮೊದಲನೇ ಬಾರಿಗೆ ಪರೀಕ್ಷೆಯಲ್ಲಿ ಪಾಸಾಗುವುದು ಹೇಗೆ?

ಸ್ಫೂರ್ತಿ ಎಂ., ಶಿವಮೊಗ್ಗ

ಈ ಪರೀಕ್ಷೆಗಳಲ್ಲಿನ ವ್ಯತ್ಯಾಸಗಳನ್ನರಿತು ನಿಮ್ಮ ವೃತ್ತಿ ಯೋಜನೆಯಂತೆ ಯಾವ ಪರೀಕ್ಷೆಯನ್ನು ಬರೆಯಬೇಕೆನ್ನುವ ನಿರ್ಧಾರ ನಿಮ್ಮದು. ಪರೀಕ್ಷೆಯ ತಯಾರಿ, ಪುಸ್ತಕಗಳು ಇತ್ಯಾದಿ ವಿವರಗಳಿಗೆ ಗಮನಿಸಿ: https://www.shiksha.com/exams/ugc-net-exam-preparation

ಇನ್ನಷ್ಟು ಪ್ರಶ್ನೋತ್ತರಗಳಿಗೆ prajavani.net ನೋಡಿ

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ

ವಿದ್ಯಾರ್ಥಿಗಳೇ, ನಿಮ್ಮ ಮುಂದಿನ ಕೋರ್ಸ್ ಮತ್ತು ಸೂಕ್ತವಾದ ವೃತ್ತಿಯ ಆಯ್ಕೆ ಹಾಗೂ ಭವಿಷ್ಯವನ್ನು ರೂಪಿಸಿಕೊಳ್ಳುವ ಬಗ್ಗೆ ಗೊಂದಲಗಳಿವೆಯೇ? ಹಾಗಿದ್ದರೆ ನಮಗೆ ಬರೆಯಿರಿ. ನಿಮ್ಮ ಪ್ರಶ್ನೆಗಳಿಗೆ ಶಿಕ್ಷಣ ತಜ್ಞ ಮತ್ತು ವೃತ್ತಿ ಸಲಹೆಗಾರ ವಿ. ಪ್ರದೀಪ್ ಕುಮಾರ್ ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು shikshana@prajavani.co.in ಗೆ ಕಳಿಸಬಹುದು.

ಕೇಳಿ ನೋಡಿ ಮಾಡಿ ಓದಿ ಕಲಿ


ವೆಂಕಟ ಸುಬ್ಬರಾವ್. ವಿ

ಸ್ವಲ್ಪ ಆತಂಕದ ನಡುವೆ ಶಾಲೆಗಳು ಆರಂಭವಾಗಿ, ಮುನ್ನಡೆಯುತ್ತಿವೆ. ಸುಮಾರು ಎರಡು ವರ್ಷಗಳ ನಂತರ ಮಕ್ಕಳು ಶಾಲೆಗೆ ಹೋಗುತ್ತಿದ್ದಾರೆ. ಪೋಷಕರು ನಿಟ್ಟುಸಿರು ಬಿಡುವಂತಾಗಿದೆ. ಶಿಕ್ಷಕರ ಹುರುಪು ಮರುಕಳಿಸಿದೆ. ವಿದ್ಯಾರ್ಥಿಗಳು ಆನಂದದಿಂದ ಶಾಲೆಗೆ ಹೊರಟಿದ್ದಾರೆ.

ಮಕ್ಕಳ ಸಹಜ ಕಲಿಕೆಗೆ ಶಾಲೆ ಅತ್ಯವಶ್ಯಕ. ಎರಡು ವರ್ಷಗಳಿಂದ ಅನಿವಾರ್ಯವಾಗಿ ಆನ್‌ಲೈನ್‌ನಲ್ಲಿ ಪಾಠ ಕಲಿಯುತ್ತಿದ್ದ ಮಕ್ಕಳು ಈಗ ಶಾಲೆಯತ್ತ ಹೊರಟಿದ್ದಾರೆ. ಅವರೀಗ ಕೊಠಡಿಯೊಳಗಿನ ಕಲಿಕಾ ವಾತಾವರಣಕ್ಕೆ ಹೊಂದಿಕೊಳ್ಳಬೇಕಾಗಿದೆ. ಈ ನಿಟ್ಟಿನಲ್ಲಿ ಮಕ್ಕಳನ್ನು ಅಣಿಗೊಳಿಸಲು ಪೋಷಕರು ಮೊದಲಿಗಿಂತ ಹೆಚ್ಚು ಆಸಕ್ತಿಯಿಂದ ತೊಡಗಿಕೊಳ್ಳಬೇಕಿದೆ.

ಇತ್ತೀಚೆಗೆ ಲಾಕ್‌ಡೌನ್ ಅವಧಿ ಹಾಗೂ ನಂತರ ಸಮಯದಲ್ಲಿ ಮಕ್ಕಳು ಮನೆಯಲ್ಲಿದ್ದಾಗ, ಪೋಷಕರು ಅವರಲ್ಲಿರುವ ವಿಶಿಷ್ಟ ಗುಣಗಳು ಮತ್ತು ಕಲಿಕೆಯ ರೀತಿಗಳನ್ನು ಗಮನಿಸಲು ಸಾಧ್ಯವಾಗಿದೆ. ಈ ಬಗ್ಗೆ ಬಹಳಷ್ಟು ಪೋಷಕರ ಅಭಿಪ್ರಾಯ ಹಂಚಿಕೊಂಡಿದ್ದಾರೆ. ಮಕ್ಕಳಲ್ಲಿರುವ ಈ ವಿಶೇಷ ಗುಣಗಳು ಕೆಲವರಿಗೆ ಅಚ್ಚರಿ ಮೂಡಿಸಿದ್ದರೆ, ಅವರು ವಿಷಯಗಳನ್ನು ಕಲಿಯುವ, ಗ್ರಹಿಸುವ ವಿಧಾನ ಕಂಡು ಬೆರಗಾದವರೂ ಇದ್ದಾರೆ. ಇನ್ನೂ ಕೆಲವರಿಗೆ, 'ನಮ್ಮ ಮಗು ಸುಧಾರಿಸಬೇಕಿದೆ' ಅಂತ ಎನ್ನಿಸಿರಲೂಬಹುದು. ಏಕೆಂದರೆ, ಎಲ್ಲ ಮಕ್ಕಳೂ ಒಂದೇ ರೀತಿಯಲ್ಲಿ ಕಲಿಯುವುದಿಲ್ಲ, ವರ್ತಿಸುವುದಿಲ್ಲ. ಪ್ರತಿ ಮಕ್ಕಳ ದಿನಚರಿಯೂ ಒಂದೇ ತರಹ ಇರುವುದಿಲ್ಲ. ಹಾಗಾಗಿ, ಮಕ್ಕಳ ಕಲಿಕಾ ಸಾಮರ್ಥ್ಯ, ಆಸಕ್ತಿ ಗುರುತಿಸಿ ಅದಕ್ಕೆ ಪೂರಕವಾಗಿ ಅವರನ್ನು ಬೆಳೆಸಬೇಕಿದೆ.

ಹೀಗೆ ವಿಭಿನ್ನ ರೀತಿಯಲ್ಲಿ ಕಲಿಯುವ ಮಕ್ಕಳನ್ನು ತಜ್ಞರು, ವಿಷುವಲ್ ಲರ್ನರ್, ಆಡಿಟರಿ ಲರ್ನರ್, ರೀಡ್ - ರೈಟ್ ಲರ್ನರ್ಸ್ ಮತ್ತು ಕೈನೆಸ್ಥೆಟಿಕ್ ಲರ್ನರ್ಸ್ ಎಂದು ನಾಲ್ಕು ಗುಂಪುಗಳಾಗಿ ವಿಂಗಡಿಸುತ್ತಾರೆ.



ಅ) ದೃಶ್ಯಗಳ ನೆರವಿಂದ ಕಲಿಕೆ (ವಿಷುಯಲ್ ಲರ್ನರ್ಸ್): ಕೆಲವು ಮಕ್ಕಳು ದೃಶ್ಯಗಳನ್ನು ನೋಡಿ ಕಲಿಯಲು ಇಷ್ಟಪಡುತ್ತಾರೆ ಮತ್ತು ಸಮರ್ಥವಾಗಿ ಕಲಿಯುತ್ತಾರೆ. ಕಣ್ಮುಚ್ಚಿ ಕುಳಿತು ಕಲಿತಿದ್ದನ್ನು ದೃಶ್ಯೀಕರಿಸಿಕೊಂಡು ಮೆಲುಕು ಹಾಕುತ್ತಾರೆ. ಇಂಥ ಮಕ್ಕಳಿಗೆ ಪೋಷಕರು, ಪಾಠಕ್ಕೆ ಸಂಬಂಧಪಟ್ಟ ವೀಡಿಯೊಗಳನ್ನು ತೋರಿಸುತ್ತಾ ಕಲಿಸಿದರೆ, ಅವರ ಕಲಿಕೆಯ ವೇಗ ಮತ್ತು ಆಸಕ್ತಿ ಹೆಚ್ಚಬಹುದು. ಪಾಠ ಅಥವಾ ಪಾಠದ ಮುಖ್ಯಾಂಶಗಳನ್ನು ಚರ್ಚಿಸುವಾಗ, ಮಕ್ಕಳಿಗೆ ಕಣ್ಣುಮುಚ್ಚಿ ಕುಳಿತು ಕಲಿತ ವಿಷಯಗಳನ್ನು ಮನನ (ದೃಶ್ಯೀಕರಿಸಿಕೊಳ್ಳುವಂತೆ) ಮಾಡಿಕೊಳ್ಳುವಂತೆ ತಿಳಿಸಬೇಕು.

ಆ) ಶ್ರವಣ/ನುಡಿಯಿಂದ ಕಲಿಕೆ (ಆಡಿಟರಿ ಲರ್ನರ್ಸ್): ಮಕ್ಕಳು ಕೇಳಿಸಿಕೊಳ್ಳುವುದರಿಂದ ಹಾಗೂ ಬೇರೆಯವರೊಂದಿಗೆ ಮಾತನಾಡಿ ಪಾಠವನ್ನು ಅಥವಾ ಪಾಠದ ಮುಖ್ಯಾಂಶವನ್ನು ಹಂಚಿಕೊಳ್ಳುವ ಮುಖಾಂತರ ಕಲಿಯುತ್ತಾರೆ. ಈ ರೀತಿಯ ಮಕ್ಕಳಿಗೆ ಓದಿದ ಪಾಠವನ್ನು ನಿಮ್ಮ ಜೊತೆ ಚರ್ಚಿಸುವಂತೆ ಹೇಳಿ ಅಥವಾ ಅವರು ನಿಮಗೆ ಕಲಿಸುವಂತೆ ಉತ್ತೇಜಿಸಿ. ಬೇಕಿದ್ದರೆ ಓದಿದ ಪಾಠವನ್ನು ರೆಕಾರ್ಡ್ ಮಾಡಿಕೊಂಡು ಮತ್ತೆ ಅದೇ ಪಾಠವನ್ನು ಕೇಳಿಸಿಕೊಳ್ಳುವಂತೆ ಹೇಳಿ.

ಇ) ಓದು/ಬರವಣಿಗೆಯಿಂದ ಕಲಿಕೆ (ರೀಡ್ - ರೈಟ್ ಲರ್ನರ್ಸ್): ಕೆಲವು ಮಕ್ಕಳು ಓದಿದ ಪಾಠವನ್ನು ಬರೆಯುವ ಮುಖಾಂತರ ಚೆನ್ನಾಗಿ ಕಲಿಯುತ್ತಾರೆ. ಬರವಣಿಗೆ, ಚಿತ್ರಕಲೆ ಮತ್ತಿತರ ಚಟುವಟಿಕೆಗಳನ್ನೊಳಗೊಂಡ ಪ್ರಾಜೆಕ್ಟ್ ಕೆಲಸಗಳಲ್ಲಿ ಹೆಚ್ಚು ಆಸಕ್ತಿಯನ್ನು ವಹಿಸುತ್ತಾರೆ. ಈ ಪ್ರಾಜೆಕ್ಟ್ ವರ್ಕ್‌ಗಳನ್ನು ಮಾಡುವಾಗ ಅತ್ಯಂತ ಆಸಕ್ತಿಯಿಂದ ಕಲಿಯುತ್ತಾರೆ. ಇಂಥ ಮಕ್ಕಳಿಗೆ ಹೆಚ್ಚು ಹೆಚ್ಚು ಬರೆದು ಅಭ್ಯಾಸ ಮಾಡುವಂತೆ ತಿಳಿಸಿ.

ಈ) ಚಟುವಟಿಕೆಗಳ ಮುಖಾಂತರ ಕಲಿಕೆ (ಕೈನೆಸ್ಥೆಟಿಕ್ ಲರ್ನರ್ಸ್): ಈ ರೀತಿಯ ಮಕ್ಕಳು ಚಟುವಟಿಕೆಗಳ ಮುಖಾಂತರ ಕಲಿಯಲು ಇಷ್ಟಪಡುತ್ತಾರೆ. ಕ್ರೀಡೆಗಳಲ್ಲಿ ಹೆಚ್ಚು ಆಸಕ್ತಿ ಹೊಂದಿರುತ್ತಾರೆ. ಮನೆಯಲ್ಲಿ ಓದುವಾಗಲೂ ಇವರು ಒಂದುಕಡೆ ಕುಳಿತು ಓದುವುದಿಲ್ಲ. ಓಡಾಡಿಕೊಂಡು ಓದಲು ಇಷ್ಟಪಡುತ್ತಾರೆ. ಇಂಥವರಿಗೆ ಹೆಚ್ಚು ಚಟುವಟಿಕೆಗಳನ್ನು ಕೊಡಿ.

ಹೀಗೆ ಒಮ್ಮೆ, ಮಕ್ಕಳು ಕಲಿಯುವ ರೀತಿಯನ್ನು ಅರಿತರೆ, ಮನೆಯಲ್ಲಿ ಅದಕ್ಕೆ ಪೂರಕವಾದ ವಾತಾವರಣವನ್ನು ಪೋಷಕರು ಕಲ್ಪಿಸಿಕೊಡಬಹುದು ಹಾಗೂ ಅವರಲ್ಲಿ ಕಲಿಕೆಯ ಬಗ್ಗೆ ಆಸಕ್ತಿಯನ್ನು ಮೂಡಿಸಬಹುದು. ಈ ಲೇಖನದಲ್ಲಿ ತಿಳಿಸಿರುವ ಅಂಶಗಳು ಉದಾಹರಣೆಗಾಗಿ ಮಾತ್ರ. ಓದುಗರು, ನಿಮ್ಮ ನಿಮ್ಮ ಮಕ್ಕಳ ಬಗ್ಗೆ ಶಿಕ್ಷಕರಲ್ಲಿ ಕೇಳಿ ತಿಳಿದುಕೊಂಡು, ತಜ್ಞರೊಂದಿಗೆ ಚರ್ಚಿಸಿ ಮುಂದುವರಿಯಿರಿ.

(ಮುಂದಿನ ವಾರ: ಮಕ್ಕಳಿಗೆ ಪೂರಕವಾತಾವರಣ ಕಲ್ಪಿಸುವುದರ ಜೊತೆಗೆ, ಕಲಿಯುವ ಆಸಕ್ತಿ ಹೆಚ್ಚಿಸಲು ಪೋಷಕರು ಏನು ಮಾಡಬಹುದು ಎನ್ನುವುದರ ಬಗ್ಗೆ ತಿಳಿಯೋಣ).

(ಲೇಖಕರು: ನಿರ್ದೇಶಕರು, ಸ್ಮಾರ್ಟ್ ಸೆರಬ್ರಮ್ ಪ್ರೈವೇಟ್ ಲಿಮಿಟೆಡ್, ಬೆಂಗಳೂರು)

ವಿದ್ಯಾರ್ಥಿ ವೇತನ ಕೈಪಿಡಿ

ಡಿಆರ್‌ಡಿಒ ರಕ್ಷಣಾ ಪ್ರಯೋಗಾಲಯ ಜೂನಿಯರ್ ಸಂಶೋಧನಾ ಫೆಲೋಶಿಪ್ (ಮೆಕ್ಯಾನಿಕಲ್) 2021

ವಿವರ: ಪದವಿ ಮತ್ತು ಸ್ನಾತಕೋತ್ತರ ಪದವಿ ಮುಗಿಸಿದ ವಿದ್ಯಾರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಅರ್ಹತೆ: ಸಂದರ್ಶನದ ವೇಳೆಗೆ 28 ವರ್ಷ ತುಂಬುವ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು. ಮೆಕ್ಯಾನಿಕಲ್‌ನಲ್ಲಿ ಬಿ.ಇ/ಬಿ.ಟೆಕ್ ಪದವಿಯನ್ನು ಪ್ರಥಮ ಶ್ರೇಣಿಯಲ್ಲಿ ಮುಗಿಸಿರಬೇಕು. ನೆಟ್, ಗೇಟ್ ಮುಗಿಸಿರಬೇಕು ಅಥವಾ ಪ್ರಥಮ ಶ್ರೇಣಿಯಲ್ಲಿ ಎಂ.ಇ/ಎಂ/ಟೆಕ್‌ನಲ್ಲಿ ಉತ್ತೀರ್ಣರಾಗಿರಬೇಕು.

ಆರ್ಥಿಕ ಸಹಾಯ: ಪ್ರತಿ ತಿಂಗಳು ₹31 ಸಾವಿರ

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 9 ಡಿಸೆಂಬರ್, 2021

ಅರ್ಜಿ ಸಲ್ಲಿಕೆ ವಿಧಾನ: ಸಂದರ್ಶನ, ರಕ್ಷಣಾ ಪ್ರಯೋಗಾಲಯ, ರತಾನಡಾ ಅರಮನೆ, ಜೋಧಪುರ- 342011 (ರಾಜಸ್ಥಾನ)

ಹೆಚ್ಚಿನ ಮಾಹಿತಿಗೆ: www.b4s.in/praja/LJM7

ಕೋಟಕ್ ಕನ್ಯಾ ಸ್ಕಾಲರ್‌ಶಿಪ್ 2021

ವಿವರ: ಕಾರ್ಪೊರೆಟ್ ಸಾಮಾಜಿಕ ಹೊಣೆಗಾರಿಕೆ ಅಡಿಯಲ್ಲಿ ಕೋಟಕ್ ಮಹೀಂದ್ರ ಸಂಸ್ಥೆಯು ಪಿಯುಸಿ ಮುಗಿಸಿದ ವಿದ್ಯಾರ್ಥಿನಿಯರಿಂದ ಅರ್ಜಿಗಳನ್ನು ಆಹ್ವಾನಿಸಿದೆ.

ಅರ್ಹತೆ: ಮೊದಲ ವರ್ಷದ ಪದವಿಗೆ ಪ್ರವೇಶ ಪಡೆದ ವಿದ್ಯಾರ್ಥಿನಿಯರು ಅರ್ಜಿ ಸಲ್ಲಿಸಬಹುದಾಗಿದೆ. ಎಂಜಿನಿಯರಿಂಗ್, ಮೆಡಿಕಲ್, ಡಿಸೈನಿಂಗ್ ಮುಂತಾದ ವೃತ್ತಿಪರ ಕೋರ್ಸ್‌ಗಳನ್ನು ಓದುತ್ತಿರಬೇಕು. 12ನೇ ತರಗತಿಯಲ್ಲಿ ಶೇ 75ರಷ್ಟು ಅಂಕ ಪಡೆದಿರಬೇಕು. ಕುಟುಂಬದ ವಾರ್ಷಿಕ ಆದಾಯವು ₹3 ಲಕ್ಷವನ್ನು ಮೀರಬಾರದು.

ಆರ್ಥಿಕ ಸಹಾಯ: ವರ್ಷಕ್ಕೆ ₹1 ಲಕ್ಷ

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 31 ಡಿಸೆಂಬರ್, 2021

ಅರ್ಜಿ ಸಲ್ಲಿಸುವ ವಿಧಾನ: ಆನ್‌ಲೈನ್ ಅರ್ಜಿಗಳು ಮಾತ್ರ

ಹೆಚ್ಚಿನ ಮಾಹಿತಿಗೆ: www.b4s.in/praja/KKGS1

ಕೃಪೆ: buddy4study.com

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



ಸುಭಾಷಿತ

ಇತರರು ತನ್ನತ್ತ ಎಸೆದ ಇಟ್ಟಿಗೆಗಳಿಂದ ಭದ್ರವಾದ ಬುನಾದಿ ಹಾಕಿಕೊಳ್ಳಬಲ್ಲವನೇ ಒಬ್ಬ ಯಶಸ್ವಿ ವ್ಯಕ್ತಿ.

–ಡೇವಿಡ್ ಬ್ರಿಂಕ್ಲಿ

‘ಓಮಿಕ್ರಾನ್’ ತಳಿಯ ಕಳವಳ ಪ್ರತಿಕ್ಷಣವೂ ಇರಲಿ ಪೂರ್ಣ ಎಚ್ಚರ

ಕೋವಿಡ್-19 ಸಾಂಕ್ರಾಮಿಕದ ಬಗ್ಗೆ ಉದಾಸೀನ ಸಲ್ಲದು ಎಂಬುದು ಮತ್ತೆ ಮತ್ತೆ ನಿಚ್ಚಳವಾಗುತ್ತಿದೆ. ಕೋವಿಡ್ ನಿರೋಧಕ ಲಸಿಕೆ, ಕೋವಿಡ್ ಹರಡುವಿಕೆ ತಡೆ ಮಾರ್ಗಸೂಚಿ ಪಾಲನೆ ಮುಂತಾದ ಕ್ರಮಗಳ ಬಳಿಕವೂ ಸಾಂಕ್ರಾಮಿಕಕ್ಕೆ ಲಗಾಮು ಹಾಕುವುದು ಸಾಧ್ಯವಾಗುತ್ತಿಲ್ಲ. ಯುರೋಪ್ ಖಂಡವು ಸಾಂಕ್ರಾಮಿಕದ ಹೊಡೆತದಿಂದ ಮತ್ತೆ ತತ್ತರಿಸಿದೆ. ಅಮೆರಿಕದಲ್ಲಿ ಕೂಡ ಇತ್ತೀಚಿನ ವಾರಗಳಲ್ಲಿ ಪ್ರಕರಣಗಳ ಸಂಖ್ಯೆ ಹೆಚ್ಚುತ್ತಲೇ ಇದೆ. ಅಮೆರಿಕ, ಯುರೋಪ್‌ನ ಆಸ್ಪತ್ರೆ ಮತ್ತು ಆರೋಗ್ಯ ವ್ಯವಸ್ಥೆಯ ಮೇಲೆ ಅತೀವವಾದ ಒತ್ತಡ ಸೃಷ್ಟಿಯಾಗಿದೆ. ಈ ಮಧ್ಯೆ, ದಕ್ಷಿಣ ಆಫ್ರಿಕಾ, ಬೋಟ್ಸ್‌ವಾನ, ಹಾಂಗ್‌ಕಾಂಗ್ ದೇಶಗಳಲ್ಲಿ ಕೊರೊನಾ ವೈರಾಣುವಿನ ಹೊಸ ರೂಪಾಂತರ ತಳಿ ‘ಓಮಿಕ್ರಾನ್’ ಪತ್ತೆಯಾಗಿದೆ. ಬಳಿಕ, ಹತ್ತಕ್ಕೂ ಹೆಚ್ಚು ದೇಶಗಳಲ್ಲಿ ಈ ಓಮಿಕ್ರಾನ್ ಪ್ರಕರಣಗಳು ವರದಿಯಾಗಿವೆ. ಈಗ ವ್ಯಾಪಕವಾಗಿರುವ ಡೆಲ್ಟಾ ತಳಿಗಿಂತ ಬಹಳ ವೇಗವಾಗಿ ಹರಡುವ ಸಾಮರ್ಥ್ಯವನ್ನು ಈ ತಳಿಯು ಹೊಂದಿದೆ; ಈಗ ಇರುವ ಕೋವಿಡ್ ನಿರೋಧಕ ಲಸಿಕೆಗಳು ಈ ತಳಿಯಿಂದ ರಕ್ಷಣೆ ಕೊಡುವುದಿಲ್ಲ ಎಂದು ಹೇಳಲಾಗುತ್ತಿದೆ. ಹಾಗಾಗಿ, ಓಮಿಕ್ರಾನ್ ತಳಿಯು ಇಡೀ ಜಗತ್ತು ತಲ್ಲಣಗೊಳ್ಳುವಂತೆ ಮಾಡಿದೆ. ಸೋಂಕು ಪತ್ತೆಯಾದ ದೇಶಗಳ ಮೇಲೆ ಅಮೆರಿಕ, ಬ್ರಿಟನ್, ಐರೋಪ್ಯ ಒಕ್ಕೂಟದ ದೇಶಗಳು ಸೇರಿ ಹಲವು ದೇಶಗಳು ಪ್ರಯಾಣ ನಿರ್ಬಂಧ ಹೇರಿವೆ. ವೈರಾಣುವಿನ ಹೊಸ ತಳಿಯು ಪತ್ತೆಯಾದ ಬಳಿಕ ಜಗತ್ತಿನ ಪ್ರಮುಖ ದೇಶಗಳ ಷೇರು ಮಾರುಕಟ್ಟೆಗಳಲ್ಲಿ ಕುಸಿತ ಕಂಡಿದೆ. ಹೊಸ ತಳಿಯು ಎಷ್ಟು ಅಪಾಯಕಾರಿ ಎಂಬುದನ್ನು ಈ ಕುಸಿತವೇ ವಿವರಿಸುತ್ತದೆ. ಕೋವಿಡ್ ಲಾಕ್‌ಡೌನ್ ಕಾರಣಕ್ಕೆ ತೀವ್ರ ಹಿನ್ನಡೆ ಅನುಭವಿಸಿದ್ದ ಅರ್ಥವ್ಯವಸ್ಥೆ ಚೇತರಿಸಿಕೊಳ್ಳುವ ಹೊತ್ತಿನಲ್ಲಿಯೇ ಪತ್ತೆಯಾದ ವೈರಾಣು ಕಳವಳಕ್ಕೆ ಕಾರಣವಾಗಿದೆ. ಯುರೋಪ್, ಅಮೆರಿಕದಲ್ಲಿ ಪ್ರಕರಣಗಳ ಏರಿಕೆಯು ಆ ಪ್ರದೇಶಕ್ಕೆ ಮಾತ್ರ ಕಳವಳಕಾರಿ ಸಂಗತಿ ಅಲ್ಲ; ಓಮಿಕ್ರಾನ್ ರೂಪಾಂತರ ತಳಿ ಪತ್ತೆಯಾಗಿರುವುದನ್ನು ಕೂಡ ಅದು ಪತ್ತೆಯಾದ ದೇಶಗಳಿಗೆ ಸೀಮಿತವಾದ ಸಮಸ್ಯೆ ಎಂದು ಪರಿಗಣಿಸುವಂತಿಲ್ಲ. ಹರಡುವಿಕೆಯ ತೀವ್ರತೆ ಮತ್ತು ಲಸಿಕೆಯ ರಕ್ಷಣೆ ಇಲ್ಲದಿರುವಿಕೆಯು ಜಗತ್ತಿನಲ್ಲಿ ಮತ್ತೊಂದು ಬಿಕ್ಕಟ್ಟಿಗೆ ಕಾರಣವಾಗಬಹುದು ಎಂಬ ಎಚ್ಚರ ಎಲ್ಲರಲ್ಲಿಯೂ ಇರಬೇಕು.



ಓಮಿಕ್ರಾನ್ ರೂಪಾಂತರ ತಳಿ ಹರಡುವಿಕೆಯ ತೀವ್ರತೆ ಮತ್ತು ಲಸಿಕೆಯ ರಕ್ಷಣೆ ಇಲ್ಲದಿರುವಿಕೆಯು ಜಗತ್ತಿನಲ್ಲಿ ಮತ್ತೊಂದು ಬಿಕ್ಕಟ್ಟಿಗೆ ಕಾರಣವಾಗಬಹುದು ಎಂಬ ಎಚ್ಚರ ಎಲ್ಲರಲ್ಲಿಯೂ ಇರಬೇಕು

ಜಗತ್ತಿನಲ್ಲಿ ಪತ್ತೆಯಾಗುತ್ತಿರುವ ಕೋವಿಡ್ ಪ್ರಕರಣಗಳು ಮತ್ತು ಸಾವಿನ ಪೈಕಿ ಶೇ 60ರಷ್ಟು ಯುರೋಪ್‌ನಲ್ಲಿಯೇ ವರದಿಯಾಗುತ್ತಿವೆ. ಹಲವು ದೇಶಗಳಲ್ಲಿ ಲಾಕ್‌ಡೌನ್ ಮತ್ತು ಇತರ ರೀತಿಯ ನಿರ್ಬಂಧಗಳು ಮತ್ತೆ ಜಾರಿಗೆ ಬಂದಿವೆ. ಚಳಿಗಾಲ ಹೊಸ್ತಿಲಲ್ಲಿದೆ. ಥಂಡಿ ಹವಾಮಾನದಲ್ಲಿ ವೈರಾಣುವಿನ ಚಟುವಟಿಕೆ ವೇಗ ಪಡೆದುಕೊಳ್ಳುತ್ತದೆ ಎಂಬುದು ಈಗಾಗಲೇ ದೃಢಪಟ್ಟಿದೆ. ಯುರೋಪ್ ಮತ್ತು ಮಧ್ಯ ಏಷ್ಯಾದಲ್ಲಿ ಮುಂದಿನ ಮಾರ್ಚ್ ಹೊತ್ತಿಗೆ ಏಳು ಲಕ್ಷಕ್ಕೂ ಹೆಚ್ಚು ಜನರು ಕೋವಿಡ್‌ನಿಂದ ಮೃತರಾಗಬಹುದು ಎಂದು ವಿಶ್ವ ಆರೋಗ್ಯ ಸಂಸ್ಥೆ ಅಂದಾಜಿಸಿದೆ. ಡೆಲ್ಟಾ ರೂಪಾಂತರ ತಳಿಯು ಭಾರತ ಮತ್ತು ಇತರ ಹಲವು ದೇಶಗಳಲ್ಲಿ ಕೋವಿಡ್-19ರ ಎರಡನೇ ಅಲೆಗೆ ಕಾರಣವಾಗಿತ್ತು. ಈಗ, ಯುರೋಪ್ ಮತ್ತು ಅಮೆರಿಕದ ಸಂಕಷ್ಟದ ಹಿಂದೆಯೂ ಈ ರೂಪಾಂತರ ತಳಿ ಇದೆ. ಜನಸಂಖ್ಯೆಯ ಶೇ 70ರಷ್ಟು ಭಾಗಕ್ಕೆ ಪೂರ್ಣ ಲಸಿಕೆ ಹಾಕಲಾಗಿರುವ ದೇಶಗಳಲ್ಲಿಯೇ ಪ್ರಕರಣಗಳ ಏರಿಕೆ ತೀವ್ರಗೊಂಡಿದೆ ಎಂಬುದು ಆತಂಕ ಹೆಚ್ಚಿಸಿದೆ. ಲಸಿಕೆ ಹಾಕಿಸಿಕೊಳ್ಳದವರಲ್ಲಿಯೇ ಹೊಸ ಪ್ರಕರಣಗಳು ಹೆಚ್ಚಾಗಿ ವರದಿಯಾಗಿವೆ. ಆದರೆ, ಲಸಿಕೆಯ ಎರಡೂ ಡೋಸ್ ಹಾಕಿಸಿಕೊಂಡವರಲ್ಲಿಯೂ ಸೋಂಕು ಕಾಣಿಸಿಕೊಂಡದ್ದು ಕಳವಳಕಾರಿ ಅಂಶ. ಹಾಗಾಗಿಯೇ ಲಸಿಕೆಯ ಬೂಸ್ಟರ್ ಡೋಸ್‌ಗೆ ಜಗತ್ತಿನ ವಿವಿಧ ಭಾಗಗಳಲ್ಲಿ ಬೇಡಿಕೆ ಹೆಚ್ಚಿದೆ. ಲಸಿಕೆಯು ಎರಡು ಸ್ತರದ ಜನವಿಭಾಗಗಳನ್ನು ಸೃಷ್ಟಿಸಿದೆ. ಸೈದ್ಧಾಂತಿಕ ಮತ್ತು ಚಾರಿತ್ರಿಕ ಕಾರಣಗಳನ್ನು ಮುಂದಿಟ್ಟು ಲಸಿಕೆ, ಮುನ್ನೆಚ್ಚರಿಕೆ ಮತ್ತು ನಿರ್ಬಂಧಗಳನ್ನು ವಿರೋಧಿಸುವ ಒಂದು ವರ್ಗ ಇದೆ. ಇದು ಸಾಂಕ್ರಾಮಿಕ ಸ್ಥಿತಿ ಉಲ್ಬಣಗೊಳ್ಳಲು ಕಾರಣವಾಗಬಹುದು. ಲಸಿಕೆ ಪ್ರತಿರೋಧವನ್ನು ನಿಭಾಯಿಸಲು, ಪ್ರಜಾಸತ್ತಾತ್ಮಕ ಪರಂಪರೆಯಿಂದಾಗಿ ಸರ್ಕಾರಗಳಿಗೂ ಕಷ್ಟವಾಗುತ್ತಿದೆ. ಇದು ಸಾರ್ವಜನಿಕ ಆರೋಗ್ಯಕ್ಕೆ ಮಾರಕವಾಗಬಹುದು.

ಈಗ ಸೃಷ್ಟಿಯಾಗಿರುವ ಪರಿಸ್ಥಿತಿಯಲ್ಲಿ ಭಾರತಕ್ಕೆ ಹಲವು ಪಾಠಗಳಿವೆ. ದೇಶದ ಒಟ್ಟು ಜನಸಂಖ್ಯೆಯ ಶೇ 30ಕ್ಕಿಂತ ಸ್ವಲ್ಪ ಹೆಚ್ಚಿನ ಭಾಗಕ್ಕಷ್ಟೇ ಲಸಿಕೆಯ ಎರಡೂ ಡೋಸ್ ಹಾಕಲಾಗಿದೆ. ಅಂದರೆ, ಜನಸಂಖ್ಯೆಯ ಬಹುಭಾಗಕ್ಕೆ ಲಸಿಕೆಯ ರಕ್ಷಣೆ ಸಿಕ್ಕಿಲ್ಲ. ಇಷ್ಟೊಂದು ದೊಡ್ಡ ವರ್ಗಕ್ಕೆ ಲಸಿಕೆಯ ರಕ್ಷಣೆ ಇಲ್ಲದೇ ಇರುವುದು ಬಹುದೊಡ್ಡ ಅಪಾಯಕ್ಕೆ ಕಾರಣ ಆಗಬಹುದು. 12 ಕೋಟಿಗೂ ಹೆಚ್ಚು ಜನರು ಲಸಿಕೆಯ ಎರಡನೇ ಡೋಸ್ ಅನ್ನು ನಿಗದಿತ ಅವಧಿಯಲ್ಲಿ ಪಡೆಯದೆ ತಪ್ಪಿಸಿಕೊಂಡಿದ್ದಾರೆ ಎಂದು ಕೇಂದ್ರ ಆರೋಗ್ಯ ಸಚಿವರು ಇತ್ತೀಚೆಗೆ ಹೇಳಿದ್ದರು. ರಾಜ್ಯದಲ್ಲಿ 45 ಲಕ್ಷ ಮಂದಿ ಎರಡನೇ ಡೋಸ್ ಹಾಕಿಸಿಕೊಂಡಿಲ್ಲ ಎಂದು ರಾಜ್ಯದ ಆರೋಗ್ಯ ಸಚಿವರು ಹೇಳಿದ್ದಾರೆ. ಇವರೆಲ್ಲರಿಗೂ ಆದಷ್ಟು ಬೇಗ ಎರಡನೇ ಡೋಸ್ ಲಸಿಕೆ ಹಾಕಿಸುವುದು ಜರೂರಾಗಿ ಆಗಬೇಕಿರುವ ಕೆಲಸ. ಜತೆಗೆ, ಲಸಿಕೆಯ ರಕ್ಷಣೆ ಇಲ್ಲದ ಓಮಿಕ್ರಾನ್ ರೂಪಾಂತರ ತಳಿಯನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಹಾಗೂ ಜನರು ಗಂಭೀರವಾಗಿ ಪರಿಗಣಿಸಬೇಕಿದೆ. ಓಮಿಕ್ರಾನ್ ರೂಪಾಂತರ ತಳಿಯು ಭಾರತದಲ್ಲಿ ಪತ್ತೆಯಾಗಿಲ್ಲ ಎಂಬುದು ನೆಮ್ಮದಿಯ ವಿಚಾರ. ಹಾಗಿದ್ದರೂ ಮುನ್ನೆಚ್ಚರಿಕೆ ಅಗತ್ಯ. ಮುಖಗವಸು ಧರಿಸುವುದು, ಅಂತರ ಕಾಯ್ದುಕೊಳ್ಳುವುದು, ಆಗಾಗ ಕೈ ಸ್ವಚ್ಛಗೊಳಿಸುವುದು ಮಾತ್ರ ಓಮಿಕ್ರಾನ್‌ನಿಂದ ರಕ್ಷಣೆ ಪಡೆಯಲು ಇರುವ ದಾರಿ ಎಂಬುದನ್ನು ಜನರು ಸದಾ ನೆನಪಿನಲ್ಲಿ ಇರಿಸಿಕೊಳ್ಳಬೇಕಾದ ಸಂದರ್ಭ ಇದು. ದೇಶದಲ್ಲಿ ಪ್ರಕರಣಗಳು ಕಡಿಮೆ ಆಗಿವೆ ಎಂಬುದು ಸರ್ಕಾರ ಮತ್ತು ಜನರಲ್ಲಿ ಅಸಡ್ಡೆ ಸೃಷ್ಟಿಸಿದರೆ ದೊಡ್ಡ ಗಂಡಾಂತರ ಎದುರಾದೀತು. ಧಾರವಾಡ ಮತ್ತು ಬೆಂಗಳೂರಿನ ಒಂದೆರಡು ಶಾಲಾ-ಕಾಲೇಜುಗಳ ಕೆಲವು ವಿದ್ಯಾರ್ಥಿಗಳಲ್ಲಿ ಸೋಂಕು ಪತ್ತೆ ಆಗಿರುವುದು ಎಚ್ಚರಿಕೆಯ ಗಂಟೆ.

ದಿನದ ಟ್ವೀಟ್



ಪ್ರಶಂಸಾರ್ಹ ನಡೆ

‘ಓಮಿಕ್ರಾನ್’ ಕಳವಳಕ್ಕೆ ಕಾರಣವಾಗುವ ಸಂಗತಿ. ಆದಾಗ್ಯೂ ದಕ್ಷಿಣ ಆಫ್ರಿಕಾದ ಬಗ್ಗೆ ವಿಶ್ವವು ಮೆಚ್ಚುಗೆ ವ್ಯಕ್ತಪಡಿಸಬೇಕಾದ ಅಗತ್ಯವಿದೆ. ಇತರ ದೇಶಗಳಂತೆ ಅದು ಕೊರೊನಾ ವೈರಸ್ ಅಥವಾ ಅದರ ರೂಪಾಂತರಿ ತಳಿಗಳ ವಿಷಯವನ್ನು ಮರೆಮಾಚಲು ಯತ್ನಿಸಲಿಲ್ಲ. ಅಲ್ಲಿನ ಹಲವಾರು ಪ್ರಯೋಗಾಲಯಗಳು ಜೆನೋಮ್ ಪರೀಕ್ಷೆಯನ್ನು ನಿರಂತರವಾಗಿ ನಡೆಸುತ್ತಿವೆ ಮತ್ತು ಅದಕ್ಕೆ ಸಂಬಂಧಿಸಿದ ಫಲಿತಾಂಶಗಳನ್ನು ವಿಶ್ವಾಸಾರ್ಹವಾಗಿ ವರದಿ ಮಾಡುತ್ತಿವೆ.

ಅಶೋಕ್ ಸ್ವೈಯ್ನ್, ಪ್ರಾಧ್ಯಾಪಕ

ಕಿಡಿನುಡಿ

ಮೈಬಣ್ಣದ ಕಾರಣಕ್ಕಾಗಿ ನನ್ನ ಜೀವನದ ಉದ್ದಕ್ಕೂ ತಾರತಮ್ಯ ಮತ್ತು ನಿಂದನೆಗಳನ್ನು ಎದುರಿಸಿದ್ದೇನೆ. ಹೀಗಾಗಿ, ಅದರ ಬಗ್ಗೆ ಈಗ ನಾನು ಹೆಚ್ಚು ತಲೆಕೆಡಿಸಿಕೊಳ್ಳುವುದಿಲ್ಲ. ದುರದೃಷ್ಟವಶಾತ್ ಇದು ನಡೆದಿರುವುದು ನಮ್ಮದೇ ದೇಶದಲ್ಲಿ.



ಲಕ್ಷ್ಮಣ ಶಿವರಾಮಕೃಷ್ಣನ್, ಭಾರತ ಕ್ರಿಕೆಟ್ ತಂಡದ ಮಾಜಿ ಆಟಗಾರ

25 ವರ್ಷಗಳ ಹಿಂದೆ

ಶುಕ್ರವಾರ, 29-11-1996

• **ವಿದ್ಯುತ್ ಯೋಜನೆಗೆ ಕೇಂದ್ರದ ಪ್ರತಿಗ್ಯಾರಂಟಿ ಇಲ್ಲ**

ನವದೆಹಲಿ, ನ. 28– ರಾಷ್ಟ್ರದಲ್ಲಿ ಮುಂದೆ ಖಾಸಗಿ ಕಂಪನಿಗಳು ಸ್ಥಾಪಿಸಲಿರುವ ಯಾವುದೇ ವಿದ್ಯುತ್ ಯೋಜನೆಗಳಿಗೆ ಸರ್ಕಾರ ಪ್ರತಿಗ್ಯಾರಂಟಿ ನೀಡುವುದಿಲ್ಲ ಎಂದು ರಾಜ್ಯಸಭೆಯಲ್ಲಿ ಪ್ರಕಟಿಸಿದ ಪ್ರಧಾನಿ ಎಚ್.ಡಿ.ದೇವೇಗೌಡರು, ವಿರೋಧ ಪಕ್ಷಗಳು ಅರ್ಥವಿಲ್ಲದ ತಕರಾರು ಅರ್ಜಿಗಳನ್ನು ಸಲ್ಲಿಸಿರುವುದರಿಂದ ಈ ವಲಯದಲ್ಲಿ ಬಂಡವಾಳ ಹೂಡಿಕೆ ಕಡಿಮೆಯಾಗಲು ಕಾರಣವಾಗಿದೆ ಎಂದು ತರಾಟೆಗೆ ತೆಗೆದುಕೊಂಡರು.

ಎಂಟು ವಿದ್ಯುತ್ ಯೋಜನೆಗಳಿಗೆ ಕೇಂದ್ರ ಸರ್ಕಾರ ಪ್ರತಿಗ್ಯಾರಂಟಿ ನೀಡಲು ನಿರ್ಧರಿಸಿದೆ. ಆದರೆ ಇನ್ನು ಮುಂದೆ ಪ್ರತಿಗ್ಯಾರಂಟಿ ನೀಡುವುದನ್ನು ಸಂಪೂರ್ಣವಾಗಿ ಸ್ಥಗಿತಗೊಳಿಸಲಾಗುವುದು ಎಂದು ಅವರು ಘೋಷಿಸಿದರು.

50 ವರ್ಷಗಳ ಹಿಂದೆ

ಸೋಮವಾರ, 29-11-1971

• **ಭದ್ರತಾ ಮಂಡಳಿಯಲ್ಲಿ ಪ್ರಸ್ತಾಪ ನಿಷ್ಪ್ರಯೋಜಕ: ಇಂದಿರಾ ಸ್ಪಷ್ಟನೆ**

ಜೈಪುರ, ನ. 28– ‘ಭಾರತ ಉಪಖಂಡದಲ್ಲಿನ ಈಗಿನ ಬಿಕ್ಕಟ್ಟಿನ ಪರಿಸ್ಥಿತಿ ವಿಷಯವನ್ನು ವಿಶ್ವಸಂಸ್ಥೆ ಭದ್ರತಾ ಮಂಡಳಿಯಲ್ಲಿ ಪ್ರಸ್ತಾಪಿಸುವುದರಿಂದ ಆ ಪರಿಸ್ಥಿತಿ ಸಡಿಲಗೊಳ್ಳುವುದಕ್ಕೆ ಸಹಾಯಕವಾಗುವುದಿಲ್ಲ. ಅಲ್ಲದೆ ಪ್ರಸಕ್ತ ಪರಿಸ್ಥಿತಿ ಮೇಲೆ ಯಾವ ವಾಸ್ತವಿಕ ಪರಿಣಾಮವೂ ಉಂಟಾಗದು’ ಎಂದು ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿ ಅವರು ಇಂದು ಹೇಳಿದರು.

ಇಲ್ಲಿ ಭಾರಿ ಬಹಿರಂಗ ಸಭೆಯನ್ನು ಉದ್ದೇಶಿಸಿ ಮಾತನಾಡುತ್ತಿದ್ದ ಪ್ರಧಾನಿ ಅವರು, ‘ಪಾಕಿಸ್ತಾನವು ಈ ಹಿಂದೆ ಭಾರತದ ಮೇಲೆ ನಾಲ್ಕು ಬಾರಿ ದಾಳಿ ಮಾಡಿದೆ. ನಾವು ಪಾಕಿಸ್ತಾನದ ಮೇಲೆ ದಾಳಿ ಮಾಡಲಿಲ್ಲ ಎಂಬುದು ಸುಸ್ಪಷ್ಟ. ನಮ್ಮ ಮೇಲೆ ಆಕ್ರಮಣ ನಡೆದಾಗ ಭದ್ರತಾ ಮಂಡಳಿ ಏನು ಮಾಡಿತು. ಅದು ಆಕ್ರಮಣಕಾರ ಯಾರು ಎಂದು ಸಹಾ ಹೆಸರಿಸಲಿಲ್ಲ’ ಎಂದರು.

ಬಾಲ್ಯದಲ್ಲಿ ಪರಿಸ್ಥಿತಿ ಸುಧಾರಣೆಗೆ ಕೈಗೊಳ್ಳುವ ಕ್ರಮಗಳು ಅತಿ ಮುಖ್ಯವಾದವು

ಅಪೌಷ್ಟಿಕತೆಯ ದೂರಗಾಮಿ ಪರಿಣಾಮ



ವಿಶ್ಲೇಷಣೆ

ಪ್ರೊ. ಶ್ರೀಲತಾ ರಾವ್ ಶೇಷಾದ್ರಿ

ಈ ವರ್ಷ ಅಕ್ಟೋಬರ್ ತಿಂಗಳಲ್ಲಿ ಪ್ರಕಟವಾದ ಜಾಗತಿಕ ಹಸಿವು ಸೂಚ್ಯಂಕವು ಸಮೀಕ್ಷೆಗೆ ಒಳಪಡಿಸಲಾದ 116 ರಾಷ್ಟ್ರಗಳ ಪೈಕಿ ಭಾರತವು 101ನೇ ಸ್ಥಾನದಲ್ಲಿರುವುದನ್ನು ತೋರಿಸಿದೆ. ಒಟ್ಟು ಶ್ರೇಯಾಂಕವನ್ನು ಆಧರಿಸಿ ಹೇಳುವುದಾದಲ್ಲಿ, ಭಾರತದಲ್ಲಿನ ಹಸಿವಿನ ಸಮಸ್ಯೆ ‘ಗಂಭೀರ’ವಾದದ್ದು. ಬೇಸರದ ಸಂಗತಿ ಎಂದರೆ, ಕಳೆದ ದಶಕದಲ್ಲಿ ಭಾರತದ ಶ್ರೇಯಾಂಕ ಕುಸಿದಿರುವ ಪ್ರಮಾಣ ಅತ್ಯಂತ ತೀವ್ರತರವಾದದ್ದು. 2011ರಲ್ಲಿ, 122 ರಾಷ್ಟ್ರಗಳ ಪೈಕಿ ಭಾರತದ ಸ್ಥಾನ 67ರಲ್ಲಿತ್ತು. ಈಗ, ತನ್ನ ಅಕ್ಕಪಕ್ಕದ ನೆರೆ ರಾಷ್ಟ್ರಗಳಿಗಿಂತ ಭಾರತವು ಕೆಳಗಿನ ಸ್ಥಾನದಲ್ಲಿರುವುದನ್ನು 2021ರ ಶ್ರೇಯಾಂಕ ತೋರಿಸುತ್ತಿದೆ.

ಹಸಿವಿಗೂ ಅಪೌಷ್ಟಿಕತೆಗೂ ನೇರ ಸಂಬಂಧ ಇದೆ. ಆರಂಭದ ಬಾಲ್ಯ ಕಾಲದಲ್ಲಿನ ಅಪೌಷ್ಟಿಕತೆಯ ಪರಿಣಾಮವು ದೀರ್ಘಾವಧಿಯಲ್ಲಿ ತುಂಬಾ ಗಂಭೀರವಾದುದಾಗಿರುತ್ತದೆ. ಐದು ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳ ಅರ್ಧದಷ್ಟು ಸಾವುಗಳು ಪೌಷ್ಟಿಕತೆಯ ಕೊರತೆಯಿಂದಲೇ ಸಂಭವಿಸುತ್ತವೆ. ಎಳೆಯ ಮಕ್ಕಳಲ್ಲಿ ಪೌಷ್ಟಿಕತೆಯ ಕೊರತೆಯು ಕೆಟ್ಟದೊಂದು ಸುಳಿಯ ಭಾಗವಾಗಿಬಿಡುತ್ತದೆ ಎಂಬುದನ್ನು ಸ್ಪಷ್ಟವಾಗಿ ಗುರುತಿಸಲಾಗಿದೆ. ಅಪೌಷ್ಟಿಕತೆ ಹೊಂದಿದ ಮಕ್ಕಳು ಸೋಂಕುಗಳಿಗೆ ಬೇಗ ತುತ್ತಾಗುತ್ತಾರೆ. ಇದರಿಂದ ಉಂಟಾಗುವ ಕಾಯಿಲೆಗಳಿಂದಾಗಿ ಮತ್ತಷ್ಟು ದುರ್ಬಲರಾಗಿ ಇನ್ನಷ್ಟು ತೀವ್ರತರ ಕಾಯಿಲೆಗಳಿಗೆ ಈಡಾಗುವ ಸಂಭವವಿರುತ್ತದೆ. ಮೊದಲ 1,000 ದಿನಗಳಲ್ಲಿ ಸರಿಯಾದ ಪೌಷ್ಟಿಕ ಆಹಾರ ಲಭಿಸದಿದ್ದಲ್ಲಿ ಜೀವನಪರ್ಯಂತ ಮಗು ಹಲವು ಅನನುಕೂಲಗಳಿಂದ ನರಳುವಂತಾಗಬಹುದು. ಮಿದುಳಿನ ಬೆಳವಣಿಗೆ, ಅರಿವಿನ ಶಕ್ತಿ ಹಾಗೂ ಶಾಲೆಗಳಲ್ಲಿ ಶೈಕ್ಷಣಿಕ ಗುರಿ ಸಾಧನೆಗಳಂತಹ ವಿಚಾರಗಳಲ್ಲಿ ಸಮಸ್ಯೆಗಳನ್ನು ಎದುರಿಸುವಂತಾಗಬಹುದು. ಇದು ಶಾಲೆ, ಕ್ರೀಡೆ ಹಾಗೂ ಇತರ ಚಟುವಟಿಕೆಗಳಲ್ಲಿ ಅವರ ಪಾಲ್ಗೊಳ್ಳುವಿಕೆಯ ಸಾಮರ್ಥ್ಯದ ಮೇಲೆ ಪರಿಣಾಮ ಬೀರುತ್ತದೆ. ಇತರ ಮಕ್ಕಳ ಜೊತೆಗೆ ಸಾಮಾಜಿಕವಾಗಿ ಬೆರೆಯುವ ಅವರ ಸಾಮರ್ಥ್ಯದ ಮೇಲೂ ಇದು ಪರಿಣಾಮ ಬೀರುತ್ತದೆ. ಇಂತಹ ಮಕ್ಕಳು ಮಧ್ಯದಲ್ಲೇ ಶಾಲೆ ಬಿಡುವ ಪ್ರಮಾಣವೂ ಹೆಚ್ಚಿರುತ್ತದೆ. ಪರಿಣಾಮವಾಗಿ, ಅಪೌಷ್ಟಿಕತೆಯಿಂದ ನರಳುವ ಮಕ್ಕಳು ವಯಸ್ಕರಾದಾಗ, ಮಾಮೂಲು ಬೆಳವಣಿಗೆ ಇರುವ ಮಕ್ಕಳು ವಯಸ್ಕರಾದಾಗ ಗಳಿಸುವುದಕ್ಕಿಂತ ಶೇಕಡ 20ರಷ್ಟು ಕಡಿಮೆ ವರಮಾನ ಗಳಿಸುತ್ತಾರೆ ಎಂಬುದು ಸಂಶೋಧನೆಗಳಿಂದ ವ್ಯಕ್ತವಾಗಿದೆ.

ಸಮೀಕ್ಷೆ ನಡೆಸಲಾದ 17 ರಾಜ್ಯಗಳ ಪೈಕಿ 11 ರಾಜ್ಯಗಳಲ್ಲಿ 5 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳಲ್ಲಿ ವಯಸ್ಸಿಗೆ ತಕ್ಕ ಎತ್ತರ ಇಲ್ಲದಿರುವುದು (ಸ್ಟಂಟಿಂಗ್) ತೀವ್ರತರವಾಗಿದೆ ಎಂಬುದನ್ನು ರಾಷ್ಟ್ರೀಯ ಕೌಟುಂಬಿಕ ಆರೋಗ್ಯ ಸಮೀಕ್ಷೆ- 5 (ಎನ್‌ಎಫ್‌ಎಚ್‌ಎಸ್-5; 2019-2020) ತೋರಿಸಿದೆ. ವಯಸ್ಸಿಗೆ ತಕ್ಕ ಎತ್ತರ ಇಲ್ಲದಿರುವ ಈ ಸಮಸ್ಯೆಯು ದೀರ್ಘಕಾಲದಿಂದ ಪೀಳಿಗೆ ಪೀಳಿಗೆಗಳಿಂದ ಹಾದುಬಂದಂತಹ ಅಪೌಷ್ಟಿಕತೆ, ಪುನರಾವರ್ತಿತ ಕಾಯಿಲೆ ಹಾಗೂ ಅಸಮರ್ಪಕ ಪರಿಸರಗಳಿಗೆ ಸೂಚಕವಾಗಿದೆ. ಇದೇ ವಯೋಮಾನದ ಮಕ್ಕಳ ಗುಂಪಿಗೆ ಸಂಬಂಧಿಸಿದಂತೆ, 17 ರಾಜ್ಯಗಳ ಪೈಕಿ 13 ರಾಜ್ಯಗಳಲ್ಲಿ, ಎತ್ತರಕ್ಕೆ ತಕ್ಕ ತೂಕ ಇಲ್ಲದಿರುವ (ವೇಸ್ಟಿಂಗ್) ಸಮಸ್ಯೆಯೂ ಹೆಚ್ಚಾಗಿದೆ. ಎತ್ತರಕ್ಕೆ ತಕ್ಕ ತೂಕ ಇಲ್ಲದಿರುವುದು, ಇತ್ತೀಚಿನ ತೀವ್ರತರವಾದ ತೂಕ ನಷ್ಟವನ್ನು ಸಾಮಾನ್ಯವಾಗಿ ಸೂಚಿಸುತ್ತದೆ.

ಕೋವಿಡ್ -19 ಸಾಂಕ್ರಾಮಿಕ ಹರಡುವುದಕ್ಕೆ ಮೊದಲೇ ಈ ಸಮೀಕ್ಷೆಯನ್ನು ನಡೆಸಲಾಗಿತ್ತು ಎಂಬುದನ್ನು ನಾವು ನೆನಪಿಸಿಕೊಳ್ಳಬೇಕು. ಕೋವಿಡ್-19ರ ಸಂದರ್ಭದಲ್ಲಿ ಕಾಯಿಲೆ ಹಾಗೂ ಜೀವನೋಪಾಯ ನಷ್ಟಗಳಿಂದಾಗಿ ವಿಶೇಷವಾಗಿ ಬಡ ಕುಟುಂಬಗಳಲ್ಲಿ ಅಪೌಷ್ಟಿಕತೆ ಸಮಸ್ಯೆಯು ಮತ್ತಷ್ಟು ತೀವ್ರವಾಗಿದೆ.

ಎನ್‌ಎಫ್‌ಎಚ್‌ಎಸ್-4 (2015-16) ಹಾಗೂ ಎನ್‌ಎಫ್‌ಎಚ್‌ಎಸ್-5 ಮಧ್ಯೆ ಕರ್ನಾಟಕದಲ್ಲಿ ಪರಿಸ್ಥಿತಿಯು ಒಟ್ಟಾರೆಯಾಗಿ ಹದಗೆಟ್ಟಿಲ್ಲದಿದ್ದರೂ ದಾಖಲೆಯು ಮಂಕಾಗಿಯೇ ಇದೆ. ರಾಜ್ಯದಲ್ಲಿ, ಐದು ವರ್ಷಕ್ಕಿಂತ ಕಡಿಮೆ ವಯಸ್ಸಿನ ಮೂವರು ಮಕ್ಕಳಲ್ಲಿ ಒಂದು ಮಗು ತನ್ನ ವಯಸ್ಸಿಗೆ ತಕ್ಕ ಎತ್ತರ ಹೊಂದಿರದೆ ಕುಬ್ಜವಾಗಿ ಇದೆ; ಹಾಗೆಯೇ ಹತ್ತು ಮಕ್ಕಳಲ್ಲಿ ಒಂದು ಮಗು ತೀರಾ ಸಣ್ಣಗಿದೆ. ಈ ಸಮಸ್ಯೆಯು ಬೇರೆ ಬೇರೆ ಜಿಲ್ಲೆಗಳಲ್ಲಿ ಬೇರೆ ಬೇರೆ ರೀತಿ ಇದೆ. ಉದಾಹರಣೆಗೆ, ಯಾದಗಿರಿ ಹಾಗೂ ರಾಯಚೂರು ಜಿಲ್ಲೆಗಳಲ್ಲಿ ವಯಸ್ಸಿಗೆ ತಕ್ಕ ಎತ್ತರ ಇಲ್ಲದ ಐದು ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳ ಪ್ರಮಾಣ ಶೇಕಡ 3-4ರಷ್ಟು ಹೆಚ್ಚಾಗಿದೆ.

ಪರಿಸ್ಥಿತಿ ಸುಧಾರಿಸಲು ಏನು ಮಾಡಬೇಕು? ಡಬ್ಲ್ಯುಎಚ್‌ಒ ಶಿಫಾರಸುಗಳಲ್ಲಿ ಕೆಲವಷ್ಟನ್ನೇ ಆಯ್ಕೆ ಮಾಡಿಕೊಂಡು ಕೈಗೊಳ್ಳುವ ಕೆಲವೊಂದು ತಕ್ಷಣದ ಕ್ರಮಗಳು ಭಾರಿ ಪರಿಣಾಮ ಬೀರಬಹುದು:

1. ಶಿಶು ಹಾಗೂ ಮಕ್ಕಳ ಬೆಳವಣಿಗೆಯ ನಿಯಮಿತ ಮೇಲ್ವಿಚಾರಣೆಯು ಕಡ್ಡಾಯವಾಗಬೇಕು. ಸಮಗ್ರ ಶಿಶು ಅಭಿವೃದ್ಧಿ ಯೋಜನೆ (ಐಸಿಡಿಎಸ್) ಅಡಿ ಅಂಗನವಾಡಿ ಕೇಂದ್ರಗಳಲ್ಲಿ ಹಾಗೂ ಶಾಲಾ ಆರೋಗ್ಯ ಕಾರ್ಯಕ್ರಮದ ಅಡಿ ಪ್ರಾಥಮಿಕ ಶಾಲೆಗಳಲ್ಲಿ ಇದು ಈಗಾಗಲೇ ಒಂದು ಅವಶ್ಯಕತೆಯಾಗಿ ಇದ್ದೇ ಇದೆ. ಮಕ್ಕಳ ತೂಕ ಹಾಗೂ ಎತ್ತರವನ್ನು ನಿಕಟವಾಗಿ ಪರಿಶೀಲಿಸುತ್ತಲೇ ಸಾಗುವುದರಿಂದ ಅಪೌಷ್ಟಿಕತೆಯ ಅಪಾಯದಲ್ಲಿರುವ ಮಕ್ಕಳನ್ನು ಗುರುತಿಸಿ ಸಕಾಲದ ಚಿಕಿತ್ಸೆ ಹಾಗೂ ನಂತರದ ನಿರಂತರ ಮೇಲುಸ್ತುವಾರಿಗೆ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಕಳಿಸಿಕೊಡಬಹುದು. ಈ ಪ್ರಕ್ರಿಯೆಯಲ್ಲಿ ಪೋಷಕರನ್ನೂ ತೊಡಗಿಸಿಕೊಂಡು ಬೇಗನೇ ಚಿಕಿತ್ಸೆ ಕೊಡಿಸುವುದರ ಮಹತ್ವದ ಬಗ್ಗೆ ಅರಿವು ಮೂಡಿಸಬಹುದು.



2. ಅಂಗನವಾಡಿ ಹಾಗೂ ಶಾಲೆಗಳಲ್ಲಿ ನೀಡಲಾಗುವ ಆಹಾರ ಕಾರ್ಯಕ್ರಮಗಳು ಬಹಳ ಮುಖ್ಯವಾದವು. ಕೋವಿಡ್-19 ಸಾಂಕ್ರಾಮಿಕದ ಸಂದರ್ಭದಲ್ಲಿ ಅಂಗನವಾಡಿ ಹಾಗೂ ಶಾಲೆಗಳು ಮುಚ್ಚಿದ್ದರಿಂದ ಈ ಆಹಾರ ಕಾರ್ಯಕ್ರಮಗಳ ಮಹತ್ವ ಮತ್ತಷ್ಟು ಸ್ಪಷ್ಟವಾಯಿತು. ಹೀಗಿದ್ದೂ, ಈ ಊಟದ ಪೌಷ್ಟಿಕತೆಯ ಮೌಲ್ಯವನ್ನು ಪರಿಶೀಲಿಸುವ ಕಾಲ ಬಂದಿದೆ. ಅಕ್ಕಿ ಅಥವಾ ಗೋಧಿ ಪ್ರಮಾಣ ಹೆಚ್ಚಿರುವ ಊಟ ಹೊಟ್ಟೆಯನ್ನು ತುಂಬಿಸುತ್ತದೆ. ಆದರೆ, ದೇಹಕ್ಕೆ ಅತ್ಯಗತ್ಯವಾದ ಪ್ರೋಟೀನ್ ಹಾಗೂ ಸೂಕ್ಷ್ಮ ಪೋಷಕಾಂಶಗಳನ್ನು ಇದು ಒದಗಿಸುವುದಿಲ್ಲ. ಕರ್ನಾಟಕದಲ್ಲಿರುವಂತೆ ಹಾಲನ್ನು ಒದಗಿಸುವುದು ಹಾಗೂ ರಾಜ್ಯದಲ್ಲಿ ಹೆಚ್ಚು ಅಪೌಷ್ಟಿಕತೆ ಸಮಸ್ಯೆ ಎದುರಿಸುತ್ತಿರುವ ಜಿಲ್ಲೆಗಳಲ್ಲಿನ ಮಕ್ಕಳಿಗೆ ಮೊಟ್ಟೆ ಒದಗಿಸುವ ಪ್ರಸ್ತಾವಗಳು ತುಂಬಾ ಉತ್ತಮವಾದ ಸೇರ್ಪಡೆಗಳು. ಆದರೆ ಇನ್ನೂ ಹೆಚ್ಚಿನದನ್ನು ಮಾಡಬಹುದು. ಉದಾಹರಣೆಗೆ, ಪೋಷಕಾಂಶ ಹೆಚ್ಚಿರುವ ರಾಗಿಯನ್ನು ವಾರದ ಕೆಲವು ದಿನಗಳಲ್ಲಿ ನೀಡಬಹುದು. ಸ್ವತಃ ಆಹಾರ ಬೆಳೆ ಬೆಳೆದು ತಮ್ಮ ಊಟವನ್ನು ಎಷ್ಟೊಂದು ಸಮೃದ್ಧಗೊಳಿಸಿಕೊಳ್ಳಬಹುದು ಎಂಬುದನ್ನು ಕಲಿಸಲು ತರಕಾರಿ ತೋಟ ಅಭಿವೃದ್ಧಿಪಡಿಸುವುದನ್ನು ಮಕ್ಕಳಲ್ಲಿ ಉತ್ತೇಜಿಸಬಹುದು.

3. ಮಕ್ಕಳ ಪೌಷ್ಟಿಕತೆಗಾಗಿ ಮಾಡುವ ವೆಚ್ಚ ಗಣನೀಯ ಪ್ರಮಾಣದಲ್ಲಿ ಹೆಚ್ಚಬೇಕು. 2022ರೊಳಗೆ 5 ವರ್ಷಕ್ಕಿಂತ ಕಡಿಮೆ ವಯೋಮಾನದ ಮಕ್ಕಳ ಕುಂಠಿತ ಬೆಳವಣಿಗೆಯನ್ನು ತಗ್ಗಿಸುವ ಗುರಿಯನ್ನು ಸರ್ಕಾರ ಆರಂಭಿಸಿರುವ ಮಿಷನ್ ಪೋಷಣ್ 2.0 ಕಾರ್ಯಕ್ರಮ ಹೊಂದಿದೆ. ಆಹಾರದ ಜೊತೆಗೆ ಪೂರಕ ಪೋಷಕಾಂಶಗಳು, ಮಾತೃತ್ವ ಸೌಲಭ್ಯಗಳು, ಪೂರಕ ಸೂಕ್ಷ್ಮ ಪೋಷಕಾಂಶಗಳು ಹಾಗೂ ಪೌಷ್ಟಿಕತೆ ಕುರಿತಂತಹ ಸಲಹಾ ಸೇವೆಗಳನ್ನು ಪೂರ್ಣಪ್ರಮಾಣದಲ್ಲಿ ಒದಗಿಸಲು ಸುಮಾರು ₹ 38,500 ಕೋಟಿಯಷ್ಟು ಹೂಡಿಕೆ ಅಗತ್ಯವಿದೆ ಎಂದು ಸಂಶೋಧಕರು ಅಂದಾಜು ಮಾಡಿದ್ದಾರೆ. ಹೀಗಿದ್ದೂ, 2019-20ರಲ್ಲಿ ಪೌಷ್ಟಿಕತೆಗಾಗಿ ಬಜೆಟ್‌ನಲ್ಲಿ ಒದಗಿಸಿದ್ದ ಹಣ ಸುಮಾರು ₹ 17,600 ಕೋಟಿ. ಎಂದರೆ, ಅರ್ಧದಷ್ಟು ಕಡಿಮೆ.

ಅಪೌಷ್ಟಿಕತೆಯಿಂದಾಗಿ ಉತ್ಪಾದಕತೆಯ ನಷ್ಟವು ಭಾರತದ ಜಿಡಿಪಿಯಲ್ಲಿ ಬಹುತೇಕ ಶೇ 3ರಷ್ಟಿರುತ್ತದೆ ಎಂದು ವಿಶ್ವ ಬ್ಯಾಂಕ್ (2005) ಅಂದಾಜು ಮಾಡಿದೆ. ಪ್ರತಿವರ್ಷ ಜಿಡಿಪಿಯ ಶೇ 0.8ರಿಂದ ಶೇ 2.5ರಷ್ಟು ಪ್ರಮಾಣದಲ್ಲಿ ಭಾರತದ ಆರ್ಥಿಕತೆಗೆ ಸೂಕ್ಷ್ಮ ಪೋಷಕಾಂಶ ಕೊರತೆಯೊಂದೇ ನಷ್ಟವುಂಟು ಮಾಡುತ್ತಿದೆ ಎಂದೂ ಅಂದಾಜು ಮಾಡಲಾಗಿದೆ. ಮಕ್ಕಳ ಅಪೌಷ್ಟಿಕತೆ ನಿರ್ವಹಣೆಗೆ ರಾಷ್ಟ್ರೀಯ ಕಾರ್ಯತಂತ್ರವೊಂದರ ಬಗ್ಗೆ ಗಂಭೀರವಾಗಿ ಮರು ಆಲೋಚಿಸುವ ಕಾಲ ಬಂದಿದೆ. ದಿಟ್ಟವಾದಂತಹ ಸಂರಚನಾತ್ಮಕ ಸುಧಾರಣೆಗಳು ಹಾಗೂ ಬಜೆಟ್‌ನಲ್ಲಿ ಹಣ ಹಂಚಿಕೆ ದ್ವಿಗುಣಗೊಳಿಸುವುದು ಮುಖ್ಯವಾಗುತ್ತವೆ. ಮಾನವೀಯವಾದ ಅಭಿವೃದ್ಧಿಪರ ಆರ್ಥಿಕ ದೃಷ್ಟಿಕೋನಗಳಿಂದ ಸಿಗುವ ಪ್ರಯೋಜನ ದೊಡ್ಡದು. ಈ ದಿಸೆಯಲ್ಲಿನ ಹಣ ಹೂಡಿಕೆಗಳಿಂದ ದಕ್ಕುವ ಲಾಭಗಳು ಹಲವು ಪಟ್ಟು ಹೆಚ್ಚಾಗಿರುತ್ತವೆ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು.

ಚುರುಮುರಿ



ಅದೃಷ್ಟದ ಭೂಮಿ

• ಸುಮಂಗಲಾ

ಹೋದ ತಿಂಗಳು ಬೆಕ್ಕಣ್ಣ ‘ನಿನ್ನ ಚುರುಮುರಿವಳಗ ನಾನೇ ಮುಖ್ಯಪಾತ್ರ ಅಂದ್ರ ನಾನೂ ಸಹಲೇಖಕ... ನಾನೂ ಸಾಯಿತಿ ಹೌದಿಲ್ಲೋ. ಜಿಲ್ಲಾ ಘಟಕದ ಅಧ್ಯಕ್ಷ ಸ್ಥಾನಕ್ಕೆ ನಾನೂ ಸ್ಪರ್ಧಿಸತೀನಿ’ ಎಂದು ದುಂಬಾಲು ಬಿದ್ದಿತ್ತು.

‘ಅದಕ್ಕ ಲಕ್ಷಗಟ್ಟಲೆ ರೊಕ್ಕ ಬೇಕು, ಸಂಘಟನಾ ಚಾತುರ್ಯ ಬೇಕು, ನಿನಗೆಲ್ಲೈತಿ ಅದೆಲ್ಲ’ ಎಂದು ಬೈದು ಸುಮ್ಮನಾಗಿಸಿದ್ದೆ.

ಕಳೆದ ವಾರ ‘ನನಗ ಒಂದು ದೊಡ್ಡ ಶಂಖ ತರಿಸಿಕೊಡು. ಎಲ್ಲಾ ಕಡಿಗಿ ಚುನಾವಣೆ ಪ್ರಚಾರ ಶಂಖ ಊದಾಕೆ ನಾನೊಬ್ಬನೇ ಹೋಗಬೇಕಂತ ಕುಮಾರಣ್ಣ ಅಳಾಕಹತ್ಯಾನ. ನಾ ಅವಂಗ ಸಹಾಯ ಮಾಡತೀನಿ’ ಅಂತ ವರಾತ ಹಚ್ಚಿತ್ತು.

ಇವತ್ತು ‘ನಿನ್ನ ಹತ್ರ ರೊಕ್ಕ ಎಷ್ಟೈತಿ’ ಅಂತ ಬೆಕ್ಕಣ್ಣ ಕೇಳಿದಾಗ, ಇದೇನೋ ಹೊಸ ಪ್ಲಾನ್ ಹಾಕ್ತಿದೆ ಎನ್ನಿಸಿ ಸ್ವಲ್ಪ ಚುರುಕಾದೆ.

‘ತಿಂಗಳ ಕೊನಿ... ನನ್ ಕೈ ಖಾಲಿ. ನಿನಗೆ ಕೊಟ್ಟಿದ್ದ ಪಾಕಿಟ್ ಮನಿವಳಗ ಉಳಿದಿದ್ದರೆ ಕೊಡು, ತರಕಾರಿ ತರಾಕ ಬೇಕು’ ಎಂದು ನಾನೇ ಮೊದಲು ದುಡ್ಡು ಕೇಳಿದೆ.

‘ಹಂತಾ ಚಿಲ್ಲರೆ ಕಾಸಲ್ಲ. ಬ್ಯಾಂಕಿನಾಗೆ, ಬಚ್ಚಲು ಮೋರಿ ಪೈಪಿನಾಗೆ, ಕಪಾಟಿನಾಗೆ, ಅಲ್ಲಿ ಇಲ್ಲಿ ಎಷ್ಟು ರೊಕ್ಕ ಮುಚ್ಚಿಟ್ಟಿದ್ದಿ ಅಂತ’.

‘ನಾ ಏನ್ ನೀರಾವರಿ ಇಲಾಖೆ ಎಂಜಿನಿಯರ್ ಏನು ಹಂಗ ಲಕ್ಷಗಟ್ಟಲೆ ರೊಕ್ಕ ಮುಚ್ಚಿಡಾಕೆ... ನಮ್ಮಂಥೋರ ಹತ್ರ ತಿಂಗಳ ಕೊನಿಗಿ ತರಕಾರಿ, ಪೆಟ್ರೋಲಿಗೆ ರೊಕ್ಕ ಇರಂಗಿಲ್ಲ. ಅದ್ಯಾರೋ ಎಂಜಿನಿಯರ್ರು ಎಂಟ್ಹತ್ತು ಕೆಜಿ ಬಂಗಾರ, 28 ಮನಿ ಮಾಡ್ಯಾನಂತೆ, ಅಂಥೋವ್ರಿಗೆ ಹೋಗಿ ಕೇಳು. ಅದ್ಸರಿ, ನಿನಗ್ಯಾಕಲೇ ಈಗ ರೊಕ್ಕ?’ ಎಂದೆ.

‘ಕೇತಗಾನಹಳ್ಳಿವಳಗ ಭೂಮಿ ತಗಂಡ್ ಮ್ಯಾಲೇ ದೇಗೌಡಜ್ಜಾರು ಸಿಎಮ್ಮು, ಪಿಎಮ್ಮು ಆದರು ಅಂತ ಕುಮಾರಣ್ಣ ಹೇಳ್ಯಾನ. ಅದಕ್ಕ ನಾನೂ ಅಲ್ಲಿ ಒಂದ್ ಗುಂಟೆ ಜಾಗ ತಗಳತೀನಿ. ಸಿಎಮ್ಮು, ಪಿಎಮ್ಮು ಅಲ್ಲದಿದ್ದರೂ ಅಂತರ ರಾಷ್ಟ್ರೀಯ ಮಾರ್ಜಾಲ ಸಂಘದ ಅಧ್ಯಕ್ಷನಾರೂ ಆಗತೀನಿ’ ಎಂದು ಮೆತ್ತಗೆ ಹೊಸ ಯೋಜನೆ ಬಿಚ್ಚಿಟ್ಟಿತು!

ಸಂಗತ

ನಲುಗದಿರು ಮನವೇ ಟೀಕೆಗಳಿಗೆ!

ಟೀಕಾಸ್ತ್ರಗಳಿಗೆ ಹೆದರದೇ ಮುಂದಡಿ ಇಡುವುದು ಬದುಕಿನ ಅನಿವಾರ್ಯ

• ಮಲ್ಲಿಕಾರ್ಜುನ ಹೆಗ್ಗಳಗಿ

ಉದ್ಯಮಿ ರಿಚರ್ಡ್ ಬ್ರಾನ್ಸನ್ ಕುರಿತು ಪತ್ರಿಕೆಯೊಂದು ಸತತ ಆರು ವರ್ಷ ಟೀಕೆಗಳನ್ನು ಧಾರಾವಾಹಿ ರೂಪದಲ್ಲಿ ಪ್ರಕಟಿಸಿತು. ಕಾರ್ಯಕ್ರಮವೊಂದರಲ್ಲಿ ಭೇಟಿಯಾದ ಬ್ರಾನ್ಸನ್ ಅವರನ್ನು ಪತ್ರಿಕೆಯ ಪ್ರತಿನಿಧಿಯು ಟೀಕೆಗಳ ಬಗ್ಗೆ ಕೆಣಕಿದಾಗ, ‘ನಾನು ನಿಮ್ಮ ಪತ್ರಿಕೆಯ ಓದುಗನಲ್ಲ. ಇಷ್ಟು ದೀರ್ಘಕಾಲ ಟೀಕಿಸುವಷ್ಟು ಯೋಗ್ಯತೆಯನ್ನು ನನ್ನಲ್ಲಿ ಗುರುತಿಸಿದ್ದಕ್ಕೆ ಥ್ಯಾಂಕ್ಸ್’ ಎಂದು ಹೇಳಿ ಹೊರಟುಹೋದರು.

ಟೀಕಾಕಾರರ ಬಗ್ಗೆ ಬ್ರಾನ್ಸನ್ ಹೇಳುವ ಮಾತುಗಳು ತುಂಬ ಗಮನಾರ್ಹವಾಗಿವೆ. ‘ಟೀಕಾಕಾರರನ್ನು ಸಂಪೂರ್ಣ ನಿರ್ಲಕ್ಷ್ಯ ಮಾಡಿರಿ. ಟೀಕೆ ಮಾಡುವವರನ್ನು ನಿರ್ಲಕ್ಷಿಸುವುದು ಅವರಿಗೆ ಕೊಡುವ ದೊಡ್ಡ ಶಿಕ್ಷೆ. ಟೀಕಾಕಾರರಿಗೆ ಉತ್ತರಿಸದಿರುವುದು ಒಳ್ಳೆಯದು. ಅನಿವಾರ್ಯವಾದರೆ ಚುಟುಕಾಗಿ ಉತ್ತರಿಸಿ’ ಎಂದು ಬ್ರಾನ್ಸನ್ ಹೇಳುತ್ತಾರೆ.

ಕೆಲವರಿಗೆ ನಿಮ್ಮ ಏಳಿಗೆ ಸಹಿಸುವುದು ಆಗುವುದಿಲ್ಲ. ಅವರಲ್ಲಿ ನಿಮ್ಮ ಬಗ್ಗೆ ಹೊಟ್ಟೆಕಿಚ್ಚು ಕುದಿಯುತ್ತಿರುತ್ತದೆ. ಇವರೆಲ್ಲ ಹಿತಚಿಂತಕರ ವೇಷ ಧರಿಸಿರುತ್ತಾರೆ. ಆದರೆ ಇದ್ಯಾವುದಕ್ಕೂ ತಲೆ ಕೆಡಿಸಿಕೊಳ್ಳಬಾರದು. ಟೀಕೆಗಳಿಗೆ ಹೆದರಿದರೆ ಅವರು ಹೆಚ್ಚು ತೊಂದರೆ ಕೊಡಲು ಮುಂದಾಗಬಹುದು.


ರಾಜಕೀಯ ರಂಗಕ್ಕೆ ಬಂದ ಮಹಿಳೆಯರ ಬಗ್ಗೆ ಅತಿಹೆಚ್ಚು ಟೀಕೆಗಳು ಬರುತ್ತವೆ. ಮೊದಲಿಗೆ ಅವರ ಚಾರಿತ್ರ್ಯವಧೆಗೆ ಕಲ್ಪಿತ ಟೀಕೆಗಳು ಆರಂಭವಾಗುತ್ತವೆ. ಅಂಥ ಮಾತುಗಳಿಗೆ ಮಹಿಳೆಯರು ತಕ್ಷಣ ಹೆದರುತ್ತಾರೆ. ಇದನ್ನೇ ಅಸ್ತ್ರವಾಗಿ ಮಾಡಿಕೊಂಡು ರಾಜಕೀಯ ರಂಗದಲ್ಲಿ ಬೆಳೆಯದಂತೆ ವಿರೋಧಿಗಳು ಹುನ್ನಾರ ನಡೆಸುತ್ತಾರೆ.

ಹೀಗಾಗಿ ರಾಜಕೀಯಕ್ಕೆ ಬರುವ ಹೆಣ್ಣುಮಕ್ಕಳ ಸಂಖ್ಯೆ ತೀರಾ ಕಡಿಮೆಯಾಗಿದೆ. ಮಹಿಳಾ ರಾಜಕಾರಣಿಗಳು ಮನಸ್ಸು ಗಟ್ಟಿ ಮಾಡಿಕೊಳ್ಳಬೇಕು. ಆಗ ‘ದಪ್ಪ ಚರ್ಮದವಳು’ ಎಂದು ಕೆಲವರು ಟೀಕೆ ಮಾಡಬಹುದು. ಅದನ್ನು ನಿರ್ಲಕ್ಷಿಸಿ ಉತ್ತಮ ರೀತಿಯಲ್ಲಿ ಸಾರ್ವಜನಿಕ ಕೆಲಸ ಮಾಡಿ ಬೆಳೆಯಬೇಕು. ಆಗ ವಿರೋಧಿಗಳೇ ಅಭಿಮಾನಿಗಳಾಗುತ್ತಾರೆ, ಹೊಗಳತೊಡಗುತ್ತಾರೆ.

ಎಲ್ಲರ ಬದುಕಿನಲ್ಲಿ ಟೀಕೆಗಳು ಇದ್ದೇ ಇರುತ್ತವೆ. ಇದು ಬದುಕಿನ ಒಂದು ಭಾಗ. ಟೀಕೆಗಳ ನಡುವೆಯೇ ಬದುಕಬೇಕು ಮತ್ತು ಬೆಳೆಯಬೇಕು. ಯಾವುದೇ ಊರಿಗೆ ಹೋದರೂ ಯಾವುದೇ ದೇಶಕ್ಕೆ ಹೋದರೂ ಟೀಕಾಸ್ತ್ರಗಳ ಕಾಟ ತಪ್ಪದು. ‘ಬೆಟ್ಟದ ಮೇಲೊಂದು ಮನೆಯ ಮಾಡಿ, ಮೃಗಗಳಿಗಂಜಿದಡೆಂತಯ್ಯಾ... ಲೋಕದೊಳಗೆ ಹುಟ್ಟಿದ ಬಳಿಕ ಸ್ತುತಿನಿಂದೆಗಳು ಬಂದಡೆ, ಮನದಲ್ಲಿ ಕೋಪವ ತಾಳದೆ ಸಮಾಧಾನಿಯಾಗಿರಬೇಕು’ ಎಂದು ಅಕ್ಕಮಹಾದೇವಿ ಹೇಳಿದ ವಚನವನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

ದಕ್ಷಿಣ ಆಫ್ರಿಕಾದಲ್ಲಿ ಜೈಲು ಅಧಿಕಾರಿಯಾಗಿದ್ದ ಜನರಲ್ ಸ್ಮಟ್ಸ್ ತಮ್ಮ ಒಂದು ಬರಹದಲ್ಲಿ, ‘ಗಾಂಧಿ ನಮ್ಮ ಕಾರಾಗೃಹದಲ್ಲಿದ್ದಾಗ ಬಹಳಷ್ಟು ಹಿಂಸೆ ಕೊಟ್ಟೆ. ಸಾಮಾನ್ಯ ಕೈದಿಯಾಗಿ ಪರಿಗಣಿಸಿದೆ. ಚರ್ಮ ಹದ ಮಾಡುವ ಕೆಲಸಕ್ಕೆ ಹಚ್ಚಿದೆ. ಆತ ಚರ್ಮ ಹದ ಮಾಡುವುದರೊಂದಿಗೆ ಚಪ್ಪಲಿ ಹೊಲೆಯುವುದನ್ನೂ ಕಲಿತುಕೊಂಡ. ಕಾರಾಗೃಹದಿಂದ ಬಿಡುಗಡೆಯಾಗಿ ಹೋಗುವಾಗ ಹುಡುಕಿಕೊಂಡು ಬಂದು ನನಗೆ ಪಾದರಕ್ಷೆ ಉಡುಗೊರೆ ನೀಡಿದ. ಆ ಮನುಷ್ಯನ ವಿನಯ ಮತ್ತು ಸಹನೆ ನಿಜಕ್ಕೂ ದೊಡ್ಡದು’ ಎಂದು ದಾಖಲಿಸಿದ್ದಾರೆ. ಗಾಂಧೀಜಿ ಉಪ್ಪಿನ ಸತ್ಯಾಗ್ರಹಕ್ಕೆ ಹೊರಡುವ ಮೊದಲು ತಾವು ಆಯ್ಕೆ ಮಾಡಿದ 78 ಸತ್ಯಾಗ್ರಹಿಗಳಿಗೆ ‘ಎಲ್ಲ ಟೀಕೆಗಳನ್ನು ದೃಢ ಮನಸ್ಸಿನಿಂದ ಸಹಿಸಿಕೊಳ್ಳಬೇಕು, ಪ್ರತಿಕ್ರಿಯೆ ನೀಡಬಾರದು’ ಎಂದು ಕಟ್ಟುನಿಟ್ಟಿನ ಸೂಚನೆ ನೀಡಿದ್ದರು.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಈಚೆಗೆ ಪ್ರಧಾನಿ ನರೇಂದ್ರ ಮೋದಿ ಅವರನ್ನು ಭೇಟಿ ಮಾಡಿದ ಸಂದರ್ಭದಲ್ಲಿ ಬಿಟ್‌ಕಾಯಿನ್ ವಿಚಾರವಾಗಿ ವಿರೋಧ ಪಕ್ಷದವರ ಟೀಕೆಗಳ ಬಗ್ಗೆ ಪ್ರಸ್ತಾಪಿಸಿದಾಗ, ‘ತಲೆ ಕೆಡಿಸಿಕೊಳ್ಳಬೇಡಿ. ನಿಷ್ಠೆ ಮತ್ತು ದಿಟ್ಟತನದಿಂದ ಕೆಲಸ ಮಾಡಿ, ಎಲ್ಲವೂ ಸರಿಹೋಗುತ್ತವೆ’ ಎಂದು ಹೇಳಿದರೆನ್ನಲಾದ ಸಂಗತಿಯನ್ನು ಇಲ್ಲಿ ಸ್ಮರಿಸಬಹುದಾಗಿದೆ.



ಟೀಕೆಗಳನ್ನು ತಿದ್ದುವ ಟೀಕೆ ಮತ್ತು ಅದ್ದುವ (ಮುಳುಗಿಸುವ) ಟೀಕೆ ಎಂದು ವಿಂಗಡಿಸಲಾಗುತ್ತದೆ. ನಿಮ್ಮ ಏಳಿಗೆಗಾಗಿ ರಚನಾತ್ಮಕವಾಗಿ ಟೀಕೆ ಮಾಡಿದರೆ ಅದರಿಂದ ನಮ್ಮ ಮಾರ್ಗ ತಿದ್ದಿಕೊಂಡು ನಡೆಯಲು ಸಹಾಯವಾಗುತ್ತದೆ. ಆದರೆ ಅದ್ದುವ ಟೀಕೆಯನ್ನು ನಿರ್ಲಕ್ಷಿಸುವುದು ಉತ್ತಮ ಮಾರ್ಗ.

ನಿಂದಕರ ಕುರಿತ ಪುರಂದರದಾಸರ ಒಂದು ಪದ್ಯ ತುಂಬ ಖಾರವಾಗಿದೆ: ‘ನಿಂದಕರಿರಬೇಕು ಇರಬೇಕು ನಿಂದಕರಿರಬೇಕು, ಹಂದಿ ಇದ್ದರೆ ಕೇರಿ ಹ್ಯಾಂಗೆ ಶುದ್ಧಿಯೊ ಹಾಂಗೆ, ಅಂದಂದು ಮಾಡಿದ ಪಾಪದ ಮಾಮಲ, ತಿಂದು ಹೋಗುವರಯ್ಯ ನಿಂದಕರು’.

ಪ್ರಸಿದ್ಧ ಕಾರ್ಟೂನಿಸ್ಟ್ ಶಂಕರ್ 1960- 70ರ ದಶಕಗಳಲ್ಲಿ ಕಾರ್ಟೂನುಗಳಿಗೇ ಮೀಸಲಾದ ‘ಶಂಕರ್ಸ್ ವೀಕ್ಲಿ’ ಪ್ರಕಟಿಸುತ್ತಿದ್ದರು. ಪ್ರಧಾನಿಯಾಗಿದ್ದ ಜವಾಹರಲಾಲ್ ನೆಹರೂ ಅವರ ಸ್ವಾರಸ್ಯಕರ ವ್ಯಂಗ್ಯಚಿತ್ರಗಳು ಆ ಪತ್ರಿಕೆಯ ಮುಖ್ಯ ಆಕರ್ಷಣೆಯಾಗಿದ್ದವು. ನೆಹರೂ ಪ್ರತಿವಾರ ಪತ್ರಿಕೆಯನ್ನು ತರಿಸಿ ಓದುತ್ತಿದ್ದರು. ನೆಹರೂ ವ್ಯಂಗ್ಯಚಿತ್ರದಲ್ಲಿ ಅವರ ಅಂಗಿಯ ಮೇಲೆ ಗುಲಾಬಿ ಹೂ ಇರುತ್ತಿತ್ತು. ಇದನ್ನು ಬಹುವಾಗಿ ಮೆಚ್ಚಿಕೊಂಡ ನೆಹರೂ ಅವರು ತಮ್ಮ ಕೋಟಿನ ಮೇಲೆ ಗುಲಾಬಿ ಹೂ ಧರಿಸತೊಡಗಿದರು.

‘ಬೈದವರೆನ್ನ ಬಂಧುಗಳೆಂಬೆ...’ ಎಂದು ಬಸವಣ್ಣನವರು ಹೇಳಿದ ವಚನ ಕೂಡ ಇಲ್ಲಿ ನೆನಪಾಗುತ್ತದೆ.

ವಾಚಕರ ವಾಣಿ

ಶಿಕ್ಷಕರ ವರ್ಗಾವಣೆ: ಅವೈಜ್ಞಾನಿಕ ಕ್ರಮ ತಪ್ಪಿಸಿ

ಪ್ರಾಥಮಿಕ ಶಾಲಾ ಶಿಕ್ಷಕರ ವರ್ಗಾವಣೆಯು ಗಜಪ್ರಸವಕ್ಕಿಂತ ಹೆಚ್ಚು ಸಮಯವನ್ನು ತೆಗೆದುಕೊಂಡು ಇದೀಗ ಪ್ರಾರಂಭವಾಗುತ್ತಿದೆ. ಇದು ರಾಜ್ಯದ ಶಿಕ್ಷಕರಿಗೆ ಸಂತಸದ ವಿಚಾರವೆನ್ನಬಹುದು. ಪ್ರಾಥಮಿಕ ಶಾಲಾ ಶಿಕ್ಷಕರನ್ನು ಪಿಎಸ್‌ಟಿ (ಪ್ರಾಥಮಿಕ ಶಾಲಾ ಶಿಕ್ಷಕರು– 1ರಿಂದ 5ನೇ ತರಗತಿ) ಮತ್ತು ಜಿಪಿಟಿ (ಪದವೀಧರ ಪ್ರಾಥಮಿಕ ಶಾಲಾ ಶಿಕ್ಷಕರು– 6ರಿಂದ 8ನೇ ತರಗತಿ) ಹುದ್ದೆಗಳೆಂದು ವಿಭಾಗ ಮಾಡಲಾಗಿದೆ. ಈ ಕಾರಣದಿಂದ ರಾಜ್ಯದ ಹಲವು ಶಾಲೆಗಳಲ್ಲಿ ಖಾಲಿ ಇರುವ ಶಿಕ್ಷಕರ ಹುದ್ದೆಗಳನ್ನು ಜಿಪಿಟಿ ಹುದ್ದೆಗಳೆಂದು ನಿಗದಿ ಮಾಡಲಾಗಿದೆ. ಈ ಹುದ್ದೆಗಳಿಗೆ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಉತ್ತೀರ್ಣರಾದ ಜಿಪಿಟಿ ಶಿಕ್ಷಕರನ್ನು ಭರ್ತಿ ಮಾಡಿಕೊಳ್ಳಬೇಕೆಂಬ ನಿಯಮ ತಂದು, ಈವರೆಗೂ ಈ ಹುದ್ದೆಗಳನ್ನು ಅವರಿಗಾಗಿ ಮೀಸಲಿಡಲಾಗಿತ್ತು.

ಆದರೆ ಪ್ರಸ್ತುತ ನಡೆಯಲಿರುವ ವರ್ಗಾವಣೆಯಲ್ಲಿ ಅಂತಹ ಜಿಪಿಟಿ ಹುದ್ದೆಗಳನ್ನು ಪ್ರಾಥಮಿಕ ಶಾಲಾ ಶಿಕ್ಷಕರು (ಪಿಎಸ್‌ಟಿ) ತೆಗೆದುಕೊಳ್ಳಲು ಅವಕಾಶ ನೀಡಲಾಗಿದೆ. ಹೀಗೆ ಮಾಡುವುದರಿಂದ ಈಗಾಗಲೇ ಮೂಲ ಶಾಲೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಆ ಶಾಲೆಯ ಹಿರಿಯ ಶಿಕ್ಷಕರು ಅಂದರೆ ಶಾಲೆಗೆ ಮೊದಲಿಗೆ ಹಾಜರಾಗಿರುವ ಶಿಕ್ಷಕರು ಬರಲಿರುವ ದಿನಗಳಲ್ಲಿ ಹೆಚ್ಚುವರಿಯಾಗಿ ಬೇರೆ ಬೇರೆ ತಾಲ್ಲೂಕುಗಳಿಗೆ ಹೋಗಬೇಕಾದ ಸಂಕಷ್ಟ ಬರುತ್ತದೆ. ಈ ಹಿನ್ನೆಲೆಯಲ್ಲಿ ಜಿಪಿಟಿ ಹುದ್ದೆಗಳನ್ನು ಜಿಪಿಟಿಯವರಿಗೇ ಮೀಸಲಿಡಲಿ ಅಥವಾ ಪ್ರಸ್ತುತ ಪಿಎಸ್‌ಟಿಯಾಗಿ ಕರ್ತವ್ಯ ನಿರ್ವಹಿಸುತ್ತಿರುವ ಪ್ರಾಥಮಿಕ ಶಾಲಾ ಶಿಕ್ಷಕರನ್ನು ಪದವೀಧರ ಪ್ರಾಥಮಿಕ ಶಾಲಾ ಶಿಕ್ಷಕರೆಂದು ಪದನಾಮಕರಣ ಮಾಡಲಿ. ಇವೆರಡೂ ಆಗದೆ ಜಿಪಿಟಿ ಹುದ್ದೆಗಳನ್ನು ಪಿಎಸ್‌ಟಿಯವರಿಗೆ ನೀಡುವುದು ಅವೈಜ್ಞಾನಿಕ ಕ್ರಮವಾಗುತ್ತದೆ.

ಮಲ್ಲಪ್ಪ ಫ. ಕರೇಣ್ಣನವರ, ರಾಣೆಬೆನ್ನೂರು

ಸೇಡಿನ ಮಾತು ಶೋಭೆ ತಾರದು

ಕಳೆದ ಲೋಕಸಭಾ ಚುನಾವಣೆಯಲ್ಲಿ ಸೋಲನ್ನು ಅನುಭವಿಸಿದ ಜೆಡಿಎಸ್ ವರಿಷ್ಠ ಎಚ್.ಡಿ.ದೇವೇಗೌಡರು ತಮ್ಮ ಹಳೇ ಚಾಳಿಯನ್ನು ಮುಂದುವರಿಸಿ, ‘ಇದು ನನ್ನ ಕೊನೆಯ ಚುನಾವಣಾ ಪ್ರಚಾರ, ಮುಂದೆ ಬರುತ್ತೇನೋ ಇಲ್ಲವೋ ಗೊತ್ತಿಲ್ಲ’ ಎಂದು ಹೇಳಿದ್ದಾರೆ. ಜತೆಗೆ, ವಿಧಾನಪರಿಷತ್ ಚುನಾವಣೆಯಲ್ಲಿ ಜೆಡಿಎಸ್ ಅಭ್ಯರ್ಥಿಯನ್ನು ಗೆಲ್ಲಿಸುವ ಮೂಲಕ ಹಿಂದೆ ತಮ್ಮ ಸೋಲಿಗೆ ಕಾರಣರಾದವರಿಗೆ ತಕ್ಕಪಾಠ ಕಲಿಸುವ ಮೂಲಕ ತಮಗಾದ ನೋವನ್ನು ಸರಿಪಡಿಸಬೇಕೆಂದು ಮಧುಗಿರಿಯಲ್ಲಿ ಇತ್ತೀಚೆಗೆ ತಮ್ಮ ಪಕ್ಷದ ಅಭ್ಯರ್ಥಿ ಪರ ಹಮ್ಮಿಕೊಂಡಿದ್ದ ಪ್ರಚಾರ ಸಭೆ ‘ಜನತಾ ಸಂಗಮ’ ಸಮಾವೇಶದಲ್ಲಿ ಹೇಳಿದ್ದಾರೆ. ಈ ಮೂಲಕ ತಮ್ಮ ಸೋಲಿಗೆ ಪ್ರತೀಕಾರ ತೀರಿಸಿಕೊಳ್ಳುವ ಹಾದಿ ತುಳಿದಿರುವುದು ಸರಿಯಲ್ಲ.

ಒಳ್ಳೆಯ ಕೆಲಸ ಮಾಡಿ, ರಾಜ್ಯದ ಅಭಿವೃದ್ಧಿಗೆ ಸಂಬಂಧಿಸಿದ ಪ್ರಣಾಳಿಕೆಯನ್ನು ಮುಂದಿಟ್ಟು ಮತದಾರರ ಮನ ಗೆಲ್ಲಬೇಕೇ ಹೊರತು ಸೇಡು ತೀರಿಸಿಕೊಳ್ಳುವ ಮಾತುಗಳನ್ನಾಡುವುದು ಹಾಗೂ ಪ್ರತೀ ಚುನಾವಣೆಯಲ್ಲಿ ‘ಇದೇ ನನ್ನ ಕೊನೇ ಚುನಾವಣೆ’ ಎಂದು ಕಣ್ಣೀರು ಸುರಿಸಿ ಮತದಾರರ ಅನುಕಂಪ ಗಳಿಸುವ ಮಾತುಗಳನ್ನಾಡುವುದು ದೇವೇಗೌಡರಂಥ ಹಿರಿಯ ರಾಜಕಾರಣಿಗೆ ಶೋಭೆ ತರುವುದಿಲ್ಲ.

ಜಿ.ನಾಗೇಂದ್ರ ಕಾವೂರು, ಸಂಡೂರು

ವಿಮಾನಯಾನ ಪುನರಾರಂಭ: ಮರುಚಿಂತನೆ ಅಗತ್ಯ

ಕೇಂದ್ರ ನಾಗರಿಕ ವಿಮಾನಯಾನ ಸಚಿವಾಲಯವು ಕೊರೊನಾ ವೈರಸ್ಸಿನ ಹಾವಳಿಗೆ ತತ್ತರಿಸಿ ಅಂತರ ರಾಷ್ಟ್ರೀಯ ವಿಮಾನಯಾನ ಸಂಚಾರವನ್ನು ನಿರ್ಬಂಧಿಸಿದ್ದ ಅಧಿಸೂಚನೆಯನ್ನು 21 ತಿಂಗಳ ನಂತರ ಹಿಂಪಡೆದು, ನಾಗರಿಕ ವಿಮಾನ ಸಂಚಾರವನ್ನು ಡಿಸೆಂಬರ್‌ನಲ್ಲಿ ಮರು ಆರಂಭಿಸುವುದಾಗಿ ಆದೇಶ ಹೊರಡಿಸಿದ ವರದಿಗಳು ಪ್ರಕಟವಾಗಿವೆ. ಇದು ದೇಶವಾಸಿಗಳನ್ನು ಮತ್ತೆ ಚಿಂತೆಗೀಡುಮಾಡಿದೆ.

‘ಯಾರೋ ಮಾಡುವ ತಪ್ಪಿಗೆ, ಯಾವುದೇ ದೇಶದ ಮೂಲೆಯಲ್ಲಿರುವ ಮಹಾಮಾರಿ ವೈರಾಣುವಿನ ಸೋಂಕನ್ನು ನಮ್ಮ ಮೇಲೆ ತಂದು ಹಾಕುವುದು ನ್ಯಾಯವೇ? ಇಷ್ಟು ದಿನ ಅನುಭವಿಸಿದ ನೋವು, ಸಂಕಟ ಸಾಲದೇ’ ಎಂಬ ಪ್ರಶ್ನೆ ಜನಸಾಮಾನ್ಯರ ಚರ್ಚೆಗೆ ಅನುವು ಮಾಡಿದೆ. ಕೊರೊನಾ ವೈರಸ್ಸಿನ ಹೊಸ ರೂಪಾಂತರ ತಳಿ ‘ಓಮಿಕ್ರಾನ್’ ಅಪಾಯಕಾರಿ ವೈರಾಣು ಎಂದು ತಜ್ಞರು ಹೇಳಿದ್ದಾರೆ. ಹೀಗಾಗಿ ಇದು ಹರಡಬಹುದಾದ ಆತಂಕ ಎದುರಾಗಿದೆ. ವಿಮಾನಯಾನ ನಿರ್ಬಂಧ ಸಡಿಲಿಕೆ ಮಾಡಿದರೆ ವಿಶ್ವದ ಹಲವು ದೇಶಗಳಲ್ಲಿ ಈಗಾಗಲೇ ಹರಡಿರುವ ಈ ರೂಪಾಂತರಿ ತಳಿ ಆ ದೇಶಗಳಿಂದ ಬರುವ ಪ್ರಯಾಣಿಕರಿಂದ ನಮ್ಮ ದೇಶದೆಲ್ಲೆಡೆ ಹರಡುವ ಸಾಧ್ಯತೆ ಇಲ್ಲದಿಲ್ಲ. ದೇಶದ ಜನರನ್ನು ಅಪಾಯಕ್ಕೆ ದೂಡುವ ಮೊದಲು ಸರ್ಕಾರ ಎಚ್ಚರಿಕೆಯ ನಿರ್ಧಾರಗಳನ್ನು ತೆಗೆದುಕೊಂಡು ದೇಶವಾಸಿಗಳ ರಕ್ಷಣೆ ಮಾಡಬೇಕಾಗಿದೆ.

ಆರ್.ಬಿ.ಜಿ. ಘಂಟಿ, ಅಮೀನಗಡ, ಬಾಗಲಕೋಟೆ

ಆಹಾರದ ನೆಪದಲ್ಲಿ ಅವಹೇಳನ ಅಮಾನವೀಯ

ಆಹಾರ ಆಯ್ಕೆಯ ಬಗೆಗೆ ಹಂಸಲೇಖಾ ಅವರ ಹೇಳಿಕೆ, ನಂತರ ನಡೆಯುತ್ತಿರುವ ವಾಗ್ಯುದ್ಧ, ಪ್ರತಿಭಟನೆಗಳು ಸಮಾನತೆಯ ಮುಖವಾಡದ ಹಿಂದಿರುವ ತಾರತಮ್ಯ, ಹೊರಗಿಡುವಿಕೆಯ ದುಷ್ಟ ಉತ್ಸಾಹಕ್ಕೆ ಹಿಡಿದ ಕೈಗನ್ನಡಿಯಂತಿವೆ. ಸ್ವಾತಂತ್ರ್ಯದ ಎಪ್ಪತ್ತೈದನೇ ವರ್ಷವನ್ನು ಆಚರಿಸುತ್ತಿರುವ ದೇಶದಲ್ಲಿ ಆಹಾರದ ಆಯ್ಕೆಗೆ ಸಂಘರ್ಷಗಳೇರ್ಪಡುತ್ತಿರುವುದು ಏನೂ ಶೋಭೆಯಲ್ಲ. ಅನ್ನವೇ ಬ್ರಹ್ಮವೋ ಅಥವಾ ಬಾಡೇ ದೇವರೋ ಎನ್ನುವುದು ಅವರವರ ಆಯ್ಕೆ. ವಿಶ್ವದ ಮುಕ್ಕಾಲುಪಾಲು ಜನರು ಮಾಂಸಾಹಾರಿಗಳು. ಅವರ ಮೇಲೆ ಸಸ್ಯಾಹಾರವೇ ಶ್ರೇಷ್ಠವೆಂಬ ಒತ್ತಡ ಹೇರುವುದು ಅವೈಜ್ಞಾನಿಕ, ಅವಾಸ್ತವಿಕ, ಅನೈಸರ್ಗಿಕ. ಅದೇವೇಳೆಗೆ ಸಸ್ಯಾಹಾರಿಗಳ ಆಹಾರವನ್ನು ಅವಹೇಳನ ಮಾಡುವುದು ಕುತರ್ಕ. ಆಹಾರದ ನೆಪದಲ್ಲಿ ವ್ಯಕ್ತಿಗಳ ಮೇಲೆ ಆಕ್ರಮಣ ಮಾಡುವುದರ ಹಿಂದೆ ಅನ್ಯ ಉದ್ದೇಶಗಳಿದ್ದು, ಅನವಶ್ಯಕ ವಿವಾದಗಳನ್ನು ಮುನ್ನೆಲೆಗೆ ತರಲಾಗುತ್ತಿದೆ. ಊಟ ಅವರವರಿಚ್ಛೆ. ತಮಗೆ ಬೇಕಾದ, ರುಚಿಸುವ ಆಹಾರವನ್ನು ತಿನ್ನುವ ಹಕ್ಕು ಪ್ರತಿಯೊಬ್ಬರದೂ ಆಗಿದೆ. ಆಗ ಆಹಾರವು ಶ್ರೇಣೀಕರಣದ, ತಾರತಮ್ಯದ ಮೂಲವಾಗುವುದು ತಪ್ಪುತ್ತದೆ. ಅಪೌಷ್ಟಿಕತೆ, ಹಸಿವಿಗೆ ಮೂರನೇ ಒಂದು ಭಾಗ ಮಾನವರು ಬಲಿಯಾಗುವುದು ತಪ್ಪುತ್ತದೆ. ಇದಿರು ಹಳಿಯುವುದರಲ್ಲೇ ಮಗ್ನರಾದವರು ಕನಿಷ್ಠ ನಿಸರ್ಗ ವಿವೇಕವನ್ನು ಅರಿಯುವಂತಾಗಲಿ. ಆಹಾರವೇ ಶ್ರೇಣಿ/ಸ್ಥಾನಬಲೆ ನಿರ್ಧರಿಸುವ ಅಳತೆಗೋಲಾಗುವುದು ನಿಲ್ಲಲಿ.

ಸಬಿಹಾ ಭೂಮಿಗೌಡ, ಲಿನೆಟ್ ಡಿಸಿಲ್ವಾ, ವಾಣಿ ಪೆರಿಯೋಡಿ, ಕೆ.ವಿ.ನೇತ್ರಾವತಿ, ಸುಮನಾ ಮೈಸೂರು, ಸಬಿತಾ ಬನ್ನಾಡಿ, ರೇಖಾಂಬಾ, ರತಿ ರಾವ್, ಮಲ್ಲಿಗೆ ಸಿರಿಮನೆ, ಅಖಿಲಾ ವಿದ್ಯಾಸಂದ್ರ, ಶಭಾನ ಮೈಸೂರು, ಸುನಂದಾ ಕಡಮೆ, ಎಚ್.ಎಸ್.ಅನುಪಮಾ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಓಮಿಕ್ರಾನ್ ಜಗತ್ತಿಗೆ ಆತಂಕ



ಕೊರೊನಾ ವೈರಸ್‌ನ ಹೊಸ ರೂಪಾಂತರ ತಳಿ ಓಮಿಕ್ರಾನ್‌ಗೆ ಮನುಷ್ಯನ ರೋಗನಿರೋಧಕ ಶಕ್ತಿಯನ್ನು ದಾಟಿಕೊಂಡು ಹೋಗುವ ಗುಣವಿದೆ ಎಂದು ವಿಜ್ಞಾನಿಗಳು ಹೇಳಿರುವುದು ಆತಂಕ ಮೂಡಿಸಿದೆ. ಈಗಿರುವ ಲಸಿಕೆಗಳು ಹೊಸ ತಳಿಯ ವಿರುದ್ಧ ಸಮರ್ಥವಾಗಿ ಹೋರಾಟ ನಡೆಸಲಾರವು ಎಂಬ ಅಭಿಪ್ರಾಯವಿದೆ. ರೂಪಾಂತರದ ವಿರುದ್ಧ ಯಾವ ಲಸಿಕೆ ಕೆಲಸ ಮಾಡುತ್ತದೆ ಎಂಬ ಬಗ್ಗೆ ಈಗ ಕುತೂಹಲಕಾರಿ ಚರ್ಚೆ ನಡೆಯುತ್ತಿದೆ. ಲಸಿಕೆ ತಯಾರಿಕಾ ಸಂಸ್ಥೆಗಳು ಹೊಸ ತಳಿ ವಿರುದ್ಧ ಹೋರಾಡುವ ಲಸಿಕೆ ಕುರಿತು ಅಧ್ಯಯನ ಆರಂಭಿಸಿವೆ. ಬೂಸ್ಟರ್ ಡೋಸ್‌ಗಳಿಗೆ ಅಧಿಕ ಡೋಸ್ ಸೇರಿಸುವುದು, ಹೊಸ ತಳಿಗೆ ಹೊಂದಿಕೆಯಾಗುವ ಬೂಸ್ಟರ್ ಡೋಸ್‌ಗಳನ್ನು ಅಭಿವೃದ್ಧಿಪಡಿಸುವುದು ಹಾಗೂ ಮುಖ್ಯವಾಗಿ ಓಮಿಕ್ರಾನ್ ಕೇಂದ್ರೀಕರಿಸಿದ ಬೂಸ್ಟರ್ ಡೋಸ್‌ಗಳ ಪರೀಕ್ಷೆಯನ್ನು ಕೆಲವು ಕಂಪನಿಗಳು ಆರಂಭಿಸಿವೆ. ಭಾರತದಲ್ಲಿ ತಯಾರಾಗುವ ಕೋವಿಶೀಲ್ಡ್ ಮತ್ತು ಕೋವ್ಯಾಕ್ಸಿನ್ ಲಸಿಕೆಗಳು ಹೊಸ ತಳಿಯ ವಿರುದ್ಧ ಹೊಂದಿರುವ ಕಾರ್ಯಕ್ಷಮತೆ ಬಗ್ಗೆ ಇನ್ನಷ್ಟೇ ಮಾಹಿತಿ ಸಿಗಬೇಕಿದೆ.

ಮೊಡೆರ್ನಾ: ಅಮೆರಿಕದ ಲಸಿಕೆ ತಯಾರಿಕಾ ಸಂಸ್ಥೆ ಮೊಡೆರ್ನಾ, ಹೊಸ ತಳಿ ವಿರುದ್ಧ ಕೆಲಸ ಮಾಡಬಲ್ಲ ಬೂಸ್ಟರ್ ಡೋಸ್ ಅಭಿವೃದ್ಧಿಪಡಿಸುವುದಾಗಿ ತಿಳಿಸಿದೆ. ಈಗಿರುವ ಬೂಸ್ಟರ್ ಡೋಸ್‌ನ ಪ್ರಮಾಣವನ್ನು 50ರಿಂದ 100 ಮೈಕ್ರೊಗ್ರಾಮ್‌ಗೆ ಹೆಚ್ಚಿಸುವುದು ಅಥವಾ ಎರಡು ಬೂಸ್ಟರ್ ಡೋಸ್ ನೀಡುವುದು ಅಥವಾ ಓಮಿಕ್ರಾನ್ ಪ್ರತಿಬಂಧಿಸುವ ಹೊಸ ಲಸಿಕೆ ಅಭಿವೃದ್ಧಿಪಡಿಸುವ ಪ್ರಸ್ತಾವನೆಗಳ ಬಗ್ಗೆ ಸಂಸ್ಥೆ ಪರಿಶೀಲನೆ ನಡೆಸುತ್ತಿದೆ. ಓಮಿಕ್ರಾನ್ ಸೃಷ್ಟಿಸಿರುವ ಆತಂಕದ ಹಿನ್ನೆಲೆಯಲ್ಲಿ ಆದಷ್ಟು ಶೀಘ್ರದಲ್ಲಿ ಸ್ಪಷ್ಟ ನಿರ್ಧಾರ ತಿಳಿಸುವುದಾಗಿ ಸಂಸ್ಥೆಯ ಸಿಇಒ ಸ್ಟೀಫನ್ ಬನ್ಸೆಲ್ ತಿಳಿಸಿದ್ದಾರೆ.


ಫೈಝರ್ ಮತ್ತು ಬಯೊಎನ್‌ಟೆಕ್: ಈಗಿರುವ ಲಸಿಕೆಯು ಹೊಸ ತಳಿಯ ವಿರುದ್ಧ ಕೆಲಸ ಮಾಡುವ ಬಗ್ಗೆ ಈಗಲೇ ಹೇಳಲಾಗದು ಎಂದು ಫೈಝರ್ ಹಾಗೂ ಬಯೊಎನ್‌ಟೆಕ್ ಕಂಪನಿಗಳು ತಿಳಿಸಿವೆ. ಓಮಿಕ್ರಾನ್ ಕುರಿತ ಹೆಚ್ಚಿನ ದತ್ತಾಂಶ ಅಗತ್ಯವಿದೆ ಎಂದು ಅಭಿಪ್ರಾಯಪಟ್ಟಿವೆ. ಮುಂದಿನ ಎರಡು ವಾರಗಳಲ್ಲಿ ದತ್ತಾಂಶ ಸಂಗ್ರಹವಾಗುವ ಸಾಧ್ಯತೆಯಿದೆ. ಈ ದತ್ತಾಂಶವು, ಈಗ ನೀಡುತ್ತಿರುವ ಲಸಿಕೆಯನ್ನು ಮಾರ್ಪಡಿಸಬೇಕೇ ಎಂದು ತಿಳಿದುಕೊಳ್ಳಲು ನೆರವಾಗುತ್ತದೆ. ಒಂದು ವೇಳೆ ಓಮಿಕ್ರಾನ್‌ಗಾಗಿ ಬೇರೆ ಲಸಿಕೆ ಅಗತ್ಯ ಎಂದಾದಲ್ಲಿ, 100 ದಿನಗಳಲ್ಲಿ ಅದನ್ನು ಸಿದ್ಧಪಡಿಸುವ ವಿಶ್ವಾಸವನ್ನು ಈ ಕಂಪನಿಗಳು ವ್ಯಕ್ತಪಡಿಸಿವೆ.

ಸ್ಪುಟ್ನಿಕ್: ಓಮಿಕ್ರಾನ್ ವಿರುದ್ಧ ಹೋರಾಡಬಲ್ಲ ಹೊಸ ಲಸಿಕೆಯನ್ನು ಮುಂದಿನ 100 ದಿನಗಳಲ್ಲಿ ಅಭಿವೃದ್ಧಿಪಡಿಸುದಾಗಿ ರಷ್ಯಾದ ಸ್ಪುಟ್ನಿಕ್ ಲಸಿಕೆಯ ತಯಾರಿಕಾ ಸಂಸ್ಥೆ ತಿಳಿಸಿದೆ.

ಜಾನ್ಸನ್ ಅಂಡ್ ಜಾನ್ಸನ್: ಈಗಾಗಲೇ ಬಳಕೆಯಲ್ಲಿರುವ ಲಸಿಕೆಯು ಹೊಸ ರೂಪಾಂತರ ತಳಿಯ ವಿರುದ್ಧ ಪರಿಣಾಮಕಾರಿಯೇ ಎಂಬ ಬಗ್ಗೆ ಪರೀಕ್ಷೆ ನಡೆಸುವುದಾಗಿ ಜಾನ್ಸನ್ ಅಂಡ್ ಜಾನ್ಸನ್ ಸಂಸ್ಥೆ ತಿಳಿಸಿದೆ.

ವಿಶ್ವದ ಹಲವೆಡೆಗೆ ಹರಡಿದ ಓಮಿಕ್ರಾನ್

ಭಾರತೀಯ ಕಾಲಮಾನ ಭಾನುವಾರ ರಾತ್ರಿ 8ರವರೆಗಿನ ಮಾಹಿತಿ



ಓಮಿಕ್ರಾನ್ ಪ್ರಕರಣ ಪತ್ತೆಯಾಗಿರುವ ದೇಶಗಳು

ನಿರ್ಬಂಧಿತ ಸಂಚಾರಕ್ಕೆ ಅವಕಾಶ ಮಾಡಿಕೊಟ್ಟ ದೇಶಗಳು: ಅಮೆರಿಕ, ಕೆನಡ, ಬ್ರೆಜಿಲ್, ಜಪಾನ್, ರಷ್ಯಾ, ಭಾರತ

ವಿಮಾನಸಂಚಾರ ಸಂಪೂರ್ಣ ಸ್ಥಗಿತಗೊಳಿಸಿದ ದೇಶಗಳು: ಬ್ರಿಟನ್, ಇಸ್ರೇಲ್, ಮಲೇಷ್ಯಾ, ಆಸ್ಟ್ರೇಲಿಯಾ, ಸಿಂಗಪುರ, ಸೌದಿ ಅರೇಬಿಯಾ, ಇಂಡೊನೇಷ್ಯಾ, ಮೊರಾಕ್ಕೊ, ಐರೋಪ್ಯ ಒಕ್ಕೂಟದ 27 ದೇಶಗಳು

ಪ್ರಜಾವಾಣಿ ಗ್ರಾಫಿಕ್ಸ್

ವೇಗವಾಗಿ ಹರಡುವ ಸಾಮರ್ಥ್ಯ

ಓಮಿಕ್ರಾನ್ ರೂಪಾಂತರ ತಳಿ ರಚನೆಯನ್ನು ತಿಳಿಯಲು ಹಲವು ಅಧ್ಯಯನಗಳನ್ನು ನಡೆಸಲಾಗಿದೆ. ಆದರೆ ಅದು, ಈಗಿನ ಅಪಾಯಕಾರಿ ತಳಿ ಡೆಲ್ಟಾಗಿಂತ ವೇಗವಾಗಿ ಹರಡುವ ಸಾಮರ್ಥ್ಯ ಹೊಂದಿದೆ ಎಂಬುದು ಮಾತ್ರವೇ ಪತ್ತೆಯಾಗಿದೆ. ಓಮಿಕ್ರಾನ್ ತಳಿಯ ಸಂಪೂರ್ಣ ರಚನೆ, ಹರಡುವ ವೇಗ, ಅದು ಆರೋಗ್ಯದ ಮೇಲೆ ಉಂಟುಮಾಡುವ ಪರಿಣಾಮ, ಚಿಕಿತ್ಸೆಯ ಬಗ್ಗೆ ಇನ್ನೂ ಪರಿಶೀಲನೆ ನಡೆಯುತ್ತಿದೆ. ಆದರೆ ಇದು ಕಳವಳಕಾರಿ ತಳಿ ಎಂದು ವಿಶ್ವ ಆರೋಗ್ಯ ಸಂಸ್ಥೆ ವರ್ಗೀಕರಿಸಿದೆ.

- ಓಮಿಕ್ರಾನ್ ಕೊರೊನಾ ವೈರಸ್‌ನ ಮೇಲ್ಮೈನಲ್ಲಿ ಮುಳ್ಳಿನ ರೀತಿಯ 50ಕ್ಕೂ ಹೆಚ್ಚು ಸ್ಪೈಕ್ ಪ್ರೊಟೀನ್‌ಗಳು ಇವೆ. ಇವುಗಳಲ್ಲಿ 30ಕ್ಕೂ ಹೆಚ್ಚು ಸ್ಪೈಕ್ ಪ್ರೊಟೀನ್‌ಗಳು ಪರಸ್ಪರ ಭಿನ್ನವಾಗಿವೆ
- ಸ್ಪೈಕ್ ಪ್ರೊಟೀನ್ ಮುಳ್ಳುಗಳ ಮೂಲಕ ಕೊರೊನಾವೈರಸ್ ಮನುಷ್ಯನ ಜೀವಕೋಶವನ್ನು ಸೇರುತ್ತದೆ. ಇಂತಹ ಸ್ಪೈಕ್ ಪ್ರೊಟೀನ್‌ಗಳ ಸಂಖ್ಯೆ ಹೆಚ್ಚು ಇದ್ದಷ್ಟೂ, ಅದು ವೇಗವಾಗಿ ಹರಡುವ ಸಾಮರ್ಥ್ಯ ಹೊಂದಿರುತ್ತದೆ. 50ಕ್ಕೂ ಹೆಚ್ಚು ಸ್ಪೈಕ್ ಪ್ರೊಟೀನ್‌ಗಳು ಇರುವ ಕಾರಣ ಓಮಿಕ್ರಾನ್ ಸಹ ವೇಗವಾಗಿ ಹರಡುವ ಸಾಮರ್ಥ್ಯ ಹೊಂದಿದೆ
- ಈಗಾಗಲೇ ಕೋವಿಡ್ ಬಂದು ಗುಣಮುಖರಾಗಿರುವವರಿಗೆ ಓಮಿಕ್ರಾನ್ ಮೂಲಕ ಕೋವಿಡ್ ಬರುತ್ತದೆಯೇ ಅಥವಾ ಇಲ್ಲವೇ ಎಂಬುದು ಇನ್ನೂ ಪತ್ತೆಯಾಗಿಲ್ಲ. ಓಮಿಕ್ರಾನ್‌ನಿಂದ ಕೋವಿಡ್ ಬಂದಾಗ, ರೋಗ ತೀವ್ರತೆ ಎಷ್ಟಿರುತ್ತದೆ ಎಂಬುದು ಇನ್ನೂ ಪತ್ತೆಯಾಗಿಲ್ಲ
- ಈಗ ಬಳಕೆಯಲ್ಲಿರುವ ಕೋವಿಡ್ ಲಸಿಕೆಗಳು ಓಮಿಕ್ರಾನ್ ಮೂಲಕ ಕೋವಿಡ್ ಹರಡುವುದನ್ನು ತಡೆಯುತ್ತವೆಯೇ ಅಥವಾ ಇಲ್ಲವೇ ಎಂಬುದು ಪತ್ತೆಯಾಗಿಲ್ಲ

ಆಧಾರ: ವಿಶ್ವ ಆರೋಗ್ಯ ಸಂಸ್ಥೆ, ಪಿಟಿಐ, ರಾಯಿಟರ್ಸ್ ವರದಿ: ಜಯಸಿಂಹ ಆರ್., ಅಮೃತಕಿರಣ್ ಬಿ.ಎಂ.

ಗ್ರೀಕ್ ಅಕ್ಷರಮಾಲೆಯಿಂದ 'ಓಮಿಕ್ರಾನ್' ಹೆಸರು

ವಿಶ್ವ ಆರೋಗ್ಯ ಸಂಸ್ಥೆಯು (ಡಬ್ಲ್ಯುಎಚ್‌ಒ) ಹೊಸ ವೈರಾಣು ತಳಿಗಳಿಗೆ ಗ್ರೀಕ್ ಅಕ್ಷರಮಾಲೆಯಿಂದ ಹೆಸರುಗಳನ್ನು ಸೂಚಿಸುತ್ತದೆ. ಅಕ್ಷರಮಾಲೆಯ ಮೊದಲ ಅಕ್ಷರದಿಂದ ಆರಂಭಿಸಿ, ಅನುಕ್ರಮವಾಗಿ ಹೆಸರು ನೀಡಲಾಗುತ್ತದೆ. ಈ ಬಾರಿ ದಕ್ಷಿಣ ಆಫ್ರಿಕಾದ ಬೋಟ್ಸ್‌ವಾನದಲ್ಲಿ ಪತ್ತೆಯಾದ ಈ ತಳಿಗೆ ಗ್ರೀಕ್ ಅಕ್ಷರಮಾಲೆ ಪ್ರಕಾರ, ಎನ್‌ಯು (Nu) ಅಕ್ಷರದಿಂದ ಹೆಸರಿಡಬೇಕಿತ್ತು. ಆದರೆ ಇದು 'ನ್ಯೂ' (New) ಎಂದು ಜನರು ಭಾವಿಸಿ ಗೊಂದಲ ಉಂಟಾಗಬಹುದು ಎಂಬ ಕಾರಣಕ್ಕೆ ಇದನ್ನು ಕೈಬಿಡಲಾಯಿತು. ವರ್ಣಮಾಲೆ ಪ್ರಕಾರ ಮುಂದಿನ ಅಕ್ಷರ ಕ್ಸಿ (Xi). ಚೀನಾ ಅಧ್ಯಕ್ಷ ಷಿ ಜಿನ್‌ಪಿಂಗ್ ಅವರ ಹೆಸರಿನೊಂದಿಗೆ ಹೋಲಿಕೆಯಾಗುತ್ತದೆ ಎಂಬ ಕಾರಣಕ್ಕೆ ಇದನ್ನೂ ಕೈಬಿಡಲಾಯಿತು. ನಂತರ ಸರದಿಯಲ್ಲಿದ್ದ ಅಕ್ಷರದ ಪ್ರಕಾರ, 'ಓಮಿಕ್ರಾನ್' ಹೆಸರು ಅಂತಿಮವಾಯಿತು.

ಪ್ರತೀ ರೂಪಾಂತರ ತಳಿಗೆ ಹೊಸ ಹೆಸರು: ಪ್ರತೀ ಬಾರಿ ಸೃಷ್ಟಿಯಾಗುವ ಹೊಸ ರೂಪಾಂತರ ತಳಿಗೆ ಹೊಸ ಹೆಸರು ಇಡುವ ರೂಢಿಯಿದೆ. ಯಾವ ವೈರಾಣು ಎಂದು ಜನರಲ್ಲಿ ಉಂಟಾಗುವ ಗೊಂದಲವನ್ನು ತಪ್ಪಿಸುವುದು ಹಾಗೂ ಸರಳವಾಗಿ ಗುರುತಿಸುವಂತೆ ಮಡುವುದು ಇದರ ಉದ್ದೇಶ. ವುಹಾನ್ ವೈರಾಣು, ಬೋಟ್ಸ್‌ವಾನ ವೈರಾಣು ಎಂದು ಕರೆದರೂ, ಅದರಲ್ಲಿ ಮತ್ತೆ ರೂಪಾಂತರಗಳು ಸೃಷ್ಟಿಯಾದಾಗ, ಏನೆಂದು ಕರೆಯುವುದು ಎಂಬ ಗೊಂದಲ ತಪ್ಪಿಸಲು ನಾಮಕರಣ ಪದ್ಧತಿ ಶುರುವಾಯಿತು. ಗ್ರೀಕ್ ವರ್ಣಮಾಲೆಯ 24 ಅಕ್ಷರಗಳು ಮುಗಿದಾಗ, ಮತ್ತೊಂದು ವರ್ಣಮಾಲೆ ಸರಣಿ ಆರಂಭವಾಗಲಿದೆ.

ಹೆಸರಿಡುವ ಕಾರ್ಯವನ್ನು ವಿಶ್ವ ಆರೋಗ್ಯ ಸಂಸ್ಥೆಯ ವೈರಸ್ ಎವಲೂಷನ್ ವರ್ಕಿಂಗ್ ಗ್ರೂಪ್ ನಿರ್ವಹಿಸುತ್ತದೆ. ಗ್ರೀಕ್ ದೇವತೆಗಳ ಹೆಸರಿಡುವ ಪ್ರಸ್ತಾವ ಮೊದಲಿಗೆ ಇತ್ತು. ಅಂಕಿಗಳನ್ನು ನೀಡುವ ಬಗ್ಗೆ ಪರಿಶೀಲನೆ ನಡೆದು, ಇದು ಜನರಲ್ಲಿ ಇನ್ನಷ್ಟು ಗೊಂದಲ ಮೂಡಿಸುವ ಸಾಧ್ಯತೆಯಿದೆ ಎಂಬ ಕಾರಣಕ್ಕೆ ಕೈಬಿಡಲಾಯಿತು. ಕೊನೆಗೆ ಗ್ರೀಕ್ ವರ್ಣಮಾಲೆಯ ಅಕ್ಷರಗಳಿಂದ ಹೆಸರು ಆರಂಭಿಸುವ ಪ್ರಸ್ತಾವಕ್ಕೆ ಒಪ್ಪಿಗೆ ಸಿಕ್ಕಿತು.



ವೇದವ್ಯಾಸರ ಶಿವಪುರಾಣದ ಕುಮಾರಖಂಡಸಾರ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 16

ಗಣೇಶನ ಶಿರಚ್ಛೇದ

ನಾರದನ ಮಾತಿನಂತೆ ಶಂಕರ ಬಾಲಕನನ್ನು ಸಂಹರಿಸಲು, ಬ್ರಹ್ಮ ಮತ್ತು ವಿಷ್ಣುವನ್ನು ಕರೆಸಿಕೊಂಡು ಮಂತ್ರಾಲೋಚನೆ ಮಾಡಿದ. ನಂತರ ಒಂದು ದೊಡ್ಡ ದೇವಸೈನ್ಯದೊಂದಿಗೆ ಗಣಪತಿಯಿರುವೆಡೆಗೆ ಹೋದ. ಮಂಗಳಕರನಾದ ವಿಷ್ಣುವು ದೊಡ್ಡದಾದ ಆಯುಧದೊಂದಿಗೆ ಮಹಾಪರಾಕ್ರಮದಿಂದ ಯುದ್ಧಮಾಡಿದ. ವೀರನಾದ ಗಣಪತಿಗೆ, ಪಾರ್ವತಿ ಸೃಷ್ಟಿಸಿದ ಶಕ್ತಿಯರು ಮತ್ತಷ್ಟು ಬಲವನ್ನು ಕೊಟ್ಟರು. ಗಣಪತಿಯ ಏಟನ್ನು ತಾಳಲಾರದೆ ನಿರ್ಬಲರಾದ ದೇವತೆಗಳೆಲ್ಲರೂ ಯುದ್ಧರಂಗದಿಂದ ಹಿಮ್ಮೆಟ್ಟುತ್ತಿದ್ದರು. ಶಿವನೂ ಆ ಬಾಲಕನೊಡನೆ ಬಹಳ ಹೊತ್ತು ಯುದ್ಧಮಾಡಿ ಸುಸ್ತಾದನು. ರಣಭಯಂಕರನಾಗಿ ಕಾದಾಡುತ್ತಿದ್ದ ಗಣಪತಿಯ ಪರಾಕ್ರಮ ನೋಡಿ ಪರಮಾಶ್ಚರ್ಯಪಟ್ಟ. ಎದುರಿಗೆ ನಿಂತು ಯುದ್ಧಮಾಡಿ ಇವನನ್ನು ಸೋಲಿಸುವುದು ಅಸಾಧ್ಯ. ಮೋಸದ ಯುದ್ಧ ಮಾಡದ ಹೊರತು, ಈ ಹುಡುಗನನ್ನು ಜಯಿಸಲಾಗುವುದಿಲ್ಲ ಎಂದು ಶಿವನು ಯೋಚಿಸಿ ಸೈನ್ಯಮಧ್ಯದಲ್ಲಿ ನಿಂತ.


ಶಿವ ಮತ್ತು ವಿಷ್ಣು ಬೆಂಬಲದಿಂದ ದೇವತೆಗಳೆಲ್ಲರೂ ಅತ್ಯುತ್ಸಾಹದಿಂದ ಕಾದಾಡುತ್ತಿದ್ದರು. ಶಕ್ತಿಸ್ವರೂಪಳಾದ ಪಾರ್ವತಿಯ ಪುತ್ರನೂ ವೀರತನದಿಂದ ತನ್ನ ಕೋಲಿನಿಂದಲೇ ವಿಷ್ಣುವಿಗೆ ಮೊದಲು ಪ್ರಹಾರ ಮಾಡಿದ. ಆಗ ವಿಷ್ಣು ಶಿವನಿಗೆ ಹೇಳಿದ 'ಸ್ವಾಮಿಯೇ, ಮೋಸಮಾಡದೇ ಅವನನ್ನು ಕೊಲ್ಲಲು ಸಾಧ್ಯವಿಲ್ಲ. ನಾನು ಆ ಬಾಲಕನನ್ನು ಮೋಹಗೊಳಿಸಿ ಜಯಿಸುವೆನು' ಎಂದು ಶಿವನ ಅಪ್ಪಣೆಯನ್ನು ಪಡೆದ. ವಿಷ್ಣು ಆ ರೀತಿ ಶಿವನಿಂದ ಅನುಮತಿ ಪಡೆದುದನ್ನು ನೋಡಿದ ಇಬ್ಬರು ಶಕ್ತಿದೇವತೆಯರೂ ತಮ್ಮ ಶಕ್ತಿಯನ್ನು ಗಣಪತಿಗೆ ಕೊಟ್ಟು ಮರೆಯಾಗಿಹೋದರು. ಗಣಪತಿಯು ಪರಿಘಾಯುಧವನ್ನು ತೆಗೆದುಕೊಂಡು ವಿಷ್ಣುವಿನ ಕಡೆಗೆ ಎಸೆದ. ವಿಷ್ಣುವು ಭಕ್ತವತ್ಸಲನಾದ ಶಿವನನ್ನು ಧ್ಯಾನಿಸುತ್ತಾ ತನ್ನ ಕಡೆಗೆ ಬರುತ್ತಿದ್ದ ಪರಿಘಾಯುಧದ ಏಟಿನಿಂದ ತಪ್ಪಿಸಿಕೊಂಡ. ಆಗ ಮಧ್ಯ ಪ್ರವೇಶಿಸಿದ ಶಂಕರ ನೇರವಾಗಿ ಗಣಪತಿ ವಿರುದ್ಧ ತನ್ನ ತ್ರಿಶೂಲದಿಂದ ಯುದ್ಧಮಾಡಿದ. ಶಿವ ತ್ರಿಶೂಲವನ್ನು ಹಿಡಿದು ತನ್ನ ಕಡೆಗೆ ಬರುತ್ತಿರುವುದನ್ನು ನೋಡಿ ಗಣಪತಿಯು ತನ್ನ ತಾಯಿಯಾದ ಭವಾನಿಯ ಚರಣಕಮಲವನ್ನು ಧ್ಯಾನಿಸುತ್ತಾ ಶಕ್ತ್ಯಾಯುಧದಿಂದ ಶಂಕರನಿಗೆ ಬಲವಾಗಿ ಹೊಡೆದ. ಶಕ್ತ್ಯಾಯುಧದ ಏಟಿನಿಂದ ಶಿವನ ತ್ರಿಶೂಲವು ಕೆಳಗೆ ಬಿದ್ದಿತು. ಇದರಿಂದ ಶಿವ ಕೋಪಗೊಂಡು ತನ್ನ ಪಿನಾಕವೆಂಬ ಪ್ರಸಿದ್ಧವಾದ ಧನುಸ್ಸನ್ನು ತೆಗೆದುಕೊಂಡ. ಗಣಪತಿ ಆ ಧನುಸ್ಸನ್ನೂ ತನ್ನ ಪರಿಘಾಯುಧದಿಂದ ಕೆಳಕ್ಕೆ ಕೆಡವಿದ. ಇದರಿಂದ ಶಿವನ ಐದು ಕೈಗಳು ಕತ್ತರಿಸಿಹೋದವು. ಮತ್ತೈದು ಕೈಗಳಿಂದ ಮತ್ತೆ ತ್ರಿಶೂಲವನ್ನು ತೆಗೆದುಕೊಂಡ. ಇದೇ ಸಮಯದಲ್ಲಿ ವೀರನಾದ ಗಣಪತಿಯು ದೇವತೆಗಳನ್ನೂ ಗಣಗಳನ್ನೂ ಪರಿಘಾಯುದದಿಂದ ಹೊಡೆದ. ಅವರು ಅದರ ಏಟನ್ನು ತಾಳಲಾರದೆ ದಿಕ್ಕೆಟ್ಟು ಓಡಿದರು.

ವಿಷ್ಣು ಗಣಪತಿಯ ಪರಾಕ್ರಮ ನೋಡಿ ಬೆರಗಾದ. ಗಣಪತಿಯು ಪರಿಘಾಯುಧವನ್ನು ಗಿರ್ರನೆ ತಿರುಗಿಸುತ್ತಾ ವಿಷ್ಣುವಿಗೆ ಬಲವಾಗಿ ಹೊಡೆದಾಗ, ವಿಷ್ಣು ತನ್ನ ಚಕ್ರಾಯುಧದಿಂದ ಪರಿಘಾಯುಧವನ್ನು ಚೂರು ಚೂರು ಮಾಡಿದ. ಚೂರಾದ ಪರಿಘಾಯುಧದಿಂದಲೇ ಗಣಪತಿಯು ವಿಷ್ಣುವಿಗೆ ಹೊಡೆದ. ಅದನ್ನು ತಪ್ಪಿಸಲು ಗರುಡ ಪ್ರಯತ್ನಿಸಿದ್ದು ವ್ಯರ್ಥವಾಯಿತು. ಹೀಗೆ ಮಹಾವೀರರಾದ ವಿಷ್ಣು ಮತ್ತು ಗಣಪತಿ ಇಬ್ಬರೂ ಬಹಳ ಕಾಲದವರೆವಿಗೂ ಯುದ್ಧಮಾಡುತ್ತಿದ್ದರು. ಗಣಪತಿ ಕೋಲಿನಿಂದ ವಿಷ್ಣುವಿಗೆ ಹೊಡೆದಾಗ, ಏಟನ್ನು ತಾಳಲಾರದೇ ವಿಷ್ಣುವು ಭೂಮಿಯಮೇಲೆ ಬಿದ್ದ. ಮತ್ತೆ ವಿಷ್ಣು ಮೇಲಕ್ಕೆದ್ದು ಪುನಃ ಗಣಪತಿಯೊಡನೆ ಯುದ್ಧಮಾಡುತ್ತಿದ್ದ. ಆ ಸಮಯದಲ್ಲಿ ಶಂಕರನು ಕೋಪದಿಂದ ತ್ರಿಶೂಲದಿಂದ ಗಣಪತಿ ತಲೆ ಕತ್ತರಿಸಿದ. ಆಗ ದೇವಸೈನ್ಯ ಮತ್ತು ಶಿವಗಣಗಳು ಸ್ತಬ್ಧವಾಗಿ ನಿಂತವು. ಈ ಸಂದರ್ಭದಲ್ಲಿ ಕಲಹಪ್ರಿಯನಾದ ನಾರದನು ಪಾರ್ವತಿ ಬಳಿ ಬಂದು, 'ನಿನ್ನ ಮಗ ಗಣೇಶ ಸೋತು, ಮಾನಹೋಗುವ ಪ್ರಸಂಗಬಂದಿರುವುದರಿಂದ ಏನಾದರೂ ಮಾಡಿ ನಿನ್ನ ಗೌರವವನ್ನು ಉಳಿಸಿಕೊಳ್ಳಲೇ ಬೇಕು' ಎಂದು ಕಿವಿ ಚುಚ್ಚಿದ.

ಪಿವಿ ಫ್ಯಾಕ್ಟ್ ಚೆಕ್


ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ನೊಯಿಡಾ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಪ್ರಧಾನಿ ನರೇಂದ್ರ ಮೋದಿ ಅವರು ಇದೇ 25ರಂದು ಶಂಕುಸ್ಥಾಪನೆ ನೆರವೇರಿಸಿದರು. 2024ಕ್ಕೆ ಮೊದಲ ಹಂತದ ಕಾಮಗಾರಿ ಪೂರ್ಣಗೊಳ್ಳಲಿದ್ದು, 1 ಲಕ್ಷ ಜನರಿಗೆ ಉದ್ಯೋಗ ಸಿಗಲಿದೆ ಎಂದು ಸರ್ಕಾರ ಹೇಳಿದೆ. ವಿಮಾನ ನಿಲ್ದಾಣದ ಸ್ವರೂಪ ಹೇಗಿರಲಿದೆ ಎಂದು ಬಿಂಬಿಸುವ ಮಾದರಿಯ ಚಿತ್ರವೊಂದು ಸಾಮಾಜಿಕ ಜಾಲತಾಣಗಳಲ್ಲಿ ಓಡಾಡುತ್ತಿದೆ. ಇದರಲ್ಲಿ ಅದ್ದೂರಿತನ ಮನೆಮಾಡಿದೆ. ಬೃಹತ್ ಜಾಗವನ್ನು ವಿಮಾನ ನಿಲ್ದಾಣ ಆವರಿಸಿಕೊಂಡಂತೆ ಚಿತ್ರದಲ್ಲಿ ತೋರುತ್ತದೆ.



ವೈರಲ್ ಆಗಿರುವ ಚಿತ್ರವು ಚೀನಾದ ಡಾಕ್ಸಿಂಗ್ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ್ದು ಎಂದು ಇಂಡಿಯಾಟುಡೇ ವರದಿ ಮಾಡಿದೆ. ರಿವರ್ಸ್ ಇಮೇಜ್ ಮೂಲಕ ಪರಿಶೀಲಿಸಿದಾಗ ಇದು ದೃಢಪಟ್ಟಿದೆ. ಉತ್ತರ ಪ್ರದೇಶ ಸರ್ಕಾರವು ಬಿಡುಗಡೆ ಮಾಡಿರುವ ಉದ್ದೇಶಿತ ವಿಮಾನ ನಿಲ್ದಾಣದ ಡಿಜಿಟಲ್ ನಕ್ಷೆಯ ವಿಡಿಯೊಗೂ ಈ ಚಿತ್ರಕ್ಕೂ ಹೋಲಿಕೆಯಾಗುವುದಿಲ್ಲ. ಡಾಕ್ಸಿಂಗ್ ನಿಲ್ದಾಣವು 6,620 ಎಕರೆಯಲ್ಲಿ ನಿರ್ಮಾಣವಾಗಿದೆ. ನೊಯಿಡಾ ನಿಲ್ದಾಣವು 1,300 ಎಕರೆಯಲ್ಲಿ ನಿರ್ಮಾಣವಾಗಲಿದೆ.

ಗುಂಡಣ್ಣ



ದಿನ ಭವಿಷ್ಯ

ಸೋಮವಾರ ನವೆಂಬರ್ 29, 2021

ಶ್ರೀಪ್ಲವ ನಾಮ ಸಂವತ್ಸರ ದಕ್ಷಿಣಾಯಣ ಶರದೃತು ಕಾರ್ತೀಕ ಮಾಸ ಕೃಷ್ಣಪಕ್ಷ ಮಳೆ ನಕ್ಷತ್ರ ಅನೂರಾಧಾ ದಶಮೀ ಗಂ. 41-1 (ರಾ. 10-55) ಸೋಮವಾರ ನಿತ್ಯ ನಕ್ಷತ್ರ ಉತ್ತರ ಫಲ್ಗುಣಿ ಗಂ. 27-14 (ಸಾ. 5-25) ಪ್ರೀತಿ ನಾಮ ಯೋಗ ಗಂ. 42-45 ವಣಿಜ ಕರಣ ಗಂ. 12-6 ವಿಷ ಗಂ. 47-49 ಅಮೃತ ಗಂ 8-44 : ರಾಹುಕಾಲ: ಬೆ. ಗಂ. 7-30 ರಿಂದ 9-00 ಗುಳಿಕ ಮ. ಕಾಲ ಗಂ 1-30 ರಿಂದ 3-00 ಯಮಗಂಡ ಕಾಲ ಬೆ. ಗಂ 10-30 ರಿಂದ 12-00 : ಸೂರ್ಯೋದಯ: 6-26 ಸೂರ್ಯಾಸ್ತ: 5-47 ಅದೃಷ್ಟ ಸಂಖ್ಯೆ 1 3 9

ಮೇಷ: ಎಲ್ಲಾ ಕೆಲಸಗಳು ಸರಾಗವಾಗಿ ಮುಗಿದು ಮನಸ್ಸಿಗೆ ಉಲ್ಲಾಸ ಮತ್ತು ನೆಮ್ಮದಿ. ವ್ಯಕ್ತಿಯೊಬ್ಬರ ಒತ್ತಡದಿಂದ ತೊಂದರೆಗೆ ಸಿಲುಕುವ ಸಾಧ್ಯತೆ. ಮಕ್ಕಳ ಸಲುವಾಗಿ ಹೆಚ್ಚಿನ ವೆಚ್ಚ ಭರಿಸಬೇಕಾದೀತು.

ವೃಷಭ: ನಿತ್ಯದ ಕಾರ್ಯಕ್ರಮಗಳಿಂದ ಬದಲಾವಣೆ ಕಾಣಲಿರುವಿರಿ. ಕೆಲಸದವರಿಗೆ ವ್ಯವಹಾರವನ್ನು ಮನವರಿಕೆ ಮಾಡಿಕೊಡುವುದರಿಂದ ಯಶಸ್ಸನ್ನು ಸಾಧಿಸಲಿದ್ದೀರಿ. ಉತ್ತಮ ಲಾಭವನ್ನು ಹೊಂದಲಿದ್ದೀರಿ.

ಮಿಥುನ: ಸ್ಥಿರ ಮತ್ತು ಚರಾಸ್ತಿಗಳ ಬಗ್ಗೆ ದಾಯಾದಿಗಳಲ್ಲಿನ ಭಿನ್ನಾಭಿಪ್ರಾಯಗಳು ಬಗೆಹರಿಯುವುದು. ಆರ್ಥಿಕ ವ್ಯವಹಾರದಲ್ಲಿ ಸ್ವಲ್ಪ ಮಟ್ಟಿನ ಹಿನ್ನಡೆ ಕಂಡುಬಂದರೂ ನೆಮ್ಮದಿಯ ದಿನವಾಗಿ ಸಂತಸ ನೀಡುವುದು.

ಕರ್ಕಾಟಕ: ಹಣಕಾಸಿನ ವಿಚಾರದಲ್ಲಿ ಚೇತರಿಕೆ ಕಂಡುಬರುವುದು. ಗೃಹ ನಿರ್ಮಾಣ/ಹೊಸ ಉದ್ಯೋಗದಲ್ಲಿ ತೊಡಗಿಕೊಳ್ಳುವ ಸಾಧ್ಯತೆ. ಮನೆ ದೇವರ ಆರಾಧನೆಯಿಂದ ಹೆಚ್ಚಿನ ಶುಭ ಫಲ ದೊರೆಯಲಿದೆ.

ಸಿಂಹ: ಉತ್ತಮ ಆರೋಗ್ಯವನ್ನು ಹೊಂದುವಿರಿ. ಮನೆಯವರೊಂದಿಗೆ ಉತ್ತಮ ಬಾಂಧವ್ಯ ಸಾಧಿಸಲಿದ್ದೀರಿ. ಚಿಂತನೆಗಳ ಬಗ್ಗೆ ಗಮನ ಕೊಟ್ಟು ಕಾರ್ಯನಿರ್ವಹಿಸಿದಲ್ಲಿ ವೈಯುಕ್ತಿಕ ಜೀವನದಲ್ಲಿ ಇನ್ನೂ ಹೆಚ್ಚಿನ ಅವಕಾಶಗಳು ಲಭ್ಯ.

ಕನ್ಯಾ: ಸಾಲಗಳಿಂದ ಮುಕ್ತರಾಗಲು ಹೊಸ ಮಾರ್ಗವೊಂದು ಗೋಚರಿಸಲಿದೆ. ಸ್ನೇಹಿತರ ಸಹಕಾರದಿಂದಾಗಿ ವ್ಯವಹಾರವನ್ನು ಉತ್ತಮ ಸ್ಥಿತಿಗೆ ಒಯ್ಯಲಿದ್ದೀರಿ. ದೂರದ ಪ್ರಯಾಣ ಅಷ್ಟೊಂದು ಉತ್ತುಮವಾಗಿರಲಾರದು.

ತುಲಾ: ಕಚೇರಿ ಕೆಲಸಗಳಲ್ಲಿ ಕಿರಿಕಿರಿ ಅನುಭವಿಸಬೇಕಾದೀತು. ಬರಹಗಾರರು, ಮುದ್ರಣಕಾರರುಗಳಿಗೆ ಹೆಚ್ಚಿನ ಅವಕಾಶಗಳು ಒದಗಿಬರಲಿದೆ. ಹೊಸ ಗೆಳೆಯರ ಪರಿಚಯ ನಿಮ್ಮ ಚೈತನ್ಯವನ್ನು ಮತ್ತಷ್ಟು ಹುರಿದುಂಬಿಸಲಿದೆ.

ವೃಶ್ಚಿಕ: ಹೊಸ ಕೆಲಸದ ಚಿಂತನೆಯಲ್ಲಿ ಯಶಸ್ಸು. ಹೆಂಚು, ಕಬ್ಬಿಣ ಸಿಮೆಂಟ್ ಮುಂತಾದ ಕಟ್ಟಡ ಸಾಮಗ್ರಿ ವ್ಯಾಪಾರಿಗಳಿಗೆ ಹೆಚ್ಚಿನ ಲಾಭ ದೊರಕಲಿದೆ. ಅತಿಯಾದ ಅಹಮಿಕೆಯ ನಡೆಯಿಂದಾಗಿ ಮಾನಭಂಗ. ತಾಳ್ಮೆ ಇರಲಿ.

ಧನು: ಬಹುದಿನಗಳಿಂದ ನೆನೆಗುದಿಗೆ ಬಿದ್ದಿರುವ ಕೆಲಸವೊಂದು ಪೂರ್ಣಗೊಳ್ಳಲಿದೆ. ಜೀವನದಲ್ಲಿದ್ದ ನಿರುತ್ಸಾಹ ದೂರವಾಗುವುದರಿಂದ ಹೆಚ್ಚಿನ ಅವಕಾಶಗಳನ್ನು ನಿಮ್ಮದಾಗಿಸಿಕೊಳ್ಳುವಿರಿ.

ಮಕರ: ಪತ್ರಕರ್ತರಿಗೆ ಹೊಸ ಸುದ್ದಿ ಗೌರವ ತಂದುಕೊಡಲಿದೆ. ನಿಮ್ಮ ಆಶಾವಾದಕ್ಕೆ ಪುಷ್ಟಿ ದೊರೆಯಲಿದೆ. ಬಂದ ಅವಕಾಶಗಳನ್ನು ಸರಿಯಾಗಿ ಬಳಸಿಕೊಳ್ಳುವಲ್ಲಿ ಯಶಸ್ಸನ್ನು ಸಾಧಿಸಲಿದ್ದೀರಿ.

ಕುಂಭ: ವ್ಯಾಪಾರಗಳಲ್ಲಿ ಉತ್ತಮ ಲಾಭ ನಿರೀಕ್ಷೆ. ಸಂಪನ್ಮೂಲ ಕ್ರೊಢೀಕರಣದಲ್ಲಿ ಯಶಸ್ಸು. ಮನಃಶಾಂತಿಗಾಗಿ ದೇವಾಲಯ ಅಥವಾ ಪ್ರವಚನ ಮಂದಿರಗಳಿಗೆ ಭೇಟಿ. ಜೀವನದ ಪರಿವರ್ತನೆಗಳಿಗಾಗಿ ವಿಪುಲ ಅವಕಾಶ.

ಮೀನ: ಸಹೋದ್ಯೋಗಿಗಳೊಂದಿಗೆ ಉತ್ತಮ ಬಾಂಧವ್ಯ ಸಾಧ್ಯತೆ. ಗುರುಹಿರಿಯರ ಆಶೀರ್ವಾದದಿಂದ ಹೆಚ್ಚಿನ ಕೆಲಸಗಳು ನೆರವೇರುವವು. ಮನೆಯವರೊಂದಿಗೆ ಮುಕ್ತವಾಗಿ ಕಾಲ ಕಳೆಯಿರಿ.

ನಿಮ್ಮ ಜನ್ಮದಿನ 29-ನವೆಂಬರ್ ಈ ದಿನವು ಅತ್ಯಂತ ಶುಭಕರವಾಗಿದ್ದು, ಸಧ್ಯದಲ್ಲಿಯೇ ವಿದೇಶ ಪ್ರಯಾಣದ ಮೂಲಕ ಅಸಾಧಾರಣ ಅವಕಾಶವೊಂದು ಒದಗಿ ಆದಾಯ ಹೆಚ್ಚಿಸಿಕೊಳ್ಳುವ ಭಾಗ್ಯ ನಿಮ್ಮದಾಗಲಿದೆ. ವಿವಾಹದ ಬಗ್ಗೆ ಮನೆಯವರೊಡನೆ ಪ್ರಸ್ತಾಪವು ನಿಮ್ಮಿಚ್ಛೆಯಂತೆ ಫಲಕಾರಿಯಾಗಲಿದೆ. ಸಹೋದ್ಯೋಗಿಗಳೊಡನೆ ವಿದೇಶ ಪ್ರವಾಸ ಕೈಗೊಳ್ಳುವಿರಿ.

ಬೆರಗಿನ ಬೆಳಕು

ಗುರುರಾಜ ಕರಜಗಿ



ಶಿಕ್ಷೆಯಲ್ಲಿ ಕಡಿತ

ದಂಡನಿರ್ಣಯದಿ ನೀಂ ಕ್ಷಮಿಸೆನಲ್ ನ್ಯಾಯಪತಿ।
ಹಿಂದಿನಾ ನಿನ್ನೊಳ್ತನವನ್ ಅಂದಿನಳಲನ್॥
ತಂದೆಬಗೆಯಿಂ ಬಗೆದು ಶಾಸನೋಗ್ರವನಿನಿತು।
ಕುಂದಿಸಲಿಕಾಗದೇಂ?- ಮಂಕುತಿಮ್ಮ ॥507॥

ಪದ-ಅರ್ಥ: ಕ್ಷಮಿಸೆನಲ್ = ಕ್ಷಮಿಸು + ಎನಲ್ (ಎನ್ನಲು), ನಿನ್ನೊಳ್ತನವನ್ = ನಿನ್ನ + ಒಳ್ತನವನ್ (ಒಳ್ಳೆಯತನವನ್ನು), ಅಂದಿನಳಲನ್ = ಅಂದಿನ + ಅಳಲನ್ (ದುಃಖವನ್ನು), ತಂದೆಬಗೆಯಿಂ = ತಂದೆಯ ರೀತಿಯಲ್ಲಿ, ಬಗೆದು = ಕಂಡು, ಶಾಸನೋಗ್ರವನಿನಿತು = ಶಾಸನ + ಉಗ್ರವನು + ಇನಿತು (ಸ್ವಲ್ಪ), ಕುಂದಿಸಲಿಕಾಗದೇಂ = ಕುಂದಿಸಲಿಕೆ (ಕಡಿಮೆ ಮಾಡಲಿಕ್ಕೆ) + ಆಗದೇಂ (ಆಗದೆ).

ವಾಚ್ಯಾರ್ಥ: ನ್ಯಾಯಪತಿ ದಂಡವಿಧಿಸುವಾಗ ನೀನು ಕ್ಷಮಿಸು ಎಂದು ಬೇಡಿದರೆ ಆತ, ನಿನ್ನ ಹಿಂದೆ ಮಾಡಿದ ಒಳ್ಳೆಯದನ್ನು ಮತ್ತು ಇಂದಿನ ದುಃಖವನ್ನು ಗಮನಿಸಿ, ತಂದೆಯಂತೆ ತಿಳಿದು ನಿನ್ನ ಉಗ್ರಶಿಕ್ಷೆಯನ್ನು ಕೊಂಚ ಕಡಿಮೆ ಮಾಡದಿರಲಾರನೆ?

ವಿವರಣೆ: ಇದೊಂದು ನೈಜ ಘಟನೆ. ಒಂದು ಕಂಪನಿಯಲ್ಲಿ ಒಬ್ಬ ವ್ಯಕ್ತಿ ಇಪ್ಪತ್ತೈದು ವರ್ಷಗಳ ಕಾಲ ಅತ್ಯಂತ ಶ್ರದ್ಧೆಯಿಂದ ಕೆಲಸ ಮಾಡುತ್ತಿದ್ದ. ಅವನ ಕೆಲಸದಲ್ಲಿ ಯಾವ ತಪ್ಪು ಹುಡುಕುವುದೂ ಸಾಧ್ಯವಿರಲಿಲ್ಲ. ಅವನ ನಿಷ್ಠೆ ಅಚಲವಾಗಿತ್ತು. ಆತ ಸದಾಕಾಲ ಕಂಪನಿಯ ಶ್ರೇಯಕ್ಕಾಗಿಯೇ ಚಿಂತಿಸುತ್ತಿದ್ದ. ಏನು ಮಾಡಿದರೆ ಕಂಪನಿಗೆ ಒಳ್ಳೆಯದಾದೀತು ಎಂದು ಹೊಸ ಹೊಸ ಯೋಜನೆಗಳನ್ನು ಮಾಡುತ್ತಿದ್ದ. ನಡೆಯುವವರು ಎಡವದೆಯೇ, ಕುಳಿತವರು ಎಡುವುದುಂಟೆ ಎಂಬಂತೆ ಈ ವ್ಯಕ್ತಿ ಮಾಡಿದ ಒಂದು ಕಾರ್ಯ ತಪ್ಪಾಯಿತು. ತಪ್ಪು ಮಾತ್ರವಲ್ಲ ಕಂಪನಿಯ ಮಾನ ಹೋಗುವ ಪ್ರಸಂಗ ಬಂದಿತು. ವಿಷಯ ಕುಂದುಕೊರತೆಗಳ ಸಮಿತಿಯ ಮುಂದೆ ಹೋಯಿತು. ಅದಕ್ಕೆ ಕಂಪನಿಯ ಅಧ್ಯಕ್ಷರು ಮತ್ತು ನಿವೃತ್ತ ನ್ಯಾಯಮೂರ್ತಿಗಳು ಮುಖ್ಯಸ್ಥರ ವಿಚಾರಣೆ ನಡೆಯಿತು. ಕಂಪನಿಯ ಕಾಯಿದೆಗಳ ಪ್ರಕಾರ, ಆ ವ್ಯಕ್ತಿಯನ್ನು ಕೆಲಸದಿಂದ ತೆಗೆಯುವುದು ಮಾತ್ರವಲ್ಲ, ಈ ಸಮಸ್ಯೆಯನ್ನು ಕೋರ್ಟಿಗೆ ಹಾಕಿ ಅವನನ್ನು ಜೈಲಿಗೆ ಕಳುಹಿಸಬಹುದಿತ್ತು. ಆದರೆ ಸಮಿತಿಯುವರು ಹಾಗೆ ಮಾಡದೆ ಅವನನ್ನು ಕರೆಸಿ, ಎಚ್ಚರಿಕೆ ಕೊಟ್ಟು, ಮೂರು ಇನ್‌ಕ್ರಿಮೆಂಟ್‌ಗಳನ್ನು ಕಡಿಮೆ ಮಾಡಿದ ಶಿಕ್ಷೆ ನೀಡಿದರು. ಯಾಕೆಂದರೆ, ಆತ ಹಿಂದೆ ಸಂಸ್ಥೆಗೆ ಮಾಡಿದ ಅನೇಕ ಒಳ್ಳೆಯ, ಪ್ರಾಮಾಣಿಕ ಸೇವೆಯನ್ನು ಅವರು ಗುರುತಿಸಿದ್ದರು. ಅದಕ್ಕೇ ಶಿಕ್ಷೆ ಕಡಿಮೆಯಾಗಿತ್ತು. ಇದೇ ಕಗ್ಗದ ಮಾತು. ನ್ಯಾಯಪತಿ ಶಿಕ್ಷೆ ನೀಡುವ ಮೊದಲು ಹಿಂದೆ ಮಾಡಿದ ಒಳ್ಳೆಯ ಕಾರ್ಯಗಳನ್ನು, ಇಂದಿನ ದುಸ್ಥಿತಿಯನ್ನು ಕರುಣೆಯಿಂದ ತಂದೆಯಂತೆ ನೋಡಿ ಶಿಕ್ಷೆಯನ್ನು ಕಡಿಮೆ ಮಾಡಬಹುದು. ಇದು ನಮ್ಮ ಬದುಕಿಗೂ ಅನ್ವಯಿಸಿದ್ದು. ಭಗವಂತ ಯಾವಾಗಲೂ ನ್ಯಾಯಾಧೀಶನಂತೆ, ನಾವು ಮಾಡುವ ಒಳಿತು-ಕೆಡುಕುಗಳನ್ನು ಗಮನಿಸುತ್ತಾನೆ. ನಾವು ಹೆಚ್ಚು ಒಳ್ಳೆಯ ಕಾರ್ಯಗಳನ್ನು ಮಾಡಿದ್ದರೆ, ಮುಂದೆ ತಪ್ಪಾದಾಗ, ಅವುಗಳನ್ನು ಗಮನಿಸಿ ಶಿಕ್ಷೆಯನ್ನು ಕಡಿತಗೊಳಿಸುತ್ತಾನೆ. ಅಂತೆಯೇ, ನಾವು ನಮ್ಮ ನಿತ್ಯಜೀವನದಲ್ಲಿ ಆದಷ್ಟು ಹೆಚ್ಚು ಹೆಚ್ಚು ಧನಾತ್ಮಕವಾದ, ಪರೋಪಕಾರದ, ಸತ್ಕಾರ್ಯಗಳನ್ನು ಮಾಡುತ್ತ ಬಂದರೆ, ಅಕಸ್ಮಾತ್ ನಮ್ಮಿಂದಾದ ತಪ್ಪುಗಳನ್ನು ಕ್ಷಮಿಸಿ, ಆದಷ್ಟು ಶಿಕ್ಷೆಯ ತೀವ್ರತೆಯನ್ನು ಕಡಿಮೆ ಮಾಡುತ್ತಾನೆ. ಇಂದಿನ ಸತ್ಕಾರ್ಯಗಳು ಮುಂದಿನ ಸುಖಜೀವನಕ್ಕೆ ಬುನಾದಿ. ❖

ಪದಬಂಧ 4792


– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ವಿವೇಕವೇ ಇಲ್ಲದಿರುವುದು (4)
2.ಒಪ್ಪಂದದ ಪತ್ರ (4)
4.ಯೋಗವಿದ್ದರೂ ಹೀಗೆ ಅಗಲುವಿಕೆ! (3)
5. ಅನ್ಯಾಯವಾದ ಆರೋಪಣೆ (4)
7.ತೀಡಿ ತೀಡಿ ಮಾಡಿರುವ ಸುಧಾರಣೆ (4)
9.ರೂಢಿಗೆ ವಿರೋಧವಾದ ನಡೆಯಿದು (4)
11.ಬುದ್ಧಿಯಿರಿಸಿಕೊಂಡು ನೀಡಿರುವ ಒಪ್ಪಿಗೆ (4)
12.ಪಾವತಿ ಪತ್ರವಿದು (3)
14. ಅತ್ಯಂತ ಆತ್ಮೀಯ ಸ್ನೇಹಿತ (4)
15. ಜಲವುಣಿಸಿ ಬೆಳೆಸಿದ ಶ್ರೀಗಂಧ (4)

ಮೇಲಿಂದ ಕೆಳಕ್ಕೆ

1.ಅಲೆಯುತ್ತಿದ್ದಾಗ ಅಪ್ಪಳಿಸಿದ ತರಂಗ (2)
2.ಲಲಿತ ಕಲೆಗಳನ್ನೆಲ್ಲಾ ಬಲ್ಲವನೀತ (4)
3.ಗರತಿ ಪ್ರವೇಶಿಸಿರುವ ಇಯತ್ತೆ (4)
6.ಪತಿಯದ್ದು ಇದೇ ರೂಢಿ! (3)
8.ಇದು ಬಹಳ ಶ್ರೇಷ್ಠ (3)
10.ಕೈಯಲ್ಲಿರುವ ಪ್ರಚಾರದ ಚೀಟಿ (4)
11.ಕ್ರಮವನ್ನು ಉಲ್ಲಂಘಿಸುವುದು (4)
13.ಉತ್ಪತ್ತಿಸ್ಥಾನವೂ ಆಗಿರುವ ಧಾನ್ಯದ ಕಾಳು (2)



4791ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಧನಸಹಾಯ 3.ಕೈಲಾಸ 5.ನಿರಪರಾಧಿ 7.ಅವ್ಯಯ 8.ಹೊಸಜೀವನ 10.ಅಗುಳು 11.ವನಪಾಲಕ 14.ರಹಸ್ಯ 15.ಸಮರಸಿಂಹ

ಮೇಲಿಂದ ಕೆಳಕ್ಕೆ: 1.ಧಮನಿ 2.ಸಲ್ಲಾಪ 4.ಸಮಯ 6.ರಾಕ್ಷಸ 7.ಅಶನ 8.ಹೊಕ್ಕುಳು 9.ವರ್ಧನ 10.ಅಬ್ಬರ 12.ಪಾಮರ 13.ಕಲಹ

ಸುಡೊಕು 5178

					7		1	4
8		7	6		4			
	2			8			5	
	4			1		9		
		1	8		5		7	
7	5			9		3	4	
	8			7		4		3
	3		4		8			
9		4			2		6	8

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5177 ಸುಡೊಕು

7	1	4	2	5	6	8	9	3
3	2	8	1	4	9	6	7	5
6	9	5	7	3	8	4	1	2
2	8	3	6	7	4	1	5	9
9	7	1	5	8	3	2	4	6
4	5	6	9	1	2	3	8	7
8	4	9	3	6	7	5	2	1
5	6	2	4	9	1	7	3	8
1	3	7	8	2	5	9	6	4

ವಿವೇಕ್ ಜೊಹ್ರಿ ಸಿಬಿಐಸಿ ಅಧ್ಯಕ್ಷ

ನವದೆಹಲಿ (ಪಿಟಿಐ): ಪರೋಕ್ಷ ತೆರಿಗೆ ಮತ್ತು ಕಸ್ಟಮ್ಸ್‌ನ ಕೇಂದ್ರೀಯ ಮಂಡಳಿಯ (ಸಿಬಿಐಸಿ) ಅಧ್ಯಕ್ಷರಾಗಿ ವಿವೇಕ್ ಜೊಹ್ರಿ ಅವರನ್ನು ನೇಮಿಸಲಾಗಿದೆ ಎಂದು ಸಿಬ್ಬಂದಿ ಮತ್ತು ತರಬೇತಿ ಸಚಿವಾಲಯ ಭಾನುವಾರ ಹೇಳಿದೆ.

ಅವರು ಸದ್ಯ 'ಸಿಬಿಐಸಿ' ಸದಸ್ಯರಾಗಿ ಸೇವೆಯಲ್ಲಿದ್ದಾರೆ. ಹಾಲಿ ಅಧ್ಯಕ್ಷ ಅಜಿತ್ ಕುಮಾರ್ ಅವರ ಅವಧಿಯು ಮಂಗಳವಾರ ಅಂತ್ಯವಾಗಲಿದೆ.

'ಕಚ್ಚಾ ತೈಲ ಬೆಲೆ ನಿರಂತರವಾಗಿ ತಗ್ಗಿದಲ್ಲಿ ಪೆಟ್ರೋಲ್, ಡೀಸೆಲ್ ದರ ಇಳಿಕೆ'

ನವದೆಹಲಿ (ಪಿಟಿಐ): ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲ ದರವು ನಿರಂತರವಾಗಿ ಇಳಿಕೆ ಕಂಡಲ್ಲಿ ಮಾತ್ರವೇ ದೇಶಿ ಮಾರುಕಟ್ಟೆಯಲ್ಲಿ ಪೆಟ್ರೋಲ್, ಡೀಸೆಲ್ ದರದಲ್ಲಿ ಇಳಿಕೆ ಆಗಲಿದೆ ಎಂದು ಅಧಿಕೃತ ಮೂಲಗಳು ಹೇಳಿವೆ.

ಏಷ್ಯಾದಲ್ಲಿ ಬ್ರೆಂಟ್ ಕಚ್ಚಾ ತೈಲ ದರವು ಶುಕ್ರವಾರ ಪ್ರತಿ ಬ್ಯಾರಲ್‌ಗೆ 4 ಡಾಲರ್‌ಗಳಷ್ಟು ಇಳಿಕೆ ಆಗಿತ್ತು. ಶುಕ್ರವಾರ ತೈಲ ದರದಲ್ಲಿ ಆಗಿರುವ ಇಳಿಕೆಯಿಂದ ದೇಶದಲ್ಲಿ ಪೆಟ್ರೋಲ್, ಡೀಸೆಲ್ ದರ ತಗ್ಗಲಿದೆ ಎನ್ನುವ ನಿರೀಕ್ಷೆ ವ್ಯಕ್ತವಾಗಿತ್ತು. ಆದರೆ, ಸರ್ಕಾರಿ ಸ್ವಾಮ್ಯದ ತೈಲ ಮಾರಾಟ ಕಂಪನಿಗಳು ಹಿಂದಿನ ಹದಿನೈದು ದಿನಗಳ ಅಂತರರಾಷ್ಟ್ರೀಯ ಇಂಧನ ದರದ ಸರಾಸರಿಯನ್ನು ಆಧರಿಸಿ ರಿಟೇಲ್ ಮಾರಾಟ ದರವನ್ನು ಪರಿಷ್ಕರಣೆ ಮಾಡುತ್ತವೆ. ಹೀಗಾಗಿ ಯಾವುದೇ ಬದಲಾವಣೆ ಆಗಿಲ್ಲ ಎಂದು ತಿಳಿಸಿವೆ.

ಕಚ್ಚಾ ತೈಲ ದರ ಇಳಿಕೆಯು ಇನ್ನೂ ಕೆಲವು ದಿನಗಳವರೆಗೆ ಹೀಗೆಯೇ ಮುಂದುವರಿದಲ್ಲಿ ಆಗ ದೇಶದಲ್ಲಿ ಪೆಟ್ರೋಲ್ ಮತ್ತು ಡೀಸೆಲ್‌ನ ರಿಟೇಲ್ ಮಾರಾಟ ದರವು ಕಡಿಮೆ ಆಗುವ ಸಾಧ್ಯತೆ ಇದೆ ಎಂದು ಹೇಳಿವೆ.

ಅಲ್ಪಾವಧಿ ಗುರಿ: ಹೂಡಿಕೆ ಹೇಗೆ?



ಹಣಕಾಸು ಸಾಕ್ಷರತೆ

ಪ್ರಮೋದ್ ಬಿ.ಪಿ.

ನಿವೃತ್ತಿ ನಂತರದ ಜೀವನಕ್ಕೆ, ಮನೆ ಖರೀದಿಗೆ, ಮಕ್ಕಳ ಉನ್ನತ ವಿದ್ಯಾಭ್ಯಾಸಕ್ಕೆ... ಹೀಗೆ ವಿವಿಧ ದೀರ್ಘಾವಧಿ ಗುರಿಗಳ ಈಡೇರಿಕೆಗೆ ನಾವು ಹೂಡಿಕೆ ಯೋಜನೆ ರೂಪಿಸುತ್ತೇವೆ. ಇದೇ ರೀತಿಯಲ್ಲಿ ಫೋನ್, ಲ್ಯಾಪ್‌ಟಾಪ್ ಖರೀದಿ, ಬೈಕ್ ಖರೀದಿ, ಸಾಲ ಮರುಪಾವತಿ ಮಾಡುವುದು ಸೇರಿದಂತೆ ಇತರ ಅಲ್ಪಾವಧಿ ಗುರಿಗಳನ್ನು ಈಡೇರಿಸಿಕೊಳ್ಳುವುದಕ್ಕೂ ನಾವು ಯೋಜನೆ ರೂಪಿಸಿಕೊಳ್ಳಬೇಕು.

ಬನ್ನಿ ಅಲ್ಪಾವಧಿ ಗುರಿಗಳು ಅಂದರೆ ಏನು, ಅಲ್ಪಾವಧಿಯಲ್ಲಿ ಹಣಕಾಸು ನಿರ್ವಹಣೆ ಮಾಡುವುದು ಹೇಗೆ, ಯಾವ ಹೂಡಿಕೆ ಅಲ್ಪಾವಧಿಗೆ ಸೂಕ್ತ ಎನ್ನುವ ಬಗ್ಗೆ ತಿಳಿದುಕೊಳ್ಳೋಣ.

ಅಲ್ಪಾವಧಿ ಗುರಿ ವಿಂಗಡಣೆ ಹೇಗೆ?: ಗುರಿ ಈಡೇರಿಕೆಗೆ ಇರುವ ಕಾಲಾವಕಾಶ ಮತ್ತು ಗುರಿಗೆ ಇರುವ ಪ್ರಾಮುಖ್ಯ ಆಧರಿಸಿ ಅಲ್ಪಾವಧಿ ಗುರಿಗಳನ್ನು ವಿಂಗಡಿಸಬಹುದು. ಮೂರು ತಿಂಗಳಿಗೂ ಕಡಿಮೆ ಕಾಲಾವಧಿ ಇರುವ ಗುರಿಯನ್ನು ತುರ್ತು ಗುರಿ ಎಂದು ಪರಿಗಣಿಸಲಾಗುತ್ತದೆ. ಆಸ್ಪತ್ರೆ ವೆಚ್ಚ, ತುರ್ತಾಗಿ ಆಗಬೇಕಾದ ಮನೆ ರಿಪೇರಿ ಈ ರೀತಿಯ ಗುರಿಗಳಿಗೆ ಉತ್ತಮ ಉದಾಹರಣೆ.

ಹಾಗೆಯೇ ನಾಲ್ಕರಿಂದ 12 ತಿಂಗಳ ಕಾಲಾವಕಾಶವಿರುವ ಗುರಿಗಳನ್ನು ಅತ್ಯಂತ ಅಲ್ಪಾವಧಿ ಗುರಿ ಎಂದು ಕರೆಯಲಾಗುತ್ತದೆ. ಶಾಲೆಯ ಶುಲ್ಕ ಪಾವತಿ, ಮುಂಗಡ ತೆರಿಗೆ ಪಾವತಿ ಈ ರೀತಿಯ ಅತ್ಯಂತ ಅಲ್ಪಾವಧಿ ಗುರಿಗೆ ಸೂಕ್ತ ಉದಾಹರಣೆ. ಇನ್ನು 13ರಿಂದ 36 ತಿಂಗಳ ಅವಧಿಯ ಗುರಿಗಳನ್ನು ಅಲ್ಪಾವಧಿ ಗುರಿ ಎನ್ನಲಾಗುತ್ತದೆ. ಪ್ರವಾಸಕ್ಕೆ ತೆರಳುವುದು, ಬೈಕ್ ಕೊಳ್ಳುವುದು ಇದಕ್ಕೆ ಒಳ್ಳೆಯ ಉದಾಹರಣೆ.

ನಿಮ್ಮ ಅಲ್ಪಾವಧಿ ಗುರಿಗಳನ್ನು ಹೀಗೆ ವಿಂಗಡಿಸಿ: ನಿಮ್ಮ ಗುರಿಗಳಲ್ಲಿ ತುರ್ತು, ಅತ್ಯಂತ ಅಲ್ಪಾವಧಿ ಮತ್ತು ಅಲ್ಪಾವಧಿ ಗುರಿಗಳು ಯಾವುವು ಎಂದು ಮೊದಲಿಗೆ ಗುರುತಿಸಿಕೊಳ್ಳಬೇಕು. ನಂತರ ಆದ್ಯತೆ ಯಾವುದು ಎಂದು ನೋಡಿಕೊಳ್ಳಬೇಕು. ಉದಾಹರಣೆಗೆ, ಆಸ್ಪತ್ರೆ ವೆಚ್ಚವನ್ನು ಮುಂದೂಡಲು ಸಾಧ್ಯವಿಲ್ಲ, ಆದರೆ ಬೈಕ್ ಖರೀದಿಯನ್ನು ಮುಂದೂಡಬಹುದು. ಯಾವ ಗುರಿ ಸಮೀಪದಲ್ಲಿದೆಯೋ ಆ ಗುರಿಗೆ ನೀವು ಹೆಚ್ಚು ಹಣ ಮೀಸಲಿಡಬೇಕಾಗುತ್ತದೆ. ಅದನ್ನು ಆಧರಿಸಿ ನೀವು ಹೂಡಿಕೆ ಸಾಧನ ಆಯ್ದುಕೊಳ್ಳಬೇಕಾಗುತ್ತದೆ.

ಅಲ್ಪಾವಧಿ ಹೂಡಿಕೆ ಸಾಧನಗಳ ಆಯ್ಕೆ ಲೆಕ್ಕಾಚಾರ: ಅಲ್ಪಾವಧಿ ಹೂಡಿಕೆ ಮಾಡುವಾಗ ಪ್ರಮುಖವಾಗಿ ಮೂರು ಅಂಶಗಳನ್ನು ಪರಿಗಣಿಸಬೇಕಾಗುತ್ತದೆ. ಬಂಡವಾಳದ ಸುರಕ್ಷತೆ, ಅಗತ್ಯ ಎಂದಾಗ ಬಂಡವಾಳದ ಲಭ್ಯತೆ ಮತ್ತು ಬಂಡವಾಳದ ಮೇಲಿನ ಗಳಿಕೆ. ಸುರಕ್ಷತೆಯ ವಿಚಾರಕ್ಕೆ ಬರುವುದಾದರೆ ಉಳಿತಾಯ ಖಾತೆಯಲ್ಲಿನ ಹೂಡಿಕೆ, ನಿಶ್ಚಿತ ಠೇವಣಿ ಮೇಲಿನ ಹೂಡಿಕೆ ಮತ್ತು ಲಿಕ್ವಿಡ್ ಫಂಡ್ ಆಯ್ಕೆಗಳನ್ನು ಅಗ್ರವಾಗಿ ಪರಿಗಣಿಸಬಹುದು. ಇನ್ನು, ಅಗತ್ಯವಾದಾಗ ಬಂಡವಾಳದ ಲಭ್ಯತೆ ಯಾವುದರಲ್ಲಿ ಹೆಚ್ಚು ಎಂಬ ಪ್ರಶ್ನೆ ಬಂದಾಗ, ಮೊದಲು ಸೇವಿಂಗ್ಸ್ ಬ್ಯಾಂಕ್, ನಂತರದಲ್ಲಿ ಫಿಕ್ಸೆಡ್ ಡೆಪಾಸಿಟ್ ಮತ್ತು ಡೆಟ್ ಮ್ಯೂಚುಯಲ್ ಫಂಡ್ ನಿಲ್ಲುತ್ತವೆ. ಲಾಭಾಂಶ ಅಂತ ಬಂದಾಗ ಡೆಟ್ ಹೂಡಿಕೆಗಳಲ್ಲಿ ಉಳಿತಾಯ ಖಾತೆ ಮತ್ತು ಫಿಕ್ಸೆಡ್ ಡೆಪಾಸಿಟ್‌ಗಿಂತ ಹೆಚ್ಚು ಲಾಭಾಂಶ ಸಿಕ್ಕರೆ ಒಳ್ಳೆಯದು ಎಂದು ಎಲ್ಲರೂ ನಿರೀಕ್ಷೆ ಮಾಡುತ್ತಾರೆ. ಆದರೆ ಡೆಟ್ ಹೂಡಿಕೆಗಳಲ್ಲಿ ಲಾಭಾಂಶ ಆರ್‌ಬಿಐ ಬಡ್ಡಿ ದರದ ಮೇಲೆ ನಿಂತಿದೆ.

ಆರ್‌ಬಿಐ ಬಡ್ಡಿ ದರಗಳನ್ನು ಹೆಚ್ಚಳ ಮಾಡಿದಾಗ ಫಿಕ್ಸೆಡ್ ಡೆಪಾಸಿಟ್ ಮತ್ತು ಕಿರು ಅವಧಿಯ ಡೆಟ್ ಫಂಡ್‌ಗಳು ಹೆಚ್ಚು ಲಾಭಾಂಶ ಕೊಡುತ್ತವೆ. ಆರ್‌ಬಿಐ ಬಡ್ಡಿ ದರ ತಗ್ಗಿಸಿದಾಗ ಗಳಿಕೆಯೂ ಇಳಿಕೆಯಾಗುತ್ತದೆ. 2020-21ರಲ್ಲಿ ಆರ್‌ಬಿಐ ಬಡ್ಡಿ ದರ ತಗ್ಗಿಸಿದಾಗ ಡೆಟ್ ಹೂಡಿಕೆಗಳು ಹೂಡಿಕೆದಾರರ ನಿರೀಕ್ಷೆಗೆ ತಕ್ಕಂತೆ ಲಾಭಾಂಶ ಕೊಡಲು ಸಾಧ್ಯವಾಗಲಿಲ್ಲ.

(ಲೇಖಕ: ಸುವಿಷನ್ ಹೋಲ್ಡಿಂಗ್ಸ್ ಪ್ರೈ.ಲಿ.,ನ ಸಂಶೋಧನಾ ವಿಭಾಗದ ಮುಖ್ಯಸ್ಥ)



ವೈರಾಣುವಿನ ಆತಂಕಕ್ಕೆ ಕುಸಿದ ಸೂಚ್ಯಂಕಗಳು

ಷೇರುಪೇಟೆಯಲ್ಲಿ ಗೂಳಿ ಓಟ ನಿಂತಿದ್ದು, ಕರಡಿ ಹಿಡಿತ ಶುರುವಾಗುವ ಲಕ್ಷಣಗಳು ಕಾಣುತ್ತಿವೆ. ನವೆಂಬರ್ 26ಕ್ಕೆ ಕೊನೆಗೊಂಡ ವಾರದಲ್ಲಿ ಸೆನ್ಸೆಕ್ಸ್ ಮತ್ತು ನಿಫ್ಟಿ ಸೂಚ್ಯಂಕಗಳು ಕುಸಿತ ಕಂಡಿವೆ. 57,107 ಅಂಶಗಳಲ್ಲಿ ವಹಿವಾಟು ಮುಗಿಸಿದ ಸೆನ್ಸೆಕ್ಸ್ ಮತ್ತು 17,026 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿದ ನಿಫ್ಟಿ ವಾರದ ಅವಧಿಯಲ್ಲಿ ತಲಾ ಶೇ 4ರಷ್ಟು ಕುಸಿತ ದಾಖಲಿಸಿವೆ.

ದಕ್ಷಿಣ ಆಫ್ರಿಕಾದಲ್ಲಿ ಪತ್ತೆಯಾಗಿರುವ ಕೊರೊನಾ ವೈರಾಣುವಿನ ಹೊಸ ರೂಪಾಂತರಿ ತಳಿ ಕುರಿತ ಆತಂಕ, ಜಾಗತಿಕ ಮಾರುಕಟ್ಟೆಗಳಲ್ಲಿ ಕಂಡು ಬಂದ ನಕಾರಾತ್ಮಕತೆ, ಹಣದುಬ್ಬರ ಸೇರಿ ಹಲವು ಅಂಶಗಳು ಷೇರುಪೇಟೆ ಕುಸಿತಕ್ಕೆ ಕಾರಣವಾಗಿವೆ.

ದಾಖಲೆ ಮಟ್ಟದಿಂದ ಕುಸಿದ ಸೂಚ್ಯಂಕಗಳು: ಅಕ್ಟೋಬರ್ 19ರಂದು ಸೆನ್ಸೆಕ್ಸ್ ಸಾರ್ವಕಾಲಿಕ ದಾಖಲೆ ಮಟ್ಟವಾದ 62,245 ಅಂಶಗಳಿಗೆ ಜಿಗಿದಿತ್ತು. ನಿಫ್ಟಿ ಕೂಡ 18,604 ಅಂಶಗಳಿಗೆ ಹೆಚ್ಚಳ ಕಂಡಿತ್ತು. ಅಂದಿನಿಂದ ಈವರೆಗೆ ಎರಡೂ ಸೂಚ್ಯಂಕಗಳು ಶೇ 8ರಷ್ಟು ಇಳಿಕೆಯಾಗಿವೆ. ಇದರಿಂದ ಸುಮಾರು ₹ 16 ಲಕ್ಷ ಕೋಟಿ ಹೂಡಿಕೆದಾರರ ಹಣ ಕರಗಿದೆ.

ವಲಯವಾರು ಸೂಚ್ಯಂಕಗಳ ಪ್ರಗತಿ ನೋಡಿದಾಗಲೂ ಈ ಅವಧಿಯಲ್ಲಿ ಭಾರೀ ಕುಸಿತವಾಗಿರುವುದು ಕಂಡುಬಂದಿದೆ. ಬಿಎಸ್‌ಇ ಲೋಹ ಸೂಚ್ಯಂಕ ಶೇ 13.6ರಷ್ಟು ಕುಸಿದಿದೆ. ಇಂಧನ ವಲಯದ ಸೂಚ್ಯಂಕ ಶೇ 10ರಷ್ಟು, ಬ್ಯಾಂಕ್ ಸೂಚ್ಯಂಕ ಶೇ 8.2ರಷ್ಟು, ಫೈನಾನ್ಸ್ ಸೂಚ್ಯಂಕ ಶೇ 7.37ರಷ್ಟು, ಎಫ್‌ಎಂಸಿಜಿ ಶೇ 7.04ರಷ್ಟು, ಐ.ಟಿ. ವಲಯ ಶೇ 6.68ರಷ್ಟು, ತೈಲ ಮತ್ತು ನೈಸರ್ಗಿಕ ಅನಿಲ ವಲಯ ಶೇ 6.1ರಷ್ಟು, ಆಟೊಮೊಬೈಲ್ ವಲಯ ಶೇ 6.01ರಷ್ಟು, ರಿಯಲ್ ಎಸ್ಟೇಟ್ ಶೇ 5.74ರಷ್ಟು, ಮಿಡ್ ಕ್ಯಾಪ್ ಮತ್ತು ಸ್ಮಾಲ್ ಕ್ಯಾಪ್ ಕ್ರಮವಾಗಿ ಶೇ 5.65 ಮತ್ತು 4.6ರಷ್ಟು ಇಳಿಕೆ ಕಂಡಿವೆ.

ಇಳಿಕೆ: ಈ ವಾರ ಮಾರುತಿ ಶೇ 11.66ರಷ್ಟು, ಇಂಡಸ್ ಇಂಡ್ ಬ್ಯಾಂಕ್ ಶೇ 10.58ರಷ್ಟು, ಟಾಟಾ ಮೋಟರ್ಸ್ ಶೇ 9.71ರಷ್ಟು , ಬಜಾಜ್ ಫೈನಾನ್ಸ್ ಶೇ 9.06ರಷ್ಟು , ಟಾಟಾ ಕನ್ಸ್ಯೂಮರ್ ಶೇ 7.85ರಷ್ಟು, ಮಹಿಂದ್ರ ಆ್ಯಂಡ್ ಮಹಿಂದ್ರ ಶೇ 7.57ರಷ್ಟು, ಟೈಟನ್ ಶೇ 7.50ರಷ್ಟು, ಬಿಪಿಸಿಎಲ್ ಶೇ 7.02ರಷ್ಟು ಮತ್ತು ಬಜಾಜ್ ಫಿನ್‌ಸರ್ವ್ ಶೇ 6.91ರಷ್ಟು ಕುಸಿತ ಕಂಡಿವೆ.

ಮುನ್ನೋಟ: ಕೋವಿಡ್ ಲಸಿಕೆಗಳ ಪ್ರಭಾವವನ್ನು ಮೀರಬಹುದಾದ ಹೊಸ ಸ್ವರೂಪದ ಕೊರೊನಾ ವೈರಾಣು ತಳಿಯು ದಕ್ಷಿಣ ಆಫ್ರಿಕಾದಲ್ಲಿ ಪತ್ತೆಯಾಗಿರುವುದು ಷೇರು ಮಾರುಕಟ್ಟೆಯ ಮೇಲೆ ಈಗಾಗಲೇ ಪರಿಣಾಮ ಉಂಟುಮಾಡಿದೆ. ಮುಂದಿನ ದಿನಗಳಲ್ಲಿ ಹೊಸ ಪ್ರಭೇದದ ವೈರಾಣು ಯಾವ ರೀತಿ ವರ್ತಿಸಲಿದೆ ಎನ್ನುವುದು ಮಾರುಕಟ್ಟೆಯ ದಿಕ್ಕನ್ನು ನಿರ್ಧರಿಸಲಿದೆ.

ಲಾಕ್‌ಡೌನ್, ಪ್ರಯಾಣ ನಿರ್ಬಂಧ ಮುಂತಾದ ತೀರ್ಮಾನಗಳನ್ನು ಎಲ್ಲ ದೇಶಗಳು ಅನುಸರಿಸಿದರೆ ಏನು ಮಾಡುವುದು ಎನ್ನುವ ಆತಂಕ ಹೂಡಿಕೆದಾರರಲ್ಲಿ ಮನೆ ಮಾಡಿದೆ. ಇದರ ಜೊತೆಗೆ ಹಣದುಬ್ಬರ ದತ್ತಾಂಶ, ಅಮೆರಿಕ ಸೇರಿದಂತೆ ವಿವಿಧ ದೇಶಗಳ ಕೇಂದ್ರ ಬ್ಯಾಂಕ್‌ಗಳು ಬಡ್ಡಿ ದರ ಕುರಿತಾಗಿ ಕೈಗೊಳ್ಳಲಿರುವ ನಿರ್ಣಯಗಳು ಸಹ ಸೂಚ್ಯಂಕಗಳ ಮೇಲೆ ಪರಿಣಾಮ ಬೀರಲಿವೆ. ತೈಲ ಬೆಲೆ ಮತ್ತು ಲೋಹ ದರಗಳಲ್ಲಿ ಹೆಚ್ಚಳವಾಗುತ್ತಿರುವುದು ಸಹ ಸಮಸ್ಯೆ ಮತ್ತಷ್ಟು ಬಿಗಡಾಯಿಸುವಂತೆ ಮಾಡಿದೆ.

ಕ್ರಿಪ್ಟೊ: ದೇಶದಲ್ಲಿ ಕಾಯಿನ್‌ಸ್ಟೋರ್ ಕಾರ್ಯಾರಂಭ

ಮುಂಬೈ (ರಾಯಿಟರ್ಸ್): ಸಿಂಗಪುರದ ಕ್ರಿಪ್ಟೊಕರೆನ್ಸಿ ವಿನಿಮಯ ಕಂಪನಿ ಕಾಯಿನ್‌ಸ್ಟೋರ್, ಭಾರತದಲ್ಲಿ ತನ್ನ ವಹಿವಾಟು ಆರಂಭಿಸಿದೆ.

ಕಂಪನಿಯು ತನ್ನ ವೆಬ್ ಮತ್ತು ಆ್ಯಪ್ ವೇದಿಕೆ ಬಿಡುಗಡೆ ಮಾಡಿದ್ದು, ದೇಶದಲ್ಲಿ ತನ್ನ ವಹಿವಾಟು ವಿಸ್ತರಿಸಲು ಅನುಕೂಲ ಆಗುವಂತೆ ಬೆಂಗಳೂರು, ನವದೆಹಲಿ ಮತ್ತು ಮುಂಬೈನಲ್ಲಿ ಕಚೇರಿಗಳನ್ನು ತೆರೆಯುವ ಆಲೋಚನೆಯನ್ನೂ ಹೊಂದಿದೆ ಎಂದು ಆಡಳಿತ ಮಂಡಳಿಯು ತಿಳಿಸಿದೆ.

ಭಾರತ ಸರ್ಕಾರವು ಖಾಸಗಿ ಕ್ರಿಪ್ಟೊಕರೆನ್ಸಿಗಳನ್ನು ನಿಷೇಧಿಸುವ ಸಂಬಂಧ ಕಾನೂನು ತರುವ ಸಿದ್ಧತೆಯಲ್ಲಿ ಇರುವಾಗಲೇ ಕಂಪನಿಯು ದೇಶಕ್ಕೆ ಕಾಲಿಟ್ಟಿದೆ.

ನಮ್ಮ ಒಟ್ಟು ಸಕ್ರಿಯ ಬಳಕೆದಾರರಲ್ಲಿ ಸುಮಾರು ಶೇ 25ರಷ್ಟು ಜನರು ಭಾರತದಿಂದ ಬರುತ್ತಿದ್ದಾರೆ. ನಾವು ಮಾರುಕಟ್ಟೆ ವಿಸ್ತರಿಸಲು ಇದು ಕಾರಣವಾಗಿದೆ ಎಂದು ಕಂಪನಿಯ ಮಾರುಕಟ್ಟೆ ವಿಭಾಗದ ಮುಖ್ಯಸ್ಥ ಚಾರ್ಲ್ಸ್ ಟಾನ್ ಹೇಳಿದ್ದಾರೆ.

ವಿದೇಶಿ ವಿನಿಮಯ ನಿಯಮ ಉಲ್ಲಂಘನೆ

ಅಮೆಜಾನ್, ಫ್ಯೂಚರ್ ಸಮೂಹದ ಅಧಿಕಾರಿಗಳಿಗೆ ಇ.ಡಿ. ಸಮನ್ಸ್

ನವದೆಹಲಿ (ಪಿಟಿಐ): ಜಾರಿ ನಿರ್ದೇಶನಾಲಯವು (ಇ.ಡಿ) ಅಮೆಜಾನ್ ಮತ್ತು ಫ್ಯೂಚರ್ ಸಮೂಹದ ಹಿರಿಯ ಅಧಿಕಾರಿಗಳಿಗೆ ವಿದೇಶಿ ವಿನಿಮಯ ನಿಯಮ ಉಲ್ಲಂಘನೆಯ ಕುರಿತು ವಿಚಾರಣೆಗೆ ಹಾಜರಾಗುವಂತೆ ಸಮನ್ಸ್ ಜಾರಿಗೊಳಿಸಿದೆ ಎಂದು ಮೂಲಗಳು ಹೇಳಿವೆ.

ವಿದೇಶಿ ವಿನಿಮಯ ನಿರ್ವಹಣಾ ಕಾಯ್ದೆ (ಎಫ್‌ಇಎಂಎ) ಅಡಿ ಸಮನ್ಸ್ ಜಾರಿ ಮಾಡಲಾಗಿದೆ. ದಾಖಲೆ-ಪತ್ರಗಳೊಂದಿಗೆ ಮುಂದಿನವಾರ ಹಾಜರಾಗುವಂತೆ ಅಮೆಜಾನ್ ಇಂಡಿಯಾದ ಮುಖ್ಯಸ್ಥ ಅಮಿತ್ ಅಗರ್ವಾಲ್, ಹಿರಿಯ ಅಧಿಕಾರಿಗಳು ಹಾಗೂ ಫ್ಯೂಚರ್ ಸಮೂಹದ ಹಿರಿಯ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ ಎಂದು ಮೂಲಗಳು ತಿಳಿಸಿವೆ.

ಭಾರತದ ಕಂಪನಿಯೊಂದರ ಷೇರು ಪೇಟೆಯಲ್ಲಿ ನೋಂದಣಿ ಆಗಿಲ್ಲದ ಅಂಗಸಂಸ್ಥೆಯ ಜತೆಗೆ ಮಾಡಿಕೊಂಡಿರುವ ಒಪ್ಪಂದವು ಗೊಂದಲಕಾರಿ ಆಗಿದೆ. ಆ ಮೂಲಕ ಫ್ಯೂಚರ್ ರಿಟೇಲ್ ಅನ್ನು ನಿಯಂತ್ರಿಸಲು ಅಮೆರಿಕ ಮೂಲದ ಕಂಪನಿಯು ಮಾಡಿದ ಪ್ರಯತ್ನವನ್ನು ಎಫ್‌ಇಎಂಎ ಮತ್ತು ವಿದೇಶಿ ನೇರ ಹೂಡಿಕೆ (ಎಫ್‌ಡಿಐ) ನಿಯಮಗಳ ಉಲ್ಲಂಘನೆ ಎಂದು ಪರಿಗಣಿಸಲಾಗುವುದು ಎಂದು ಹೈಕೋರ್ಟ್ ಹೇಳಿತ್ತು. ಈ ಕುರಿತು ಅಮೆಜಾನ್ ಮತ್ತು ಫ್ಲಿಪ್‌ಕಾರ್ಟ್‌ನಂತಹ ಇ-ಕಾಮರ್ಸ್ ಕಂಪನಿಗಳ ವಿರುದ್ಧ ಅಗತ್ಯ ಕ್ರಮ ತೆಗೆದುಕೊಳ್ಳುವಂತೆ ವಾಣಿಜ್ಯ ಸಚಿವಾಲಯವು ಇ.ಡಿ.ಗೆ ಸೂಚನೆ ನೀಡಿತ್ತು. ಇದರ ಆಧಾರದ ಮೇಲೆ ತನಿಖೆ ನಡೆಯಲಿದೆ.

'ಫ್ಯೂಚರ್ ಗ್ರೂಪ್‌ಗೆ ಸಂಬಂಧಿಸಿದಂತೆ ಇ.ಡಿ. ನೀಡಿರುವ ಸಮನ್ಸ್ ಸ್ವೀಕರಿಸಲಾಗಿದೆ. ನಾವು ಅದನ್ನು ಪರಿಶೀಲಿಸುತ್ತಿದ್ದೇವೆ ಮತ್ತು ನಿರ್ದಿಷ್ಟ ಸಮಯದ ಚೌಕಟ್ಟಿನೊಳಗೆ ಪ್ರತಿಕ್ರಿಯಿಸುತ್ತೇವೆ' ಎಂದ ಅಮೆಜಾನ್‌ನ ವಕ್ತಾರರೊಬ್ಬರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಈ ಬೆಳವಣಿಗೆಯ ಕುರಿತು ಫ್ಯೂಚರ್ ಸಮೂಹವು ಯಾವುದೇ ಪ್ರತಿಕ್ರಿಯೆ ನೀಡಿಲ್ಲ.

ಏನಿದು ಬಿಕ್ಕಟ್ಟು?: 2019ರ ಹೂಡಿಕೆ ಒಪ್ಪಂದ ಪ್ರಕಾರ, ಫ್ಯೂಚರ್ ಗ್ರೂಪ್‌ನಲ್ಲಿ ಅಮೆಜಾನ್ ಕಂಪನಿಯು ₹1,460 ಕೋಟಿ ಹೂಡಿಕೆ ಮಾಡಿತ್ತು. ಒಪ್ಪಂದ ಪ್ರಕಾರ, ಫ್ಯೂಚರ್ ಸಮೂಹವು ತನ್ನ ಆಸ್ತಿಯನ್ನು 'ನಿರ್ಬಂಧಿತ ವ್ಯಕ್ತಿಗಳ' ಪಟ್ಟಿಯಲ್ಲಿ ಹೇಳಿರುವ ಯಾರೊಬ್ಬರಿಗೂ ಮಾರಾಟ ಮಾಡುವಂತಿಲ್ಲ. ಆ ಪಟ್ಟಿಯಲ್ಲಿ ರಿಲಯನ್ಸ್ ಸಹ ಸೇರಿಕೊಂಡಿದೆ. ಆದರೆ, ರಿಲಯನ್ಸ್ 2020ರ ಆಗಸ್ಟ್‌ನಲ್ಲಿ ಫ್ಯೂಚರ್ ರಿಟೇಲ್‌ನ ಸಗಟು ಮತ್ತು ಇತರೆ ವಹಿವಾಟುಗಳನ್ನು ಖರೀದಿಸುವ ಒಪ್ಪಂದ ಮಾಡಿಕೊಂಡಿದೆ. ಇದು 2019ರಲ್ಲಿ ಫ್ಯೂಚರ್ ಮಾಡಿಕೊಂಡಿದ್ದ ಒಪ್ಪಂದದ ಉಲ್ಲಂಘನೆಯಾಗಿದೆ ಎನ್ನುವುದು ಅಮೆಜಾನ್‌ನ ವಾದವಾಗಿದೆ.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು
100 ಮೊಟ್ಟೆಗೆ ₹460
12 ಮೊಟ್ಟೆಗೆ ₹62
ಮೈಸೂರು
100 ಮೊಟ್ಟೆಗೆ ₹457

ರಾಮನಗರ ರೇಷ್ಮೆ



ಮಿಶ್ರತಳಿ ₹330-525
ದ್ವಿತಳಿ ₹311-666

ಜಿಯೊ ಪ್ರಿಪೇಯ್ಡ್ ಸೇವಾ ಶುಲ್ಕ ಹೆಚ್ಚಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಏರ್‌ಟೆಲ್ ಮತ್ತು ವೊಡಾಫೋನ್ ಐಡಿಯಾ ಬಳಿಕ ಇದೀಗ ಜಿಯೊ ಕಂಪನಿಯು ಸಹ ತನ್ನ ಪ್ರಿಪೇಯ್ಡ್ ಸೇವೆಗಳ ಮೇಲಿನ ಶುಲ್ಕವನ್ನು ಶೇ 21ರವರೆಗೆ ಹೆಚ್ಚಿಸುವ ನಿರ್ಧಾರವನ್ನು ಭಾನುವಾರ ಘೋಷಿಸಿದೆ. ಡಿಸೆಂಬರ್ 1ರಿಂದ ಪರಿಷ್ಕೃತ ಜಾರಿಗೆ ಬರಲಿವೆ ಎಂದು ತಿಳಿಸಿದೆ.

ಜಿಯೊಫೋನ್ ಯೋಜನೆ, ಅನಿಯಮಿತ ಯೋಜನೆ ಮತ್ತು ಡೇಟಾ ಆ್ಯಂಡ್‌ಆನ್ ಮೇಲಿನ ಶುಲ್ಕಗಳನ್ನು ಶೇ 19.6 ರಿಂದ ಶೇ 21.3ರವರೆಗೂ ಏರಿಕೆ ಮಾಡಲಾಗಿದೆ.

ಈ ಹೊಸ ಅನಿಯಮಿತ ಯೋಜನೆಗಳು ಉದ್ಯಮದಲ್ಲಿ ಉತ್ತಮ ಮೌಲ್ಯ ತಂದುಕೊಡಲಿವೆ. ಜಾಗತಿಕವಾಗಿ ಕಡಿಮೆ ಬೆಲೆಗೆ ಉತ್ತಮ ಗುಣಮಟ್ಟದ ಸೇವೆಗಳನ್ನು ನೀಡುವ ಕಂಪನಿಯ ಬದ್ಧತೆಯನ್ನು ಇದು ಎತ್ತಿಹಿಡಿಯಲಿದೆ ಎಂದು ತಿಳಿಸಿದೆ.

ಪ್ರಿಪೇಯ್ಡ್ ದರ (₹ ಗಳಲ್ಲಿ)

	ಹಾಲಿ ದರ	ಹೊಸ ದರ
ಜಿಯೊಫೋನ್	75	91
ಅನಿಯಮಿತ ಕರೆ & ಡೇಟಾ	129	155
	249	299
	329	395
ಡೇಟಾ ಆ್ಯಡ್‌ಆನ್	51	61
	101	121

ಎಫ್‌ಪಿಐ ಹೂಡಿಕೆ ₹ 5,319 ಕೋಟಿ

ನವದೆಹಲಿ (ಪಿಟಿಐ): ವಿದೇಶಿ ಬಂಡವಾಳ ಹೂಡಿಕೆದಾರರು (ಎಫ್‌ಪಿಐ) ನವೆಂಬರ್ 1 ರಿಂದ 26ರ ವರೆಗಿನ ಅವಧಿಯಲ್ಲಿ ದೇಶದ ಬಂಡವಾಳ ಮಾರುಕಟ್ಟೆಯಲ್ಲಿ ₹ 5,319 ಕೋಟಿ ಹೂಡಿಕೆ ಮಾಡಿದ್ದಾರೆ.

ಹೂಡಿಕೆದಾರರು ₹ 1,400 ಕೋಟಿ ಮೌಲ್ಯದ ಷೇರುಗಳನ್ನು ಹಾಗೂ ₹ 3,919 ಕೋಟಿ ಮೌಲ್ಯದ ಸಾಲಪತ್ರಗಳನ್ನು ಖರೀದಿಸಿದ್ದಾರೆ. ಅಕ್ಟೋಬರ್‌ನಲ್ಲಿ ₹ 12,437 ಕೋಟಿಗಳಷ್ಟು ಮೌಲ್ಯದ ಷೇರುಗಳನ್ನು ಮತ್ತು ಸಾಲಪತ್ರಗಳನ್ನು ಮಾರಾಟ ಮಾಡಿದ್ದರು.

ಕೋವಿಡ್‌ನ ಹೊಸ ತಳಿಯ ಹರಡುವಿಕೆ ಮತ್ತು ಜಾಗತಿಕವಾಗಿ ಆರ್ಥಿಕ ಬೆಳವಣಿಗೆಯ ಮೇಲೆ ಅದರಿಂದ ಆಗಲಿರುವ ಪರಿಣಾಮಗಳ ಬಗ್ಗೆ ಹೂಡಿಕೆದಾರರು ಗಮನ ಹರಿಸುತ್ತಿದ್ದು, ಮುಂದಿನ ದಿನಗಳಲ್ಲಿ ಹೂಡಿಕೆಯಲ್ಲಿ ಏರಿಳಿತ ಆಗುವ ಸಾಧ್ಯತೆ ಇದೆ ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

ಮೊದಲ ಟೆಸ್ಟ್ ಪಂದ್ಯ: ಗ್ರೀನ್ ಪಾರ್ಕ್ ಪಿಚ್‌ನಲ್ಲಿ ಕಿವೀಸ್‌ಗೆ ಕಠಿಣ ಹಾದಿ: ಕೊನೆಯ ದಿನದ ಕೌತುಕ

ಜಯದ ಆಸೆ ಚಿಗುರಿಸಿದ ಅಯ್ಯರ್, ಸಹಾ

ಪ್ರಜಾವಾಣಿ ವಾರ್ತೆ

ಕಾನ್ಪುರ: ಪದಾರ್ಪಣೆಯ ಟೆಸ್ಟ್‌ನ ಮೊದಲ ಇನಿಂಗ್ಸ್‌ನಲ್ಲಿ ಶತಕ ಗಳಿಸಿದ್ದ ಶ್ರೇಯಸ್ ಅಯ್ಯರ್, ಎರಡನೇ ಇನಿಂಗ್ಸ್‌ನಲ್ಲಿ ಅರ್ಧಶತಕ ಹೊಡೆದು ದಾಖಲೆ ಪುಟ ಸೇರಿದರು. ಅವರಿಗೆ ತಕ್ಕ ಜೊತೆ ನೀಡಿದ ವೃದ್ಧಿಮಾನ್ ಸಹಾ ಅರ್ಧಶತಕದ ಬಲದಿಂದ ಭಾರತ ತಂಡವು ನ್ಯೂಜಿಲೆಂಡ್‌ಗೆ ಕಠಿಣ ಸವಾಲೊಡ್ಡಿದೆ.

ಮುಖ್ಯಾಂಶಗಳು

- ಮೊದಲ ಇನಿಂಗ್ಸ್‌ನಲ್ಲಿ ಶತಕ ಗಳಿಸಿದ್ದ ಶ್ರೇಯಸ್ ಅಯ್ಯರ್
- ರಹಾನೆ, ಪೂಜಾರ ಬ್ಯಾಟಿಂಗ್ ವೈಫಲ್ಯ
- ಸೌಥಿ, ಜೆಮಿಸನ್‌ಗೆ ತಲಾ ಮೂರು ವಿಕೆಟ್

ಗ್ರೀನ್ ಪಾರ್ಕ್‌ನಲ್ಲಿ ನಡೆಯುತ್ತಿರುವ ಮೊದಲ ಟೆಸ್ಟ್‌ನ ನಾಲ್ಕನೇ ದಿನ ಕಿವೀಸ್ ಬಳಗಕ್ಕೆ 284 ರನ್‌ಗಳ ಗೆಲುವಿನ ಗುರಿ ನೀಡಿದೆ. ಭಾನುವಾರ 7 ವಿಕೆಟ್‌ಗಳಿಗೆ 234 ರನ್ ಗಳಿಸಿದ ಅಜಿಂಕ್ಯ ರಹಾನೆ ಬಳಗವು ಡಿಕ್ಲೇರ್ ಮಾಡಿಕೊಂಡಿತು. ಗುರಿ ಬೆನ್ನಟ್ಟಿದ ಕೇನ್ ವಿಲಿಯಮ್ಸನ್ ಬಳಗವು ದಿನದಾಟದ ಕೊನೆಗೆ 4 ಓವರ್‌ಗಳಲ್ಲಿ 1 ವಿಕೆಟ್‌ಗೆ 4 ರನ್ ಗಳಿಸಿದೆ. ಪಿಚ್‌ನಲ್ಲಿ ಸತ್ವ ಕಡಿಮೆಯಾಗಿದ್ದು ಚೆಂಡು ತೀರಾ ಕೆಳಮಟ್ಟದಲ್ಲಿ ಚಲಿಸುತ್ತಿದೆ. ಅನಿರೀಕ್ಷಿತ ತಿರುವು ಮತ್ತು ಬೌನ್ಸ್ ಇರುವುದರಿಂದ ಬ್ಯಾಟಿಂಗ್ ಮಾಡುವುದು ತುಸು ಕಷ್ಟವಾಗುವ ಸಾಧ್ಯತೆ ಇದೆ. ಕೊನೆಯ ದಿನದಂದು ಭಾರತದ ಮೂವರು ಸ್ಪಿನ್ನರ್‌ಗಳನ್ನು ಎದುರಿಸಿ ನಿಂತು ಜಯ ಗಳಿಸುವುದು ಕಿವೀಸ್ ಮುಂದಿರುವ ಕಠಿಣ ಸವಾಲು. ಬಹಳಷ್ಟು ಸಹನೆ ಮತ್ತು ಎಚ್ಚರಿಕೆಯಿಂದ ಆಡಿದರೆ ಪಂದ್ಯವನ್ನು ಕನಿಷ್ಠ ಡ್ರಾ ಮಾಡಿಕೊಳ್ಳುವ ಅವಕಾಶವೂ ಕೇನ್ ಬಳಗಕ್ಕೆ ಇದೆ.

ಮೂರನೇ ದಿನವಾದ ಶನಿವಾರ ಭಾರತ ಮೊದಲ ಇನಿಂಗ್ಸ್‌ನಲ್ಲಿ 49 ರನ್‌ಗಳ ಮುನ್ನಡೆ ಸಾಧಿಸಿತ್ತು. ಎರಡನೇ ಇನಿಂಗ್ಸ್‌ನಲ್ಲಿ ಒಂದು ವಿಕೆಟ್ ಕಳೆದುಕೊಂಡು 14 ರನ್ ಗಳಿಸಿತ್ತು. ಭಾನುವಾರ ಬೆಳಿಗ್ಗೆ ಕೈಲ್ ಜೆಮಿಸನ್ ಮತ್ತು ಟಿಮ್ ಸೌಥಿ ಅವರ ಬಿರುಗಾಳಿ ವೇಗದ ಮುಂದೆ ಆತಿಥೇಯ ಬಳಗದ ವಿಕೆಟ್‌ಗಳು ಪಟಪಟನೆ ಉರುಳತೊಡಗಿದವು. 51 ರನ್‌ಗಳಾಗುವಷ್ಟರಲ್ಲಿ ಐದು ವಿಕೆಟ್‌ಗಳು ಪತನವಾಗಿದ್ದವು. ಮೊದಲ ಇನಿಂಗ್ಸ್‌ನಲ್ಲಿ ಅರ್ಧಶತಕ ಹೊಡೆದಿದ್ದ ರವೀಂದ್ರ ಜಡೇಜ ಖಾತೆಯನ್ನೇ ತೆರೆಯಲಿಲ್ಲ. ಮಯಂಕ್ ಅಗರವಾಲ್ (17), ಚೇತೇಶ್ವರ್ ಪೂಜಾರ (22) ಮತ್ತು ನಾಯಕ ರಹಾನೆ (4) ಅವರ ವೈಫಲ್ಯ ಮುಂದುವರಿಯಿತು. ಇದರಿಂದಾಗಿ ತಂಡವು ಅಲ್ಪಮೊತ್ತಕ್ಕೆ ಕುಸಿಯುವ ಭೀತಿ ಮೂಡಿತ್ತು. ಶ್ರೇಯಸ್ ಅಯ್ಯರ್ (65; 125ಎಸೆತ, 8ಬೌಂಡರಿ, 1ಸಿಕ್ಸರ್) ದಿಟ್ಟತನದ ಬ್ಯಾಟಿಂಗ್ ಮಾಡಿದರು. ಅವರಿಗೆ ಆರ್. ಅಶ್ವಿನ್ ಜೊತೆ ನೀಡಿದರು. 6ನೇ ವಿಕೆಟ್ ಜೊತೆಯಾಟದಲ್ಲಿ ಇಬ್ಬರೂ 52 ರನ್ ಸೇರಿಸಿ ತಂಡದ ಮೊತ್ತ 100 ರ ಗಡಿ ದಾಟುವಂತೆ ನೋಡಿಕೊಂಡರು. 40ನೇ ಓವರ್‌ನಲ್ಲಿ ಅಶ್ವಿನ್ ವಿಕೆಟ್ ಗಳಿಸಿದ ಜೆಮಿಸನ್ ಜೊತೆಯಾಟ ಮುರಿದರು. ಕಿವೀಸ್‌ಗೆ ನಿಜವಾದ ಸವಾಲು ಎದುರಾಗಿದ್ದು ಈ ಹಂತದಲ್ಲಿಯೇ!

ವೃದ್ಧಿಮಾನ್ ಸಹಾ, ಅಯ್ಯರ್ ಜೊತೆ ಗೂಡಿ ಇನಿಂಗ್ಸ್‌ಗೆ ಬಲ ತುಂಬಿದರು. ಶನಿವಾರ ಕತ್ತುನೋವಿ ನಿಂದಾಗಿ ವಿಕೆಟ್‌ಕೀ ಪಿಂಗ್ ಮಾಡದೇ ವಿಶ್ರಾಂತಿ ಪಡೆದಿದ್ದ ಸಹಾ ಸುಂದರವಾದ ಬ್ಯಾಟಿಂಗ್ ಮಾಡಿದರು. ಇನ್ನೊಂದೆಡೆ ಅಯ್ಯರ್ ಕಿವೀಸ್ ಬೌಲರ್‌ಗಳ ಅಸ್ತ್ರಗಳಿಗೆ ತಕ್ಕ ಉತ್ತರ ಕೊಟ್ಟರು.7ನೇ ವಿಕೆಟ್ ಜೊತೆಯಾಟದಲ್ಲಿ 64 ರನ್‌ಗಳನ್ನು ಸೇರಿಸಿದರು. ಶ್ರೇಯಸ್ 109 ಎಸೆತಗಳಲ್ಲಿ ಅರ್ಧಶತಕ ಗಳಿಸಿದರು. ಚಹಾ ವಿರಾಮಕ್ಕೂ ಸ್ವಲ್ಪ ಮುಂಚೆ ಶ್ರೇಯಸ್ ವಿಕೆಟ್ ಗಳಿಸುವಲ್ಲಿ ಯಶಸ್ವಿಯಾದ ಸೌಥಿ ಜೊತೆಯಾಟವನ್ನು ಮುರಿದರು. ಸಹಾ ಜೊತೆಗೂಡಿದ ಆಲ್‌ರೌಂಡರ್ ಅಕ್ಷರ್ ಪಟೇಲ್ (ಔಟಾಗದೆ 28) ಆಟದ ರಂಗು ಹೆಚ್ಚಿಸಿದರು. ಮೊದಲ ಇನಿಂಗ್ಸ್‌ನಲ್ಲಿ ಐದು ವಿಕೆಟ್ ಗಳಿಸಿ ಭಾರತದ ಮುನ್ನಡೆಗೆ ಕಾರಣರಾಗಿದ್ದ ಅಕ್ಷರ್, ಸಹಾ ಜೊತೆಗೆ 67 ರನ್ ಸೇರಿಸಿದರು. ಸಹಾ 115 ಎಸೆತಗಳಲ್ಲಿ ಅರ್ಧಶತಕ ಪೂರೈಸಿದರು.


ವೃದ್ಧಿಮಾನ್ ಸಹಾ ಮತ್ತು ಶ್ರೇಯಸ್ ಅಯ್ಯರ್

ಸ್ಪರ್ಧಾತ್ಮಕ ಮೊತ್ತ ಗಳಿಸುವುದು ನಮ್ಮ ಗುರಿಯಾಗಿತ್ತು. ಉತ್ತಮ ಮೊತ್ತ ಗಳಿಸಿದ್ದೇವೆ. ನಮ್ಮ ಸ್ಪಿನ್ನರ್‌ಗಳು ಸೋಮವಾರ ತಂಡವನ್ನು ಜಯದತ್ತ ಮುನ್ನಡೆಸುವರು
-ಶ್ರೇಯಸ್ ಅಯ್ಯರ್
ಭಾರತ ತಂಡದ ಬ್ಯಾಟ್ಸ್‌ಮನ್

ಸ್ಕೋರ್ ಕಾರ್ಡ್

ಭಾರತ ಮೊದಲ ಇನಿಂಗ್ಸ್ 345 (111.1 ಓವರ್)
ನ್ಯೂಜಿಲೆಂಡ್ ಮೊದಲ ಇನಿಂಗ್ಸ್ 296 (142.3 ಓವರ್)
ಭಾರತ 2ನೇ ಇನಿಂಗ್ಸ್7ಕ್ಕೆ 234 ಡಿಕ್ಲೇರ್ಡ್ (81 ಓವರ್)
(ಶನಿವಾರ 5 ಓವರ್‌ಗಳಲ್ಲಿ 1 ವಿಕೆಟ್‌ಗೆ 14)
ಮಯಂಕ್ ಸಿ ಲಥಾಮ್ ಬಿ ಸೌಥಿ 17 (53ಎ, 4X3), ಪೂಜಾರ ಸಿ ಬ್ಲಂಡೆಲ್ ಬಿ ಜೆಮಿಸನ್ 22 (33ಎ, 4X3), ಅಜಿಂಕ್ಯ ಎಲ್‌ಬಿಡಬ್ಲ್ಯು ಎಜಾಜ್ 4 (15ಎ, 4X1), ಶ್ರೇಯಸ್ ಸಿ ಬ್ಲಂಡೆಲ್ ಬಿ ಸೌಥಿ 65 (125ಎ, 4X8, 6X1), ಜಡೇಜ ಎಲ್‌ಬಿಡಬ್ಲ್ಯು ಸೌಥಿ 0 (2ಎ), ಅಶ್ವಿನ್ ಬಿ ಜೆಮಿಸನ್ 32 (62ಎ, 4X5), ಸಹಾ ಔಟಾಗದೆ 61 (126ಎ, 4X4, 6X1), ಅಕ್ಷರ್ ಔಟಾಗದೆ 28 (67ಎ, 4X2, 6X1)
ಇತರೆ (ಬೈ 3, ಲೆಗ್‌ಬೈ 1) 4
ವಿಕೆಟ್ ಪತನ: 2-32 (ಚೇತೇಶ್ವರ್ ಪೂಜಾರ, 11.1), 3-41 (ಅಜಿಂಕ್ಯ ರಹಾನೆ, 14.5), 4-51 (ಮಯಂಕ್ ಅಗರವಾಲ್, 19.2), 5-51 (ರವೀಂದ್ರ ಜಡೇಜ, 19.4), 6-103 (ರವಿಚಂದ್ರನ್ ಅಶ್ವಿನ್, 39.2), 7-167 (ಶ್ರೇಯಸ್ ಅಯ್ಯರ್, 60.2)
ಬೌಲಿಂಗ್: ಟಿಮ್ ಸೌಥಿ 22–2–75–3, ಕೈಲ್ ಜೆಮಿಸನ್ 17–6–40–3, ಎಜಾಜ್ ಪಟೇಲ್ 17–3–60–1, ರಚಿನ್ ರವೀಂದ್ರ 9–3–17–0, ವಿಲಿಯಮ್ ಸೋಮರ್‌ವಿಲ್ 16–2–38–0
ನ್ಯೂಜಿಲೆಂಡ್ ಎರಡನೇ ಇನಿಂಗ್ಸ್ 1ಕ್ಕೆ 4 (4 ಓವರ್))
ಲಥಾಮ್ ಬ್ಯಾಟಿಂಗ್ 2 (13ಎ), ಯಂಗ್ ಎಲ್‌ಬಿಡಬ್ಲ್ಯು ಅಶ್ವಿನ್ 2 (6ಎ), ಸೋಮರ್‌ವಿಲ್ ಬ್ಯಾಟಿಂಗ್ 0 (5ಎ)
ವಿಕೆಟ್ ಪತನ: 1-3 (ವಿಲ್ ಯಂಗ್, 2.6)
ಬೌಲಿಂಗ್: ರವಿಚಂದ್ರನ್ ಅಶ್ವಿನ್ 2-0-3-1, ಅಕ್ಷರ್ ಪಟೇಲ್ 2-1-1-0


ಬೆಂಗಳೂರು ಎಫ್‌ಸಿ ತಂಡದ ಉದಾಂತ್ ಸಿಂಗ್ (ಎಡ) ಮತ್ತು ಕೇರಳ ಬ್ಲಾಸ್ಟರ್ಸ್ ತಂಡದ ಜೆಸೆಲ್ ಅಲನ್ ಕಾರ್ನೇರೊ ಅವರು ಚೆಂಡಿಗಾಗಿ ಪೈಪೋಟಿ ನಡೆಸಿದರು– ಐಎಸ್‌ಎಲ್ ಮೀಡಿಯಾ ಚಿತ್ರ

ಐಎಸ್‌ಎಲ್: ಬಿಎಫ್‌ಸಿಗೆ ಆಶಿಕ್ ‘ಡ್ರಾ’ ಕಾಣಿಕೆ

ಬ್ಯಾಂಬೊಲಿಮ್, ಗೋವಾ: ಜಿಎಂಸಿ ಅಥ್ಲೆಟಿಕ್ ಕ್ರೀಡಾಂಗಣದಲ್ಲಿ ಭಾನುವಾರ ಆಶಿಕ್ ಕುರುನಿಯನ್ ಏಕಕಾಲಕ್ಕೆ ನಾಯಕ ಮತ್ತು ಖಳನಾಯಕ ಎರಡೂ ಆದರು!



ಇಲ್ಲಿ ನಡೆದ ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಫುಟ್‌ಬಾಲ್ ಪಂದ್ಯದಲ್ಲಿ ಆಶಿಕ್ ಕುರುನಿಯನ್ ತಾವು ಪ್ರತಿನಿಧಿಸುವ ಬೆಂಗಳೂರು ಫುಟ್‌ಬಾಲ್ ಕ್ಲಬ್ ತಂಡಕ್ಕೆ ಒಂದು ಗೋಲಿನ ಮುನ್ನಡೆ ಕೊಡಿಸಿದ್ದರು. ಕೆಲವೇ ನಿಮಿಷಗಳ ನಂತರ ಕೇರಳ ಬ್ಲಾಸ್ಟರ್ಸ್ ತಂಡಕ್ಕೆ ಗೋಲಿನ ಕಾಣಿಕೆ ನೀಡಿ ಪಂದ್ಯವು ಡ್ರಾ ಆಗಲು ಕಾರಣವಾದರು. ಇದರಿಂದಾಗಿ ಎರಡೂ ತಂಡಗಳು ಪಾಯಿಂಟ್ಸ್‌ಗಳನ್ನು ಹಂಚಿಕೊಂಡವು.

ಸುನಿಲ್ ಚೆಟ್ರಿ ಬಳಗ ಮತ್ತು ಕೇರಳ ತಂಡಗಳ ನಡುವಣ ಈ ಪಂದ್ಯವು ಆರಂಭದಿಂದಲೂ ಜಿದ್ದಾಜಿದ್ದಿಯಿಂದ ಕೂಡಿತ್ತು. 84ನೇ ನಿಮಿಷದವರೆಗೂ ಉಭಯ ತಂಡಗಳಿಗೆ ಗೋಲು ಗಳಿಸಲು ಸಾಧ್ಯವಾಗಿರಲಿಲ್ಲ. ಎರಡೂ ಕಡೆಯ ರಕ್ಷಣಾ ಆಟಗಾರರು ತಮ್ಮ ಸಂಪೂರ್ಣ ಸಾಮರ್ಥ್ಯ ತೋರಿ, ಗೋಲುಗಳನ್ನು ತಡೆದಿದ್ದರು.

ಅದರಲ್ಲೂ ಬೆಂಗಳೂರು ತಂಡದ ಗೋಲ್‌ಕೀಪರ್ ಗುರುಪ್ರೀತ್ ಸಿಂಗ್ ಸಂಧು ಬಂಡೆಗಲ್ಲಿನಂತೆ ನಿಂತು ಕೇರಳದ ದಾಳಿಯನ್ನು ತಡೆದರು.

ಅದೇ ರೀತಿ, ಕೇರಳದ ಗೋಲ್‌ಕೀಪರ್ ಅಲ್ಬಿನೊ ಗೋಮ್ಸ್ ಕೂಡ ಬೆಂಗಳೂರು ದಾಳಿಯನ್ನು ತಡೆಯುವಲ್ಲಿ ಯಶಸ್ವಿಯಾಗಿದ್ದರು. 84ನೇ ನಿಮಿಷದಲ್ಲಿ ಆಶಿಕ್ ಕಾಲ್ಚಳಕಕ್ಕೆ ಗೋಲು ಒಲಿಯಿತು. ಕೇರಳದ ಗೋಲ್‌ಕೀಪರ್ ಮತ್ತು ರಕ್ಷಣಾ ಆಟಗಾರರನ್ನು ವಂಚಿಸುವಲ್ಲಿ ಅವರು ಯಶಸ್ವಿಯಾಗಿದ್ದರು. ಆದರೆ, ನಾಲ್ಕು ನಿಮಿಷಗಳ ನಂತರ ಆಶಿಕ್ ಅವರಿಂದ ಪ್ರಮಾದ ನಡೆದುಹೋಯಿತು. ಸೆಲ್ಫ್ ಗೋಲ್ ಹೊಡೆದ ಅವರು ಕೇರಳದ ಸೋಲು ತಪ್ಪಿಸಿದರು.

ಬೆಂಗಳೂರು ತಂಡವು 3 ಪಂದ್ಯಗಳನ್ನು ಆಡಿದ್ದು ನಾಲ್ಕು ಅಂಕ ಗಳಿಸಿದೆ. ಕೇರಳ ತಂಡವು ಎರಡು ಅಂಕ ಗಳಿಸಿದೆ.

ಹಾಕಿ: ಕ್ವಾರ್ಟರ್‌ಗೆ ಅರ್ಜೆಂಟೀನಾ

ಭುವನೇಶ್ವರ: ಪಾಕಿಸ್ತಾನ ದಿಟ್ಟ ಸವಾಲು ಮೀರಿದ ಅರ್ಜೆಂಟೀನಾ ತಂಡವು ಪುರುಷರ ಜೂನಿಯರ್ ವಿಶ್ವಕಪ್ ಹಾಕಿ ಟೂರ್ನಿಯಲ್ಲಿ ಕ್ವಾರ್ಟರ್‌ಫೈನಲ್‌ಗೆ ಲಗ್ಗೆಯಿಟ್ಟಿತು.

ಭಾನುವಾರ ಕಳಿಂಗ ಕ್ರೀಡಾಂಗಣದಲ್ಲಿ ನಡೆದ ‘ಡಿ’ ಗುಂಪಿನ ಪಂದ್ಯದಲ್ಲಿ ಅರ್ಜೆಂಟೀನಾ 4–3ರಿಂದ ಪಾಕಿಸ್ತಾನವನ್ನು ಮಣಿಸಿತು. ಗುಂಪಿನ ಇನ್ನೊಂದು ಪಂದ್ಯದಲ್ಲಿ ಜರ್ಮನಿ 11–0ರಿಂದ ಈಜಿಪ್ಟ್ ತಂಡವನ್ನು ಸೋಲಿಸಿತು.

‘ಸಿ’ ಗುಂಪಿನ ಪಂದ್ಯದಲ್ಲಿ ನೆದರ್ಲೆಂಡ್ಸ್ 14–0ರಿಂದ ಅಮೆರಿಕ ಎದುರು, ಸ್ಪೇನ್ 9–0ರಿಂದ ಕೊರಿಯಾ ವಿರುದ್ಧ ಜಯ ಸಾಧಿಸಿದವು.

ಕರ್ನಾಟಕದ ಪಾರ್ಥ್ ವಾರಣಾಸಿಗೆ ನಾಲ್ಕು ಚಿನ್ನ

ರಾಷ್ಟ್ರೀಯ ಮಾಸ್ಟರ್ಸ್ ಈಜು ಚಾಂಪಿಯನ್‌ಷಿಪ್‌ನಲ್ಲಿ ರಾಜ್ಯಕ್ಕೆ ಅಗ್ರಸ್ಥಾನ; 206 ಪದಕ ದಾಖಲೆ

ಮಂಗಳೂರು: ಕರ್ನಾಟಕದ ಪಾರ್ಥ್ ವಾರಣಾಸಿ ರಾಷ್ಟ್ರೀಯ ಮಾಸ್ಟರ್ಸ್ ಈಜು ಚಾಂಪಿಯನ್‌ಷಿಪ್‌ನಲ್ಲಿ ನಾಲ್ಕು ಚಿನ್ನದ ಪದಕ ಗಳಿಸಿದರು. ಚಾಂಪಿಯನ್‌ಷಿಪ್‌ನ ಮೂರು ದಿನಗಳಲ್ಲಿ ಕರ್ನಾಟಕವು 206 ಪದಕ ಜಯಿಸುವ ಮೂಲಕ ಅಗ್ರಸ್ಥಾನದಲ್ಲಿ ಇದೆ. ನವದೆಹಲಿ 175, ಮಹಾರಾಷ್ಟ್ರ 92 ಪದಕಗಳನ್ನು ಗಳಿಸಿವೆ.

ಸಂತ ಅಲೋಶಿಯಸ್ ಈಜುಕೊಳದಲ್ಲಿ ಭಾನುವಾರ ನಡೆದ ಚಾಂಪಿಯನ್ ಷಿಪ್‌ನ ಪುರುಷರ ವಿಭಾಗದ 50 ಮೀಟರ್ಸ್ ಬ್ಯಾಕ್‌ಸ್ಟ್ರೋಕ್ (31.22 ಸೆಕೆಂಡು), ಬಟರ್ ಫ್ಲೈ (27.34 ಸೆಕೆಂಡು), ಫ್ರೀಸ್ಟೈಲ್, ಹಾಗೂ 100 ಮೀಟರ್ ಫ್ರೀಸ್ಟೈಲ್ ‘ಸಿ’ ಗುಂಪು ವಿಭಾಗದಲ್ಲಿ ಅವರು ನಾಲ್ಕು ಚಿನ್ನದ ಪದಕದ ಸಾಧನೆ ಮಾಡಿದ್ದಾರೆ.

ಮಂಗಳೂರಿನ 77 ವರ್ಷದ ಶಿರಿನ್ ಸಾಲ್ಡಾನ 50 ಮೀಟರ್ಸ್ ‘ಎಲ್’ ಗುಂಪಿನ ಬ್ಯಾಕ್‌ಸ್ಟ್ರೋಕ್‌ನಲ್ಲಿ ಬೆಳ್ಳಿ, 200 ಮೀಟರ್ ಫ್ರೀಸ್ಟೈಲ್‌ನಲ್ಲಿ ಚಿನ್ನದ ಸಾಧನೆ ಮಾಡುವ ಮೂಲಕ ಗಮನ ಸೆಳೆದಿದ್ದಾರೆ.


ಬಟರ್‌ಫ್ಲೈ ವಿಭಾಗದಲ್ಲಿ ಚಿನ್ನ ಗೆದ್ದ ಪಾರ್ಥ್ ವಾರಣಾಸಿ ಈಜಿನ ಭಂಗಿ– ಪ್ರಜಾವಾಣಿ ಚಿತ್ರ/ಇರ್ಷಾದ್ ಮಹಮ್ಮದ್

ಫಲಿತಾಂಶ: ಪುರುಷರು: 50 ಮೀ. ಬಟರ್ ಫ್ಲೈ: ‘ಸಿ’ ಗುಂಪು: ಪಾರ್ಥ ವಾರಣಾಸಿ (ಕರ್ನಾಟಕ)–1, ಕಾಲ: 27:34, ಭರತ್ ಸಚ್ದೇವ (ದೆಹಲಿ)–2, ರೆಗ್ವಿಂದರ್ ಭಾಟಿಯಾ– 3, ಗುಂಪು ‘ಎ’: ತರುಣ್ ಟೋಕಾಸ್(ದೆಹಲಿ)–1, ಕಾಲ: 29.37, ದೀಲಿಪ್ ಕುಮಾರ್ ಆರ್ (ತಮಿಳುನಾಡು)–2, ಸವಾದ್ ಕೆ.(ಲಕ್ಷದ್ವೀಪ)–3, ಗುಂಪು ‘ಎನ್’: ಅರವಿಂದ ನೈನಾರ್ (ತಮಿಳುನಾಡು)–1, ಕಾಲ: 26;34, ದಿರನ್ ಎಂ., (ಕರ್ನಾಟಕ)–2, ಸಿ.ಜಿ. ಜಾನ್ಸನ್ (ಹರಿಯಾಣ)–3, ಬ್ಯಾಕ್‌ಸ್ಟ್ರೋಕ್ ‘ಜೆ’ ಗುಂಪು: ಬಾಸುದೇವ್ ಸಹಾ (ಕರ್ನಾಟಕ)–1, ಕಾಲ: 50.42, ಜೈದೀಪ್ (ಗುಜರಾತ್)–2, ಥಾಮಸ್ ಕೆ.ಇ. (ಕೇರಳ)–3, ‘ಐ’ ಗುಂಪು: ಥಾಮಸ್ (ಕೇರಳ)–1, ಕಾಲ: 47.94, ರಮೇಶ್ ವಿಪತ್ (ಮಹಾರಾಷ್ಟ್ರ)–2, ತೊಕ್ಚೊಂ ಅರುಣ್‌ಕುಮಾರ್ ಸಿಂಗ್ (ಮಣಿಪುರ)–3, ಸಂಜೀವ್ ಟೋಕಾಸ್ (ದೆಹಲಿ)–1, ಕಾಲ: 33.37, ಡಾ ಅಶುತೋಷ್ ಬೋಳೂರು (ಕರ್ನಾಟಕ)–2, ಶೈಫುದೀನ್ ಎಂ.ಟಿ .ಪಿ. (ಕೇರಳ)–3,

ಮಹಿಳೆಯರು: 50 ಮೀ. ಬಟರ್ ಫ್ಲೈ; ಗುಂಪು ‘ಜಿ’: ಸುನೀತಾ ರಾಣಾ ಅಗರ್‌ವಾಲ್ (ಕರ್ನಾಟಕ)–1, ಕಾಲ:42:64, ಇಳಾ ಶಂಕರ್ (ಕರ್ನಾಟಕ)–2, ರಾಜೇಶ್ವರಿ ಸುಧೀರ್ ಪವಾರ್ (ಮಹಾರಾಷ್ಟ್ರ)–3. ಗುಂಪು ‘ಸಿ’: ಎಂಬಾರ್ ಅರುಣಾ ವೇಣುಗೋಪಾಲ್ (ಕರ್ನಾಟಕ)–1, ಕಾಲ: 45.41, ಚಿತ್ರಾ ಅಶ್ವಿನ್ ಬಲ್ಲಾಳ (ಕರ್ನಾಟಕ)–2. ಸರೀಖಾ ಶೆಟ್ಟಿ –(ಕರ್ನಾಟಕ) 3, ಗುಂಪು ‘ಸಿ’ : ಸೀಮಾ ಶುಕ್ಲಾ (ದೆಹಲಿ)–1, ಕಾಲ: 42;47, ಸಿಂಧು ನರೋಪಂತ್ (ಕರ್ನಾಟಕ)– 2, ಶ್ರಿಲೇಖಾ (ತಮಿಳುನಾಡು)–3, ಬ್ಯಾಕ್‌ಸ್ಟ್ರೋಕ್: ‘ಜೆ’ ಗುಂಪು: ಲಲಿತಾ ವಿಜಯ ರಾಘವನ್ (ಕರ್ನಾಟಕ)–1, ಕಾಲ: 1 ನಿಮಿಷ 33;58 ಸೆಕೆಂಡು, ಜಯಶ್ರೀ ತಿರ್ವೆಂಗಡಸ್ವಾಮಿ (ಕರ್ನಾಟಕ)–2, ಸವಿತಾ ಪುರಿ (ದೆಹಲಿ)–3, ಬ್ಯಾಕ್‌ಸ್ಟ್ರೋಕ್: ‘ಜಿ’ ಗುಂಪು: ಸುನೀತಾ ರಾಣಾ ಅಗರ್‌ವಾಲ್ (ಕರ್ನಾಟಕ)–1, ಕಾಲ: 43.83, ಎಡ್ನಾ ಶರ್ಮಾ(ದೆಹಲಿ)–2, ಇಳಾ ಶಂಕರ್(ಕರ್ನಾಟಕ)–3, ‘ಸಿ’ ಗುಂಪು: ವರುಣಾ ಮೈಯಾ(ಕರ್ನಾಟಕ)–1, ಕಾಲ: 42.80, ಡಾ ಸೌರಭಾ ಭಟ್(ಕರ್ನಾಟಕ)–2, ಪ್ರೀತಿ ಆಂಟೋನಿ(ಕೇರಳ)–3.

ಶೂಟಿಂಗ್: ರಾಜ್‌ವೀರ್‌ಗೆ ಮೂರು ಚಿನ್ನ

ಪಟಿಯಾಲ (ಪಿಟಿಐ): ಪಂಜಾಬ್‌ನ ರಾಜ್‌ವೀರ್ ಸಿಂಗ್ ಗಿಲ್ ಅವರು ರಾಷ್ಟ್ರೀಯ ಶಾಟ್‌ಗನ್ ಶೂಟಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಭಾನುವಾರ ಮೂರು ಚಿನ್ನದ ಪದಕಗಳಿಗೆ ಗುರಿಯಿಟ್ಟರು. ಪುರುಷರ, ಜೂನಿಯರ್ ಮತ್ತು ತಂಡ ವಿಭಾಗದ ಸ್ಕೀಟ್ ಸ್ಪರ್ಧೆಗಳಲ್ಲಿ ಅವರು ಪಾರಮ್ಯ ಮೆರೆದರು.

ಭೋಪಾಲ್‌ನಲ್ಲಿ ನಡೆಯುತ್ತಿರುವ ರೈಫಲ್ ಸ್ಪರ್ಧೆಗಳಲ್ಲಿ ಭಾರತ ನೌಕಾಸೇನೆಯ ಕಿರಣ್ ಅಂಕುಶ್ ಜಾಧವ್ ಅವರು 50 ಮೀಟರ್ಸ್ ರೈಫಲ್ ತ್ರಿ ಪೊಸಿಷನ್ಸ್‌ನಲ್ಲಿ ಚಿನ್ನದ ಪದಕ್ಕೆ ಕೊರಳೊಡ್ಡಿದರು. ಈ ಸ್ಪರ್ಧೆಯಲ್ಲಿ ಅವರು ದೇಶದ ಅಗ್ರಕ್ರಮಾಂಕದ ಶೂಟರ್ ಐಶ್ವರ್ಯ ಪ್ರತಾಪ್ ಸಿಂಗ್ ತೋಮರ್ ಅವರನ್ನು ಹಿಂದಿಕ್ಕಿದರು.

ಆದರೆ ತೋಮರ್ ಜೂನಿಯರ್ ತ್ರಿ ಪೊಸಿಷನ್ಸ್‌ನಲ್ಲಿ ಅಗ್ರಸ್ಥಾನ ಗಳಿಸಿ ಸಮಾಧಾನ-ಪಟ್ಟರು.

ವಿಶ್ವ ಚೆಸ್ ಚಾಂಪಿಯನ್‌ಷಿಪ್: ಮೂರನೇ ಪಂದ್ಯವೂ ಡ್ರಾ

ದುಬೈ: ನಾರ್ವೆಯ ಮ್ಯಾಗ್ನಸ್ ಕಾರ್ಲ್‌ಸನ್ ಮತ್ತು ರಷ್ಯಾದ ಇಯಾನ್ ನಿಪೋಮ್‌ನಿಶಿ ನಡುವೆ ಭಾನುವಾರ ನಡೆದ ವಿಶ್ವ ಚೆಸ್ ಚಾಂಪಿಯನ್‌ಷಿಪ್‌ನ ಮೂರನೇ ಪಂದ್ಯ 41 ನಡೆಗಳ ನಂತರ ‘ಡ್ರಾ’ ಆಯಿತು. ಇಬ್ಬರೂ ತಲಾ 1.5 ಪಾಯಿಂಟ್ಸ್ ಸಂಗ್ರಹಿಸಿದ್ದಾರೆ.

ಶುಕ್ರವಾರ ಗ್ರ್ಯಾಂಡ್‌ಮಾಸ್ಟರ್‌ಗಳ ನಡುವಣ ಮೊದಲ ಪಂದ್ಯ ಡ್ರಾ ಆಗಿತ್ತು. ಮರುದಿನ ನಡೆದ ಎರಡನೇ ಪಂದ್ಯದಲ್ಲಿ ಇಬ್ಬರೂ ಆಟಗಾರರು ಪಾಯಿಂಟ್ ಹಂಚಿಕೊಳ್ಳಲು ನಿರ್ಧರಿಸಿದ್ದರು.

ಮೂರನೇ ಪಂದ್ಯ ಎರಡು ಗಂಟೆ 42 ನಿಮಿಷಗಳ ಕಾಲ ನಡೆದರೂ ನಿರ್ಣಾಯಕ ಫಲಿತಾಂಶ ಬರಲಿಲ್ಲ. 41ನೇ ನಡೆಯ ನಂತರ ಇಬ್ಬರೂ ಹಸ್ತಲಾಘವ ಮಾಡಿ ಸ್ಥಳದಿಂದ ನಿರ್ಗಮಿಸಿದರು. ರಷ್ಯಾದ ಆಟಗಾರ ಚಾಂಪಿಯನ್‌ಷಿಪ್‌ನಲ್ಲಿ ಎರಡನೇ ಬಾರಿ ಬಿಳಿ ಕಾಯಿಗಳಲ್ಲಿ ಆಡಿದ್ದರು.



ಇಯಾನ್ ನಿಪೋಮ್‌ನಿಶಿ (ಎಡ) ಮತ್ತು ಕಾರ್ಲ್‌ಸನ್

ಗೋವಾ ಅಂತರರಾಷ್ಟ್ರೀಯ ಚಿತ್ರೋತ್ಸವ: ಜಪಾನ್‌ನ ‘ರಿಂಗ್ ವಾಂಡರಿಂಗ್’ ಶ್ರೇಷ್ಠ ಚಿತ್ರ

ಪಣಜಿ: ಇಲ್ಲಿ ನಡೆದ 52ನೇ ಅಂತರರಾಷ್ಟ್ರೀಯ ಚಿತ್ರೋತ್ಸವದಲ್ಲಿ ಶ್ರೇಷ್ಠ ಚಿತ್ರ ಪ್ರಶಸ್ತಿಗೆ ಜಪಾನ್‌ನ ‘ರಿಂಗ್ ವಾಂಡರಿಂಗ್’ ಆಯ್ಕೆಯಾಗಿದ್ದು, ‘ಸ್ವರ್ಣ ಮಯೂರ’ ಮುಡಿಗೇರಿಸಿಕೊಂಡಿದೆ.

ಟೋಕಿಯೊ ನಗರ ಯುದ್ಧಪೀಡಿತವಾಗಿದ್ದ ದಿನಗಳನ್ನು ಈ ಚಿತ್ರದಲ್ಲಿ ಕಟ್ಟಿಕೊಡಲಾಗಿದೆ.

ಭಾನುವಾರ ನಡೆದ ಚಿತ್ರೋತ್ಸವ ಸಮಾರೋಪ ಸಮಾರಂಭದಲ್ಲಿ ವಿವಿಧ ಪ್ರಶಸ್ತಿಗಳನ್ನು ಪ್ರಕಟಿಸಲಾಯಿತು.

ಅತ್ಯುತ್ತಮ ನಿರ್ದೇಶಕರಿಗೆ ನೀಡುವ ‘ರಜತ ಮಯೂರ’ ಪ್ರಶಸ್ತಿಗೆ ಜೆಕ್ ನಿರ್ದೇಶಕ ವಾಕ್ಲಾವ್ ಕರ್ದಂಕ್ ಆಯ್ಕೆಯಾಗಿದ್ದಾರೆ. ಅವರ ನಿರ್ದೇಶನದ ‘ಸೇವಿಂಗ್ ಒನ್ ಹೂ ಇಸ್ ಡೆಡ್’ ಚಿತ್ರಕ್ಕಾಗಿ ಈ ಪ್ರಶಸ್ತಿ ಲಭಿಸಿದೆ.


‘ರಿಂಗ್ ವಾಂಡರಿಂಗ್’ನ ಒಂದು ದೃಶ್ಯ

ಮರಾಠಿ ನಟ ಜಿತೇಂದ್ರ ಭೀಕುಲಾಲ್ ಜೋಶಿ ಅವರಿಗೆ ಅತ್ಯುತ್ತಮ ನಟಗೆ ನೀಡುವ ‘ರಜತ ಮಯೂರ’ ಲಭಿಸಿದೆ.


ನಿಖಿಲ್ ಮಹಾಜನ್

‘ಗೋದಾವರಿ’ ಎಂಬ ಚಿತ್ರದಲ್ಲಿ ದಿವಂಗತ ನಿರ್ಮಾಪಕ ಹಾಗೂ ನಟ ನಿಶಿಕಾಂತ್ ಕಾಮತ್ ಪಾತ್ರಕ್ಕೆ ಜೀವ ತುಂಬಿದ್ದಕ್ಕಾಗಿ ಅವರು ಈ ಪ್ರಶಸ್ತಿಗೆ ಭಾಜನರಾಗಿದ್ದಾರೆ. ಈ ಚಿತ್ರ ನಿರ್ದೇಶಿಸಿದ ನಿಖಿಲ್ ಮಹಾಜನ್ ಅವರು ‘ತೀರ್ಪುಗಾರರ ವಿಶೇಷ ಪ್ರಶಸ್ತಿ’ಗೆ ಭಾಜನರಾಗಿದ್ದು, ‘ರಜತ ಮಯೂರ’ ಲಭಿಸಿದೆ.

ಸೈಕಲ್‌ನಲ್ಲಿ ಬಂದು, ಮಗುವಿಗೆ ಜನ್ಮ ನೀಡಿದ ಸಂಸದೆ

ವೆಲ್ಲಿಂಗ್ಟನ್ (ರಾಯಿಟರ್ಸ್): ನ್ಯೂಜಿಲೆಂಡ್‌ನ ಸಂಸದೆ ಜ್ಯೂಲಿ ಅನ್ನೆ ಜೆಂಟರ್ ಭಾನುವಾರ ಹೆರಿಗೆ ಆಸ್ಪತ್ರೆಗೆ ಸೈಕಲ್ ಮೂಲಕ ತೆರಳಿ ಎಲ್ಲರ ಹುಬ್ಬೇರುವಂತೆ ಮಾಡಿದ್ದಾರೆ.

ಭಾನುವಾರ ನಸುಕಿನ ಜಾವ ಹೆರಿಗೆ ನೋವು ಕಾಣಿಸಿಕೊಂಡಿದೆ. ತಕ್ಷಣ ಸೈಕಲ್ ಏರಿ ಆಸ್ಪತ್ರೆಗೆ ದೌಡಾಯಿಸಿದ್ದಾರೆ. ಆಸ್ಪತ್ರೆ ತಲುಪಿದ 1 ಗಂಟೆಯ ಬಳಿಕ ಮಗುವಿಗೆ ಜನ್ಮ ನೀಡಿದ್ದಾರೆ ಎಂದು ಸುದ್ದಿಸಂಸ್ಥೆ ವರದಿ ಮಾಡಿದೆ.

ಆರೋಗ್ಯಯುತ ಹೆರಿಗೆ ಮೂಲಕ 2ನೇ ಮಗುವಿಗೆ ಜನ್ಮ ನೀಡಿದ ಸಂಸದೆ ಜ್ಯೂಲಿ 2018ರಲ್ಲಿ ಮೊದಲ ಹೆರಿಗೆ ಸಂದರ್ಭವೂ ಹೀಗೆ ಸೈಕಲ್ ಮೂಲಕ ಆಸ್ಪತ್ರೆಗೆ ಬಂದಿದ್ದರು.

ಮಗುವಿಗೆ ಜನ್ಮ ನೀಡಿದ ಬಳಿಕ ಜ್ಯೂಲಿ, ಫೇಸ್‌ಬುಕ್‌ನಲ್ಲಿ ಖುಷಿಯ ಸಮಾಚಾರ ಹಂಚಿಕೊಂಡಿದ್ದಾರೆ. ‘ಬೆಳಿಗ್ಗೆ 3.04 ಗಂಟೆಗೆ ಸರಿಯಾಗಿ ನಮ್ಮ ಕುಟುಂಬಕ್ಕೆ ಹೊಸ ಸದಸ್ಯನನ್ನು ಆಹ್ವಾನಿಸಿಕೊಂಡೆವು. ಹೆರಿಗೆ ಆಸ್ಪತ್ರೆಗೆ ಸೈಕಲ್‌ನಲ್ಲಿ ಬರುವ ಬಗ್ಗೆ ಯೋಜನೆ ಹಾಕಿಕೊಂಡಿರಲಿಲ್ಲ. ಆದರೆ ಕೊನೆಗೆ ಸೈಕಲ್‌ನಲ್ಲೇ ಆಸ್ಪತ್ರೆಗೆ ಬಂದಿದ್ದಾಯ್ತು’ ಎಂದು ವಿವರಿಸಿದ್ದಾರೆ.

‘ಮಧ್ಯರಾತ್ರಿ 2ಕ್ಕೆ ಮನೆಯಿಂದ ಹೊರಟಾಗ ಹೆಚ್ಚು ನೋವು ಇರಲಿಲ್ಲ. ಸೈಕಲ್ ಏರಿ ಆಸ್ಪತ್ರೆಗೆ ಹೊರಟೆವು (ಪತಿಯ ಜೊತೆ). 10 ನಿಮಿಷದೊಳಗೆ ಆಸ್ಪತ್ರೆ ಸೇರಿದೆವು. ಸುಲಲಿತವಾಗಿ ಹೆರಿಗೆಯಾಯಿತು. ಆಸ್ಪತ್ರೆಯ ತಂಡಕ್ಕೆ ಧನ್ಯವಾದ’ ಎಂದು ಜ್ಯೂಲಿ ತಿಳಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

ಭಾರತ, ಶ್ರೀಲಂಕಾ, ಮಾಲ್ದೀವ್ಸ್ ಜಂಟಿ ಕಡಲಾಭ್ಯಾಸ ಅಂತ್ಯ

ಕೊಲಂಬೊ (ಪಿಟಿಐ): ಮಾಲ್ದೀವ್ಸ್‌ನಲ್ಲಿ ಎರಡು ದಿನಗಳಿಂದ ನಡೆಯುತ್ತಿದ್ದ ಭಾರತ, ಶ್ರೀಲಂಕಾ ಮತ್ತು ಮಾಲ್ದೀವ್ಸ್ ದೇಶಗಳನ್ನು ಒಳಗೊಂಡ ಕರಾವಳಿ ರಕ್ಷಣಾ ಪಡೆಗಳ ಕಡಲ ತಾಲೀಮು ಭಾನುವಾರ ಕೊನೆಗೊಂಡಿದೆ.


ಸಾಂದರ್ಭಿಕ ಚಿತ್ರ

ಹಿಂದೂ ಮಹಾಸಾಗರದಲ್ಲಿ ರಕ್ಷಣೆಯನ್ನು ಹೆಚ್ಚಿಸಲು, ಪರಸ್ಪರ ಕಾರ್ಯಾಚರಣೆಯ ಸಾಮರ್ಥ್ಯವನ್ನು ಗುರುತಿಸುವ ಸಲುವಾಗಿ ಈ ಅಭ್ಯಾಸ ನಡೆಯಿತು.

ಪ್ರತಿ ಎರಡು ವರ್ಷಗಳಿಗೊಮ್ಮೆ ಇಂತಹ ತಾಲೀಮು ನಡೆಯುತ್ತಿದ್ದು, ಇದು 15ನೇ ಆವೃತ್ತಿಯಾಗಿತ್ತು.

ಉತ್ತರ ಪೆರು: 7.5 ತೀವ್ರತೆಯ ಭೂಕಂಪ

ಲಿಮಾ (ಎಪಿ): ಉತ್ತರ ಪೆರುವಿನಲ್ಲಿ 7.5 ರಷ್ಟು ತೀವ್ರತೆಯ ಪ್ರಬಲ ಭೂಕಂಪ ಸಂಭವಿಸಿದೆ ಎಂದು ಅಮೆರಿಕದ ಜಿಯೋಲಾಜಿಕಲ್ ಸರ್ವೆ ಹೇಳಿದೆ.

ಸ್ಥಳೀಯ ಕಾಲಮಾನ ಭಾನುವಾರ ಬೆಳಿಗ್ಗೆ 5:52ಕ್ಕೆ ಭೂಕಂಪ ಸಂಭವಿಸಿದೆ. ‘ಇದು ಅತ್ಯಂತ ಪ್ರಬಲವಾಗಿದ್ದರೂ, 112 ಕಿಲೋಮೀಟರ್‌ಗಳಲ್ಲಿ ಆಳದಲ್ಲಿ ಕಂಪನದ ಕೇಂದ್ರ ಬಿಂದು ಇದ್ದುದರಿಂದ ಹಾನಿಯ ತೀವ್ರತೆ ಕಡಿಮೆ ಇದೆ ಎಂದು ಅದು ತಿಳಿಸಿದೆ.

ಮೆಕ್ಸಿಕೊ: ಗುಂಡಿನ ಚಕಮಕಿ– 8 ಸಾವು

ಮೆಕ್ಸಿಕೋ ಸಿಟಿ (ಎಪಿ): ಮಧ್ಯ ಮೆಕ್ಸಿಕೋದ ಝಕಾಟೆಕಾಸ್ ರಾಜ್ಯದಲ್ಲಿ ನಡೆದ ಗುಂಡಿನ ಚಕಮಕಿಯಲ್ಲಿ ಎಂಟು ಮಂದಿ ಸಾವನ್ನಪ್ಪಿದ್ದಾರೆ.

ಜಲಿಸ್ಕೋ ರಾಜ್ಯದ ಗಡಿಯ ಸಮೀಪದಲ್ಲಿರುವ ವಾಲ್ಪರೈಸೋ ಪಟ್ಟಣದ ಬಳಿ ಶೂಟೌಟ್ ನಡೆದಿದ್ದು, ಘಟನಾ ಸ್ಥಳದಲ್ಲಿ ವಾಹನಗಳು ಮತ್ತು ಬಂದೂಕುಗಳು ಪತ್ತೆಯಾಗಿವೆ ಎಂದು ರಾಜ್ಯ ಸರ್ಕಾರಿ ವಕೀಲರು ಶನಿವಾರ ತಿಳಿಸಿದ್ದಾರೆ.

ಜಕಾಟೆಕಾಸ್‌ನ ಹೆದ್ದಾರಿಯ ಮೇಲ್ಸೇತುವೆಯಲ್ಲಿ ಮೂರು ಮೃತದೇಹಗಳನ್ನು ನೇತುಹಾಕಿರುವುದನ್ನು ಪೊಲೀಸರು ಪತ್ತೆಹಚ್ಚಿದ ಮೂರು ದಿನಗಳ ನಂತರ ಈ ಶೂಟೌಟ್ ನಡೆದಿದೆ. ಇದಕ್ಕೂ ಒಂದು ವಾರ ಮೊದಲು 10 ಮೃತದೇಹಗಳು ಮೇಲ್ಸೇತುವೆಯಲ್ಲಿ ಪತ್ತೆಯಾಗಿದ್ದವು.

‘ಮುರುಗೇಶ ನಿರಾಣಿ ಸಿ.ಎಂ ಆಗ್ತಾರೆ’

ಒಂದನೇ ಪುಟದಿಂದ

‘ನಾನು ಹೀಗೆ ಹೇಳಿದೆ ಅಂತ, ನಾಳೆಯೇ ನಿರಾಣಿ ಮುಖ್ಯಮಂತ್ರಿ ಆಗುತ್ತಾರೆ. ಈಗಿರುವ ಮುಖ್ಯಮಂತ್ರಿ ಬಸವರಾಜ ಬೊಮ್ಮಯಿ ಅವರನ್ನು ತೆಗೆದುಬಿಡುತ್ತಾರೆ ಎಂದು ಪತ್ರಕರ್ತರು ಬರೆದು ಬಿಡಬಾರದು’ ಎಂದು ಚಟಾಕಿ ಹಾರಿಸಿದರು. ‘ರಾಜ್ಯದ ಮುಖ್ಯಮಂತ್ರಿ ಆಗುವ ಅರ್ಹತೆ ಮುರುಗೇಶ ನಿರಾಣಿ ಅವರಿಗೆ ಇದೆ. ಅವರಿಗೆ ರಾಜ್ಯವನ್ನು ಮುನ್ನಡೆಸುವ ಶಕ್ತಿ ಇದೆ. ಒಂದಲ್ಲೊಂದು ದಿನ ಆ ಸ್ಥಾನಕ್ಕೆ ಬರಲಿದ್ದಾರೆ’ ಎಂದು ಪುನರುಚ್ಚರಿಸಿದರು.

‘ರಾಜ್ಯದಲ್ಲಿ ಹಿಂದುಳಿದ ವರ್ಗದವರಿಗೆ ನ್ಯಾಯ ಕೊಡುವ ನಾಯಕ ಮುಖ್ಯಮಂತ್ರಿ ಆಗಬೇಕು ಎಂಬುದು ಬಹುತೇಕ ಜನತೆಯ ಆಶಯವಾಗಿದೆ. ನಿರಾಣಿ ಅವರು ಮುಖ್ಯಮಂತ್ರಿಯಾದರೆ ಖಂಡಿತವಾಗಿ ಎಲ್ಲರಿಗೂ ನ್ಯಾಯ ಕೊಡಿಸುವ ಕೆಲಸ ಮಾಡಲಿದ್ದಾರೆ’ ಎಂದು ಹೇಳಿದರು.

‘ನೀವು (ನಿರಾಣಿ) ಸಿ.ಎಂ ಆದರೆ, ಹಿಂದುಳಿದಿರುವ ವರ್ಗಕ್ಕೆ ನ್ಯಾಯ ಕೊಡುತ್ತೀರಾ’ ಎಂದು ಸಚಿವರನ್ನು ಈಶ್ವರಪ್ಪ ಪ್ರಶ್ನಿಸಿದಾಗ, ವೇದಿಕೆಯಲ್ಲಿದ್ದ ನಿರಾಣಿ, ‘ಖಂಡಿತವಾಗಿಯೂ ಮಾಡೇ ಮಾಡುತ್ತೇನೆ’ ಎಂದು ವಿಜೇಯದ ಸಂಕೇತ ತೋರಿದರು.

ನಿರಾಣಿ ಅವರು ಮುಖ್ಯಮಂತ್ರಿ ಅಗಲಿದ್ದಾರೆ ಎಂದು ಈಶ್ವರಪ್ಪ ಹೇಳುತ್ತಿದ್ದಂತೆ ಸಭೆಯಲ್ಲಿ ನೆರೆದಿದ್ದ ಕಾರ್ಯಕರ್ತರು ಜೈಕಾರ ಹಾಕಿ, ಚಪ್ಪಾಳೆ ಹೊಡೆದರು. 'ಮುಂದಿನ ಮುಖ್ಯಮಂತ್ರಿ ಮುರುಗೇಶ್ ನಿರಾಣಿ ಅವರಿಗೆ ಶುಭವಾಗಲಿ' ಎಂದು ಘೋಷಣೆ ಕೂಗಿದರು.

ಕೈಗೆಟುಕದ ‘ದುಬಾರಿ’ ವೆಚ್ಚದ ಚಿಕಿತ್ಸೆ

ಒಂದನೇ ಪುಟದಿಂದ

ಬಿಪಿಎಲ್ ಕುಟುಂಬದ ಸದಸ್ಯರಿಗೆ ಯೋಜನೆಯಡಿ ಸಂಕೀರ್ಣ ಚಿಕಿತ್ಸೆಗಳನ್ನೂ ಉಚಿತವಾಗಿ ಒದಗಿಸಲು ಅವಕಾಶವಿದೆ.

ಎಪಿಎಲ್ ಕುಟುಂಬದ ಸದಸ್ಯರಿಗೆ ಚಿಕಿತ್ಸಾ ವೆಚ್ಚದ ಶೇ 30 ರಷ್ಟು ಹಣವನ್ನು ಪಾವತಿಸಲಾಗುತ್ತದೆ.

ಯೋಜನೆಯಡಿ ಮೂರು ವರ್ಷಗಳಲ್ಲಿ 21 ಲಕ್ಷಕ್ಕೂ ಅಧಿಕ ಮಂದಿಗೆ ಚಿಕಿತ್ಸೆ ಒದಗಿಸಿದ್ದರೂ, ಹೆಚ್ಚಿನವು ತಾಲ್ಲೂಕು ಮಟ್ಟದಲ್ಲಿ ದೊರೆಯುವ ಚಿಕಿತ್ಸೆಯಾಗಿವೆ.

ಅವಕಾಶವಿದ್ದರೂ ಚಿಕಿತ್ಸೆಯಿಲ್ಲ: ಈ ಹಿಂದೆ ‘ಯಶಸ್ವಿನಿ’ ಯೋಜನೆಯಡಿ ಫಲಾನುಭವಿಗಳು ನೋಂದಾಯಿತ ಸರ್ಕಾರಿ ಅಥವಾ ಖಾಸಗಿ ಆಸ್ಪತ್ರೆಗಳಿಗೆ ತೆರಳಿ, ನೇರವಾಗಿ ಅಗತ್ಯ ಚಿಕಿತ್ಸೆಗಳನ್ನು ಪಡೆಯಬಹುದಿತ್ತು.

ಆದರೆ, ಹೊಸ ಯೋಜನೆಯಡಿ ಚಿಕಿತ್ಸೆ ಪಡೆಯಲು ರೋಗಿಯು ನೇರವಾಗಿ ಸರ್ಕಾರಿ ಆಸ್ಪತ್ರೆಗೆ ತೆರಳಬೇಕು. ಅಲ್ಲಿ ಚಿಕಿತ್ಸೆ ಲಭ್ಯವಿರದಿದ್ದಲ್ಲಿ ಶಿಫಾರಸು ಮಾಡುವ ನೋಂದಾಯಿತ ಆಸ್ಪತ್ರೆಗೆ ಹೋಗಬೇಕು. ಇದರಿಂದಾಗಿ ಫಲಾನುಭವಿಗಳು ಚಿಕಿತ್ಸೆ ಪಡೆಯಲು ಸಮಸ್ಯೆ ಎದುರಿಸುವಂತಾಗಿದೆ.

‘ತಜ್ಞ ವೈದ್ಯರು ಹಾಗೂ ಮೂಲಸೌಕರ್ಯದ ಕೊರತೆಯಿಂದ ಸಂಕೀರ್ಣ ಹಾಗೂ ದುಬಾರಿ ವೆಚ್ಚದ ಚಿಕಿತ್ಸೆಗಳನ್ನು ರೋಗಿಗಳಿಗೆ ಒದಗಿಸುವುದು ಸವಾಲಾಗಿದೆ. ಸದ್ಯ ಜಾರಿಯಲ್ಲಿರುವ ವೈದ್ಯಕೀಯ ಕಾಯ್ದೆಗಳೂ ಚಿಕಿತ್ಸೆಗೆ ತೊಡಕಾಗಿವೆ. ತೃತೀಯ ಹಂತದ ಕಾಯಿಲೆಗಳಿಗೆ ದುಬಾರಿ ಚಿಕಿತ್ಸೆ ಒದಗಿಸಲು ಕೆಲವು ಅಡೆತಡೆಗಳಿವೆ. ಹೀಗಾಗಿ, ಯೋಜನೆಯಡಿ ಫಲಾನುಭವಿಗಳಿಗೆ ದುಬಾರಿ ಚಿಕಿತ್ಸೆ ದೊರೆಯುತ್ತಿಲ್ಲ’ ಎಂದು ಇಲ್ಲಿನ ಸರ್ಕಾರಿ ವೈದ್ಯಕೀಯ ಸಂಸ್ಥೆಯ ಮುಖ್ಯಸ್ಥರೊಬ್ಬರು ತಿಳಿಸಿದರು.

ಐಟಿಎಫ್ ವಿಶ್ವ ಮಹಿಳಾ ಟೆನಿಸ್ ಟೂರ್ ಅರ್ಹತಾ ಪಂದ್ಯಗಳು: ಸಿಂಗ್ಲಾ ಮುನ್ನಡೆ

ಎರಡನೇ ಸುತ್ತಿಗೆ ಲಾಲಿತ್ಯ ಲಗ್ಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಾಲ್ಕನೇ ಹಾಗೂ ಆರನೇ ಶ್ರೇಯಾಂಕದ ಆಟಗಾರ್ತಿಯರಿಗೆ ಆಘಾತ ನೀಡಿದ ರೆನ್ನೆ ಸಿಂಗ್ಲಾ ಹಾಗೂ ಲಾಲಿತ್ಯ ಕಲ್ಲೂರಿ ಅವರು ಐಟಿಎಫ್ ಐಟಿಎಫ್ ವಿಶ್ವ ಮಹಿಳಾ ಟೆನಿಸ್ ಟೂರ್ ಚಾಂಪಿಯನ್‌ಷಿಪ್ ಅರ್ಹತಾ ಟೂರ್ನಿಯಲ್ಲಿ ಎರಡನೇ ಸುತ್ತು ಪ್ರವೇಶಿಸಿದರು.

ಕರ್ನಾಟಕ ರಾಜ್ಯ ಲಾನ್ ಟೆನಿಸ್ ಸಂಸ್ಥೆಯ (ಕೆಎಸ್‌ಎಲ್‌ಟಿಎ) ಕ್ರೀಡಾಂಗಣದಲ್ಲಿ ಭಾನುವಾರ ಆರಂಭವಾದ ಟೂರ್ನಿಯ ಅರ್ಹತಾ ಸುತ್ತಿನ ಮೊದಲ ಪಂದ್ಯದಲ್ಲಿ ರೆನ್ನೆ 6-4, 7-5ರಿಂದ ನಾಲ್ಕನೇ ಸ್ಮೃತಿ ಭಾಸಿನ್ ಅವರನ್ನು ಮಣಿಸಿದರು. 17 ವರ್ಷದ ಆಟಗಾರ್ತಿ ರೆನ್ನೆ ಹರಿಯಾಣದವರು.

ಇನ್ನೊಂದು ಹಣಾಹಣಿಯಲ್ಲಿ ಮಹಾರಾಷ್ಟ್ರದ ಲಾಲಿತ್ಯ 6-1, 2-6, 10-6ರಿಂದ ಆರನೇ ಶ್ರೇಯಾಂಕದ ನಿದಿತ್ರಾ ರಾಜ್‌ಮೋಹನ್ ಎದುರು ಗೆದ್ದು ಬೀಗಿದರು.

ಮೊದಲ ಸೆಟ್ ಸುಲಭವಾಗಿ ಗೆದ್ದ ಲಾಲಿತ್ಯ ಅವರಿಗೆ ನಿದಿತ್ರಾ ಎರಡನೇ ಸೆಟ್‌ನಲ್ಲಿ ತಿರುಗೇಟು ನೀಡಿದರು. ನಿರ್ಣಾಯಕ ಸೆಟ್‌ಅನ್ನು ಸುಲಭವಾಗಿ ಗೆದ್ದ ಲಾಲಿತ್ಯ ಪಂದ್ಯವನ್ನು ತಮ್ಮದಾಗಿಸಿಕೊಂಡರು.

ಮೊದಲ ಸುತ್ತಿನ ಇನ್ನುಳಿದ ಪಂದ್ಯಗಳಲ್ಲಿ ಚಂದನಾ ಪೋತುಗರಿ 6-2, 6-4ರಿಂದ ಶ್ರೇಯಾ ತಟವರ್ತಿ ಎದುರು, ಸೋನಾಷೆ ಭಟ್ನಾಗರ್ 6-2, 6-3ರಿಂದ ಹೃದಯೇಶಿ ಪೈ ವಿರುದ್ಧ, ಸಾಯಿ ಸ್ಮಿತಾ 6-1, 6-3ರಿಂದ ಕೃತಿ ತೋಮರ್ ಎದುರು, ಪೂಜಾ ಇಂಗಳೆ 6-0, 6-4ರಿಂದ ಆವಿಷ್ಕಾ ಗುಪ್ತಾ ವಿರುದ್ಧ, ಪ್ರತಿಭಾ ನಾರಾಯಣ್ ಪ್ರಸಾದ್ 6-1, 6-0ರಿಂದ ರಾಧಿಕಾ ಯಾದವ್ ವಿರುದ್ಧ ಜಯ ಗಳಿಸಿದರು.

ಯಶಿಕಾ ವೇಣು 6-2, 2-6, 10-8ರಿಂದ ಪಿ. ಮೇಘನಾ ಎದುರು, ಪ್ರತ್ಯೂಷಾ ರಾಚಪುಡಿ 6-0, 6-1ರಿಂದ ಶಿಲ್ಪಾ ಸ್ವರೂಪಾ ದಾಸ್ ಎದುರು ಗೆಲುವು ಸಾಧಿಸಿದರು.

ಎರಡನೇ ಸುತ್ತಿನಲ್ಲಿ ಜಯ ಗಳಿಸಿದ ಆಟಗಾರ್ತಿಯರು, ಮಂಗಳವಾರ ಆರಂಭವಾಗಲಿರುವ ಚಾಂಪಿಯನ್‌ಷಿಪ್‌ನ ಮುಖ್ಯ ಸುತ್ತಿಗೆ ಅರ್ಹತೆ ಗಳಿಸಲಿದ್ದಾರೆ.



ಲಾಲಿತ್ಯ ಕಲ್ಲೂರಿ ಆಟದ ವೈಖರಿ

ಪವರ್ ಲಿಫ್ಟಿಂಗ್: ಪರಮ್‌ಜೀತ್‌ಗೆ ಕಂಚಿನ ಪದಕ

ನವದೆಹಲಿ (ಪಿಟಿಐ): ಪ್ಯಾರಾ ಪವರ್‌ಲಿಫ್ಟಿಂಗ್ ಪಟು ಪರಮ್‌ಜೀತ್ ಕುಮಾರ್ ಅವರು ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಕಂಚಿನ ಪದಕ ಗೆದ್ದುಕೊಂಡಿದ್ದಾರೆ. ಈ ಸಾಧನೆ ಮಾಡಿದ ಭಾರತದ ಮೊದಲ ಪಟು ಎನಿಸಿಕೊಂಡಿದ್ದಾರೆ.

ಜಾರ್ಜಿಯಾದ ಟಿಲಿಸಿಯಲ್ಲಿ ನಡೆದ ಚಾಂಪಿಯನ್‌ಷಿಪ್‌ನ 49 ಕೆಜಿ ವಿಭಾಗದಲ್ಲಿ ಅವರು 158 ಕೆಜಿ ಭಾರ ಎತ್ತಿದರು.ಪಂಜಾಬ್‌ನ ಪರಮ್‌ಜೀತ್ ಅವರ ಸಾಧನೆಗೆ ಭಾರತ ಪ್ಯಾರಾಲಿಂಪಿಕ್ ಸಮಿತಿಯ ಅಧ್ಯಕ್ಷೆ ದೀಪಾ ಮಲಿಕ್ ಟ್ವಿಟರ್‌ನಲ್ಲಿ ಅಭಿನಂದನೆ ಸಲ್ಲಿಸಿದ್ದಾರೆ.

ಟೆನಿಸ್: ರಾಮಕುಮಾರ್‌ಗೆ ಪ್ರಶಸ್ತಿ

ಮನಾಮ, ಬಹರೇನ್ (ಪಿಟಿಐ): ಭಾರತದ ರಾಮಕುಮಾರ್ ರಾಮನಾಥನ್ ಅವರು ಚಾಲೆಂಜರ್ಸ್ ಹಂತದ ಟೆನಿಸ್ ಟೂರ್ನಿಯಲ್ಲಿ ಮೊದಲ ಬಾರಿಗೆ ಪುರುಷರ ಸಿಂಗಲ್ಸ್ ಪ್ರಶಸ್ತಿ ಜಯಿಸಿದರು.

ಮನಾಮದಲ್ಲಿ ಭಾನುವಾರ ನಡೆದ ಎಟಿಪಿ80 ಚಾಲೆಂಜರ್ಸ್ ಫೈನಲ್‌ನಲ್ಲಿ 6-1, 6-4ರಿಂದ ರಷ್ಯಾದ ಇವಾಗ್ನಿ ಕಾರ್ಲೋವಸ್ಕಿ ವಿರುದ್ಧ ಜಯಿಸಿದರು. 27 ವರ್ಷದ ರಾಮಕುರ್ಮಾ ಈ ಟೂರ್ನಿಯಲ್ಲಿ ಆರನೇ ಶ್ರೇಯಾಂಕದ ಆಟಗಾರನಾಗಿ ಕಣಕ್ಕಿಳಿದಿದ್ದರು. ವಿಶ್ವ ಶ್ರೇಯಾಂಕದಲ್ಲಿ 222ನೇ ಸ್ಥಾನದಲ್ಲಿದ್ದಾರೆ.ವೃತ್ತಿಪರ ಟೆನಿಸ್‌ಗೆ ಕಾಲಿಟ್ಟು 12 ವರ್ಷಗಳ ನಂತರ ಅವರು ಈ ಸಾಧನೆ ಮಾಡಿದ್ದಾರೆ. ಈ ಜಯದೊಂದಿಗೆ 80 ರ‍್ಯಾಂಕಿಂಗ್ ಅಂಕಗಳನ್ನು ಪಡೆದ ಅವರು 200 ರ‍್ಯಾಂಕ್‌ನೊಳಗೆ ಸ್ಥಾನ ಪಡೆದರು. ಇದರೊಂದಿಗೆ ವಿಶ್ವ ಶ್ರೇಯಾಂಕದಲ್ಲಿ ಅಗ್ರ ರ‍್ಯಾಂಕ್ ಪಡೆದ ಭಾರತದ ಆಟಗಾರನಾಗಿದ್ದಾರೆ. ಅವರ ನಂತರದ ಸ್ಥಾನಗಳಲ್ಲಿ ಪ್ರಜ್ನೇಶ್ ಗುಣೇಶ್ವರನ್ (215) ಮತ್ತು ಸುಮಿತ್ ನಗಾಲ್ (219) ಇದ್ದಾರೆ.



ರಾಮಕುಮಾರ್ ರಾಮನಾಥನ್

ವಾನ್ ಕ್ಷಮೆಯಾಚನೆ

ಲಂಡನ್ (ಎಪಿ): ಯಾರ್ಕ್‌ಶೈರ್ ಕ್ರಿಕೆಟ್ ಕ್ಲಬ್‌ನಲ್ಲಿ ನಡೆದಿದ್ದೆನ್ನಲಾದ ಜನಾಂಗೀಯ ನಿಂದನೆ ಪ್ರಕರಣದ ಕುರಿತು ಇಂಗ್ಲೆಂಡ್ ತಂಡದ ಮಾಜಿ ನಾಯಕ ಮೈಕೆಲ್ ವಾನ್ ಕ್ಷಮೆ ಯಾಚಿಸಿದ್ದಾರೆ.

ಬಿಬಿಸಿಯ ಸಂದರ್ಶನದಲ್ಲಿ ವಾನ್, ‘ಜನಾಂಗೀಯ ನಿಂದನೆಗೆ ಅಜೀಂ ರಫೀಕ್ ಅವರ ಮನಸ್ಸಿಗೆ ಅದೆಷ್ಟು ನೋವಾಗಿರಬಹುದು ಎಂಬು ದನ್ನು ಅರ್ಥ ಮಾಡಿಕೊಳ್ಳಬಲ್ಲೆ. ಅಮಾನವೀಯ ಘಟನೆ ಇದಾಗಿದೆ. ಅದಕ್ಕಾಗಿ ಕ್ಷಮೆ ಯಾಚಿಸುವೆ’ ಎಂದಿದ್ದಾರೆ.

ಫುಟ್‌ಬಾಲ್: ಬಿಎಫ್‌ಸಿ ಅಕಾಡೆಮಿ, ಕಿಕ್‌ಸ್ಟಾರ್ಟ್‌ಗೆ ಜಯ

ಬೆಂಗಳೂರು: ಭರ್ಜರಿ ಆಟವಾಡಿದ ಬಿಎಫ್‌ಸಿ ಅಕಾಡೆಮಿ ಹಾಗೂ ಕಿಕ್‌ಸ್ಟಾರ್ಟ್ ಎಫ್‌ಸಿ ತಂಡಗಳು ಕೆಎಸ್‌ಎಫ್‌ಎ ಯೂತ್ ಪ್ರೀಮಿಯರ್ ಫುಟ್‌ಬಾಲ್ ಲೀಗ್ ಚಾಂಪಿಯನ್‌ಷಿಪ್‌ನಲ್ಲಿ ಭಾನುವಾರ ಜಯಭೇರಿ ಮೊಳಗಿಸಿದವು.

ಎಚ್‌ಎಎಲ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಬಿಎಫ್‌ಸಿ ಅಕಾಡೆಮಿ 6–0ಯಿಂದ ಬೆಂಗಳೂರು ಯುನೈಟೆಡ್ ತಂಡವನ್ನು ಮಣಿಸಿತು. ವಿಜೇತ ತಂಡದ ಅತುಲ್ ಬಿ ಪುಲಿಪ್ರಾ (9 ಹಾಗೂ 29ನೇ ನಿಮಿಷ) ಮತ್ತು ಟಿ. ಪ್ರೇಮಿಶ್ (62 ಮತ್ತು 65ನೇ ನಿಮಿಷ) ತಲಾ ಎರಡು ಗೋಲು ದಾಖಲಿಸಿ ಮಿಂಚಿದರು. ಇನ್ನೊಂದು ಗೋಲು ಆರ್ಯನ್ ಬ್ರುವೇಶ್ (22ನೇ ನಿಮಿಷ) ಹೊಡೆದರು. ಎದುರಾಳಿ ತಂಡದ ಇ. ತೇಜಸ್ (30ನೇ ನಿ) ‘ಉಡುಗೊರೆ ಗೋಲು’ ನೀಡಿದರು.

ಮತ್ತೊಂದು ಪಂದ್ಯದಲ್ಲಿ ಕಿಕ್‌ಸ್ಟಾರ್ಟ್ ಎಫ್‌ಸಿ 6–0ಯಿಂದ ಬಿಬಿಎಫ್‌ಎಸ್ ತಂಡವನ್ನು ಸೋಲಿಸಿತು. ಬಿಬಿಎಫ್‌ಎಸ್ ತಂಡದ ಕಿಶೋರ್ ನಾಥ್ (40, 60 ಹಾಗೂ 73ನೇ ನಿಮಿಷ) ಹ್ಯಾಟ್ರಿಕ್ ಗೋಲು ಗಳಿಸಿ ದರು.

ಎಫ್‌ಎಸ್‌ವಿ ಅರೆನಾದಲ್ಲಿ ನಡೆದ ಪಂದ್ಯದಲ್ಲಿ ಬೊಕಾ ಜೂನಿಯರ್ಸ್ ತಂಡವು 2–0ಯಿಂದ ರಾಮನ್ ಎಸ್.ಎ. ಎದುರು, ಬಿವೈಎಫ್‌ಎಲ್ 3–0ಯಿಂದ ಸ್ಪೋರ್ಟ್ಸ್‌ಹುಡ್ ವಿರುದ್ಧ ಗೆದ್ದವು.

ಎಸ್‌ಯುಎಫ್‌ಸಿ ಆರ್‌ಬಿಎಎನ್‌ಎಮ್‌ಎಸ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ವಿಎಎಸ್ ಫುಟ್‌ಬಾಲ್ ಅಕಾಡೆಮಿ 4–0ಯಿಂದ ಬ್ಲ್ಯಾಕ್ ಪ್ಯಾಂಥರ್ಸ್ ಎದುರು ಗೆದ್ದಿತು.

ಬ್ಯಾಡ್ಮಿಂಟನ್: ಅಕ್ಸೆಲ್ಸನ್‌ಗೆ ಪ್ರಶಸ್ತಿ

ಬಾಲಿ (ಎಎಫ್‌ಪಿ): ಒಲಿಂಪಿಕ್ ಚಿನ್ನದ ಪದಕವಿಜೇತ, ಡೆನ್ಮಾರ್ಕಿನ ವಿಕ್ಟರ್ ಅಕ್ಸೆಲ್ಸನ್ ಇಂಡೊನೇಷ್ಯಾ ಓಪನ್ ಬ್ಯಾಡ್ಮಿಂಟನ್ ಟೂರ್ನಿಯ ಪುರುಷರ ಸಿಂಗಲ್ಸ್ ಪ್ರಶಸ್ತಿ ಗೆದ್ದುಕೊಂಡರು.

ಭಾನುವಾರ ನಡೆದ ಫೈನಲ್‌ನಲ್ಲಿ 27 ವರ್ಷದ ವಿಕ್ಟರ್ 21–13, 9–21, 21–13 ರಿಂದ ಸಿಂಗಪುರದ ಲೋಹ್ ಕೀನ್ ಯೆವ್ ವಿರುದ್ಧ ಜಯಿಸಿದರು.

59 ನಿಮಿಷಗಳ ಹೋರಾಟದಲ್ಲಿ ವಿಕ್ಟರ್ ಮೇಲುಗೈ ಸಾಧಿಸಿದರು.

ಮಹಿಳೆಯರ ಸಿಂಗಲ್ಸ್‌ನಲ್ಲಿ ದಕ್ಷಿಣ ಕೊರಿಯಾದ ಎನ್ ಸೆ ಯಂಗ್ ಪ್ರಶಸ್ತಿ ಜಯಿಸಿದರು.

ಫೈನಲ್‌ನಲ್ಲಿ ಅವರು 21–17, 22–20ರಿಂದ ಥಾಯ್ಲೆಂಡ್‌ನ ರಚನಾಕ್ ಇಂಟನಾನ್ ವಿರುದ್ಧ ಗೆದ್ದರು.

ಇಂಟನಾನ್ ಅವರು ಸೆಮಿಫೈನಲ್‌ನಲ್ಲಿ ಭಾರತದ ಪಿ.ವಿ. ಸಿಂಧು ವಿರುದ್ಧ ಜಯಿಸಿದ್ದರು.



ಪ್ರಶಸ್ತಿಯೊಂದಿಗೆ ವಿಕ್ಟರ್ ಅಕ್ಸೆಲ್ಸನ್ ಸಂಭ್ರಮ

ವಿಶ್ವ ಟಿಟಿ: ಭಾರತ ತಂಡಗಳಿಗೆ ಸೋಲು

ಹ್ಯೂಸ್ಟನ್: ಭಾರತದ ಮಹಿಳಾ ಡಬಲ್ಸ್ ಮತ್ತು ಮಿಶ್ರ ಡಬಲ್ಸ್ ವಿಭಾಗದ ತಂಡಗಳು ವಿಶ್ವ ಟೇಬಲ್ ಟೆನಿಸ್ ಚಾಂಪಿಯನ್‌ಷಿಪ್‌ನಲ್ಲಿ ಸೋಲು ಅನುಭವಿಸಿದವು. ಇದರೊಂದಿಗೆ ಇತಿಹಾಸ ನಿರ್ಮಿಸುವ ಮಣಿಕಾ ಬಾತ್ರಾ ಅವರ ಕನಸು ಕೈಗೂಡಲಿಲ್ಲ.

ಮಿಶ್ರ ಡಬಲ್ಸ್ ವಿಭಾಗದ ಕ್ವಾರ್ಟರ್‌ಫೈನಲ್‌ನಲ್ಲಿ ಭಾರತದ ಮಣಿಕಾ ಹಾಗೂ ಜಿ. ಸತ್ಯನ್ 5-11, 2-11, 11-7, 9-11ರಿಂದ ಜಪಾನ್‌ನ ತೊಮಕಾಜು ಹರಿಮೊಟೊ ಮತ್ತು ಹೀನಾ ಹಯಾಟಾ ಎದುರು ನಿರಾಸೆ ಅನುಭವಿಸಿದರು.

ಮಹಿಳಾ ಡಬಲ್ಸ್‌ನಲ್ಲಿ ಅರ್ಚನಾ ಕಾಮತ್ ಜೊತೆಗೂಡಿದ್ದ ಮಣಿಕಾ, ಎಂಟರಘಟ್ಟದ ಹಣಾಹಣಿಯಲ್ಲಿ 1-11, 6-11, 8-11ರಿಂದ ಲಕ್ಷೆಂಬರ್ಗ್‌ನ ಸಾರಾ ಡಿ ನಟ್ ಮತ್ತು ನಿ ಕ್ಸಿಯಾ ಲಿಯಾನ್ ವಿರುದ್ಧ ಸೋಲನುಭವಿಸಿದರು.

ಈ ಎರಡೂ ಪಂದ್ಯಗಳಲ್ಲಿ ಗೆಲುವು ಸಾಧಿಸಿದ್ದರೆ, ಮಣಿಕಾ ಅವರಿಗೆ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಐತಿಹಾಸಿಕ ಪದಕ ಖಚಿತವಾಗುತ್ತಿತ್ತು.

ಈ ಟೂರ್ನಿಯಲ್ಲಿ ನಾಲ್ಕರ ಘಟ್ಟದ ಪಂದ್ಯಗಳಲ್ಲಿ ಸೋತವರಿಗೂ ಕಂಚಿನ ಪದಕ ನೀಡಲಾಗುತ್ತದೆ.



ಮಣಿಕಾ ಬಾತ್ರಾ ಪಿಟಿಐ ಚಿತ್ರ

ಶುಭಾಂಗ್ ಆಲ್‌ರೌಂಡ್ ಆಟ: ನಾಕೌಟ್ ಹಂತಕ್ಕೆ ಕರ್ನಾಟಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶುಭಾಂಗ್ ಹೆಗ್ಡೆ (37ಕ್ಕೆ 3 ವಿಕೆಟ್, ಔಟಾಗದೆ 44 ರನ್) ಅವರ ಆಲ್‌ರೌಂಡ್ ಆಟದ ನೆರವಿನಿಂದ ಕರ್ನಾಟಕ ತಂಡವು 25 ವರ್ಷದೊಳಗಿನವರ ಬಿಸಿಸಿಐ ಏಕದಿನ ಟ್ರೋಫಿ ಕ್ರಿಕೆಟ್ ಟೂರ್ನಿಯಲ್ಲಿ ಜಯ ಗಳಿಸಿತು. ಒಡಿಶಾ ತಂಡವನ್ನು ನಾಲ್ಕು ವಿಕೆಟ್‌ಗಳಿಂದ ಮಣಿಸಿ ನಾಕೌಟ್ ಹಂತಕ್ಕೆ ಪ್ರವೇಶಿಸಿತು.

ರಾಜ್‌ಕೋಟ್‌ನ ಸೌರಾಷ್ಟ್ರ ಕ್ರಿಕೆಟ್ ಸಂಸ್ಥೆಯ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ಒಡಿಶಾ 8 ವಿಕೆಟ್ ಕಳೆದುಕೊಂಡು 244 ರನ್ ಗಳಿಸಿತು. ಶುಭಂಕರ್ ಬಿಸ್ವಾಸ್ ಗಳಿಸಿದ ಶತಕದ (ಔಟಾಗದೆ 102, 122ಎ, 4X13) ನೆರವಿನಿಂದ ತಂಡವು ಸವಾಲಿನ ಮೊತ್ತ ಕಲೆಹಾಕಲು ಸಾಧ್ಯವಾಯಿತು.

ಗುರಿ ಬೆನ್ನತ್ತಿದ ಕರ್ನಾಟಕ ತಂಡವು ಒಂದು ಓವರ್ ಬಾಕಿ ಇರುವಂತೆಯೇ ಆರು ವಿಕೆಟ್ ಕಳೆದುಕೊಂಡು ಜಯ ಸಾಧಿಸಿತು. ಕಿಶನ್ ಎಸ್. ಬೆದಾರೆ ಅರ್ಧಶತಕ (54) ಶಿವಕುಮಾರ್ ಬಿ.ಯು. (49) ಮತ್ತು ಶುಭಾಂಗ್ ಅವರ ಭರ್ಜರಿ ಬ್ಯಾಟಿಂಗ್ ತಂಡದ ಗೆಲುವಿಗೆ ಕಾರಣವಾದವು.



ಶುಭಾಂಗ್ ಹೆಗ್ಡೆ

ಕರ್ನಾಟಕ ತಂಡವು ಡಿಸೆಂಬರ್ 3ರಂದು ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆಯುವ ಪಂದ್ಯದಲ್ಲಿ ಅಸ್ಸಾಂ ತಂಡವನ್ನು ಎದುರಿಸಲಿದೆ.

ಸಂಕ್ಷಿಪ್ತ ಸ್ಕೋರು: ಒಡಿಶಾ:50 ಓವರ್‌ಗಳಲ್ಲಿ 8 ವಿಕೆಟ್‌ಗೆ 244 (ಸಂದೀಪ್ ಪಟ್ನಾಯಿಕ್ 28, ಶುಭಂಕರ್ ಬಿಸ್ವಾಸ್ ಔಟಾಗದೆ 102, ರಂಜಿತ್ ಪೈಕರಾಯ್ 28; ಅಭಿಲಾಷ್ ಶೆಟ್ಟಿ 48ಕ್ಕೆ 2, ಆದಿತ್ಯ ಗೋಯಲ್ 50ಕ್ಕೆ 2, ಶುಭಾಂಗ್ ಹೆಗ್ಡೆ 37ಕ್ಕೆ 3). ಕರ್ನಾಟಕ: 49 ಓವರ್‌ಗಳಲ್ಲಿ 6 ವಿಕೆಟ್‌ಗೆ 247 (ಶಿವಕುಮಾರ್ ಬಿ.ಯು. 49, ಲೋಚನ್ ಅಪ್ಪಣ್ಣ 35, ಕಿಶನ್ ಎಸ್. ಬೆದಾರೆ 54, ಶುಭಾಂಗ್ ಹೆಗ್ಡೆ ಔಟಾಗದೆ 44; ತರಣಿ ಎಸ್.ಎ. 51ಕ್ಕೆ 3, ಹರ್ಷಿತ್ ರಾಥೋಡ್ 42ಕ್ಕೆ 2).

ಫಲಿತಾಂಶ: ಕರ್ನಾಟಕ ತಂಡಕ್ಕೆ 4 ವಿಕೆಟ್‌ಗಳ ಜಯ



ಭಾರತದ ಸೌರವ್ ಘೋಷಾಲ್ ಅವರು ಕ್ವಾಲಾಲಂಪುರದಲ್ಲಿ ನಡೆದ ಮಲೇಷ್ಯಾ ಓಪನ್ ಸ್ಕ್ವಾಷ್ ಟೂರ್ನಿಯಲ್ಲಿ ಪ್ರಶಸ್ತಿ ಜಯಿಸಿದರು. ಫೈನಲ್ ಪಂದ್ಯದಲ್ಲಿ ಅವರು 11–7 11–8 13–11ರಿಂದ ಕೊಲಂಬಿಯಾದ ಮಿಗೆಲ್ ರಾಡ್ರಿಗಸ್ ಅವರನ್ನು ಸೋಲಿಸಿದರು– ಟ್ವಿಟರ್ ಚಿತ್ರ